ಭರತನೂರ

ಬಯಲ ಮೂರ್ತಿ



ಅಖಂಡೇಶ್ವರ ಗ್ರಂಥಮಾಲೆ

ಷಣ್ಮುಖನಗರ, ಜೇವರಗಿ.

ಶ್ರೀ ಅಖಂಡೇಶ್ವರ ಗ್ರಂಥಮಾಲೆಯ ೧೭ ನೇ ಕುಸುಮ

ಭರತನೂರ

ಬಯಲ ಮೂರ್ತಿ

•

ಪ್ರಕಾಶಕರು :

ಶ್ರೀ ಮ. ನಿ. ಪ್ರ. ಶಾಂತಲಿಂಗ ಮಹಾ ಸ್ವಾಮಿಗಳು
ಷಣ್ಮುಖ ಶಿವಯೋಗೀಶ್ವರ ಮಠ, ಷಣ್ಮುಖನಗರ
ಜೇವರಗಿ (ಜಿ. ಕಲಬುರ್ಗಿ)

•

ಲೇಖಕರು :

ಲಕ್ಕಪ್ಪ ಅ. ಶಿರಹಟ್ಟಿ.

ಶ್ರೀ ಅಖಂಡೇಶ್ವರ ಗ್ರಂಥಮಾಲೆ, ಜೇವರಗಿ.

೧೯೭೭] [ಬೆಲೆ : ೨-೨೫

ಪ್ರಕಾಶಕರು :
ಶ್ರೀ ಮ. ನಿ. ಪ್ರ ಶಾಂತಲಿಂಗ ಮಹಾಸ್ವಾಮಿಗಳು
ಷಣ್ಮುಖ ಶಿವಯೋಗಿಮಠ, ಷಣ್ಮುಖನಗರ
ಜೇವರಗಿ.

ಶ್ರೀ ಶ್ರೀ ಗುರುನಂಜೇಶ್ವರ ಶಿವಯೋಗಿಗಳ
ಪಂಚ ಶತಮಾನೋತ್ಸವದ
ಶ್ರೀ ಶ್ರೀ ಷಣ್ಮುಖ ಶಿವಯೋಗೀಶ್ವರರ ಚತುಃ ಶತಮಾನೋತ್ಸವದ
ಸವಿನೆನಪಿಗಾಗಿ

"ಭರತನೂರಿನ ಬಯಲಮೂರ್ತಿ"

ಲೇಖಕರು : **ಲಕ್ಕಪ್ಪ. ಅ. ಶಿರಹಟ್ಟಿ.**

ಬೆಲೆ: ೨-೨೫ ಪೈಸೆ. **ಪುಟ : ೧೨೦**

ಮುದ್ರಕರು :
ಜನತಾ ಪ್ರಿಂಟಿಂಗ್ ಪ್ರೆಸ್,
ಶಹಪೂರ ಪೇಟೆ, ಗದಗ.

॥ ಶ್ರೀಗುರು ಸಿದ್ಧಲಿಂಗಾಯ ನಮಃ ॥

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು ಸಂಸ್ಥಾನಮಠ ಡಂಬಳ, ಗದಗ ಅವರ

ಆಶೀರ್ವಚನ

ಲೋಕದಂತೆ ಬಾರರು, ಲೋಕದಂತೆ ಇರರು
ಲೋಕದಂತೆ ಹೋಗರು, ನೋಡಯ್ಯ
ಪುಣ್ಯದಂತೆ ಒಪ್ಪರು, ಜ್ಞಾನದಂತೆ ಇಪ್ಪರು
ಮುಕ್ತಿಯಂತೆ ಹೋಹರು ನೋಡಯ್ಯ
ಉರಿಲಿಂಗದೇವಾ ನಿಮ್ಮ ಶರಣರು ಉಪಮಾತೀತರಾಗಿ ಉಪಮಿಸಬಾರದು.

—ಶ್ರೀ ಉರಿಲಿಂಗಪೆದ್ದಿಗಳು.

ಅನ್ನದ ಪರೀಕ್ಷೆ ಅಗುಳಿನಲ್ಲಿ ಎಂಬಂತೆ ಗ್ರಂಥದ ಪರೀಕ್ಷೆ ಗ್ರಂಥದ ಹೆಸರಿನಲ್ಲಾಗುತ್ತದೆ ಎನ್ನುವದಾದರೆ "ಭರತನೂರಿನ ಬಯಲಮೂರ್ತಿ" ಇದೊಂದು ಹೆಸರಿಗೆ ತಕ್ಕ ಉಸುರುಳ್ಳ, ಕಸುವುಳ್ಳ ಅಚ್ಚುಕಟ್ಟಾದ ಕೃತಿ.

ವೀರಶೈವ ತತ್ವಜ್ಞಾನದಲ್ಲಿ "ಬಯಲು" ಶಬ್ದ ಬಹು ವ್ಯಾಪಕವಾದ, ಅರ್ಥ ಭಾರವುಳ್ಳ ಅಪೂರ್ವವಾದ ಪಾರಿಭಾಷಕ ಶಬ್ದ.


ಬಯಲೊಳಗೆ ಬಯಲೊಗೆದು ಬಯಲೊಳಗೆ ಸಂಚರಿಸಿ
ಬಯಲೊಳಗೆ ಬಯಲು ಲಯವಾಗುತಿರೆ ಕಂಡು
ಭಯಗೊಂಡೆ ಶ್ರೀಗುರುವೆ ಕೃಪೆಯಾಗು.

ಮೈಲಾರ ಬಸವಲಿಂಗರ ಈ ತ್ರಿವಿಧಿಃ ಬಯಲು, ಬಯಲಿಗೆ ಬಂದು ಬಯಲೊಳಗಾಡಿ, ಬಯಲನ್ನು ತೋರಿ, ಬಯಲಲ್ಲಿ ಬಯಲಾಗಿ ನಿರ್ವಯಲವನ್ನು ಹೊಂದುವದೇ ಶಿವಯೋಗ ಎಂಬುದನ್ನು ಹೇಳುತ್ತದೆ.

"ಭರತನೂರಿನ ಬಯಲಮೂರ್ತಿ"ಯ ಬಯಲ ಚರಿತ್ರೆಯಲ್ಲಿ ನಿರ್ವಯಲ ಸ್ಥಿತಿಯಲ್ಲಿ ನಿಂತ ಮಹಾ ವಿಭೂತಿ ಶ್ರೀ ಗುರುನಂಜೇಶ್ವರರ ದಿವ್ಯ ಲೀಲಾ ಕಥನವಿದೆ. ಭರತನೂರಿನ ಶ್ರೀ ಗುರುನಂಜೇಶ್ವರ ಶಿವಯೋಗಿಗಳು ಶ್ರೀ ಮದನಾದಿ ನಿರಂಜನ ಯಡೆಯೂರ ಸಿದ್ಧಲಿಂಗ ಶಿವಯೋಗಿಗಳವರ ಶಿಷ್ಯ ಪ್ರಮುಖರಾದ ಸ್ವತಂತ್ರ ಸಿದ್ಧಲಿಂಗೇಶ್ವರ ಮತ್ತು ಚನ್ನಮಲ್ಲೇಶ ಸ್ವಾಮಿಗಳ ನಿಕಟ ಸಮಕಾಲೀನರು. ಅಷ್ಟೇ ಅಲ್ಲ, ಜೊತೆ ಜೊತೆಯಾಗಿದ್ದುಕೊಂಡು, ಜಂಗಮ ತತ್ವಾಧಾರಿತರಾಗಿ ಭಕ್ತೋದ್ಧಾರ-ದೊಡನೆ ವಿಶ್ವಕ್ಕೆ ನಿಜವಾದ ಶಿವಯೋಗದ ಸಂದೇಶವನ್ನು ಬೀರಿದ ಮಹಾ ವ್ಯಕ್ತಿಗಳು.

೧೫ ನೇ ಶತಮಾನದ ಯಡೆಯೂರ ಸಿದ್ಧಲಿಂಗ ಶಿವಯೋಗಿಗಳ ಕಾಲ, ವೀರಶೈವ ಧರ್ಮ ಸಾಹಿತ್ಯ ಸಂಸ್ಕೃತಿಯ ಸುವರ್ಣ ಕಾಲ. ಆ ಮಹಾ ಶಿವಯೋಗಿಯ ಪುಣ್ಯ ಪ್ರಭಾವ ನಾಡಿನ ಅನೇಕ ಚೇತನಗಳನ್ನು ಉದ್ದೀಪ್ತಗೊಳಿಸಿತು. ಅವರು ಅಡಿಯಿಟ್ಟ ನೆಲ ಅವಿಮುಕ್ತ ಕ್ಷೇತ್ರನಾಯಿತು. ಆಡಿದ ನುಡಿ ಮಂತ್ರವೆನಿಸಿತು. ನಡೆದ ಮಾರ್ಗ ಧರ್ಮವಾಯಿತು. ಆದ್ದರಿಂದ ಅವರ ಸಂಚಾರ ವೀರಶೈವ ಧರ್ಮದ ಜೈತ್ರ ಯಾತ್ರೆಯಾಯಿತು. ಅವರೊಂದಿಗೆ ಏಳುನೂರು ಜನ ವಿರತರು, ಮೂರು ಸಾವಿರ ಜನ ಜಂಗಮರು ಇದ್ದರು. ಅವರೆಲ್ಲರು ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿ-ಯಪ್ಪಂತೆ ನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ, ಜನತೆಯಲ್ಲಿ ಧಾರ್ಮಿಕ ಜಾಗೃತಿಯನ್ನುಂಟು ಮಾಡಿದರು. ಆದ್ದರಿಂದ ಶ್ರೀ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯ ಪ್ರಶಿಷ್ಯ ಸಂತಾನ ಶ್ರೇಷ್ಠರು ನಾಡಿನುದ್ದಗಲಕ್ಕೂ ಹರಡಿಕೊಂಡಿದ್ದಾರೆ. ಅಂಥವರಲ್ಲಿ ಭರತನೂರಿನ ಗುರುನಂಜೇಶ್ವರರು ಒಬ್ಬರು. ಅವರು ಜಂಗಮ ಜ್ಯೋತಿಯಾಗಿ ಲಿಂಗದ ನಡೆಯಂತೆ ನಡೆದು, ಲಿಂಗದ ನುಡಿಯಂತೆ ನುಡಿದು; ಲಿಂಗ ಮೆಚ್ಚುವಂತೆ ಸುಳಿದು "ಮಹಾಲಿಂಗರೆ" ಆಗಿ ಸಗರ ನಾಡಿನ ಸನಿಹದಲ್ಲಿ ಬಹು ದೊಡ್ಡ ಧರ್ಮ ಜಾಗೃತಿಗೈದರು. ಅಂಥ ಶಿವಯೋಗಿಗಳ ಪುರಾಣ ರೂಪದಲ್ಲಿರುವ ಚರಿತ್ರೆಯನ್ನು ಅದ್ಯತನದ ಗದ್ಯದಲ್ಲಿ ರಚಿಸಿದವರು ಶರಣ ಸಾಹಿತಿಗಳಾದ ಲಕ್ಕಪ್ಪ ಶಿರಹಟ್ಟಿಯವರು 'ಜ್ಞಾನೋದಯ'ದ ಬೆಳಗಿನಿಂದ ಪ್ರಾರಂಭಿಸಿ 'ಬಯಲು ಬಯಲನೆ ಬಯಸಿ ಮಹಾ ಬಯಲಾಯಿತು' ಎಂಬುವವರೆಗೆ ತಮ್ಮ ಸೊಗಸಾದ ಸಮುಚಿತವಾದ ಶೈಲಿಯಲ್ಲಿ ಹಿತಮಿತವಾದ ಶರಣರ ಸೂಕ್ತಿಗಳನ್ನುಸುರುತ್ತ ಬರೆದ ಈ ಚರಿತ್ರೆ ಲೇಖಕರ ಅನುಭವ ಪಕ್ವತೆಯನ್ನು ಸೂಚಿಸುತ್ತದೆ. ಈ ತರಹದ ಬರಹ ಅಪರೂಪವಾಗುತ್ತಿರುವ ಈ ಕಾಲದಲ್ಲಿ ಅದನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿರುವ ಶ್ರೀ ಶಿರಹಟ್ಟಿಯವರಿಂದ ಇನ್ನೂ ಇಂಥ ಗ್ರಂಥಗಳು ಹೊರಬರಲಿ, ಮಲಗಿರುವ ಶರಣ ನಾಡು ಮೇಲೇಳಲಿ ಎಂದು ಹಾರೈಸೋಣವಾಗಿದೆ.

ಇತಿ ಶಿವನ್.



ಸದ್ಯದ ಶ್ರೀಗಳಾದ

ಶ್ರೀ ಮ. ನಿ. ಪ್ರ. ಗುರುನಂಜೇಶ್ವರ ಮಹಾ ಸ್ವಾಮಿಗಳು

ವಿರಕ್ತಮಠ, ಭರತನೂರ.

ಶ್ರೀ ಲಕ್ಕಪ್ಪ ಶಿರಹಟ್ಟಿಯವರ ಕೃತಿಗಳು

- **ಕಾವ್ಯ :**

  ನೀತಿ ಮುಕ್ತಾವಲಿ (ನೈತಿಕ ಖಂಡಕಾವ್ಯ)

  ನೂರೊಂದು ನೆಲೆಯ ನಿಲವು (ಷಟ್‌ಸ್ಥಲ ತತ್ವಕಾವ್ಯ)

  ಲಿಂಗರಾಜ ವಿಜಯ (ಚಾರಿತ್ರಿಕ ಕಾವ್ಯ)

- **ಐತಿಹಾಸಿಕ ಕೃತಿಗಳು :**

  ಚಿತ್ತೂರಿನ ಪುನರುದ್ಧಾರ (ಕತೆ)

  ಕನ್ನಡಿಗನ ಕಲಿತನ (ನಾಟಕ)

  ಬಯಲಾದ ಸಂಚು (ನೀಳ್ಗತೆ)

  ಬಸವನ ಬಾಗೇವಾಡಿಯ ಕ್ಷೇತ್ರದರ್ಶನ

- **ಮಹಾತ್ಮರ ಜೀವನ ಚರಿತ್ರೆ :**

  ಶ್ರೀ ಸಿದ್ಧರಾಮೇಶ್ವರ ಚರಿತ್ರೆ

  ಯೋಗಿರಾಜ ವಿಜಯ

  ಬಸವರಾಜ ದೇವರು

  ಕ್ರಾಂತಿ ಗಂಗೋತ್ರಿ

  ಕಾಯಕ ವೀರ

  ಧರ್ಮದರ್ಶಿ

  ಭರತನೂರ ಬಯಲಮೂರ್ತಿ.

- **ಅನುವಾದ :**

  ಶಿವಾದ್ವೈತ ಸಿದ್ಧಾಂತ

ಅರ್ಪಣೆ

ಲಿಂಗಪೂಜಾ ಲೋಲರು ಅನುಷ್ಠಾನ ಪ್ರಿಯರು ದಾಸೋಹಂಭಾವಿಗಳು, ಭಕ್ತಕೋಟಿಗೆ ಪ್ರಿಯರೂ ನಿರಾಡಂಬರ ಜೀವಿಗಳೂ, ಬೂದಿ ಮುಚ್ಚಿದ ಕೆಂಡದಂತಿರುವ ಅಭಿನವ ಗುರುನಂಜೇಶ್ವರರೆಂದು ಖ್ಯಾತಿಗೊಂಡು ಭರತನೂರಿನ ಶೂನ್ಯ ಪೀಠದಲ್ಲಿ ವಿರಾಜಿಸುವ

ಶ್ರೀ ಮ. ನಿ. ಪ್ರ, ಸ್ವ. ಗುರುನಂಜೇಶ್ವರ

ಮಹಾ ಸ್ವಾಮಿಗಳ ದಿವ್ಯ ಚರಣಕ್ಕೆ ಸಮರ್ಪಿಸುವ ಗ್ರಂಥ ಕುಸುಮ.

ಅಖಂಡೇಶ್ವರ ಗ್ರಂಥಮಾಲೆ,
ಜೇವರಗಿ.

ಪ್ರಕಾಶಕರು.

ಮುನ್ನುಡಿ

ನಾಲ್ಕು ನೂರು ವರುಷಗಳು ಗತಿಸಿವೆ ಭರತನೂರಿನ ಜನತೆಗೆ ಭಾಗ್ಯದೇವತೆ ಬಂದು ಭೂತ ಚೇಷ್ಟೆಗೆ ಬೆದರಿ, ಅದ್ದೇಗೋ ಜೀವ ಹಿಡಿದಿದ್ದ ಆ ಗ್ರಾಮದವರನ್ನು ಶ್ರೀ ಗುರುನಂಜೇಶ್ವರ ಸ್ವಾಮಿಗಳು ತಮ್ಮ ಕೃಪಾಶೀರ್ವಾದದಿಂದ ಬದುಕಿಸಿದರು. ನೆಲ ಪಾವನವಾಯ್ತು. ಭರತನೂರು ವೀರಶೈವ ಸಾಂಸ್ಕೃತಿಕ ಕೇಂದ್ರವಾಯ್ತು.

ಶ್ರೀ ಗುರುನಂಜೇಶ್ವರ ಸ್ವಾಮಿಗಳು ತಮ್ಮ ಎಪ್ಪತ್ತು ವರುಷಗಳ ಸುದೀರ್ಘ ಜೀವನದಲ್ಲಿ ಲೌಕಿಕಕ್ಕೆಡೆಕೊಡಲಿಲ್ಲ. ಲೋಕ ಬಾಹಿರರಾಗಿ, ಆಧ್ಯಾತ್ಮಿಗಳಾಗಿ, ಷಟ್‌ಸ್ಥಲ ಮಾರ್ಗವಿಡಿದು, ಲಿಂಗಲೀಲೆ ಮೆರೆದರು. ತೋಂಟದ ಸಿದ್ಧಲಿಂಗ ಶಿವಯೋಗಿಗಳ ಆಧ್ಯಾತ್ಮಿಕ ಸಂದೇಶವನ್ನು ನಾಡಿನಲ್ಲೆಲ್ಲ ಹರಡುತ್ತ ಲೋಕ ಗುರುವಾಗಿ ಕಂಗೊಳಿಸಿದರು. ನಾಡ ದೊರೆಗಳ ಅಹಮಿಕೆಯನ್ನೂ ಶೂನ್ಯತ್ವಕ್ಕಿಳಿಸಿ, ಪ್ರಜಾ ಪ್ರಭುತ್ವ ರಕ್ಷಣೆಗೈದರು. ಭರತನೂರಿನ ಪ್ರಥಮ ಪೀಠಾಧಿಕಾರಿಗಳಾಗಿ, ಧರ್ಮ-ಸಂಸ್ಕೃತಿಯ ಬೀಜ ಬಿತ್ತಿ ಈ ಭಾಗದ ಜನತೆಗೆ ಸುಮಧುರ ಫಲ ನೀಡಿ ಬಯಲಿನೊಳಗೆ ಬಯಲಾದರು. ಆ ಬಯಲಮೂರ್ತಿಯ ಪೀಠವೆ ಇಂದಿನ ಒಂಭತ್ತನೆಯ ಪೀಠ. ಈಗಿನವರೂ ಮಹಾ ತಪಸ್ವಿಗಳು, ಅವರಿಗೂ ಇವರಿಗೂ ಒಂದೇ ಹೆಸರು; ಅದೂ ಒಂದು ಯೋಗಾಯೋಗ. ಹಲವಾರು ಶಾಖೆಗಳನ್ನು ಹೊಂದಿದ ಇಂದಿನ ಪೀಠಾಧಿ ಪತಿಗಳು. ಆ ಈ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀ ಗುರುನಂಜೇಶ್ವರರ ಮತ್ತು ಷಣ್ಮುಖ ಶಿವಯೋಗಿಗಳ ಪಂಚ ಹಾಗೂ ಚತುಃ ಶತಮಾನೋತ್ಸವವನ್ನೂ ಆಚರಿಸುತ್ತಿರುವುದು ಒಂದು ಭಾಗ್ಯ ವಿಶೇಷ. ಏಳನೆಯ ಪೀಠಾಧಿಕಾರಿಗಳಾಗಿದ್ದ ಶ್ರೀ ಸಂಗನ ಬಸವ ಸ್ವಾಮಿಗಳು ಬರೆದಿರುವ ಶ್ರೀ ಗುರುನಂಜೇಶ್ವರರ ಪುರಾಣವನ್ನೇ ಆಧಾರ ವಾಗಿಟ್ಟುಕೊಂಡು ಹಲವಾರು ಗ್ರಂಥ ರಚಿಸಿದ ಹಿರಿಯರಾದ ಶ್ರೀ ಲಕ್ಕಪ್ಪ ಶಿರಹಟ್ಟಿ ಅವರು ಈ 'ಬಯಲಮೂರ್ತಿ' ಗ್ರಂಥ ಬರೆದದ್ದು.

ಈ 'ಬಯಲಮೂರ್ತಿ' ಗ್ರಂಥವನ್ನು ಓದಲು ಕೈಗೆತ್ತಿಕೊಂಡಾಗ ಓದಿ ಮುಗಿಸಿಯೇ ಬಿಡಬೇಕು ಎನ್ನಿಸುತ್ತದೆ. ಓದುಗರನ್ನು ತನ್ನತ್ತ ಸೆಳೆದುಕೊಂಡು ಪುನೀತರನ್ನಾಗಿ ಮಾಡುತ್ತದೆ. ಆಡು ಮಾತಿನ ಶ್ರೀಸಾಮಾನ್ಯರ ಭಾಷೆ, ಸರಳವೂ, ಸುಂದರವೂ ಆದ ಗದ್ಯ ಶೈಲಿ, ಸಂಭಾಷಣೆಯ ವೈಖರಿ, ಲೋಕ ರಂಜನೆಯ ಬೆಡಗು, ತತ್ವದ ಮಹಿಮೆಯಿಂದ ಆಕರ್ಷಕವಾಗಿದೆ. ಅಲ್ಲಲ್ಲಿ ಶರಣರ ವಚನಗಳನ್ನು ಉಲ್ಲೇಖಿಸುತ್ತ ವೀರಶೈವ ಧರ್ಮದ ಸಿದ್ಧಾಂತವನ್ನು ಎರಕಹೊಯ್ದುದರಿಂದ ಗ್ರಂಥಕ್ಕೆ

ಇನ್ನೊ ಬೆಲೆ ಬಂದಿದೆ. ಕೆಲ ಪವಾಡಗಳ ಸಾದೃಶ್ಯಗಳನ್ನು ಬಿಟ್ಟರೆ, ಮಹಾ ತಪಸ್ವಿಯೊಬ್ಬನ ಕಾದಂಬರಿಯೆಂದೇ ಇದನ್ನು ಕರೆಯಬಹುದಾಗಿದೆ.

ಹನ್ನೆರಡನೆಯ ಶತಮಾನ ಮತ್ತು ತೋಂಟದ ಸಿದ್ಧಲಿಂಗ ಯತಿಗಳ ಕಾಲಾವಧಿಯಲ್ಲಿ ವೀರಶೈವ ಧರ್ಮದ ಕ್ರಾಂತಿಯಾದಂತೆ ಇಂದೂ ಆಗಬೇಕಾದ ಅವಶ್ಯಕತೆಯಿದೆ. ಅಲ್ಲಲ್ಲಿಯ ಮಠ-ಪೀಠ, ದಾಸೋಹದ ಮನೆಗಳಿಂದ ಜನ ಸುಶಿಕ್ಷಿತರಾಗಿದ್ದಾರೆ. ಸಾಹಿತ್ಯ ಗ್ರಂಥಗಳು ಬೆಳಕು ಕಂಡಿವೆ. ಜನತೆ ಎಚ್ಚತ್ತಿದೆ. ಹೊಸ ಜನಾಂಗಕ್ಕೆ ಹೊಸ ಸೃಷ್ಟಿ ಬೇಕಾಗಿದೆ. ಆದಕ್ಕಾಗಿ ಇಂದು ಗುರು-ವಿರಕ್ತರು, ಬಡವ-ಬಲ್ಲಿದರು ಒಂದಾಗಬೇಕಾಗಿದೆ. ಒಳ ಭೇದಗಳನ್ನೆಣಿಸದೆ ಸಮಾನ ತಳಹದಿಯ ಮೇಲೆ ಜನ ಕೂಡಿ ಬದುಕಬೇಕಾಗಿದೆ. ನಾವೆಲ್ಲರೂ ಒಂದು ಎನ್ನುವ ವಿಶಾಲ ಮನೋಭಾವನೆಯಿಂದ ಸುಸಂಸ್ಕೃತರಾಗಿ ಬೆಳೆಯಬೇಕಾಗಿದೆ. ಅಂತಹ ಸುಂದರವೂ ಬಂಧುರವೂ ಆದ ಬದುಕಿಗಾಗಿ ಈ ಗ್ರಂಥ ಪ್ರೇರಣೆ ನೀಡುವಲ್ಲಿ ಯಾವ ಸಂದೇಹವೂ ಇಲ್ಲ. ಜನ ಓದಬೇಕು, ಕೇಳಬೇಕು, ಅರ್ಥೈಸಿಕೊಂಡು ನಡೆಯಲ್ಲಿ ಅಳವಡಿಸಿಕೊಳ್ಳಬೇಕು ಅಂದಾಗ ಸಂತುಷ್ಟಿ, ಸಮೃದ್ಧಿ.

ಜೇವರಗಿಯ ಪೂಜ್ಯ ಶ್ರೀ ಶಾಂತಲಿಂಗ ಮಹಾ ಸ್ವಾಮಿಗಳವರು ಈ ಗ್ರಂಥಕ್ಕೆ ಮುನ್ನುಡಿ ನನ್ನಿಂದ ಎಂದು ಅಪ್ಪಣೆ ಕೊಡಿಸಿದರು. ಗುರುಗಳ ಆಜ್ಞೆಗೆ ಶಿರಬಾಗಿ ನನಗೆ ಹೊಳೆದ ಒಂದೆರಡು ಮಾತು ಆಡಿರುವೆ- ಅವರೇ ಒಳಗಾಗಿ ತಮ್ಮ ಅಖಂಡೇಶ್ವರ ಗ್ರಂಥ ಮಾಲೆಯಲ್ಲಿ ೧೭ ನೇ ಕುಸುಮವಾಗಿ ಇದನ್ನು ಪ್ರಕಟಿಸುತ್ತಿರುವ ಶ್ರೀಗಳವರ ಕಾರ್ಯ ಪವಿತ್ರವೂ, ಸ್ತುತ್ಯವೂ ಆದದ್ದು. ಲೇಖಕರಾದ ಶ್ರೀ ಶಿರಹಟ್ಟಿ ಅವರಿಗೂ, ಅಖಂಡೇಶ್ವರ ಗ್ರಂಥ ಮಾಲೆಗೂ ನನ್ನ ಶರಣಾರ್ಥಿಗಳನ್ನು ಸಲ್ಲಿಸಿ, ಇದಕ್ಕೂ ಉತ್ತಮೋತ್ತಮ ಕೃತಿಗಳು ರಚನೆಯಾಗಲಿ, ಪ್ರಕಟವಾಗಲಿ ಎಂದು ಹಾರೈಸಿ ಭರತನೂರಿನ ಹಾಗೂ ಜೇವರಗಿಯ ಶ್ರೀಗಳವರಿಗೆ ಭಕ್ತಿಪೂರ್ವಕ ಪ್ರಣಾಮಗಳನ್ನರ್ಪಿಸುವೆ.

ಕನ್ನಡ ಸಾರಸ್ವತ ಪ್ರಪಂಚದ ಈ ಕೃತಿಯನ್ನು ಆದರದಿಂದ ಸ್ವಾಗತಿಸಲೆಂದು ಬಯಸುವೆ.

ಸ್ನಾತಕೋತ್ತರ ಕೇಂದ್ರ
ಕಲಬುರ್ಗಿ
೮-೪-೧೯೭೭

ಮಲ್ಲಿಕಾರ್ಜುನ ಶಿ. ಲಠ್ಠೆ.

ಬರೆದವನ ಮೊದಲ ಮಾತುಗಳು

-+- -+-

ಶ್ರೀ ನಿರಂಜನ ಜಗದ್ಗುರು ತೋಂಟದ ಸಿದ್ದಲಿಂಗ ಶಿವಯೋಗಿಗಳ ನಾಮ ಸ್ಮರಣೆ ಮಾಡಿದ ಕವಿಗಳ ಮಾಲಿಕೆಯಲ್ಲಿ 'ಗುರುನಂಜ (೧೫೫೦)' ಹೆಸರು ಬಂದಿದೆ. (ಷಟ್‌ಸ್ಥಲ ಪ್ರಭೆ, ಡಾ. ಆರ್. ಸಿ. ಹಿರೇಮಠ, ಪುಟ ೪೪೨).

ಕ್ರಿ. ಶ. ೧೯೧೨ ರಲ್ಲಿ ರಚಿಸಲ್ಪಟ್ಟ ಭರತನೂರಿನ ಶ್ರೀ ಗುರುನಂಜೇಶ್ವರ ಪುರಾಣದ ಹಸ್ತ ಪ್ರತಿ ದೊರೆತಮೇಲೆಯೇ ಈ ಗುರು ನಂಜೇಶ್ವರ ಶಿವಯೋಗಿಗಳ ಜೀವನದ ವಿವರಗಳು ಬೆಳಕಿಗೆ ಬಂದವು. ಈ ಪುರಾಣವನ್ನು ೧೯೭೨ ರಲ್ಲಿ ಡಾ. ವಿ. ಶಿವಾನಂದ M. A. P. H. D. ಅವರು ಸಂಪಾದಿಸಿದ್ದಾರೆ. ಇವರು ಗುರು ನಂಜೇಶ್ವರರ ಜೀವಿತಕಾಲವು ಕ್ರಿ. ಶ. ೧೪೮೦-೧೫೫೦ ಎಂದು ನಿರ್ಧರಿಸಿದ್ದಾರೆ. ಆದ್ದರಿಂದ ಆ ಗುರುನಂಜರೇ ಈ ಗುರುನಂಜೇಶ್ವರ ಶಿವಯೋಗಿ ಎಂದು ಊಹಿಸಲು ಅವಕಾಶವಿದೆ.

ಗುರುನಂಜೇಶ್ವರರ ಜೀವನಾವಧಿಗೆ ಹಿಂದೆ ಅದೇ ಆಗ, ತಪಸ್ಸು ಮತ್ತು ಲೋಕೋದ್ಧಾರಗಳೆರಡರಲ್ಲಿಯೂ ಅದ್ವಿತೀಯರೆನಿಸಿದ ತೋಂಟದ ಸಿದ್ಧಲಿಂಗ ಶಿವಯೋಗಿಗಳು ಬಯಲಾಗಿದ್ದರು. ಅವರ ಪ್ರಭಾವದ ಬೆಳಗು ಬೆಳಗುತ್ತಲಿತ್ತು. ಅವರ ಸಂದೇಶವನ್ನು ಅವರ ವಿರಕ್ತ ಶಿಷ್ಯರು ನಾಡಿನ ದಿಕ್ಕು ದಿಕ್ಕುಗಳಲ್ಲಿ ಹರಡಿ ನೆಲೆಗೊಳಿಸುವ ಕಾರ್ಯ ಇನ್ನೂ ಊರ್ಜಿತವಾಗಿಯೇ ನೆರವೇರುತ್ತಲಿತ್ತು. ತೋಂಟದಾರ್ಯರ ಪ್ರಮುಖ ಶಿಷ್ಯರಲ್ಲಿಯ ಸ್ವತಂತ್ರ ಸಿದ್ಧಲಿಂಗೇಶ್ವರ ಚೆನ್ನಮಲ್ಲ ಸ್ವಾಮಿ ಇವರು ಗುರುನಂಜೇಶ್ವರರ ಹಿರಿಯ ಸಮಕಾಲೀನರು. ಚೆನ್ನಮಲ್ಲ ಸ್ವಾಮಿಗಳೇ ಇವರ ಗುರುಗಳು. ಸ್ವತಂತ್ರ ಸಿದ್ಧಲಿಂಗೇಶ್ವರರು ಧರ್ಮ ಪ್ರಚಾರ ಕಾರ್ಯದಲ್ಲಿ ಇವರಿಗೆ ನಿರ್ದೇಶನ ನೀಡುತ್ತಿದ್ದ ಹಿರಿಯ ಜತೆಗಾರರು, ಸಮವಯಸ್ಕರಾದ ಚೆನ್ನಮಲ್ಲೇಶ ಎಂಬ ಇನ್ನೊಬ್ಬರು ಜತೆಗಾರರಿದ್ದರು. ಗುರುನಂಜೇಶ್ವರರು ತೋಂಟದಾರ್ಯರ ಪ್ರತ್ಯಕ್ಷ ಶಿಷ್ಯರಾಗಿರದೆ, ಅವರ ಶಿಷ್ಯರ ಶಿಷ್ಯರಾಗಿದ್ದರೂ ಅವರ ಉದ್ದೇಶಿತ ಕಾರ್ಯ ನಿರ್ವಹಣೆಯಲ್ಲಿ ಸಮಾವೇಶಗೊಂಡಿದ್ದರು. ತೋಂಟದಾರ್ಯರ

ತತ್ವ ಪ್ರಚಾರಕರಾದ ವಿರಕ್ತ ಶಿಷ್ಯರ ಸಂಖ್ಯೆ ೭೦೦ ಎಂದು ಗಣನೆಯಾದ ಹೊತ್ತಿಗೆ ಗುರುನಂಜೇಶ್ವರರೂ ಅದರಲ್ಲಿ ಎಣಿಸಲ್ಪಟ್ಟಿರಬೇಕು.

'ಭರತನೂರ ಬಯಲ ಮೂರ್ತಿ' ಈ ಪ್ರಸ್ತುತ ಪುಸ್ತಕವನ್ನು ಅವರ ಪುರಾಣ ದಲ್ಲಿ ಉಕ್ತವಾದ ಸಂಗತಿಗಳನ್ನೇ ಆಧರಿಸಿ ಬರೆಯಲಾಗಿದೆ. ಆ ಪುರಾಣವನ್ನು ರಚಿಸಿದ ಕವಿಗಳು ಗುರುನಂಜೇಶ್ವರ ಮಠದ ಏಳನೆಯ ಪೀಠಾಧಿಪತಿಗಳಾದ ಸಂಗನ ಬಸವ ಶಿವಯೋಗಿಗಳು. ಇವರು ತಮ್ಮ ಹಿಂದಿನ ಅಧಿಪತಿ ಮತ್ತು ಗುರುಗಳಾದ ಸಿದ್ಧರಾಮ ಸ್ವಾಮಿಗಳ ಆದೇಶದ ಮೇರೆಗೆ ಈ ಪುರಾಣ ಬರೆದು ಪೂರೈಸಿದುದಾಗಿ ಹೇಳಿದ್ದಾರೆ. ಪುರಾಣೋಕ್ತ ಸಂಗತಿಗಳು ಪುರಾಣ ನಾಯಕರ ಪರಂಪರೆಯಲ್ಲಿಯೇ ನಾಲ್ಕೈದು ತಲೆ ಮಾರುಗಳಲ್ಲಿ ಶ್ರುತಪಡಿಸಲ್ಪಡುತ್ತ ಬಂದವಾದ್ದರಿಂದ, ಅವು ತುಂಬ ನಂಬಲರ್ಹವಾದವುಗಳೆಂಬಲ್ಲಿ ಸಂದೇಹವಿಲ್ಲ.

ಜೇವರಗಿಯ ಶ್ರೀ ಷಣ್ಮುಖ ಶಿವಯೋಗೀಶ್ವರ ಮಠದ ಅಧಿಪತಿಗಳಾದ ಶ್ರೀ ಮ. ನಿ. ಪ್ರ. ಶಾಂತಲಿಂಗ ಶಿವಯೋಗಿಗಳವರು, ಡಾ. ವಿ. ಶಿವಾನಂದರು ಸಂಪಾದಿಸಿದ ಗುರುನಂಜೇಶ್ವರ ಪುರಾಣವನ್ನು ಮುದ್ರಿಸಿ ಪ್ರಕಟಿಸಿದ್ದಾರೆ. ಅವರ ಒಂದು ಪ್ರತಿಯನ್ನು ಹಾಗು ಸಾರಾಂಶವನ್ನು ಬರೆದ ಒಂದು ಕಿರಿಯ ಹೊತ್ತಿಗೆಯನ್ನು ನನಗೆ ನೀಡಿ, ಸಾಮಾನ್ಯ ಓದುಗರಿಗಾಗಿ ಆ ಶಿವಯೋಗಿಗಳ ಚರಿತ್ರೆಯ ಗದ್ಯ ಗ್ರಂಥವನ್ನು ಬರೆಯಬೇಕೆಂದು ಆಜ್ಞಾಪಿಸಿದರು ಹಾಗೂ ಇದು ತಮ್ಮ ಇಚ್ಛೆ ಮಾತ್ರವಲ್ಲದೆ, ಭರತನೂರಿನ ಸಧ್ಯದ ಶ್ರೀ ಮ. ನಿ. ಪ್ರ. ಗುರುನಂಜೇಶ್ವರ ಶಿವಯೋಗಿಗಳ ಅಪೇಕ್ಷೆಯೂ ಆಗಿದೆಯೆಂದು ತಿಳಿಯಪಡಿಸಿದರು. ಈ ಉಭಯ ಪೂಜ್ಯ ಮಹಾಸ್ವಾಮಿಗಳ ಆದೇಶವನ್ನು ಶಿರಸಾವಹಿಸಿ, ಇದೊಂದು ಆಕಸ್ಮಿಕ ಒದಗಿದ ಸೇವಾಭಾಗ್ಯವೆಂದು ಭಾವಿಸಿ, ಆ ಮಹಾಮಹಿಮರ 'ಆಧ್ಯಾತ್ಮಿಕ ಜೀವನ ರೂಪಕ'ವನ್ನು ಯಥಾಮತಿ ಚಿತ್ರಿಸಿದ್ದೇನೆ. ಸನ್ನಿವೇಶಗಳ ಚಿತ್ರಣದಲ್ಲಿ ಸಮಂಜಸ ವಾದ ಊಹೆ, ಕಲ್ಪನೆಗಳನ್ನು ಬಳಸಿ, ಓದುಗರ ಮನಸ್ಸನ್ನು ಆಕರ್ಷಿಸಲು ಯತ್ನಿಸಿದ್ದೇನೆ. ಅದು ಎಷ್ಟರ ಮಟ್ಟಿಗೆ ಗ್ರಾಹ್ಯವಾಗಿದೆಯೆಂಬುದನ್ನು ಹೇಳಲಾರೆ. ಒಟ್ಟಿನಲ್ಲಿ ಈ ಚಿಕ್ಕ ಕೃತಿ ವಾಚಕರಲ್ಲಿ ಆ ಮಹಾ ವಿಭೂತಿಯ ಜಾಗೆಗೆ ಭಕ್ತ್ಯಾದರ ಗಳು ಮೂಡಿಬಂದರೆ ನನ್ನ ಶ್ರಮ ಸಾರ್ಥಕ.

ಜಗದ್ಗುರು ತೋಂಟದಾರ್ಯ ಶ್ರೀ ಸಿದ್ಧಲಿಂಗ ಶಿವಯೋಗಿಗಳವರ ಜ್ಞಾನ ಪ್ರಭೆಯನ್ನು ದೇಶದಲ್ಲಿ ಹರಡಿದ ಅವರ ಗಣ್ಯ ಶಿಷ್ಯರಲ್ಲಿ ಗುರುನಂಜೇಶ್ವರರು ಒಬ್ಬರು. ಆ ಮೂಲಕರ್ತೃ ತೋಂಟದಾರ್ಯರ ದಿವ್ಯ ಪೀಠದಲ್ಲಿ ಇಂದು ವಿರಾಜಮಾನರಾಗಿರುವ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಸಿದ್ಧಲಿಂಗೇಶ್ವರ

ಶಿವಯೋಗಿಂದ್ರ ಮಹಾಸ್ವಾಮಿಗಳವರು ಗುರುನಂಜೇಶ್ವರ ಚರಿತ್ರೆ ಪ್ರಕಟನೆಗೆ ಕೃಪೆ ಮಾಡಿ, ಆಶೀರ್ವಚನವೀಯುತ್ತಿರುವದು ಔಚಿತ್ಯಪೂರ್ಣವಾಗಿದೆ. ಇದನ್ನು ನೆನೆದು ನನ್ನ ಹೃದಯ ತುಂಬಿ ಬಂದಿದೆ. ಈ ಪರಮ ಪೂಜ್ಯ ಮಹಾಸನ್ನಿಧಿಗೆ ಸಾಷ್ಟಾಂಗ ಪ್ರಣಾಮಂಗಳನ್ನು ಸಲ್ಲಿಸುವೆ.

ಮೇಲೆ ಅರಿಕೆ ಮಾಡಿಕೊಂಡಂತೆ ಈ ಭಾಷಾಸೇವೆಯ ಸಂದರ್ಭವನ್ನು ಒದಗಿಸಿದ ಜೇವರಗಿ ಮತ್ತು ಭರತನೂರ ಪೂಜ್ಯ ಶಿವಯೋಗಿಗಳ ಸನ್ನಿಧಿಗಳಿಗೂ, ನನ್ನ ಗುರು ಶ್ರೀ ಶಾಂತವೀರ ಮಹಾ ಸ್ವಾಮಿಗಳಿಗೂ ಅನಂತ ವಂದನೆಗಳು.

ವಿದ್ವತ್‌ಪೂರ್ಣ ಮುನ್ನುಡಿಯಿಂದ ಪುಸ್ತಕವನ್ನು ಅಲಂಕರಿಸಿದ, ಡಾ. ಪ್ರೊ. ಎಮ್. ಎಸ್. ಲಠ್ಠೆ............ ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ ಇವರಿಗೆ ನಮನಗಳು. ಮೆಚ್ಚುಗುವಂತೆ ಅಚ್ಚು ಹಾಕಿದ **ಗದಗ ಜನತಾ ಪ್ರಿಂಟಿಂಗ ಪ್ರೆಸ್** ಒಡೆಯರಿಗೂ ಕೃತಜ್ಞತೆಗಳು.

ತೊ ರ ವಿ. ಸುಜನ ವಿಧೇಯ

ಬಸವಜಯಂತಿ ದಿ. ೨೨-೪-೭೭. **ಲಕ್ಕಪ್ಪ ಅ. ಶಿರಹಟ್ಟಿ.**

ಪ್ರಕಾಶಕರ ನುಡಿ



ಭಾವವಿಲ್ಲದ ಬಯುಲು

ಜೀವವಿಲ್ಲದ ಬಯುಲು

ಮನವಿಲ್ಲದ ಬಯುಲು

ಮನನವಿಲ್ಲದ ಬಯುಲು

ಅಖಂಡೇಶ್ವರನೆಂಬ ಮಹಾಬಯುಲೊಳಗೆ

ನೆನಹಡಗಿ ನಿಷಃಪತಿಯಾಗಿರ್ದೆನು

ಕಲಬುರ್ಗಿ ಜಿಲ್ಲೆ ಚಿತ್ತಾಪೂರ ತಾಲೂಕಿನ ಸುಕ್ಷೇತ್ರವೆನಿಸಿದ ಭರತನೂರಿನ ಅಧಿದೈವವಾದ ಶ್ರೀ ಗುರುನಂಜೇಶ್ವರರು ಆ ನಾಡಿನ ಶಿವಯೋಗಿ ಪುಂಗವರು ಸುಮಾರು ಐದು ಶತಮಾನಗಳಾಚೆ ಉದಿಸಿ, ಅನೇಕ ಲೀಲೆಗಳನ್ನೆಸಗಿ ಮಹಾಂತ-ರೆನಿಸಿದರಲ್ಲದೆ, ಜೊತೆಗೆ ಜನ-ಮನ ತಿದ್ದಲು ಅವ್ಯಾಹತವಾಗಿ ಶ್ರಮಿಸಿದ್ದಾರೆ. ತಮೋ ವಿಕಾರಗಳನ್ನು ಹೊಡೆದೋಡಿಸಿ ನಾನೆಂಬುದನ್ನು ತಿಳಿದು ಶಿವಯೋಗಿಗಳಾಗಿ ನಿಂತ ಪುಣ್ಯ ಪುರುಷರಿವರು. ಅವರನ್ನು ಕುರಿತು ಭಕ್ತರು ಪವಾಡಗಳನ್ನು ಹೇಳಿ ಅವರ ಘನತೆ ಗೌರವಗಳನ್ನು ವ್ಯಕ್ತ ಪಡಿಸುತ್ತಿದ್ದಾರೆ. ಅವರ ಇಹಲೋಕದ ಮಣಿಹಕ್ಕೆ ಮಣಿದು, ಅವರ ಘನವಾದ ವ್ಯಕ್ತಿತ್ವಕ್ಕಾಗಿ ಬೆರಗು ಪಡೆಯುತ್ತಿದ್ದಾರೆ. ಅವರ ಹಿಂದೆ ಘನವಾದ ಇತಿಹಾಸವಿದೆ ಎನ್ನುವದನ್ನು ಜನ ಮರತೆ ಬಿಟ್ಟಿದ್ದಾರೆ.

ಇತಿಹಾಸ ನಾಡಿಗಿರುವಂತೆ ನಾಡಾಡಿಗಳಿಗೂ ಇದೆ. ಹೀಗಿದ್ದಲ್ಲಿ ಲೀಲಾ ಯೋಗಿಗಳಿಗೆ ಇತಿಹಾಸವಿಲ್ಲೆಂದರೆ ಯಾರು ಒಪ್ಪಬಲ್ಲರು ? ಅವರವರ ಚರಿತ್ರೆ ದಿವ್ಯ ಸಾಧನೆ, ಕೊನೆಯ ಸಿದ್ಧಿ ಅವರ ಬೆನ್ನು ಹಿಂದೆಯೇ ಹೆಪ್ಪುಗಟ್ಟಿ ನಿಂತಿದೆ. ಅದನ್ನು ಕಾಣುವ ಕಣ್ಣು ಬೇಕು, ತಿಳಿಯುವ ಮನ ಬೇಕು. ಅಂದರೇನೆ ಆ ಮಹಾತ್ಮರ

ಮಹಾನ್ ವ್ಯಕ್ತಿತ್ವ ನಮಗೆ ವ್ಯಕ್ತವಾಗಬಲ್ಲುದು. ನಮ್ಮ ಸಂಸ್ಕೃತಿಯ ಇತಿಹಾಸ ಪರಿಪೂರ್ಣವಾಗಬಲ್ಲುದು. 'ಭರತನೂರಿನ ಬಯಲಮೂರ್ತಿ' ಅಂತಹ ಕಾರ್ಯವನ್ನೇ ಮಾಡುವಲ್ಲಿ ದಿಟ್ಟ ಹೆಜ್ಜೆಯಾಗದೆ.

'ಭರತನೂರಿನ ಬಯಲಮೂರ್ತಿ' ಬಯಲಿಗೆ ಬರಬೇಕಾದರೆ ಭರತನೂರಿನ ಶ್ರೀಮಠದ 'ಅಭಿನವ ಗುರುನಂಜೇಶ್ವರ'ರೆಂದು ಖ್ಯಾತಿಗೊಂಡ ಶೂನ್ಯಪೀಠದ ಸದ್ಯದ ಪೀಠಾಧಿಪತಿಗಳು ಅನೇಕಾನೇಕ ರೀತಿಯಿಂದ ಸಹಾಯವನ್ನಿತ್ತು ಸಹಕರಿಸಿದ್ದಾರೆ. ಸಚ್ಛೀಲರೂ, ಗುರುಲಿಂಗ ಜಂಗಮ ಪ್ರೇಮಿಗಳೂ ಸದುವಿನಯ ಸಂಪನ್ನರು ಲಿಂಗ ಪೂಜಾನಿಷ್ಠರೂ ಸತತಾಭಿಲಾಷಿಗಳೂ ಆದ ಶ್ರೀ ಶಂಕರಯ್ಯನವರು ಮಠಪತ್ತಿ ಅವರು ನಮ್ಮ ಎಲ್ಲ ಕಾರ್ಯಗಳಲ್ಲಿ ಸಹಭಾಗಿಗಳಾಗಿ ಕಾರ್ಯ ಕೈಗೂಡುವಂತೆ ಮಾಡಿದ್ದಾರೆ.

ವಿಭೂತಿಯ ಪುರುಷರಾದ ಶ್ರೀ ಗುರುನಂಜೇಶ್ವರರ ಜೀವನೇತಿಹಾಸವನ್ನು ಕಾದಂಬರಿ ಯುಗದ ಇಂದಿನ ಆಧುನಿಕ ವಿಜ್ಞಾನಿಗಳ ಮನ ಆಚ್ಚೊತ್ತುವಂತೆ ಕಾದಂಬರಿ ಶೈಲಿಯಲ್ಲಿ ಅವರ ಚರಿತ್ರೆ ಬರೆಯಿಸಬೇಕೆನ್ನುವ ಚಿಂತೆಯೇ ಚಿಂತೆ. ಅದರ ಆಲೋಚನೆಯೇ ಆಲೋಚನೆ. ಮಹಾತ್ಮರ ಕಾರ್ಯ ಮಹಾತ್ಮರೇ ಮಾಡಿಕೊಳ್ಳುತ್ತಾರೆನ್ನುವಂತೆ ಅಖಂಡ ಕೀರ್ತಿಯಿಂದ ಬೆಳಗುವ ಅಖಂಡೇಶ್ವರ ವಚನಗಳನ್ನು ಬರೆದು, ವಚನಕಾರರ ಮಣಿ ಮಾಲಿಕೆಯಲ್ಲಿ ಸೇರಲರ್ಹರಾದ ಶ್ರೀ ಷಣ್ಮುಖ ಶಿವಯೋಗಿಗಳ ದರುಷನಕ್ಕೆಂದು ಲಕ್ಕಪ್ಪ ಶಿರಹಟ್ಟಿ ಅವರು ಬಂದರು, ಗದ್ದುಗೆಯ ದರುಶನ ಪಡೆದು, ತಾವೆ ಸ್ವತಃ ಬರೆದ ಕೆಲವೊಂದು ಗ್ರಂಥಗಳನ್ನು ನಮ್ಮ ಮುಂದಿಟ್ಟು ನಮಸ್ಕರಿಸಿದರು. ಫಲಾಶೀರ್ವಾದ ಪಡೆದರು. ಇಬ್ಬರ ಮನ ಒಂದಾದವು. ಅದ್ದರ ಪರಿಚಯ ಅವರೇ ಮಾಡಿಕೊಟ್ಟರು. ಅವರ ಗ್ರಂಥಗಳನ್ನು ನೋಡಿದಾಗ, ಶ್ರೀ ಗುರುನಂಜೇಶ್ವರರ ಚರಿತ್ರೆ ಬರೆಯಲು ಕೇಳಲಾಯಿತು. ವಯೋವೃದ್ಧರೂ, ಜ್ಞಾನವೃದ್ಧರು, ಸಾಹಿತ್ಯ ಕ್ಷೇತ್ರದಲ್ಲಿ ಪಳಗಿದವರೂ ಆದ ಅವರು ತಕ್ಷಣ ಯಾವ ವಿಚಾರಕ್ಕೂ ಆಸ್ಪದ ಕೊಡದೆ ಒಪ್ಪಿಯೇ ಬಿಟ್ಟರು. ಅರಸುವ ಬಳ್ಳಿ ಕೈಗೆ ಸಿಕ್ಕಂತಾಗಿ, ನಮ್ಮ ಮನಕ್ಕೆ ನೆಮ್ಮದಿಯಾಯಿತು. ಶ್ರೀ ಡಾ. ವಿ. ಶಿವಾನಂದರು ಸಂಪಾದಿಸಿದ ಶ್ರೀ ಗುರುನಂಜೇಶ್ವರರ ~~ಪ್ರಕಾಶ~~ ಪುರಾಣ ಮತ್ತೆ ಕೆಲವೊಂದು ಸಹಾಯಕ ಗ್ರಂಥಗಳನ್ನಿತ್ತು ಹರಸಿ ಕಳಿಸಿದೆವು.

ಶರಣ ಲಕ್ಕಪ್ಪನವರ ನೇತ್ರಗಳು ಸರಿಯಾಗಿ ಕಾಯಕ ಮಾಡದಿದ್ದರೂ ಕೂಡ ತಮ್ಮ ಶರೀರದ ಎಲ್ಲ ತೊಂದರೆಗಳನ್ನು ಬದಿಗೊತ್ತಿ, ಶ್ರೀಗುರು ನಂಜೇಶ್ವರರನ್ನು ಧ್ಯಾನಿ ಸುತ್ತ ಕೆಲವೆ ದಿನಗಳಲ್ಲಿ ಗ್ರಂಥವನ್ನು ಪೂರ್ತಿಗೊಳಿಸಿ, ಸ್ವತಃ ತಾವೇ ಬಂದು ವಾಚನ ಮಾಡಿದರು. ಶ್ರೋತೃಗಳ ಮನ ಅದನ್ನು ಪೂರ್ತಿಯಾಗಿ ಓದುವಂತೆ ಅವರಿಗೆ

ಪ್ರೇರೇಪಿಸಿತು. ಇನ್ನು ಗ್ರಂಥ ಮುಂದುವರಿದಿದ್ದರೆ ಒಳಿತಿತ್ತು ಎನ್ನುವ ಭಾವದಲ್ಲಿ ಭರತನೂರಿನ ಬಯಲ ಮೂರ್ತಿಯ ಚರಿತ್ರೆ ಮಂಗಲ ಗೊಂಡಿತು. ಭರತನೂರಿನ ಶ್ರೀಗಳವರ ಮನ ಅರಳಿತು. ಬೇಗ ಪ್ರಕಾಶ ಪಡಿಸೋಣವೆಂದು ಪ್ರಸಾದ ವಾಣಿಯಿಂದ ನುಡಿದರು. ಇಂಥ ಅಮೂಲ್ಯ ಗ್ರಂಥಗಳು ಅವರಿಂದ ಇನ್ನೂ ಬರೆದು ಬರಲೆಂದು ಹರಸಿದರು. ಶ್ರೀ ಅಖಂಡೇಶ್ವರ ಅವರಿಗೆ ಅಖಂಡ ಆಯುರಾರೋಗ್ಯಗಳ ಭಾಗ್ಯಾದಿಗಳನ್ನೀಯಲಿ.

ಪರಿಚಯ ಶುಭಾಶಯ

ಈ ಕೃತಿಯು ಮುದ್ರಣ ಸೇವೆಯನ್ನು ಶ್ರದ್ಧೆಯಿಂದ ಉದಾರ ಹೃದಯದಿಂದ ಸಲ್ಲಿಸಿದವರು ಮಂಗಲಗಿ ಗ್ರಾಮದ ಶರಣ ಅಣವೀರಪ್ಪ ಕೋರವಾರ. ಮಂಗಲಗಿ ಗ್ರಾಮವು ಕಲಬುರಗಿ ಜಿಲ್ಲೆ ಚಿತ್ತಾಪೂರ ತಾಲೂಕಿಗೆ ಸೇರಿದೆ.

ಕೋರವಾರ ಮನೆತನದ ಮೂಲ ಪುರುಷ ಶರಣ ನಿಂಬೆಣಪ್ಪ ಅವರ ಮಗ ಉಗರಪ್ಪ. ಉಗರಪ್ಪನ ಮಕ್ಕಳೇ ಅಣವೀರಪ್ಪನವರು.

ಅವರ ಬಾಳು ತುಂಬಾ ಸಾರ್ಥಕ. ಅವರ ಭಾವ ಸದ್ಭಾವ. ಅವರು ಅವರಿಗಾಗಿ ಅಲ್ಲ ಎಲ್ಲರಿಗಾಗಿ. ಸತಿ ಪತಿಗಳೊಂದಾದ ಹಿತವಾದ ಭಕ್ತಿ ಜೀವನ ಅವರದು. ಇಬ್ಬರೂ ಭಕ್ತಿ ರಸದ ಭತ್ತದ ಚಿಲುಮೆ. ಅವರದು ತುಂಬಿದ ಮನೆ. ತುಂಬು ಹೃದಯ ಮಾಡುವ ಮನ. ಯಾರಿಗಾದರೂ ನೀಡುವ ಕೈ ಮಾಡಿ ಚೇತರಿಸರು. ನೀಡಿ ಓಸರಿಸರು. ಅವರು ಏನಿಲ್ಲದೆಯೂ ಇದ್ದಾರು, ಶಿವಧ್ಯಾನ ಗುರುಧ್ಯಾನವಿಲ್ಲದೆ ಇರರು. ಶ್ರೀ ಗುರುನಂಜೇಶ್ವರರ ನೆನಹೇ ಉದಯ ಶುಭೋದಯ ಅದುವೇ ಮಹೋದಯ. ಕಾಯಕದ ಕರ್ಪುರಾರುತಿಯನ್ನೆತ್ತಿ ನಿತ್ಯವೂ ಶಿವಯೋಗಿಗೆ ಬೆಳಗುವ ಇವರ ಸೇವೆ ಲಿಂಗದ ಹೃದಯವನ್ನು ಮುಟ್ಟಿದೆ.

ಶ್ರೀ ಅಣವೀರಪ್ಪನವರು ಕೊಡಗೈ ದೊರೆಯಾಗಿ ಗ್ರಂಥಕ್ಕೆ ಉದಾರ ಆಶ್ರಯವ ನಿತ್ತು ಇತರರಿಗೆ ಮಾರ್ಗದರ್ಶಕರಾಗಿದ್ದಾರೆ. ಸಾಹಿತ್ಯ ಪ್ರಪಂಚದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ಅವರ ಅಮೃತಮಯವಾದ ಬಾಳ ಬಳ್ಳಿ ಚಿಗುರಲಿ ಹೂವಾಗಲಿ ಹಣ್ಣಾಗಿ ಹೊಂಪುಳಿಗೊಳ್ಳಲಿ. ಶ್ರೀ ಗುರುನಂಜೇಶ್ವರರೂ ಅಖಂಡ ಸಂಪದವನ್ನೀಯಲಿ.

ಡಾ|| ಪ್ರೊ. ಎಮ್. ಎಸ್. ಲಠ್ಠೆ M.A.P.H.D. ಕನ್ನಡ ಅಧ್ಯಯನ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಕಲಬುರ್ಗಿ ಅವರು ಬಯಲಮೂರ್ತಿ ಎಂಬ ದೇಗುಲಕ್ಕೆ ತಮ್ಮ ಸುವರ್ಣಮಯ ಕಲಶವೆಂಬ ಮುನ್ನುಡಿ ಬರೆದು ಗ್ರಂಥ ಬೆಳಗುವಂತೆ

ಮಾಡಿದ್ದಾರೆ. ಅವರು ಮುನ್ನುಡಿ ಬರೆಯುತ್ತಲೇ ಇರಲಿ. ಶತಾಯುಷಿಗಳಾಗಲಿ. ಗಂಗಾ ಪ್ರವಾಹದಂತೆ ನಾಡಿನಾದ್ಯಂತ ಅವರ ಗ್ರಂಥರಾಶಿ ಹರಿದು, ಓದುಗರ ಹೃದಯವೆಂಬ ಹೊಲವನ್ನು ತೋಯಿಸಿ, ಜ್ಞಾನವೆಂಬ ಹುಲುಸಾದ ಬೆಳೆ ಬೆಳೆದು ಬರಲೆಂದು ಹಾರೈಸುವೆವು.

ಜನತಾ ಪ್ರಿಂಟಿಂಗ್ ಪ್ರೆಸ್ಸಿನ ಒಡೆಯರಾದ ಶ್ರೀಯುತ ವ್ಹಿ. ಬಿ. ಬಡಿಗಣ್ಣವರು ಈ ಗ್ರಂಥವನ್ನು ಅತ್ಯಲ್ಪ ವೇಳೆಯಲ್ಲಿ ತಮ್ಮೆಲ್ಲ ಕಾರ್ಯಗಳನ್ನು ಬದಿಗಿರಿಸಿ ಮುದ್ದಾಗಿ ಸರ್ವಾಂಗ ಸುಂದರವಾಗಿ ಅಚ್ಚುಗೊಳಿಸಿದ್ದಕ್ಕಾಗಿ ಅವರಿಗೂ, ಅವರ ಸಿಬ್ಬಂದಿಗಳಿಗೂ ಶ್ರೀ ಗುರುನಂಜೇಶ್ವರರು ಸಕಲಪದ ಪದಾರ್ಥಗಳನ್ನಿತ್ತು ಕಾಪಾಡಲಿ.

ಭರತನೂರಿನ ಹಾಗು ಕನ್ನಡ ನಾಡಿನ ಸಮಸ್ತ ಓದುಗ ಮಹಾಶಯರು ಈ ಗ್ರಂಥವನ್ನು ಶ್ರದ್ಧೆಯಿಂದ ಓದಿದಾಗ ಅವರ ಸಕಲ ಮನೋಭಿಷ್ಟಗಳು ಕೈಸೇರುವವು. ಲೇಖಕರ ಪ್ರಕಾಶಕರ ಶ್ರಮ ಸಾರ್ಥಕವಾದೀತು.

ಸತ್ಯಂ ಶಿವಂ ಸುಂದರಂ.

ಪ್ರಕಾಶಕರು :

ಅಖಂಡೇಶ್ವರ ಗ್ರಂಥ ಮಾಲೆ

ಷಣ್ಮುಖ ನಗರ

ಜೇವರಗಿ.

ಆ. ಶು. ತೃತಿಯಾ

೧೯೭೭

ಭರತನೂರ

ಬಯಲ ಮೂರ್ತಿ



ಆದಿ ಶ್ರೀಗಳಾದ

ಶ್ರೀ ಮ. ನಿ. ಪ್ರ. ಗುರುನಂಜೇಶ್ವರ ಮಹಾಸ್ವಾಮಿಗಳು
ವಿರಕ್ತಮಠ, ಭರತನೂರ.

ಭರತನೂರ

ಬಯಲಮೂರ್ತಿ

೧. ಜ್ಞಾನೋದಯದ ಬೆಳಗು

ಸುಜ್ಞಾನಮ್ಮ ಬಾಗಿಲವರೆಗೆ ಬರುವಳು. ಹೊರಗೆ ತಲೆ ಹಾಕಿ, ಎಡಬಲದ ರಸ್ತೆಯ ಕಡೆಗೆ ನೋಡಿ, ಮತ್ತೆ ಹಿಂದೆ ಸರಿಯುವಳು. ಹೀಗೆ ಎರಡು ಮೂರು ಸಲ ಮಾಡಿದಳು. ಎದುರು ಮನೆಯ ನೀಲಮ್ಮ ಇದನ್ನು ಗಮನಿಸಿದ್ದಳು. ಸುಜ್ಞಾನಮ್ಮ ನಾಲ್ಕನೆಯ ಸಲ ಬಂದಾಗ, ನೀಲಮ್ಮ ಎದ್ದು ಮುಂದಕ್ಕೆ ಬಂದು ಕೇಳಿದಳು :

"ಯಾಕರೀ ಸುಜ್ಞಾನಕ್ಕಾ, ಗುರುನಂಜಪ್ಪನ ಹಾದಿ ಕಾಯುತ್ತೀರಿ ಕಾಣಸ್ತದ. ಇನ್ನೂ ಉಂಡು ಹೋಗಿಲ್ಲವೇನೋ ?"

"ಹೌದು ನೀಲಮ್ಮ, ಬಾ ಒಳಗೆ; ನಿನ್ನ ಊಟವಾಯಿತೇನೋ ?"

ಆಗಿದೆ ಎನ್ನುತ್ತ ನೀಲಮ್ಮ ಒಳಗೆ ಬಂದಳು; ಇಬ್ಬರೂ ಅಂಗಳದಲ್ಲಿಯೇ ನಿಂತುಕೊಂಡರು.

"ಅಕ್ಕಾ, ನಮ್ಮ ಹುಡುಗ ಹೇಳತಿದ್ದ, ನಿಮ್ಮ ಗುರುನಂಜಪ್ಪ ಓಣಿಯ ಹುಡುಗರ ಕೂಡ ಆಡಲಿಕ್ಕೆ ಬರುವದಿಲ್ಲವಂತೆ, ಒಬ್ಬನೇ ಅಡ್ಡಾಡುತ್ತಾನೆ. ಶಾಲೆಯ ಮಠದಿಂದ ಹೊರಬಂದ ಕೂಡಲೆ ಊರ ಹೊರಗೆ ಬಯಲಿಗೆ ಹೋಗುತ್ತಾನೆ. ಮರಗಳ ಬುಡದಲ್ಲಿ, ಕಲ್ಲು ಹಾಸಿನ ಮೇಲೆ ಸುಮ್ಮನೆ ಕುಳಿತುಕೊಂಡಿರುತ್ತಾನೆ. ಮೊನ್ನೆ ಒಂದು ಆಕಳು ನೀರಡಿಸಿ, ಬಾವಿಯ ಹತ್ತಿರ ಬಂದಿತಂತೆ, ಡೋಣಿಯಲ್ಲಿ ನೀರಿರಲಿಲ್ಲ. ಕಟ್ಟೆಯ ಕೆಳಗಿನ ರೊಜ್ಜು ನೀರಿಗೆ ಬಾಯಿ ಹಾಕುತ್ತಿತ್ತಂತೆ, ಗುರುನಂಜಪ್ಪ ಅದನ್ನು ನೋಡಿದನಂತೆ, ಕೂಡಲೇ ಗೋರೆಯಿಂದ ನೀರು ಜಗ್ಗಿ

ಡೋಣೆಗೆ ಎರೆದು ಕುಡಿಸಿದನಂತೆ ! ಕಾಲು ಕುಂಟು, ಕಣ್ಣು ಇಲ್ಲ; ಇಂತಹ ಒಬ್ಬ ಮುದುಕನ ಕೈ ಹಿಡಿದು ನಡಿಸುತ್ತಿದ್ದನಂತೆ. 'ಇವನಾರಪ್ಪಾ' ಎಂದು ನಮ್ಮ ವೀರಣ್ಣ ಕೇಳಿದಾಗ, "ಮನೆದಾರಿ ಸಿಗದೆ ತಡವರಿಸುತ್ತಿದ್ದಾನೆ. ಮೇದಾರ ಓಣಿಯಲ್ಲಿ ಇವನ ಮನೆಯಂತೆ, ಕಳಿಸಿ ಬರುತ್ತೇನೆ ಎಂದನಂತೆ."

"ಹೌದೇ ? ಗುರುನಂಜ ಇವನ್ನೆಲ್ಲ ಮಾಡುವದು ಒಳ್ಳೆಯದೆಂದೇ ತಿಳಿಯೋಣ. ಆದರೆ ಅವನ ನಡೆವಳಿಕೆಯೇ ಒಂದು ವಿಚಿತ್ರವಾಗಿದೆ. ಮುಂದೆ ಮನೆಯ ಭಾರ ಹೊತ್ತು ಹೇಗೆ ನಡೆಸುವನೋ ಎಂದು ಚಿಂತೆಯಾಗಿದೆ" ಎಂದು ಸಂತಸದ ಛಾಯೆಯ ಮೇಲೆ ದುಮ್ಮಾನದ ಮುಸುಕು ಆವರಿಸುತ್ತಿರುವ ಮನಸ್ಸಿನಿಂದ ಸುಜ್ಞಾನಮ್ಮ ನುಡಿದಳು. ನೀಲಮ್ಮನಿಗೆ ಸಮಯೋಚಿತ ಪ್ರಜ್ಞೆ ಇರಲಿಲ್ಲ. ಆಕೆ :

"ದಿನಾಲು ನಮ್ಮ ವೀರಣ್ಣ ಗುರುನಂಜಪ್ಪನ ಬಗ್ಗೆ ಇಂತಹ ಏನಾದರೂ ಸುದ್ದಿಯನ್ನು ಹೇಳತಾನೆ ಇರತಾನ. ಮೊನ್ನೆ ಯಾರ ಮನೆಯ ಮುಂದೆಯೋ, ಬಯಲಿಗೆ ಮೇಯುತ್ತಿದ್ದ ಕೋಳಿಯ ಮರಿಗಳ ಮೇಲೆ ಹದ್ದು ಹಾರುತ್ತಿರುವದನ್ನು ನೋಡಿ. ಅವುಗಳನ್ನು ಅವರ ಮನೆಯೊಳಕ್ಕೆ ಕಳಿಸಿದನಂತೆ" ಎಂದು ಹೇಳುತ್ತ ನಗಹತ್ತಿದಳು. ಆಗ 'ನೋಡವ್ವಾ' ಎಂದು ಸಪ್ಪಗಿನ ದನಿಯಲ್ಲಿ ನುಡಿದ ಸುಜ್ಞಾನಮ್ಮನ ಮುಖ ನೋಡಿ, ನಗುವನ್ನು ನುಂಗಿ, ತನ್ನ ಮಾತಿನ ರೀತಿಯನ್ನು ಬದಲಿಸಿದಳು.

"ಮುಂಜಾನೆ ಏನಾದರೂ ತಿನಿಸು ಮಾಡಿ, ತಿನ್ನಿಸಿ ಕಳಿಸಿರಬಹುದು ನೀವು."

"ಎಲ್ಲಿಯದವ್ವಾ ? ಏನೂ ಇಲ್ಲ. ಅವನು ನಸುಕಿನಲ್ಲಿಯೇ ಜಳಕ ಮಾಡುತ್ತಾನೆ. ಆದರೂ ಅವನ ದೀರ್ಘ ಲಿಂಗಾರ್ಚನೆ ಮುಗಿಯುವದಕ್ಕೆ, ಪಾಠ ಶಾಲೆಯ ಹೊತ್ತೇ ಆಗುತ್ತದೆ. ಒಂದು ಬಟ್ಟಲು ಹಾಲು ಮಾತ್ರ ಕುಡಿದು ಹೋಗುತ್ತಾನೆ. ಈಗ ಇಷ್ಟು ಹೊತ್ತಾಯಿತು........"

"ಇಷ್ಟರಲ್ಲಿ ಬಂದಾನೇಳರಿ; ಸೆಟ್ಟರೂ ಇನ್ನೂ ಊಟಕ್ಕೆ ಬಂದಿಲ್ಲವೇನೋ ?"

"ಇಲ್ಲ. ಅವರು ಬರುವ ಹೊತ್ತಾಗಿದೆ. ಅವರು ಬರುವದರೊಳಗಾಗಿ ಗುರುನಂಜ ಬಂದು ಉಂಡಿರದಿದ್ದರೆ, ಅವರೂ ಚೆನ್ನಾಗಿ ಊಟ ಮಾಡುವದಿಲ್ಲ."

ಅಷ್ಟರಲ್ಲಿ ಸದಾನಂದ ಸೆಟ್ಟರು ಬಾಗಿಲಲ್ಲಿ ಬಂದುದನ್ನು ಕಂಡು, ನೀಲಮ್ಮ ಓರೆಯಾಗಿ ತನ್ನ ಮನೆಗೆ ಹೋದಳು. ಸುಜ್ಞಾನಮ್ಮ ಪಡಸಾಲೆಯ ಮೆಟ್ಟಲು ಹತ್ತಿದಳು, ಸೆಟ್ಟರು ಪಾದರಕ್ಷೆ ಬಿಟ್ಟು ಮೇಲೇರುತ್ತ :

"ಯಾಕೆ ಮೊಗ ಬಾಡಿದೆ ? ಗುರುನಂಜ ಇನ್ನೂ ಉಂಡಿಲ್ಲವೇನು ?"

"ಇಲ್ಲ. ಬಂದೇ ಇಲ್ಲ. ನೀಲಮ್ಮ ಅವನ ಹೊರಗಿನ ಸುದ್ದೀನ ಹೇಳತಿದ್ದಳು."

"ಯಾವ ಸುದ್ದಿ ? ಏನು ಹೇಳುತ್ತಿದ್ದಳು ?"

ಮೈಮೇಲಿನ ಬಟ್ಟೆ ಬಿಚ್ಚುತ್ತ ಸದಾನಂದ ಸೆಟ್ಟಿ ಕೇಳಿದ. ಸುಜ್ಞಾನಮ್ಮ ನೀಲಮ್ಮನಿಂದ ಕೇಳಿದುದನ್ನು ಎಲ್ಲ ವಿವರಿಸಿದಳು. ಸೆಟ್ಟಿ ಮುಗುಳು ನಗು ನಕ್ಕು :

"ಇದರಲ್ಲಿ ಕೆಡಕಾದುದೇಸಿದೆ ? ಮಗ ಕೋಳಿ ಕಾಯ್ದುದು ಕೀಳೆನಿಸಿತೋ ?"

"ಅದೇನಿಲ್ಲ. ಅವನ ಈ ಕೆಲಸಗಳಿಗೆ ಅವನ ಅಂತಃಕರಣದಲ್ಲಿ ದ್ರವಿಸುವ ದಯೆಯೇ ಕಾರಣ ! ಇದಕ್ಕೆ ಕೆಡಕೆನ್ನಲಾದೀತೇ ? ದಯೆಯಿಲ್ಲದ ಧರ್ಮವೆಲ್ಲಿ ?"

"ಹಾಗೆ ಹೇಳು. ಇದೀಗ ನೀನು ನಿನ್ನ ಸುಜ್ಞಾನಿ ಹೆಸರಿಗೆ ತಕ್ಕವಳಾದೆ."

"ಇರಲಿ ಬಿಡಿರಿ" ಹುಸಿ ಮುನಿಸಿನಿಂದ ಮೊಗದಿರುವಿ, ಸುಜ್ಞಾನಮ್ಮ ಮತ್ತೆ ನುಡಿದಳು : "ನನ್ನದೇತರ ಜ್ಞಾನ ? ಮುಂಜಾನೆಯಿಂದ ಮಗ ಊಟವಿಲ್ಲದೆ ತಿರುಗುತ್ತಾನಲ್ಲಾ ಎಂದು ಕಳವಳ........"

"ನನಗೂ ಅಷ್ಟೇ ! ಅವನು ಉಂಡು ತಿಂದು ಶರೀರವನ್ನು ಸರಿಯಾಗಿಟ್ಟು-ಕೊಂಡು, ಈ ಒಳ್ಳೆಯ ಕೆಲಸಗಳನ್ನು ಮಾಡುತ್ತಿರಲಿ. ಅವನ ಒಲವು ನಿಲವುಗಳು ಬಹಳ ಉತ್ತಮವಾಗಿವೆ ಸಜ್ಜನರು ಅವನನ್ನು ಮೆಚ್ಚಿಕೊಂಡಿದ್ದಾರೆ. ಪತ್ರೀ ಮಠದ ಚಂದಯ್ಯ ನಮ್ಮ ಅಂಗಡಿ ಕಟ್ಟೆಗೆ ಬಂದು ಕುಳ್ಳಿರುತ್ತಾನೆ. ಅವನೂ ಹೇಳಿದ........"

"ಏನು ಹೇಳಿದ" ಆತುರದಿಂದ ಸುಜ್ಞಾನಮ್ಮ ಕೇಳುತ್ತಿರುವಾಗ, ಸದಾನಂದ ಸೆಟ್ಟಿ ಕೈಕಾಲು ಮುಖ ತೊಳೆದುಕೊಂಡು. ಮಣೆಯ ಮೇಲೆ ಕುಳಿತು, ಭಸ್ಮ ಧರಿಸಿಕೊಂಡನು. ಮಡದಿ ಎಡೆಮಾಡುತ್ತ ಮತ್ತೆ ಕೇಳಿದಳು :

"ಚಂದಯ್ಯ ಏನು ಹೇಳುತ್ತಿದ್ದ ?

"ಊರಲ್ಲಿ ಸಂತರು, ಮಹಂತರು ಬಂದರೆ, ಅವರು ಉಳಿದುಕೊಂಡ ಸ್ಥಳವನ್ನು ಹುಡುಕಿಕೊಂಡು ಹೋಗಿ, ಅವರ ಹತ್ತಿರ ಕುಳಿತುಕೊಳ್ಳುತ್ತಾನಂತೆ, ಅನುಭಾವದ ಮಾತನಾಡುತ್ತಾನಂತೆ. ಅವರ ಸೇವೆ ಮಾಡುತ್ತಾನಂತೆ ನಮ್ಮ ಅಂಗಡಿಯಿಂದಲೂ ಹಲವು ಸಲ ಮಂಡಕ್ಕಿ, ಬೆಲ್ಲ ಒಯ್ದುಕೊಟ್ಟದ್ದುಂಟು. ಇದಲ್ಲದೆ ಸಾರುವ ಅಯ್ಯನವರು ಬಂದರೆ ಅವರಿಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಾನಂತೆ. ವಚನ ಪ್ರಚಾರದ ಜಂಗಮರು ಬಂದರೆ ಅವರೊಡನೆ ಅಲ್ಲಲ್ಲಿ ಕುಳಿತು, ಅವರು ಹೇಳುತ್ತಿರುವ ವಚನಗಳನ್ನು ಬರೆದುಕೊಳ್ಳುತ್ತಾನಂತೆ !"

"ಹೌದು ಅಂತಹ ಜಂಗಮಮೂರ್ತಿಗಳನ್ನು ಮನೆಗೆ ಕರೆದು ತರುತ್ತಾನೆ. ನಮಗೂ ಜಂಗಮ ದಾಸೋಹದ ಭಾಗ್ಯ ದೊರೆಯುತ್ತದೆ. ಅವರಿಂದ ಕೇಳಿಸಿಕೊಂಡ ಶರಣರ ವಚನಗಳನ್ನು ಬರೆಬರೆದು ಇಟ್ಟುಕೊಂಡಿರುತ್ತಾನೆ. ಒಬ್ಬನೇ ಇದ್ದಾಗ ಅವುಗಳನ್ನು ನೋಡುತ್ತಿರುತ್ತಾನೆ. ಅದಾಯ್ತು, ಮತ್ತೇನು ಚಂದಯ್ಯ ಹೇಳಿದ್ದು?"

"ಗುರುನಂಜನು ಪ್ರವಚನ ಪ್ರಾರಂಭವಾಗುವ ಸಮಯದ ಮೊದಲೇ ಮಠಕ್ಕೆ ಹೋಗಿ, ಗುರುದೇವರಿಗೆ ಜೀವರು–ದೇವರು–ಜಗತ್ತುಗಳ ಸಂಬಂಧವನ್ನು ಕುರಿತು ಕುತೂಹಲಕಾರಿಯಾದ ಪ್ರಶ್ನೆಗಳನ್ನು ಕೇಳುತ್ತ, ಸಲ್ಲಾಪ ಮಾಡುತ್ತಿರುತ್ತಾನಂತೆ! ಚಂದಯ್ಯ ಶಾಲೆಯ ಅಯ್ಯನವರ ಕಡೆಗೂ ಹೋಗುತ್ತಿರುತ್ತಾನೆ. ಅಯ್ಯನವರು ಗುರುನಂಜನ ಪಾರಮಾರ್ಥಿಕ ವಿಚಾರಗಳಲ್ಲಿಯ ಆಸಕ್ತಿಯನ್ನು ಬಹಳವಾಗಿ ಪ್ರಶಂಶಿಸಿದರಂತೆ. ಓದು ಬರಹವನ್ನಂತೂ ಬೇರೆಯವರಿಗೆ ಅಸಾಧ್ಯವಾದ ತೀವ್ರ ಗತಿಯಿಂದ ಕಲಿತು ಬಿಟ್ಟನಂತೆ."

"ಯಾವದೋ ಜನ್ಮದ ನಮ್ಮ ಪುಣ್ಯವೆಂದು ಭಾವಿಸಬೇಕು."

"ಅಲ್ಲದೆ ಮತ್ತೇನು ? ಶ್ರೀಗುರು ಚೆನ್ನಮಲ್ಲದೇವರ ನೆಚ್ಚಿನ ಶಿಷ್ಯನಾಗಿದ್ದಾನೆ ಗುರುನಂಜ. ಮೊನ್ನೆ ನಾನು ದರ್ಶನಕ್ಕೆ ಹೋದಾಗ, ಅವನ ಬಗ್ಗೆ ಮಾತನಾಡುತ್ತ ಗುರುಗಳು ನಿಮ್ಮ ಮಗ ಮಹಾನುಭಾವಿಯಾಗುತ್ತಾನೆಂದು ಹೃದಯ ತುಂಬಿ ಹೇಳಿದರು. ಅವರ ವಾಣಿ ಪರಶಿವನ ವಾಣಿ; ಸುಳ್ಳಾಗುವದಿಲ್ಲ."

ಭವಿಷ್ಯತ್ತಿನಲ್ಲಿ ಗುರುನಂಜನು ಶಿವಯೋಗಿಯಾಗುವ ಕಲ್ಪನೆ ಸೆಟ್ಟಿಯ ಅಂತರಂಗದಲ್ಲಿ ಮೂಡಿ ಬರುತ್ತಿತ್ತು. ಈ ಶಿವಭಾವದ ನೆನಹಿನಲ್ಲಿಯೇ ಎಡೆಯಲ್ಲಿಯ ಅನ್ನ ಅಮೃತವಾಗಿ, ಪ್ರಸಾದವಾಗಿ ಒಡಲಿಗೆ ಸಂದು ಸಂತೃಪ್ತಿಯನ್ನುಂಟು ಮಾಡುತ್ತಲಿತ್ತು. ಕೇಳ ಕೇಳುತ್ತ ಸುಜ್ಞಾನಮ್ಮನ ಹೃದಯ ಹಿಗ್ಗಿ, ಸಂತಸದ ರಸಬಿಂದು ಕಣ್ಣಬಾಗಿಲಿಗೆ ಬಂದಿದ್ದವು. ಆಕೆಯ ಮಾತು ಮನದಲ್ಲಿ ಅಡಗಿತು, ಯೋಚಿಸಿದಳು : ಗುರು ಚೆನ್ನಮಲ್ಲದೇವರು, ಮೊನ್ನೆ ನಾನು ನಮಸ್ಕರಿಸಿದಾಗ, "ನಿನ್ನದು ಪುಣ್ಯೋದರ ತಾಯಿ ! ಸತ್ಪುತ್ರನನ್ನು ಹಡೆದಿರುವೆ. ಶುಭವಾಗಲಿ" ಎಂದು ಹರಸಿ ನುಡಿದರು. ಗುರುದೇವರ ಕೃಪೆಯಿಂದಲೇ, ಇಳಿವಯಸ್ಸಿನಲ್ಲಿ ನಾವು ಈ ಮಗನನ್ನು ಹಡೆದದ್ದು ! ನಮ್ಮ ಮಗನ ಮೇಲೆ ಅವರ ಕರುಣೆ ಪೂರ್ಣವಾಗಿದೆ. ಅವರ ಪಾದಾನುಗ್ರಹದಿಂದ ಗುರುನಂಜನು ಪರೋಪಕಾರಿಯಾಗಲಿ, ತ್ಯಾಗಿಯಾಗಲಿ, ಯೋಗಿಯಾಗಲಿ... .... ಆದರೆ........ ಆದರೆ........ ಈ ಮನೆತನದ ಈ ಸಂಪತ್ತು, ಲಿಂಗ, ಜಂಗಮಾರ್ಚನೆ, ಉತ್ಸವಾದಿಗಳು, ಗಣತೃಪ್ತಿ ಈ ಸತ್ ಸಂಪ್ರದಾಯಗಳ ಹೊರೆ ಹೊತ್ತು ನಡೆಸುವದಕ್ಕೆ ಮನೆತನದ ಕಾರ್ಯ ನಿರ್ವಹಿಸುವದಕ್ಕೆ, ನಮ್ಮನ್ನು

ರಕ್ಷಿಸುವದಕ್ಕೆ ತಕ್ಕವನಾಗಬಾರದೇ ? ಇದಕ್ಕಾಗಿ ಮದುವೆ ಮಾಡಿಕೊಂಡು, ಸಜ್ಜನನಾಗಿ ಸಂಸಾರ ಮಾಡಿದರೆ ತಪ್ಪೇನು ? ಸಂಸಾರಿಯೂ ಸದ್ಗತಿಗೆ ಸಲ್ಲುವದನ್ನು, ಆ ಕ್ರಮವನ್ನು ಶರಣರು ಹೇಳಿಲ್ಲವೇ ? ಆದ್ದರಿಂದ ಶಾಲೆಯ ಪಾಠ ಕಲಿಯುವದ-ರೊಡನೆ, ಮನೆಯ ಕಾರ್ಯಗಳಲ್ಲಿಯೂ ಮನಸ್ಸು ಹಾಕದೆ, ಹಾಗೆ ಮನಬಂದಂತೆ ಅಲೆಯಬಹುದೇ ? ಎಂಬ ಸಾತ್ವಿಕ ಮಾಯೆಯ ಮರುಗು ಮನಸ್ಸಿನ ಮತ್ತೊಂದು ಪದರಿನಲ್ಲಿ ತಲೆದೋರಿತ್ತು.

ಅಷ್ಟರಲ್ಲಿ ಸೆಟ್ಟರು ಊಟ ಮುಗಿಸಿ ಎದ್ದು ಹೊರ ಬಂದರು. ಹಾಗೆಯೇ ಅಂಗಡಿಗೆ ನಡೆದರು. ಸುಜ್ಞಾನಮ್ಮನು ತಾನು ಉಣ್ಣದೆ ಮತ್ತೆ ಮಗನ ದಾರೀ ಕಾಯಲು ಹೊರಗೆ ಬಂದಳು. ಬಾಗಿಲತ್ತ ನೋಡಿದಳು. ಏನಾದರೂ ಮನೆಗೆಲಸ ಕೈಕೊಳ್ಳಬೇಕೆಂದು ದೃಷ್ಟಿಯನ್ನು ಸಾಮಾನುಗಳತ್ತ ಹೊರಳಿಸಿದಳು. ಅಷ್ಟರಲ್ಲಿ 'ಅವ್ವಾ' ಎನ್ನುತ್ತ ಬಂದನು ಗುರುನಂಜಪ್ಪ. ಕತ್ತೆತ್ತಿ ನೋಡಿದಳು ಸುಜ್ಞಾನಮ್ಮ! ಮುಖ ಅರಳಿತು.

"ಈಗ ಬಂದೇನಪ್ಪಾ ?"

"ಹೌದು. ಈಗ ನಿನ್ನ ನೆನಪಾಯಿತಲ್ಲವ್ವಾ ! ನಿನ್ನ ನೆನಪಾದೊಡನೆ ಬಂದು ಬಿಡುತ್ತೇನೆ."

"ನನ್ನ ನೆನಪಾಗಿಯೇ ಬರುವೆಯೇನು ? ನಿನಗೆ ಹಸಿವೆಯಾಗುವದಿಲ್ಲವೇ ?"

"ಆಗುತ್ತದೆ. ಆದರೆ ಅದು ನಿನ್ನನ್ನು ಕಂಡ ಮೇಲೆ ಆಗುತ್ತದೆ. ಮೊದಲು ನೀನು, ಆ ಮೇಲೆ ಹಸಿವೆ ! ಆ ಮೇಲೆ ಊಟ ! ಆ ಮೇಲೆ ಏನು ? ಆನಂದ !"

ಸುಜ್ಞಾನಮ್ಮ ನಗಹತ್ತಿದಳು. ಗುರುನಂಜಪ್ಪ ಮೈಮೇಲಿನ ಪಂಜೆಯನ್ನು ಕೊಡವಿ ಗೂಟದ ಮೇಲೆ ಇಟ್ಟು, ಬಚ್ಚಲಕ್ಕೆ ಹೋದನು. ತಾಯಿಯ ದುಗುಡವೆಲ್ಲ ಅಡಗಿಹೋಗಿತ್ತು. ಮಗನು ಕಿಡಕಿಯ ಬೆಳಕಿಗೆ ಎದುರಾಗಿ ನಿಂತು ಮುಖವನ್ನು ಒರೆಸಿಕೊಳ್ಳುತ್ತಿರುವಾಗ, ಸುಜ್ಞಾನಮ್ಮ ಅವನ ಮೈಯ ಸೌಷ್ಟವವನ್ನು ಎವೆಯಿಕ್ಕದೆ ನೋಡುತ್ತಿದ್ದಳು. ಹತ್ತು ವರ್ಷದ ಎಳೆ ಮಗುವಾದರೂ ಎತ್ತರವಾಗಿ ಬೆಳೆದಿದ್ದಾನೆ. ವಿಶಾಲವಾದ ಹಣೆ, ಹರವಾದ ಎದೆ, ದೊಡ್ಡ ಕಣ್ಣುಗಳು, ಹೊಳೆಯುವ ಕಣ್ಕಾಂತಿ, ನಿಡಿದಾದ ಮೂಗು, ಮುಮ್ಮುಖವಾದ ಕಿವಿದೆರೆಗಳು, ಉದ್ದವಾದ ತೋಳುಗಳು, ಸರಳವಾದ ಕೈಬೆರಳುಗಳು, ಮೃದುವಾದ ಪಾದಗಳು, ಅಂದವಾದ ಮೂರ್ತಿ, ಜನರಲ್ಲಿ ಅವನ ಅಂದವಾದ ಕೀರ್ತಿ, ತಾಯಿ ಮುದ್ದುಮಗನ ಮೋಹದಲ್ಲಿ ಮುಳುಗಿ ಮೈಮರೆತಿದ್ದಳು ಕ್ಷಣಹೊತ್ತು !

"ಬಾರವ್ವಾ, ನಿಂತುಬಿಟ್ಟೆ, ತೀರ್ಥಪ್ರಸಾದ ತಾ" ಎಂದು ಗುರುನಂಜಪ್ಪ ಆಸನದತ್ತ ಹೋಗಿ ಕುಳಿತು ಕೊಂಡನು. ಭಸ್ಮ ಧರಿಸಿಕೊಂಡನು. ಸುಜ್ಞಾನಮ್ಮ ಎಚ್ಚರಗೊಂಡು, ತಟ್ಟೆಯನ್ನಿಟ್ಟು, ತೀರ್ಥಪ್ರಸಾದ ಕೊಟ್ಟು, ಎಡೆಮಾಡಲು ತೊಡಗಿದಳು. ಲಿಂಗಾರ್ಪಿತ ಮಾಡಿ, ಅವುಗಳನ್ನು ಸೇವಿಸುತ್ತ, ಗುರುನಂಜಪ್ಪ ತಾಯಿಯ ಮೊಗ ನೋಡುತ್ತ :

"ಅವ್ವಾ, ನಾನಿನ್ನು ಸಂಜೆಗೂ ಒಮ್ಮೆ ಸ್ನಾನಮಾಡಿ, ಲಿಂಗಾರ್ಚನೆ ಮಾಡುತ್ತೇನೆ. ಮುಂಜಾನೆ ನನಗೆ ಪಾಠಶಾಲೆಗೆ ಹೋಗುವ ಅವಸರದಲ್ಲಿ ಲಿಂಗೋಪಾಸನೆಗೆ ಸಾಕಷ್ಟು ಸಮಯ ಸಿಗದೆ ಅತೃಪ್ತಿಯಾಗುತ್ತಿದೆ. ಸಂಜೆಯು ವೇಳೆ ಯಾವ ಅವಸರವೂ ಇರುವದಿಲ್ಲ; ಯಾವ ಗದ್ದಲವೂ ಇರುವದಿಲ್ಲ. ರಾತ್ರಿಯೆಲ್ಲ ನನಗಾಗಿಯೇ ಇರುತ್ತದೆ."

"ಆಗಲಪ್ಪಾ, ಯಾರು ಬೇಡೆನ್ನುತ್ತಾರೆ ?"

"ತೋಂಟದ ಸಿದ್ಧಲಿಂಗ ಮಹಾಶಿವಯೋಗಿಗಳು ಕೆಗ್ಗೆರೆಯ ಕೋಟದಲ್ಲಿ ಆರು ತಿಂಗಳು ಒಂದೇ ಸವನೆ ಸ್ಥಳಬಿಟ್ಟು ಕದಲದೆ ಲಿಂಗಾರ್ಚನೆ, ಲಿಂಗಧ್ಯಾನ-ಗಳೊಡನೆ ಯೋಗಸಾಧನೆಯ ತಪಸ್ಸು ಮಾಡಿದರಲ್ಲಾ, ಅಂತಹ ಮಹಾಸಾಧನೆ ಒಮ್ಮೆಲೇ ಸಾಧಿಸುವದಿಲ್ಲವಮ್ಮಾ! ಅದನ್ನು ಕೈಕೊಂಡು, ಕ್ರಮವಾಗಿ ಬಲಪಡಿಸಿಕೊಳ್ಳಬೇಕು ಅವ್ವಾ" ಎಂದನು.

ತನ್ನ ಯೋಚನೆಯ ಹತ್ತಿರವೂ ಹಾಯದೆ, ಮಗನ ವಿಚಾರ ಮಾತು ದೂರ ದೂರ ಹಾಯ್ದು, ಮುಂದೆ ದೂರ ಹೋಗುತ್ತಿರುವದನ್ನು ತಿಳಿದ ತಾಯಿ ಕಾತರದಿಂದ ಮಗನ ಮುಖವನ್ನು ಮಾತ್ರ ನೋಡಿದಳು. ಪ್ರತಿಯಾಗಿ ಏನನ್ನೂ ಹೇಳಲಿಲ್ಲ. ಗುರುನಂಜಪ್ಪ ಹೊರಗೆ ಬಂದು, ಮೊಗಸಾಲೆಯಲ್ಲಿ ವಚನಗಳ ಕಟ್ಟು ಇಟ್ಟುಕೊಂಡು ಓದುತ್ತ ಕುಳಿತನು.

ಕೆಲವು ದಿನ ಸರಿದವು. ಗುರುನಂಜಪ್ಪನಿಗೆ ೧೧ ವರ್ಷ. ವಯಸ್ಸಿಗೆ ಮಿಕ್ಕಿದ ಉನ್ನತಮಟ್ಟದಲ್ಲಿ ಅವನ ದೈವೀಗುಣಗಳು ಪ್ರಕಟವಾಗುತ್ತಿದ್ದವು. ಪೂರ್ವ ಜನ್ಮದ ಸಾಧನೆಯು ಫಲವಾಗಿರಬೇಕು. ಪೂರ್ಣಸಿದ್ಧಿಗೆ ತಲುಪುವ ಮೊದಲೇ ಆಗಿನ ದೇಹಪತನವಾಗಿರಬೇಕು, ಎಳೆಯದರಲ್ಲಿಯೇ ಸರ್ವಜೀವಿಗಳಲ್ಲಿ ದಯೆ ತೋರುವ ಒಲವು, ಸಂತ-ಸತ್ಪುರುಷರ ಸಹವಾಸದಲ್ಲಿ ಆಸಕ್ತಿ, ಗುರುಲಿಂಗ ಜಂಗಮರಲ್ಲಿ ಭಕ್ತಿ, ಸೇವೆ, ಆತ್ಮಸಾಧನೆ, ಯೋಗಾಭ್ಯಾಸದಲ್ಲಿ ಉತ್ಸುಕತೆ ಇವು ಪರಿಸ್ಫುಟಗೊಳ್ಳುತ್ತಿದ್ದವು. ಇವುಗಳಿಗೆ ಉತ್ತೇಜನ ನೀಡಿ, ಪೋಷಿಸುವ

ವಾತಾವರಣವೂ ಅವನಿಗೆ ಒದಗಿತ್ತು. ಜನ್ಮ ಕೊಟ್ಟ ತಂದೆ ತಾಯಿಗಳು ಸದ್ಭಕ್ತಿ ಸದಾಚಾರಗಳಲ್ಲಿ ಹೆಸರಾದವರು. ಅವರು ಶರಣ ಸಂತಾನದವರು; ಕಾಯಕ, ದಾಸೋಹ, ದುರ್ಬಲರ ಸೇವೆ, ಲಿಂಗೋಪಾಸನೆ, ಗಣತೃಪ್ತಿ ಮುಂತಾದ ಶಿವಕ್ರಿಯೆಗಳು ಎಡೆವಿಡದೆ ನಡೆಯುತ್ತಿದ್ದವು. ಶ್ರೀಗುರು ಚೆನ್ನಮಲ್ಲದೇವರು ಲಿಂಗಾಂಗ ಸಾಮರಸ್ಯ ಸುಖ ಸಂಪದವನ್ನು ಪ್ರತ್ಯಕ್ಷವಾಗಿ ಅನುಭವಿಸುತ್ತಿರುವವರು. ಅವರ ಆಶೀರ್ವಾದದಿಂದಲೇ ಸದಾನಂದ ಸುಜ್ಞಾನಿಗಳ ಉದರದಲ್ಲಿ ಗುರುನಂಜರ ಉದಯವಾಗಿತ್ತು. ಆ ಗುರುಗಳೇ ಈ ಬಾಲಕನ ಹುಟ್ಟಿಗಂಟಿದ ಅಷ್ಟಪಾಶ ಮಾಯಾದಿ ಮಲಗಳನ್ನು ತಮ್ಮ ಪವಿತ್ರ ಹಸ್ತಸ್ಪರ್ಶದಿಂದ ತೊಡೆದು, ಕರುಣಾ-ಜಲದಿಂದ ತೊಳೆದು, ಅವನ ಬುದ್ಧಿ, ಜ್ಞಾನಗಳನ್ನು ಬೆಳಗುತ್ತಿದ್ದರು. ಇನ್ನು ಹುಟ್ಟಿದೂರು ಮಂಗಳಪುರವು! ಹೆಸರಿಗೆ ತಕ್ಕಂತೆ ಮಂಗಳಕರವಾಗಿತ್ತು. ಅಲ್ಲಿ ದುರ್ವ್ಯಸನ, ದುಷ್ಟತನಗಳ ಸುಳಿವಿಲ್ಲ. ಜನರೆಲ್ಲ ಸಜ್ಜನರು, ಪರೋಪಕಾರ, ಪರಹಿತ, ಚಿಂತನೆ ಶಿವಭಕ್ತಿಗಳಲ್ಲಿ ಸತ್ಯಶುದ್ಧ ಕಾಯಕದಲ್ಲಿ ನಿರತರಾದವರು. ಈ ಗ್ರಾಮದ ಪಾವನತೆಗೆ, ಷಟ್‌ಸ್ಥಲದರ್ಶನದ (ಶಾಸ್ತ್ರದ) ಪುನರ್ನಿರ್ಣಾಯಕರೂ ಅತ್ಯಂತಿಕ ಮಹಿಮರೂ ಆದ ತೋಂಟದ ಸಿದ್ಧಲಿಂಗ ಮಹಾಶಿವಯೋಗಿಗಳವರ ಶಿಷ್ಯರು ಕಾರಣರಾಗಿದ್ದರು. ಅವರು ಆಗಾಗ ಇತ್ತ ಸುಳಿದು ಮಂಗಳಪುರದ ಮಂಗಲ ಸ್ವರೂಪವನ್ನು ಊರ್ಜಿತಗೊಳಿಸುತ್ತಿದ್ದರು. ಶ್ರೀ ಚೆನ್ನಮಲ್ಲದೇವರು ಅವರೊಳಗಿ-ನವರೊಬ್ಬರು. ಅವರು ಅಲ್ಲಿಯ ದೊರೆಯ ಇಚ್ಛೆಯಂತೆ ಧರ್ಮಪ್ರಚಾರಕರೊಡನೆ ಸಂಚರಿಸುವದನ್ನು ಬಿಟ್ಟು, ಮಂಗಳಪುರದಲ್ಲಿಯೇ ನೆಲೆಗೊಂಡಿದ್ದರು. ಇನ್ನು ಮಂಗಳಪುರದ ದೊರೆ ಕೇಶಿರಾಜನ ರೀತಿ ನೀತಿಗಳೂ ಅಷ್ಟೇ ಮಂಗಳಕರವಾಗಿದ್ದವು. ಕಲಬುರ್ಗಿಯ ಬಾದಶಹನ ಅಂಕಿತದಲ್ಲಿ ಆಳುವ ಸಾಮಂತದೊರೆ, ನಾಡಪ್ರಭು ಕೇಶಿರಾಜನು. ಅವನ ರಾಜ್ಯವು ಸಂಪತ್ ಸಮೃದ್ಧವಾಗಿತ್ತು, ಸುಭಿಕ್ಷವಾಗಿತ್ತು. ಅವನ ವೈಭವಕ್ಕೆ ಕೊರತೆಯಿರಲಿಲ್ಲ. ಆತನು ಉದಾರಿ, ವಿನಯಶೀಲ, ನೆರೆಹೊರೆಯ ಸಾಮಂತರ ಸ್ನೇಹಿತ, ಐಶ್ವರ್ಯದಿಂದ ಭ್ರಮಿತನಾದವನಲ್ಲ. ಸಿರಿಗರ ಹೊಡೆದು ಮೆರೆಯುವ ದುರಹಂಕಾರಿ ರಾಜರಿಗೂ ಅವನಿಗೂ ನೆಲಮುಗಿಲುಗಳಂತರ. ತನ್ನ ಪ್ರಜೆಗಳ ಹಿತದಲ್ಲಿಯೇ ಆಸಕ್ತನು. ಸ್ವತಃ ಶ್ರೇಷ್ಠ ಶಿವಭಕ್ತನಾಗಿದ್ದನು. ಪ್ರಜೆಗಳೆಲ್ಲರು ತಮ್ಮ ತಮ್ಮ ಮತದಂತೆ, ದೈವಭಕ್ತಿ-ಧರ್ಮಾಚಾರಗಳಲ್ಲಿ ನಿಷ್ಠರಾಗಿರ-ಬೇಕು. ಅನ್ಯರ ಧಾರ್ಮಿಕಾಚಾರಗಳನ್ನು ಗೌರವಿಸಬೇಕು. ಪರಸ್ಪರರು ಪ್ರೀತಿ, ವಿಶ್ವಾಸಗಳಿಂದ ಸಹಕರಿಸಿ ಬಾಳಬೇಕು. ಆಲಸ್ಯ, ಮೋಸ, ವಂಚನೆ, ಹಿಂಸೆಗಳು ಸಲ್ಲವು ಎಂಬುದು ಅವನ ರಾಜನೀತಿಯಾಗಿತ್ತು.

ಇಂತಹ ಸತ್ಪ್ರಭು ಸದಾ ಸಂತರು, ಶರಣರು, ಶಿವಯೋಗಿಗಳು ಬಂದರೆ, ಸನ್ಮಾನಿಸಿ, ಆರಾಧಿಸುತ್ತಿದ್ದನು. ತಾನು ಅಧಿಕಾರ ವಹಿಸಿಕೊಂಡ ಹೊಸತರದಲ್ಲಿ

ಧರ್ಮಪ್ರಚಾರಕ್ಕಾಗಿ ಸಂಚರಿಸುತ್ತಿದ್ದ ತೋಂಟದಾರ್ಯರ ಶಿಷ್ಯವೃಂದವು ಮಂಗಳ ಪುರಕ್ಕೆ ಆಗಮಿಸಿತು. ಕೇಶಿರಾಜನು ವೈಭವದ ಉತ್ಸವದೊಡನೆ ಅವರನ್ನು ಸ್ವಾಗತಿಸಿ ಅರಮನೆಗೆ ಬಿಜಯಂಗೈಸಿಕೊಂಡನು. ಹಲವು ದಿವಸ ಅವರ ಸೇವೆ ಮಾಡಿ, ಅವರಿಂದ ತನ್ನ ಪ್ರಜೆಗಳಿಗೆ ಕಲ್ಯಾಣಕರವಾದ ಷಟ್‌ಸ್ಥಲ ಧರ್ಮದ ಬೋಧೆ ಮಾಡಿಸಿದನು. ಅವರಲ್ಲಿಯೇ ಜ್ಞಾನ ಚೇತನದ ತೇಜೋಮೂರ್ತಿಯಂತಿದ್ದ ಚೆನ್ನಮಲ್ಲಸ್ವಾಮಿಗಳನ್ನು ತನ್ನ ಗುರುಗಳಾಗಿ ಮಂಗಳಪುರದಲ್ಲಿಯೇ ಉಳಿಯುವಂತೆ ಪ್ರಾರ್ಥಿಸಿದನು. ಉಳಿದ ಶಿವಯೋಗಿಗಳೂ ಅದನ್ನು ಅನುಮೋದಿಸಿ, ಅವರನ್ನು ಅಲ್ಲಿಯೇ ಬಿಟ್ಟು ಹೋಗಿದ್ದರು. ಚೆನ್ನಮಲ್ಲಸ್ವಾಮಿಗಳ ಪ್ರಭಾವದಿಂದ ರಾಜನ ಉಚಿತ ಪ್ರಭುತ್ವದಿಂದ ಮಂಗಳಪುರವು ಮಂಗಲಕರವಾಗಿದ್ದಿತು. ಹೀಗೆ ತಾಯಿ ಮನೆಯಿಂದ, ಅರಮನೆ ಗುರುಮನೆಗಳ ವರೆಗಿನ ಎಲ್ಲ ಪರಿಸರವು ಗುರುನಂಜರ ದಿವ್ಯ ಚೇತನವು ಪರಿಸ್ಫುಟಗೊಳ್ಳುವದಕ್ಕೆ ಸಹಜವಾಗಿ ಅನುಕೂಲವಾಗಿತ್ತು. ಅಥವಾ ಗುರುನಂಜರೇ ತಮ್ಮ ಪುರಾಕೃತ ತಪಸ್ಸಿದ್ಧಿಗೆ ಪೂರಕವಾಗಿ, ಪರಮ ನಿರಂಜನ ಜಂಗಮತ್ವವನ್ನು ಸಾಧಿಸಲು ಇಂತಹ ಅನುಕೂಲ ಪರಿಸರವನ್ನೇ ನೋಡಿ, ಉದಯಿಸಿದ್ದರೇನೋ ? ಇರಲಿ.

ಇದಿಷ್ಟು ಬಾಲಕನಾಗಿರುವಾಗಲೇ ಗುರುನಂಜರು ದೇವಮಾನವತೆಯ ಬೆಳಕು ಬೀರುತ್ತಿರುವದಕ್ಕೆ ಹಿನ್ನೆಲೆಯಾಗಿರುವ ಸಂಗತಿಗಳನ್ನು ಅರಿತುಕೊಂಡಂತಾಯಿತು. ಇನ್ನು ಅವರ ಲಿಂಗಲೀಲಾ ವಿಲಾಸಗಳನ್ನು ಕ್ರಮವಾಗಿ ಮುಂದೆ ತಿಳಿಯಬಹುದು.

೨. ಜ್ಞಾನಕ್ರಿಯೆಗಳು ಒಂದಾಗಿ

ಗುರುನಂಜರಿಗೆ ಹುಟ್ಟಿದಾಗಲೇ ಗುರುದರ್ಶನ, ಲಿಂಗಧಾರಣ, ಮಂತ್ರೋಪದೇಶ ಮೊದಲಾದವು ಯಥೋಚಿತವಾಗಿ ನಡೆದಿದ್ದವು. ಅದರಿಂದ ಅವರ ಬಾಲಲೀಲೆಗಳೆಲ್ಲ ಲಿಂಗಲೀಲೆಗಳೇ ಆಗಿದ್ದವು. ಕ್ರಿಯಾಚಾರಗಳೆಲ್ಲ ಲಿಂಗಕ್ರಿಯೆಗಳೇ ಆಗಿದ್ದವು. ಅವರ ಬುದ್ಧಿ, ವಿದ್ಯೆ, ಜ್ಞಾನಗಳೂ, ಇಚ್ಛೆ, ವಿಚಾರ, ಆಚಾರಗಳೂ ಪಾರಮಾರ್ಥಿಕವಾಗಿದ್ದವು. ಆಣವ ಮಾಯಾ ಕಾರ್ಮಿಕ ಮಲಗಳು ಅವರ ತನುತ್ರಯವನ್ನು ಆವರಿಸಲು ಶಕ್ಯವಾಗಿರಲಿಲ್ಲ. ತಾತ್ವಿಕ, ನೈತಿಕ ಮೌಲ್ಯಗಳುಳ್ಳ ಅವರ ಆಚಾರವು ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಈ ಪಂಚಾಚಾರಗಳ ಸಮನ್ವಯ ಸ್ವರೂಪವಾಗಿತ್ತು.

ಲಿಂಗೋಪಾಸನೆಯಲ್ಲಿ ತನು-ಮನ-ಭಾವಗಳು ಅವಿರತವಾಗಿ ನೆಲೆಗೊಂಡು, ಲಿಂಗಾಚಾರವು ಸಮನಿಸಿತ್ತು. ದೃಷ್ಟಿಯೋಗದಿಂದ ಲಿಂಗದಲ್ಲಿ ಮನವನ್ನು ಮುಳುಗಿಸಿ, ಪರಮಾನಂದದ ನಿಬ್ಬೆರಗಿನಲ್ಲಿ ಮೈಮರೆಯುತ್ತಿದ್ದರು. ಆ ಅನುಭವವನ್ನು ಗುರು ಚೆನ್ನಮಲ್ಲ ದೇವರೊಡನೆ ಚರ್ಚಿಸಿ, ತಮ್ಮ ಸಾಧನೆಗೆ ಸಾಧನೆ ಮಾಡಿಕೊಳ್ಳುತ್ತಿದ್ದರು.

ಈ ಲಿಂಗದಲ್ಲಿಯ ಸದ್ಭಕ್ತಿಯೊಡನೆ ಸದಾಚಾರವೂ ಮೈಗೂಡಿತ್ತು. ಅದು ಅವರ ವಿಶಾಲ ಭಾವನೆಯ ತಳಹದಿಯ ಮೇಲೆ ಇದ್ದಿತು. ಮಾನವ ಸಹಜವಾದ ವ್ಯಷ್ಟಿಚೇತನವು ವಿಕಾಸಗೊಂಡು, ಸಮಷ್ಟಿ ಚೇತನ ಸ್ವರೂಪ ತಾಳಿತ್ತು. ಅದು ದೇವಮಾನವತ್ವವನ್ನು ಹೊಂದಿತ್ತು. ಸರ್ವಜೀವರಲ್ಲಿ ಶಿವತ್ವವನ್ನು ಕಾಣುವ ಸರ್ವಾತ್ಮಭಾವದಿಂದ ದಯಾರ್ದ್ರತೆ, ಪ್ರೇಮ, ಪರೋಪಕಾರ, ಪರಹಿತ ಚಿಂತನೆಗಳು ಗುರುನಂಜರ ಸಹಜ ಗುಣಗಳಾಗಿ ಅಳವಟ್ಟಿದ್ದವು.

ಅನ್ಯಮತೀಯರ ನಂಬಿಗೆಗಳನ್ನು ಗೌರವಿಸಿ, ಅವರೊಡನೆ ಕ್ರಿಯಾದ್ವೈತ ಬಾರದಿದ್ದರೂ, ಭಾವಾದ್ವೈತ (ಭಾವೈಕ್ಯ)ವನ್ನು ಹೊಂದಿದ್ದರು. ಎಲ್ಲ ಸಂತರಲ್ಲಿಯೂ ಶಿವಚೈತನ್ಯವನ್ನೇ ಕಾಣುತ್ತಿದ್ದರು. ಇದು ಶಿವಾಚಾರವು!

ಮೂಢ ಸಂಪ್ರದಾಯಗಳನ್ನು, ಸಮಾಜದಲ್ಲಿಯ ದುರಾಚಾರ-ದುರ್ವ್ಯಸನ-ಗಳನ್ನು ಸಹಿಸದೆ. ಕಟ್ಟು ನಿಟ್ಟಾಗಿ ಖಂಡಿಸಿ ತಿಳಿಹೇಳುತ್ತಿದ್ದರು. ವಿನಯದಲ್ಲಿಯೇ ವೀರವನ್ನು ಪ್ರಕಟಿಸುತ್ತಿದ್ದರು. ಸತ್ಯಾಗ್ರಹ ರೂಪವಾದ ಈ ನಡೆಯು ಅವರ ಗಣಾಚಾರವಾಗಿತ್ತು.

ಹುಟ್ಟುಗುಣವಾದ ಸೇವಾಭಾವವು ಅವರನ್ನು ಭೃತ್ಯಾಚಾರದಲ್ಲಿ ನಿರತನಾಗಿರಿ-ಸುತ್ತಿತ್ತು. ನಗರದಲ್ಲಿ ಬರುವ ಸಾಧು-ಸಂತರ, ಶಿವಯೋಗಿಗಳ ಪರಾಮರಿಕೆ, ಸೇವೆ, ದೀನ ದಲಿತರ ಸೇವೆ, ಗುರು ಸೇವೆ, ಮನೆಯಲ್ಲಿ ನಡೆಸುವ ಜಂಗಮ ದಾಸೋಹ ಇವೆಲ್ಲ ಅವರ ಭೃತ್ಯಾಚಾರದ ನಿದರ್ಶನಗಳು.

ಮಂಗಲಕರವಾದ ಗುಣಗಳ ಲಿಂಗಕ್ರಿಯೆಗಳು, ಅವರ ವಿಭೂತಿಮತ್ವವು ಉಜ್ವಲವಾಗಿ ಬೆಳೆದು ಬೆಳಗುತ್ತಿತ್ತು. ಅವರಿಗಾಗ ೧೪-೧೫ ವರ್ಷಗಳು. ಮುಂದೆ ಹದಿನೆಂಟು ವರ್ಷಗಳೂ ಆದವು.

× × × × × × × × ×

ಸದಾನಂದ. ಸುಜ್ಞಾನಮ್ಮನವರಿಗೆ ವೃದ್ಧಾಪ್ಯದ ನೆಳಲು ಬಿದ್ದಿದೆ. ಶಾರೀರಿಕ ಬಲ ಕುಂದಿರುವದು ಸಹಜವಾಗಿದೆ. ಸುಜ್ಞಾನಮ್ಮ ಗೃಹ ಕೃತ್ಯಗಳಿಂದ ದಣಿಯುತ್ತಿದ್ದಾಳೆ. ತಮ್ಮ ಲೌಕಿಕ ಜೀವನಕ್ಕೆ ಗುರುಸಂಜಪ್ಪ ಫಲಕಾರಿಯಾಗಿ ಫರಿಣಮಿಸುತ್ತಿಲ್ಲವಲ್ಲ ಎಂದು ಆಕೆಗೆ ವ್ಯಥೆಯಾಗುತ್ತಿತ್ತು. ಮನೆತನದ ಆಗು-ಹೋಗುಗಳನ್ನು, ಲಾಭ ಹಾನಿಗಳನ್ನು ಮಗ ಗಮನಿಸುತ್ತಿಲ್ಲ. ಮದುವೆ ಗಿದುವೆಗಳ ಸೊಲ್ಲು ತೆಗೆದರೆ, ಮುಂದೆ ಕುಳಿತಿದ್ದವನು ಎದ್ದು ಹೋಗುತ್ತಾನೆ. ಹೀಗಾದರೆ ತಮ್ಮ ವಂಶದ ಗತಿಯೇನು ? ಮುಂದೆ ತಮ್ಮನ್ನು ಜೋಪಾನ ಮಾಡುವವರು ಯಾರು ? ಎಂಬ ದೂರದ ಕರಿನೆರಳೂ ಅವಳನ್ನು ಕಾಡುತ್ತಿತ್ತು. ಇದು ಮಾಯೆಯ ಮಾಟ ! ಒಮ್ಮೊಮ್ಮೆ ಆವರಿಸುತ್ತಿತ್ತು. ಆದರೆ ಮಗನ ಆಧ್ಯಾತ್ಮಿಕ ಅಭ್ಯುದಯದ ಶುಭ್ರ ಕಿರಣಗಳು ಆಕೆಯ ಹೃದಯ ಕಮಲವನ್ನು ಅರಳಿಸಿದಾಗಲೆಲ್ಲ ಆನಂದಪಡುವದೂ ಉಂಟು, ಹೆಮ್ಮೆಪಡುವದೂ ಉಂಟು.

ಸದಾನಂದ ಸೆಟ್ಟರಿಗೆ ಸದಾ ಆನಂದ ! ಅವರ ಮಾನಸಿಕ ಸ್ಥಿತಿ, ಮಡದಿಯ ಮನಸ್ಸಿಗಿಂತ ಸ್ವಲ್ಪ ಭಿನ್ನವಾಗಿತ್ತು. ಅವರ ತಲೆ ಅರಳುವದೊಮ್ಮೆ, ಮುದುಡುವ-ದೊಮ್ಮೆ ಮಾಡುತ್ತಿರಲಿಲ್ಲ. ಗುರುಗಳ ಸಂಕಲ್ಪದಂತೆ ಮಗನು ಮಹಾ ಮಹಿಮನಾಗುವನೆಂಬ ನೆನಹಿನಲ್ಲಿ, ತಮ್ಮ ರಕ್ಷಣೆ, ಮನೆತನದ ನಿರ್ವಹಣೆ ಇವುಗಳ ಚಿಂತೆಯನ್ನೇ ಮಾಡುತ್ತಿರಲಿಲ್ಲ. ಜೀವನ ಕಾಯಕ ನಡೆಸುತ್ತಿರುವಾಗ, ಅವರ ಶರೀರ ಆಯಾಸಗೊಳ್ಳುತ್ತಿದ್ದುದು ಮಾತ್ರ ನಿಜ ! ನಂಬಿಗೆಯ ಕರ್ಮಚಾರಿಗಳಿಂದ

ಇವರ ಅಂಗಡಿ, ಹೊಲ, ಮನೆಗಳ ಕಾರ್ಯ ನಡೆಯುತ್ತಿತ್ತು. ತಮ್ಮನ್ನು ಆಶ್ರಯಿಸಿದ ಅವರ ಕುಟುಂಬಗಳ ಹಿತ ಚಿಂತನೆಯಲ್ಲಿ ಸೆಟ್ಟರು ಆನಂದ ಪಡುತ್ತಿದ್ದರು. ಅವರ ಕಾಯಕ ಸತ್ಯಶುದ್ಧವಾಗಿತ್ತು.

ಒಂದು ದಿನದ ಸಾಯಂಕಾಲದ ಸಮಯ. ಪೂಜೆಯ ಕೋಣೆಯಲ್ಲಿ ಅನುಷ್ಠಾನಕ್ಕೆ ಅಣಿಗೊಳಿಸಿ, ಸುಜ್ಞಾನಮ್ಮ ಪಡಸಾಲೆಗೆ ಬಂದು ಕುಳಿತಿದ್ದಳು. ಬಳಲಿಕೆಯಾಗಿತ್ತು. ಗುರುನಂಜಪ್ಪನವರು ಯೋಗಾನುಸಂಧಾನಕ್ಕಾಗಿ ಒಳಗೆ ಹೋದರು. ಸುಜ್ಞಾನಮ್ಮನ ಮನಸ್ಸು ಕದಡಿತ್ತು; ಸ್ವಸ್ಥವಿರಲಿಲ್ಲ. ಮಧ್ಯಾಹ್ನದಲ್ಲಿ ಮನೆಯ ಮುಂದಿನ ಮಹಿಳೆಯರು ತನ್ನೊಡನೆ ಕೂಡಿ ಕುಳಿತಾಗ. ತನ್ನ ಬಾಳಿನಲ್ಲಿಯ ಕೊರತೆಯನ್ನು ಕೆದಕಿ ನುಡಿದಿದ್ದರು. ಬಹುದಿವಸಕ್ಕೆ ಸುಜ್ಞಾನಮ್ಮ ಪುತ್ರವತಿ-ಯಾದಾಗ, ಶ್ರೀಮಂತರ ಮನೆತನಕ್ಕೆ ವಂಶಾಭಿವೃದ್ಧಿಮಾಡುವ ಮಗನೊಬ್ಬ ಹುಟ್ಟಿದನೆಂದು ನಾವೆಲ್ಲರೂ ಬಹಳ ಸಂಭ್ರಮದಿಂದ ತೊಟ್ಟಿಲ ಕಾರ್ಯ ನೆರವೇರಿಸಿದ್ದೆವು. ಆದರೆ ಗುರುನಂಜಪ್ಪನವರು ನಮ್ಮ ಬಯಕೆಗಳೆಲ್ಲ ಬದಿಗಿರಲೆಂದು ಯೋಗಸಾಧನೆಗೆ ತೊಡಗಿದ್ದಾರೆ, ಸನ್ಯಾಸಿಯಾಗಲು ಹೊರಟಿದ್ದಾರೆ ಎಂದು ಹರಟೆ ಮಾಡಿದ್ದಳು ನೀಲಮ್ಮ! ಕೂಡಿದ ಮಹಿಳೆಯರು ಅರ್ಥವಿರಲಿ, ಇಲ್ಲದಿರಲಿ ಏನಾದರೂ ಮಾತಾಡುವದು ಸ್ವಾಭಾವಿಕ. ಗುರುನಂಜರ ಮಾತು ಬಂದಾಗ ಸಂಬಂಧಕ್ಕನುಗುಣವಾಗಿ, ಅದು ಒಮ್ಮೆ ಉತ್ಸಾಹಕರವಾಗಿದ್ದರೆ, ಒಮ್ಮೆ ಅಸಮಾಧಾನಕರವೂ ಆಗಿರುತ್ತಿತ್ತು. ಮಧ್ಯಾಹ್ನದ ಆ ಮಾತುಗಳು ಈಗ ಸುಜ್ಞಾನಮ್ಮನ ಸ್ಮರಣೆಗೆ ಬಂದಿದ್ದವು. ಮನೆಗೆ ಮುಂದೇನು? ಅಂತ್ಯಕಾಲದ ನಮ್ಮ ಸಂರಕ್ಷಣೆ ಹೇಗೆ? ಎಂಬುದರ ತಳಮಳ ಮತ್ತೆ ತಲೆದೋರಿತ್ತು. ಸಂಜೆಯ ಹೊತ್ತು ಹೊಲಗಳ ಕಡೆಗೆ ಅಡ್ಡಾಡಿ, ಸೆಟ್ಟರು ಮನೆಗೆ ಬಂದಾಗ, ಕಪೋಲಕ್ಕೆ ಕೈಯಾನಿಸಿ ಕುಳಿತ ಮಡದಿಯ ಮನದ ದುಗುಡವನ್ನು ಗುರ್ತಿಸಿದರು. ಅದರ ಕಾರಣವೂ ಅವರಿಗೆ ಗೊತ್ತು.

"ಸುಜ್ಞಾನಿ, ಮತ್ತೆ ನಿನಗೆ ಅದೇ ತಲೆಬೇನೆಯೇ? ಯಾಕೆ ಚಿಂತಿಸುತ್ತೀ? ಬೇಡಿದರೆ ಯಾವದೂ ಬಾರದು, ಬೇಡವೆಂದರೆ ಯಾವದೂ ತೊಲಗದು. ಇದನ್ನು ನೀನು ಬದಲಿಸಲು ಸಾಧ್ಯವೇ? ನಾವು ಪಡೆಯಬೇಕಾದುದನ್ನು ಪಡೆದೇ ತೀರಬೇಕು. ಅದನ್ನು ನಾವು ಶಿವನ ಪ್ರಸಾದವೆಂದು ಸ್ವೀಕರಿಸಬೇಕು. ನಮ್ಮ ಆಗು-ಹೋಗುಗಳನ್ನೆಲ್ಲ ಶಿವನ ಪ್ರಸಾದವೆಂದು ತಿಳಿದರೆ, ಅದು ಅಮೃತ, ಆತ್ಮಕ್ಕೆ ಆಪ್ಯಾಯನಕರ ಎಂಬ ಗುರುವಚನ ಮರೆತೆಯಾ?"

"ಇಲ್ಲ ಸ್ವಾಮೀ"

"ಹಾಗಾದರೆ ?"

ಸೆಟ್ಟರ ಮೊಗದಲ್ಲಿ ಮಂದಹಾಸ ಮೂಡಿತ್ತು. ಸುಜ್ಞಾನಮ್ಮ ತಲೆಯೆತ್ತಿ ನೋಡಿದಳು. ಆ ಪತಿಪ್ರಾಣಿಗೆ ಅತೀವ ಸಂತೋಷ ! ಸಮಾಧಾನ !

"ಹಾಗಾದರೇನಿಲ್ಲ. ನಮ್ಮ ಜೀವನದ ವಿಷಯದಲ್ಲಿ ಮಂದಿಯಾಡುವ ಮಾತುಗಳು ಒಮ್ಮೊಮ್ಮೆ ಮನಸ್ಸಿಗೆ ತಾಗುತ್ತವೆ. ಕಳವಳವನ್ನು ಎಬ್ಬಿಸುತ್ತವೆ ಅಷ್ಟೇ !

"ಅವು ನಮ್ಮ ಮನಸ್ಸನ್ನು ಗಟ್ಟಿಗೊಳಿಸುವ ಪೆಟ್ಟುಗಳೆಂದು ತಿಳಿಯಬೇಕು. ನಿಂದಿಸಿದವರು ನಮ್ಮ ಮನದ ಕಾಳಿಕೆಯ ಕಳೆವರೆಂದಿದ್ದಾರೆ ಶರಣರು, ತಗಲಿಸುವರೆಂದಿಲ್ಲ !"

ನಗುತ್ತ ನುಡಿದ ಪತಿಯ ಹಿತವಚನಗಳು ಹೃದಯಕ್ಕೆ ಹಾಲೆರೆದಿದ್ದವು. ಮುಗುಳು ನಗುತ್ತ, ಮೇಲೇಳುತ್ತ ನುಡಿದಳು :

"ಖೋಡಿ ಮನಸ್ಸು, ಇನ್ನೂ ಒಮ್ಮೊಮ್ಮೆ ಎಡುವುತ್ತದೆ. ನಡೆಯಿರಿ."

"ಅದಿಷ್ಟೂ ಹೋಗಬೇಕು" ಎಂದು ಸೆಟ್ಟರು ನೀರಮನೆಗೆ ನಡೆದರು. ಇಬ್ಬರೂ ಅರ್ಚನೆ ಪ್ರಸಾದಗಳನ್ನು ಮುಗಿಸಿಕೊಂಡರು. ಗುರುನಂಜರು ಇವರ ವೇಳೆಯವರಲ್ಲ. ಅವರು ಒಮ್ಮೊಮ್ಮೆ ಸರಿರಾತ್ರಿಗೆ ಪೂಜೆಯ ಕೋಣೆಯಿಂದ ಹೊರಗೆ ಬರುತ್ತಿದ್ದರು. ತಾಯಿ ಸಿದ್ಧಮಾಡಿ ಇಟ್ಟಿರುತ್ತಿದ್ದ ಹಾಲು, ಹಣ್ಣು, ಕಜ್ಜಾಯಗಳನ್ನು ತಕ್ಕೊಂಡು, ಲಿಂಗಾರ್ಪಿತ ಮಾಡಿ, ಸ್ವೀಕರಿಸಿ ಯೋಗನಿದ್ರೆ-ಗೊಳಗಾಗುತ್ತಿದ್ದರು.

ಮುಂಜಾನೆಯ ಒಂದು ಜಾವು ಸರಿದಿದೆ. ಪ್ರಾತಃಕಾಲದ ಲಿಂಗಾರ್ಚನೆಯನ್ನು ಪೂರೈಸಿಕೊಂಡು, ಗುರುಗಳು ದರ್ಶನಶಾಲೆಗೆ ದಯಮಾಡಿಸಿದರು. ಭಸ್ಮದ ಬೆಳಗಿನಿಂದ ಕಳೆಗೊಂಡ ಮುಖ ಮಂಡಲ ಕಂಗೊಳಿಸುತ್ತಿದೆ. ಮಾರ್ದವತೆಯಿಂದ ಅವರ ಸರ್ವಾಂಗಲಿಂಗವಾದ ಶರೀರದ ಪಾವನತೆ ಉಜ್ವಲಗೊಂಡಿದೆ. ಕಾವಿಯ ಕಪನಿಯ ಕಸಿಗಳನ್ನು ಕಟ್ಟಿಕೊಳ್ಳುತ್ತ ಗುರುಮನೆಯಿಂದ ಹೊರಗೆ ಬಂದಕೂಡಲೇ ಸಾಷ್ಟಾಂಗವಾಗಿ ಎರಗಿ, ಸುಜ್ಞಾನಮ್ಮ ಅವರ ಪಾದ ಕಮಲಗಳ ಮೇಲೆ ತಲೆಯಿಟ್ಟು ವಂದಿಸಿದಳು.

"ಬಾ ತಾಯಿ, ಕುಳಿತುಕೊಳ್ಳು."

ಎನ್ನುತ್ತ ಚೆನ್ನಮಲ್ಲ ಸ್ವಾಮಿಗಳು ಪೀಠದ ಮೇಲೆ ಕುಳಿತುಕೊಂಡರು. ಸುಜ್ಞಾನಮ್ಮ ತಲೆಬಾಗಿ, ಕೈಮುಗಿದು ನಿಂತೇ ಇದ್ದಳು. ಕಣ್ಣು ತೇವವಾಗಿದ್ದವು. ನೋಡಿ ಶ್ರೀಗಳೆಂದರು :

"ಕೂಡ್ರಮ್ಮ, ನೀನಿನ್ನು ಕಳವಳ ಪಡುವದನ್ನು ಬಿಟ್ಟುಬಿಡಬೇಕು. ಅದರ ಬದಲಾಗಿ ನಿನ್ನ ಮನಸ್ಸು ಆನಂದಪಡಲಿ, ಉತ್ಸಾಹಗೊಳ್ಳಲಿ. ನಿಮಗೆಲ್ಲ ಗುರುನಂಜನ ವರ್ತನೆ ವಿಚಿತ್ರವಾಗಿ ಕಾಣಬಹುದು. ಅವನ ಜೀವನದ ರೀತಿಯು ಅರ್ಥಮಾಡಿಕೊಳ್ಳಬೇಕು. ಆತನು ನಿಜದ ನಿಲುವ ತಿಳಿಯಲು ತವಕಿಸುತ್ತಿದ್ದಾನೆ. ಎಲ್ಲೆಲ್ಲಿಯೋ ಅಲೆಯುತ್ತಾನೆ. ಎಲ್ಲಿಯೋ ಧ್ಯಾನಸ್ಥನಾಗಿ ಕುಳಿತವನು ಕುಳಿತೇ ಬಿಡುತ್ತಾನೆ. ಈಗ ನಾಲ್ಕುದಿನ ನಮ್ಮ ಮಠದಲ್ಲಿಯೇ ಇದ್ದಾನಂತೆ !"

"ಹೀಗಾದರೆ ಹೇಗೆ ಅಪ್ಪಾ ? ಅವನೀಗ ಮದುವೆಯಾಗಬೇಕು."

"ಮದುವೆ, ಅದೇನು ಮಹಾ ? ಅದನ್ನು ಹುಟ್ಟಿದವರೆಲ್ಲ ಮಾಡಿಕೊಳ್ಳುತ್ತಾರೆ. ಅದರಲ್ಲಿ ಹುರುಳೇನಿದೆ ಎಂಬುದನ್ನು ಕಂಡೂ ಇದ್ದಾರೆ."

ಗುರುಗಳ ವಾಣಿ ವೈಖರಿಗೆ ಮನಸ್ಸಿನ ಕಳವಳ ಕರಗುತ್ತಿದ್ದಂತೆ, ಸುಜ್ಞಾನಮ್ಮ ಕಣ್ಣೊರಸಿಕೊಳ್ಳುತ್ತ, ಅವರ ಪಾದ ಸನ್ನಿಧಿಯಲ್ಲಿ ಕುಳಿತು ಕೇಳಿದಳು :

"ಹಾಗಾದರೆ ದಾಂಪತ್ಯ ಜೀವನವು ತ್ಯಾಜ್ಯವೇ ಅಪ್ಪಾ ?"

"ತ್ಯಾಜ್ಯವೆಂದು ನಾನೆಂದೂ ಹೇಳುತ್ತಿರುವದಿಲ್ಲ. ಆದರೆ ಕಡುಗಾಮಿಯಾಗಿ ಅತಿಮೋಹಿಯಾಗಿ ದಾಂಪತ್ಯ ಜೀವನ ಜೀವಿಸಬಾರದು. ಅಹಂಕಾರರಹಿತರಾಗಿ ಅರಿತು ಬಾಳಬೇಕು. ಸತಿ-ಪತಿಗಳು ಸದ್ಭಕ್ತಿ, ಸದಾಚಾರಗಳಿಂದ ಸತ್ಯಶುದ್ಧ ಕಾಯಕ ಮಾಡಿ, ತ್ರಿವಿಧ ದಾಸೋಹಿಗಳಾಗಿ, ಲಿಂಗಭೋಗೋಪ ಭೋಗಿಗಳಾಗಿ ಸಂಸಾರ ಮಾಡಿದರೆ ಇಹದಲ್ಲಿ ನೆಮ್ಮದಿಯೂ, ಶಿವಸಾಮರಸ್ಯ ಸುಖವೂ ದೊರೆಯುವೆಂಬಲ್ಲಿ ಸಂದೇಹವಿಲ್ಲ. ಶರಣರು ಹಾಗೆ ನಡೆದು, ಭವದುಃಖದಿಂದ ಬಿಡುಗಡೆ ಹೊಂದಲಿಲ್ಲವೇ ? 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂದು ಅವರು ಅನುಭವದಿಂದ ಅರಿತು ನುಡಿದಿಲ್ಲವೇ ? ಇಂತಹ ಸದ್ಗೃಹಸ್ಥರಿಂದಲೇ ಒಳ್ಳೆಯ ಸಮಾಜ ರಚನೆಯಾಗುತ್ತದೆ. ಸಾಧಕರನ್ನು, ಶಿವಯೋಗಿಗಳನ್ನು ಸಮಾಜವೇ ಪೋಷಿಸಬೇಕು. ಅಂದರೇನೇ ಸಾಧಕರು ಸಾಧನೆಯಿಂದ ಶಿವಯೋಗಿ-ಯಾಗುವರು. ಆತ್ಮೋನ್ನತಿಯನ್ನಲ್ಲದೆ ಲೋಕೋದ್ಧಾರ ಕಾರ್ಯವನ್ನೂ ನಿರ್ವಹಿಸುವರು. ಪವಿತ್ರವಾದ ದಾಂಪತ್ಯ ಜೀವನದಿಂದ ಸ್ವಹಿತ, ಪರಹಿತಗಳನ್ನು ಸಾಧಿಸುವ ಸದ್ಗೃಹಸ್ಥರು ಬಹಳ ಮುಂದಿ ಸಿಕ್ಕಾರು, ಆದರೆ ಸ್ವತಃ ಬ್ರಹ್ಮಚಾರಿಯಾಗಿ,

ಕೇವಲ ವೈರಾಗ್ಯಶೀಲನಾಗಿ, ಪರಮಾನಂದವನ್ನು ಅನುಭವಿಸಿ, ಅದನ್ನು ಜನತೆಗೂ ಕಾಣಿಸಿ, ತಣಿಸಿ, ಉದ್ಧರಿಸುವ ಶಿವಯೋಗಿಗಳು ಸಾವಿರಕ್ಕೋ ಲಕ್ಷಕ್ಕೋ ಒಬ್ಬರು. ಅಂತಹ ಪರಮವಿರಾಗಿ ಮಹಂತನಾಗುತ್ತಾನೆ ಗುರುನಂಜ! ನಿನ್ನ ಒಡಲ ಪುಣ್ಯ ದೊಡ್ಡದಮ್ಮ ತಾಯೀ!"

ಸುಜ್ಞಾನಮ್ಮ ಮುಖನೆತ್ತಿ ಹರುಷ ತುಂಬಿದ ಕಣ್ಣುಗಳಿಂದ ಗುರುಗಳನ್ನು ನೋಡಿ, ಕೈಮುಗಿದಳು : "ತಾವೇ ಕೃಪೆ ಮಾಡಿದ ಬೆಳಕಲ್ಲವೇ ಗುರುದೇವಾ?" ಎಂದಳು. ಆಕೆಯ ಮನಸ್ಸು ಶಾಂತಿ ವಿಹ್ವಲತೆಗಳಲ್ಲಿ ಏರಿ ಇಳಿಯುತ್ತಿತ್ತು. ಮತ್ತೆ ಗುರುಗಳೆಂದರು : "ನಾನು ಗುರುನಂಜನಿಗೆ ಹೇಳಿ ನೋಡಿದೆ! ಮದುವೆಯಾಗಿ ಸುಶೀಲೆ ಸತಿಯೊಡನೆ ಕೂಡಿ, ಕಾಯಕ ಮಾಡಿ,ಲಿಂಗೋಪಾಸನೆ, ಜಂಗಮ ದಾಸೋಹ, ಶಿವಪ್ರಸಾದ ಸೇವನೆ, ಪರೋಪಕಾರಗಳಿಂದೊಡಗೂಡಿದ ಹದನಾದ ಬಾಳನ್ನು ಬಾಳಿ, ಸುಲಭವಾಗಿ ಸಾಮರಸ್ಯವನ್ನು ಸಾಧಿಸುವದಲ್ಲದೆ, ಅನ್ಯರಿಗೂ ಆದರ್ಶವಾಗುವ ಪಥವನ್ನು ಕೈಕೊಳ್ಳಲು ಸೂಚಿಸಿದೆ, ಅದರಲ್ಲಿಯೂ ಕೊಂಚ ತೊಂದರೆ ಇದೆಯೆಂದು ಅದನ್ನೇ ಮುಂದುಮಾಡಿ, ನನ್ನ ಈ ವಿಚಾರವನ್ನು ಬದಿಗೆ ಸರಿಸಿಬಿಟ್ಟನು. ಅವನ ಜ್ಞಾನಪ್ರಭೆಗೆ, ಪ್ರಶ್ನೆಗಳ ಪ್ರಖರತೆಗೆ ನಾನು ಬೆರಗುಗೊಳ್ಳುತ್ತಿದ್ದೇನೆ. ಹಲವು ಸಲ ಅವನ ಮಾತುಗಳಿಗೆ ನಮ್ಮ ಬಾಯಿ ಕಟ್ಟಿಹೋಗುತ್ತಿದೆ. ಇನ್ನೂ ಬಾಲ್ಯದಲ್ಲಿಯೇ ತೋರುವ ಈ ತತ್ವಜ್ಞಾನದ ಪ್ರತಿಭೆಗೆ ಹಿಂದಣ ಜನ್ಮದಲ್ಲಿ ಬಹುಮಟ್ಟಿಗೆ ಸಾಧಿಸಿದ ತಪಸ್ಸಿದ್ಧಿಯು ಕಾರಣವಾಗಿದೆ. ಈಗ ಅದು ಉಜ್ವಲ-ಗೊಳ್ಳುತ್ತಿದೆ. ಅವನನ್ನು ಲೌಕಿಕ ವಿಚಾರದಲ್ಲಿ ತೊಡಗಿಸುವದು ಸಾಧ್ಯವಿಲ್ಲವಮ್ಮಾ."

"ವೃದ್ಧರಾಗುತ್ತಿರುವ ನಮ್ಮನ್ನು ಕಾಪಾಡುವವರು ಯಾರು ಅಪ್ಪಾ?"

"ಶಿವನು ತಾಯೀ ಶಿವನು!! ನಿನಗೇಕೆ ಅದರ ಚಿಂತೆ?........"

"ಇವಳಿಗಿದೊಂದು ಚಿಂತೆ ತಲೆ ಸುತ್ತುತ್ತಿದೆ" ಎನ್ನುತ್ತ, ಅದೇ ಸಮಯಕ್ಕೆ ಬಂದ ಸದಾನಂದ ಸೆಟ್ಟಿಯು ಗುರುಗಳ ಪಾದಕ್ಕೆ ವಂದಿಸಿ, ಕುಳಿತುಕೊಂಡನು.

"ಬನ್ನಿ ಸೆಟ್ಟರೇ, ಸದಾನಂದ ಸೆಟ್ಟರಿಗೆ ಸದಾ ಆನಂದ. ನೀವು ಈ ಚಿಂತೆಯನ್ನು ಹಲವು ವರ್ಷಗಳ ಹಿಂದೆಯೇ ಕಳಚಿ ಬಿಟ್ಟಿದ್ದೀರಿ. ಸುಜ್ಞಾನಮ್ಮನಿಗೆ ಈ ಚಿಂತೆ ಕೊಂಚ ಕಾಡುತ್ತಿದೆ. ಹೊತ್ತು, ಹೆತ್ತ ಹೊಟ್ಟೆಗೆ ಇಷ್ಟಾದರೂ ಬೇಡವೇ?"

ಗುರುಗಳು ನಸುನಕ್ಕು ಮತ್ತೆ ಹೇಳಿದರು :

"ಅದು ದೇಹ ಭಾವ! ಅದೂ ಅನಿವಾರ್ಯವೇ ಆಗಿದೆ. ಸಹಜವಾಗಿದೆ. ಯಾಕಂದರೆ ನೀರಿನ ಮೇಲ್ಮೈಯಲ್ಲಿ ತೆರೆಗಳುಂಟಾದಾಗ, ಅದರಲ್ಲಿ ತೋರುತ್ತಿದ್ದ

ಸೂರ್ಯ ಬಿಂಬವೂ ಅಲುಗಾಡಿದಂತೆ, ದೇಹಕ್ಕೆ ನೋವು ಯಾತನೆಗಳು ಉಂಟಾದಾಗ ಆತ್ಮನು ನೋವನ್ನು ಅನುಭವಿಸುತ್ತಾನೆ. ಇನ್ನು ಆಗಿನ ನಿಮ್ಮ ಆರೈಕೆಯ ಯೋಚನೆ ಇದೆಯೆಂದೆಯಲ್ಲವೇ ಸುಜ್ಞಾನವ್ವಾ? ನೋಡು ತಾಯೀ ನೀನಿನ್ನು ನೆರೆಹೊರೆಯ, ನಿನ್ನೂರಿನ, ಇಷ್ಟೇ ಏಕೆ ನಾಡಿನ ಮಕ್ಕಳನ್ನೆಲ್ಲ ನಿನ್ನ ಮಕ್ಕಳೆಂದು ತಿಳಿ. ದೇವರು ಕೊಟ್ಟ ಸಂಪತ್ತಿನಿಂದ ಬಡಮಕ್ಕಳ ಪೋಷಣೆ ಮಾಡು. ಶಿವ ಸಂಕಲ್ಪದಂತೆ ಭವಿಷತ್ತಿನಲ್ಲಿ ಮಹಾಮಹಿಮನೂ ಲೋಕಪೂಜ್ಯನೂ ಆಗುವ ಗುರುನಂಜೇಶ್ವರನಿಗೆ ಜನ್ಮ ಕೊಟ್ಟ ನಿನ್ನನ್ನು, ಜಗದ ಜನರು ಲೋಕಮಾತೆಯೆಂದು ಭಾವಿಸಿ ಗೌರವಿಸುವರು. ಆಗ ನಿನ್ನ ಆರೈಕೆ ಉಪಚಾರಗಳಿಗೆ ಎಷ್ಟು ಜನರು ಧಾವಿಸಲಿಕ್ಕಿಲ್ಲ! ಚಿಂತೆ ಬೇಡ. ಅದರ ಬಾಧೆ ನಿನಗಾಗದು ತಾಯಿ; ಶಾಂತಳಾಗಿರು."

"ಆಗಲಿ ಅಪ್ಪಾ" ತಲೆಬಾಗಿ ಕೈಮುಗಿದಳು. ಗುರುಗಳು ಮತ್ತೆ ಸಂತಸದ ಲಹರಿಯಿಂದ :

"ಶ್ರೀ ಸದ್ಗುರು ತೋಂಟದಾರ್ಯ ಸಿದ್ಧಲಿಂಗ ಶಿವಯೋಗಿಗಳವರ ಬೆಡಗಿನ ನುಡಿಯೊಂದು ನೆನಪಿಗೆ ಬರುತ್ತಲಿದೆ. ಅದು ಹೀಗಿದೆ ಕೇಳಿರಿ :

ಮುಚ್ಚಿದ ಕಣ್ಣು ತೆರೆದುದ ಕಂಡೆ;
ಕಿಚ್ಚಿನ ಜ್ವಾಲೆ ಕರೆವುದ ಕಂಡೆ;
ಮೃತ್ಯುಗಳ ಮೊತ್ತ ಕಿತ್ತೋಡಿದುದ ಕಂಡೆ;
ಕತ್ತಲೆ ಬೆಳಕಾದುದ ಕಂಡೆ.
ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ

ಸದ್ಭಕ್ತನ ಅಂತರಂಗದಲ್ಲಿ ಅರಿವು ಮೂಡಿ ಬರುವ ಮಂಗಲದ ಸಮಯ ಸಂಭ್ರಮವನ್ನು ಶಿವಯೋಗಿಗಳು ಈ ವಚನ ಗೀತೆಯಲ್ಲಿ ಹರುಷದಿಂದ ಹಾಡಿ ತಣಿದಿದ್ದಾರೆ. ಕಿಚ್ಚಿನ ಜ್ವಾಲೆ ಅಂದರೆ ಜ್ಞಾನಾಗ್ನಿ, ಅದು ಜ್ವಲಿಸುವಾಗ ಅದರ ಬೆಳಗು ಹೃದಯದ ಬಾಗಿಲನ್ನು ಭೇದಿಸಿ ಹೊರಬರಲೇ ಬೇಕು. ಅಜ್ಞಾನದ ಕತ್ತಲೆ ಹರಿದು ಜ್ಞಾನವು ಬೆಳಗಲೇಬೇಕು. ಗುರುನಂಜನಲ್ಲಿ ಆ ಜ್ಞಾನೋದಯ ವಿಜೃಂಭಿಸುತ್ತಲಿದೆ ಈಗ! ಮುಂದೆ ಅವನಿಂದ ಮೃತ್ಯುವಿನ ಮೊತ್ತ ಕಿತ್ತೋಡುವದು. ಅಂದರೆ ಭವಭಾರಿಗಳ ಬಂಧನ ಪರಿಹಾರವಾಗುವದು, ಎಂದೆಂಬ ಸೂಚನೆ ಸ್ಪಷ್ಟವಾಗುತ್ತಲೂ ಇದೆ. ನೀವು ಧನ್ಯರು ಸೆಟ್ಟರೇ ಸುಜ್ಞಾನವ್ವಾ!"

ದಂಪತಿಗಳು 'ಈ ಪಾದ ಕೃಪೆ ಗುರುವರ' ಎಂದು ತಲೆಬಾಗಿ ವಂದಿಸಿದರು. ಗುರುಗಳು ಒಂದು ನಿಮಿಷ ಶೂನ್ಯವನ್ನು ನಿರೀಕ್ಷಿಸುತ್ತ ಧ್ಯಾನಮಗ್ನರಾದರು. ಮತ್ತೆ ಪ್ರಕೃತಕ್ಕೆ ಬಂದು ನುಡಿದರು :

"ನೀವಿಬ್ಬರೂ ಕಾಯಕ ನಿರತರಾಗಿರುವ ಹೊತ್ತು; ಸಮಯ ಸರಿಯುತ್ತಲಿದೆ."

"ಹೌದು ಗುರುದೇವಾ. ಅಂಗಡಿಗೆ ಹೋದೆ, ಕೆಲವು ಸರಕುಗಳ ಕೊರತೆ ಕಂಡಿತು. ಪೇಟೆಗೆ ಹೋಗಬೇಕೆನಿಸಿತು. ಇವಳಿಗೆ ಬೇಗ ಊಟಕ್ಕೆ ಬರಲಿರುವ ಸೂಚನೆ ಕೊಡಬೇಕೆಂದು, ಹೇರೆತ್ತು ಸಿದ್ಧಗೊಳಿಸಿಕೊಂಡಿರಲು ಆಳು ಮಗುನಿಗೆ ಹೇಳಬೇಕೆಂದು ಮರಳಿ ಮನೆಗೆ ಬಂದೆನು. ಇವಳು ಮನೆಯಲ್ಲಿ ಇರಲಿಲ್ಲ. ನನಗೆ ಗೊತ್ತು ಗುರುಗಳ ಮಠಕ್ಕೆ ಹೋಗಿರಬಹುದೆಂದು. ಯಾಕಂದರೆ ಗುರುನಂಜಪ್ಪ ನಾಲ್ಕು ದಿವಸ ಬಾರದಿರುವದರಿಂದ ಈಕೆ ಸೊಗಸಿಲ್ಲದೆ ಇದ್ದಳು. ನಿನ್ನೆ ಹಗಲಿರುಳೆಲ್ಲ ಮೊಗ ಬಾಡಿಯೇ ಇತ್ತು. ಮುಂಜಾನೆಯ ಶಿವಾರ್ಚನೆಯ ನಂತರ ಈಕೆ ಉಪಹಾರ ಮಾಡಿದಂತೆಯೂ ಕಾಣಲಿಲ್ಲ. ಇದೆಲ್ಲವನ್ನು ನೆನೆದು ನಾನೂ ಇತ್ತ ಬಂದೆನು. ಆತನು ವಯಸ್ಕನಾಗಿದ್ದರೂ ಹಸುಗೂಸಿನಂತೆ ತಾಯಿಯಿಂದ ಲಾಲನೆ ಪಾಲನೆ ಪಡೆಯುತ್ತಾನೆ. ಈಕೆಯ ತೊಡೆಯ ಮೇಲೆ ತಲೆಯಿಟ್ಟು ಮಲಗುತ್ತಾನೆ. ಲಲ್ಲೆ ಮಾತು ಆಡುತ್ತಾನೆ. ಅದು ಇಲ್ಲದೆ ದಿನಗಳೆದಂತೆ ಈಕೆಗೆ ಅಸಮಾಧಾನ !"

'ತಾಯೀ, ಅದೆಲ್ಲ ಪರಶಿವಲೀಲೆಯೆಂದು ತಿಳಿ. ಮುಂದೆ ಲೀಲಾ ಮೂರ್ತಿ-ಯಾಗುವದರ ಸುಳಿವು ಕೊಡುತ್ತಿದ್ದಾನೆ ಗುರುನಂಜ. ನೀನು ಜನ್ಮಕೊಟ್ಟ ಮಗನ ಮಜ್ಜೆ ಮಾಂಸ ರಕ್ತಯುಕ್ತ ದೇಹದ ಮೋಹವನ್ನು ಬಿಟ್ಟುಬಿಡು. ಅಂತರಂಗವನ್ನು ನೋಡು. ಸುಖ ಶಾಂತಿ ದೊರೆಯುವದು. ತೋಂಟದ ಸಿದ್ಧಲಿಂಗ ಶಿವಯೋಗಿಗಳು ನಾಡಿಗೆ ನೀಡಿದ ಆಧ್ಯಾತ್ಮಿಕ ಸಂದೇಶವು ನಿಮ್ಮನ್ನು ಕಾಪಾಡುವದು. ಗುರು-ನಂಜನಿಗೆ ಬೇಗನೆ ಮಹೇಶ್ವರ ದೀಕ್ಷೆ ಮಾಡಿ ಕ್ರಮಬದ್ಧವಾದ, ಶಾಸ್ತ್ರ ಶುದ್ಧವಾದ ಸಾಧನ ಮಾರ್ಗವನ್ನು ಹಿಡಿಸಬೇಕಾಗಿದೆ. ಅವನ ಕರಣಗಳು ಶಿವಯೋಗ ಸಾಧನೆಯಲ್ಲಿ ಮುಂದುವರಿಯಲು ತವಕಿಸುತ್ತಿವೆ."

"ಅದೆಲ್ಲ ಈ ಪಾದಕ್ಕೆ ಗೊತ್ತು"

ಸೆಟ್ಟರು ಎದ್ದು ಶ್ರೀಗಳ ಪಾದಕ್ಕೆ ಎರಗಿ ಮೆಟ್ಟಿಲಿಳಿದರು; ಅಂಗಡಿಗೆ ನಡೆದರು. ಸುಜ್ಞಾನಮ್ಮನೂ ಮನವನ್ನು ಅರಳಿಸಿಕೊಂಡು, ತನುವನ್ನು ಮುದುಡಿಸಿಕೊಂಡು, ನಯ-ಭಯ-ಭಕ್ತಿಯಿಂದ ಎದ್ದು ನಮಸ್ಕರಿಸಿ ಆಶೀರ್ವಾದ ಪಡೆದು ಲಗುಬಗೆಯಿಂದ ಮನೆಗೆ ಬಂದಳು ಮನೆಯಲ್ಲಿ ಗುರುನಂಜಪ್ಪ ! ಹಿತಮಿತವಾಗಿ ಅವನನ್ನು ಮಾತ-ನಾಡಿಸಿ, ತಾಯಿ ಅಡುಗೆಯ ಕೆಲಸ ಕೈಕೊಂಡಳು ಗುರುನಂಜರು ಕೊಟ್ಟಿಗೆಯಲ್ಲಿ ಕರುಗಳ ನೀರು ಮೇವುಗಳ ಪರಾಮರ್ಶೆ ಮಾಡಿದರು. ಅವುಗಳ ಕೊರಳಿಗೆ ಕೊರಳಾನಿಸಿ ಲೋಲಾಡಿದರು. ಹೇರೆತ್ತಿನ ಮೇಲೆ ಸಬರವನ್ನು ಬಿಗಿಯುತ್ತಿದ್ದ ಶಂಭಣ್ಣನಿಂದ ಎತ್ತನ್ನು ಬಿಡಿಸಿಕೊಂಡು ಮೇಲೆ ಹತ್ತಿ ಓಣಿಯಲ್ಲಿ ತಿರುಗಿಸಿಕೊಂಡು

ಬಂದರು. ಅದನ್ನು ಕಟ್ಟಿ ಮುಂದೆ ಮೇವು ಇಟ್ಟರು. ಬಳಿಕ ಅಡುಗೆಯ ಮನೆಯ ಬಾಗಿಲಿಗೆ ಬಂದು :

"ಅವ್ವಾ ನನಗ ಹಸಿವಾಗಿದೆ. ಪಡಸಾಲೆಯಲ್ಲಿ ನಿಂತು ನೀನು ಅದನ್ನು ಕೇಳದೆ ಒಳಗೇ ಬಂದು ಬಿಟ್ಟೆಯಲ್ಲ!"

"ಹೌದಪ್ಪ, ಅವರು ಸಂತೆಗೆ ಹೋಗುವರು. ಈಗ ಅಡುಗೆಯಾಗಬೇಕು. ನೀವೂ ಬೇಗ ಉಣ್ಣುವಿರಂತೆ! ನಿಮ್ಮ ಧ್ಯಾನಾನುಷ್ಠಾನ ನೆರವೇರಿರುವವೇ ?

"ಹೌದು ಮುಗಿದಿವೆ"

"ನಿಮ್ಮ ಸ್ನಾನ ಶಿವಾರ್ಚನೆ ಎಲ್ಲಿ ನಡೆದವು ?"

"ಮಠದ ಹಿಂಭಾಗದ ಪತ್ರೀವನದಲ್ಲಿ."

"ಶಯನ ?"

"ಮಠದ ಸೇವಕ ಗಣಪಯ್ಯನ ಕೊಠಡಿಯಲ್ಲಿ."

"ಸರಿ. ಪ್ರಸಾದ ದಾಸೋಹದಲ್ಲಿ ಸರಿಯಾಯ್ತು."

"ಅವ್ವಾ. ನಾನು ನಾಲ್ಕುದಿನ ಮನೆಗೆ ಬಾರದುದಕ್ಕೆ ಯಾಕೆಂದು ನೀವು ನನ್ನನ್ನು ಕೇಳಲಿಲ್ಲ. ಕಳವಳಿಸದೆ, ಕಾತರಿಸದೆ ಇರುವಿರಿ. ನಿಮ್ಮ ಹೃದಯದಲ್ಲಿ ಇಂದು ಹೊಸ ಬೆಳಕು ಮೂಡಿದ್ದು ಕಾಣುತ್ತದೆ. ಅಪ್ಪ ಮತ್ತು ನೀವು ಗುರುಗಳ ಹತ್ತಿರ ಬಹಳ ಹೊತ್ತು ಕುಳಿತಿದ್ದಿರಿ, ಅವರೇ ಚೆನ್ನಾಗಿ ಬೋಧಿಸಿ ತಿದ್ದಿದ್ದಾರೆಂದು ತೋರುತ್ತದೆ."

"ಹೌದು, ಮೋಹದಿಂದ ದುಃಖವಾಗುವದನ್ನು ಮನಗಾಣಿಸಿದರು."

"ಮಗನೆಂಬ ಮೋಹ ನಿಮ್ಮಲ್ಲಿ ಕಡಿಮೆಯಾಗಿದ್ದರೆ ನಾನು ಯಾರ ಮಗನು ? ಹೇಳಿರಿ ಅವ್ವಾ, ನಿಮ್ಮ ಮಗನಲ್ಲವೇ ?

"ತನು ಸಂಬಂಧದಿಂದ ಲೌಕಿಕಕ್ಕೆ ನಮ್ಮ ಮಗನಾಗಿರಬಹುದು. ಮುಖ್ಯವಾಗಿ ನೀವು ಪರಶಿವನ ಮಕ್ಕಳು."

"ನೀವು ?"

"ನಾವೂ ಆಗಿರಬಹುದು. ಆದರೆ ಅದನ್ನು ನಾವು ಅರಿತಿರುವದಿಲ್ಲ."

"ಗುರುಗಳಿಂದ ಅರಿತುಕೊಳ್ಳಬೇಕು."

"ಹೌದು, ಅವರಿಂದಲೂ ಅರಿತುಕೊಳ್ಳಬೇಕು. ನಿಮ್ಮಿಂದಲೂ ತಿಳಿಯಬೇಕು."

"ಅವ್ವಾ, ನೀವು ಪರಮಾತ್ಮನ ಪರಾಶಕ್ತಿಯ ಸ್ವರೂಪವಾಗಿದ್ದೀರಿ; ನನಗೆ ಮಹಾಮಾತೆಯಾಗಿದ್ದೀರಿ; ಗುರುವಾಗಿದ್ದೀರಿ."

ಗುರುನಂಜರು ತಾಯಿಯ ಎದುರಿನಲ್ಲಿ ತಲೆಬಾಗಿ, ಕೈಮುಗಿದರು. ಬಳಿಕ ಭಾವೋನ್ಮಿಲಿತರಾಗಿ ಗೋಡೆಯ ಹತ್ತಿರದ ಮಣೆಯ ಮೇಲೆ ಕುಳಿತು ಧ್ಯಾನಸ್ಥರಾದರು.

ಸುಜ್ಞಾನಮ್ಮನ ಅಡುಗೆಯಾಯ್ತು. ಬಾಗಿಲಿಗೆ ಬಂದಿದ್ದ ಓರ್ವ ಜಂಗಮ ಮೂರ್ತಿಯನ್ನು ಬರಮಾಡಿಕೊಂಡು, ತೀರ್ಥಪ್ರಸಾದ ಪಡೆದು, ಉಣಿಸಿ ಕಳಿಸ. ಲಾಯಿತು. ಸದಾನಂದ ಸೆಟ್ಟರು ಬಂದರು. ಗುರುನಂಜರು ಪ್ರಕೃತಕ್ಕೆ ಬಂದು, ಉಭಯರ ಪ್ರಸಾದ ಭೋಜನವಾಯಿತು. ಸೆಟ್ಟರು ಸಂತೆಗೆ ಹೋದರು. ಗುರುನಂಜರು ಗ್ರಂಥಗಳತ್ತ ಗಮನವಿತ್ತರು.

೩. ಗುರುಕರುಣೆಯ ಉನ್ನತರೂಪ

ಎರಡು ವರ್ಷ ಕಳೆದವು. ಗುರುನಂಜರ ಬಾಲಲೀಲಾತ್ಮಕ ಚಟುವಟಿಕೆಗಳು ಕಡಿಮೆಯಾಗಿದ್ದವು. ಅವರ ಬುದ್ಧಿ, ಜ್ಞಾನಗಳು, ಗ್ರಂಥಾವಲೋಕನ, ಶಾಸ್ತ್ರಾಭ್ಯಾಸದಲ್ಲಿ ನಿರತವಾಗಿದ್ದವು. ಉಪನಿಷತ್–ಆಗಮಗಳ ತಿರುಳನ್ನು ತಿಳಿದರು. ಅವುಗಳನ್ನು ಮೀರಿ ಮುಂದೆ ಹೋದ ಪ್ರಭುದೇವ, ಬಸವೇಶ, ಚೆನ್ನಬಸವೇಶ, ಅಕ್ಕಮಹಾದೇವಿ ಮುಂತಾದ ಶರಣಶ್ರೇಷ್ಠರ ದಾರ್ಶನಿಕ ವಚನಗಳ ರಹಸ್ಯವನ್ನು ತನು–ಮನ ಭಾವಗಳಲ್ಲಿ ಬೆರಿಸಿಕೊಂಡಿದ್ದರು. ಕ್ರಿಯಾಜ್ಞಾನ ಆನಂದಗಳ ಸಮನ್ವಯದಲ್ಲಿ ಸಮರಸಗೊಳಿಸಿಕೊಂಡಿದ್ದರು. ತೋಂಟದಾರ್ಯ ಸಿದ್ಧಲಿಂಗ ಶಿವಯೋಗಿಗಳ 'ಷಟ್‌ಸ್ಥಲ ಜ್ಞಾನ ಸಾರಾಮೃತ' ವಚನಗಳ ಪ್ರವಚನ ಮಾಡುವಷ್ಟು ಪರಿಣತಿಯನ್ನು ಪಡೆದುಕೊಂಡರು. ಶೂನ್ಯ, ನಿಶ್ಶೂನ್ಯ, ನಿರಾಲಂಬ, ನಿರವಯವವೆನಿಸುವ ಪರವಸ್ತುವಿನಿಂದ ಜೀವ ಜಗತ್ತುಗಳ ಉದಯ, ಜೀವರ ಬಂಧ–ಮೋಕ್ಷ ಈ ತತ್ವಜ್ಞಾನದ ವಿವರಗಳನ್ನು ಅಳವಡಿಸಿಕೊಂಡರು. ಗುರುನಂಜರ ಈ ಜ್ಞಾನೋನ್ನತಿಗೆ, ಗುರುಚೆನ್ನಮಲ್ಲಸ್ವಾಮಿಗಳು ಕಾರಣರಾಗಿ ಕೈಹಿಡಿದು ನಡೆಸುತ್ತಿದ್ದರು. ಅಲ್ಲಮಪ್ರಭುಗಳ ಅಪರಾವತಾರಿಗಳೆನಿಸಿದ ತೋಂಟದಾರ್ಯರ ಪ್ರತ್ಯಕ್ಷ ಶಿಷ್ಯರು ಚೆನ್ನಮಲ್ಲಸ್ವಾಮಿಗಳು, ಕೆಲವೇ ವರ್ಷಗಳ ಹಿಂದೆ ಬಯಲಾದ ತಮ್ಮ ಗುರುವಿನ ಪ್ರಭಾವಲಯವನ್ನು ಸ್ವಾನುಭವದಿಂದ ಬೆಳಗುತ್ತಲಿದ್ದರು. ಅದರಲ್ಲಿಯೇ ಗುರುನಂಜರು ಆತ್ಮದ ಬೆಳಗನ್ನು ಅನುಭವಿಸಲು ಅನುವಾಗಿದ್ದಿತು ಅನಾಯಾಸವಾಗಿ !

ಗುರುನಂಜರು ಈಗ ಮನೆಗೆ ಬಂದರೆ ಬಂದರು, ಇಲ್ಲವಾದರೆ ಇಲ್ಲ. ಅವರ ಇಷ್ಟಲಿಂಗೋಪಾಸನೆಯು ಮನೆಯಲ್ಲಿ, ಮಠದಲ್ಲಿ, ವನದಲ್ಲಿ ಇಷ್ಟಬಂದಲ್ಲಿ ನೆರವೇರುತ್ತಿತ್ತು. ಸಾಕಷ್ಟು ವೇಳೆ ನಿರಾತಂಕವಾಗಿ ಲಿಂಗಾನಂದದಲ್ಲಿ ಮೈಮರೆಯುವದಕ್ಕೆ ಯಾವಾಗ ಎಲ್ಲಿ ಅನುಕೂಲವೆನಿಸುವದೋ, ಆವಾಗ ಅಲ್ಲಿ ಅವರ ಧ್ಯಾನಾನುಷ್ಠಾನಗಳು ಜರುಗುವವು. ಮಠದಲ್ಲಿ ನಡೆಯುವ ಅನುಭವಗೋಷ್ಠಿಯಲ್ಲಿ

ಗುರುಸಮ್ಮುಖದ ಚರ್ಚೆಯಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಪ್ರವಚನಗಳನ್ನು ಆಲಿಸಿ, ಪರಾಮರ್ಶೆ ಮಾಡಿಕೊಳ್ಳುತ್ತಿದ್ದರು. ಸಂಜೆಯ ಲಿಂಗಾರ್ಚನೆಯ ನಂತರ ಗುರುಗಳು ಯೋಗನಿದ್ರೆಗೊಳಗಾಗುವವರೆಗೆ ಅವರ ಸೇವೆ ಮಾಡುತ್ತಿದ್ದರು.

ಮನೆಗೆ ಬಂದಾಗ, ತಾಯಿ ಅವರ ಮೈ, ಕೈ, ಬಟ್ಟೆಗಳ ಬಗೆಗೆ ಗಮನವೀಯುತ್ತಿದ್ದಳು. ಅವರು ಇಚ್ಛಿಸಿದ ಉಣಿಸನ್ನು ಎಡೆಮಾಡುತ್ತಿದ್ದಳು. ಮಗನೆಂಬ ಮಾಯೆಯ ಭಾವ ಬದಿಗಾಗಿತ್ತು. ವಾತ್ಸಲ್ಯದ ಬದಲು ಗೌರವಾದರಗಳನ್ನು ತಾಳಿದ್ದಳು. ಗ್ರಂಥಾವಲೋಕನ, ಆಧ್ಯಾತ್ಮಿಕ ಸೂಕ್ತಿಗಳ ಬರೆಹ ಇವುಗಳಿಗಾಗಿ ಗುರುನಂಜರು ರಾತ್ರಿಯೆಲ್ಲ ಕುಳಿತಿರುತ್ತಿದ್ದರು.

ಗುರುನಂಜರ ವರ್ತನೆಯಲ್ಲಿ ಕಾಣುವ ಬೆಳಕನ್ನು ನೋಡಿ, ಸದಾನಂದ ಸೆಟ್ಟರು ಸಂತೋಷ ಪಡುತ್ತಿದ್ದರು ಹೊರತು, ಅವರನ್ನು ಕೆಣಕಿ ಪ್ರಶ್ನಿಸುವ ಹವ್ಯಾಸಕ್ಕೆ ಹೋಗಿರಲಿಲ್ಲ. ಅದರ ಅಗತ್ಯವೂ ಇರಲಿಲ್ಲ.

ಒಂದು ದಿನ ನಿತ್ಯದಂತೆ ನಡೆಯುವ ಪ್ರವಚನ ಸಮಯದಲ್ಲಿ ಭಕ್ತರು, ಜಿಜ್ಞಾಸುಗಳು, ಮುಮುಕ್ಷುಗಳು ಕೂಡಿರುವಾಗ, ಗುರನಂಜರಿಗೆ ಗುರುಗಳು ಪ್ರವಚನ ಪೀಠದಲ್ಲಿ ಆಸೀನರಾಗಲು ಅಪ್ಪಣೆ ಮಾಡಿದರು. ಆಕಸ್ಮಿಕವಾಗಿ ಬಂದಿತು ಈ ಆದೇಶ ! ಗುರುನಂಜೇಶ್ವರರು ಅದನ್ನು ಸ್ವೀಕರಿಸಿದರು. ಗುರುಪಾದಕ್ಕೆ ವಂದನೆಗೈದು, ಮುಂಗಟ್ಟೆಯ ಅಂಚೆಗಿರುವ ಪುರಾಣಿಕರ ಆಸನವನ್ನು ಅಲಂಕರಿಸಿದರು. ಶ್ರೋತೃಗಳಲ್ಲಿ ಇನ್ನೂ ಕೆಲವರು ಗುರುನಂಜನೊಬ್ಬ ಅರೆಹುಚ್ಚನೆಂದು ತಿಳಿದವರಿದ್ದರು. ಪರಮ ಗುರುಭಕ್ತನೆಂದು ಕೆಲವರು ಭಾವಿಸಿದ್ದರು. ಮಹಾ ಸ್ವಾಮಿಗಳ ಪ್ರೀತಿಯ ಶಿಷ್ಯನೂ, ಕರುಣಾಪಾತ್ರನೂ ಎಂದೂ, ಲಿಂಗನಿಷ್ಠ ನಿಶ್ಚಲ ಯೋಗಸಾಧಕನೆಂದೂ ಕೆಲಕೆಲವರು ಅರಿತುಕೊಂಡಿದ್ದರು. ಆದರೆ ಇವರ ಜ್ಞಾನದ ಆಳವನ್ನು, ಪಂಡಿತರಂತೆ ಮಾತಾಡಬಲ್ಲವರೆಂಬುದನ್ನು ಬಹು ಜನರು ಅರಿತಿರಲಿಲ್ಲ. ತೇಜಸ್ವಿಯಾದ ತರುಣ ಗುರುನಂಜೇಶ್ವರರು ಪ್ರವಚನಕ್ಕೆ ಬಂದೊಡನೆ ಅವರೆಲ್ಲರೂ ತಮ್ಮ ತಮ್ಮ ಭಾವನೆಗಳಂತೆ ಅತ್ಯಂತ ಕುತೂಹಲಿಗಳಾಗಿ ನೋಡಿದರು. ಗುರುನಂಜೇಶ್ವರರೊಡನೆ ಶಿವನಾಮ ಘೋಷಣೆಯನ್ನು ಉತ್ಸಾಹದಿಂದ ಉಗ್ಗಡಿಸಿದರು. ಎಲ್ಲರ ದೃಷ್ಟಿಗಳು ಗುರುನಂಜರಲ್ಲಿಯೇ ನಿಂತಿದ್ದವು. ಗುರುನಂಜೇಶ್ವರರು ಒಂದು ನಿಮಿಷ ಮೌನದಲ್ಲಿ ಸಚ್ಚಿದಾನಂದ ನಿತ್ಯಪರಿಪೂರ್ಣನಾದ ಲಿಂಗದ ಧ್ಯಾನಮಾಡಿ, ಕೈಮುಗಿದು ಮೆಲ್ಲನೆ ಈ ವಚನ ಹಾಡಿದರು :

"ಆದಿ ಮಧ್ಯಾವಸಾನವಿಲ್ಲದಂದು
ನಾದ ಬಿಂದು ಕಳೆಗಳಿಲ್ಲದಂದು

ಸಾವಯ ನಿರವಯ ವಿಲ್ಲದಂದು
ತತ್ವ-ಬ್ರಹ್ಮಾಂಡಾದಿ ಲೋಕಾದಿ ಲೋಕಂಗಳೇನು
ಏನೂ ಇಲ್ಲದಂದು
ನಿತ್ಯ ನಿರಂಜನ ಪರವಸ್ತು ನೀನೊಬ್ಬನೇ ಇದ್ದೆಯಲ್ಲ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ

ಪರಮ ಸದ್ಗುರು ತೋಂಟದಾರ್ಯ ಸಿದ್ಧಲಿಂಗ ಮಹಾ ಶಿವಯೋಗಿಗಳು ನಿರೂಪಿಸಿದ ಪರವಸ್ತುವಿನ ಮೂಲಸ್ಥಿತಿಯಿದು. ಅದನ್ನು ಸ್ಮರಿಸೋಣ."

"ಪುಣ್ಯವಂತರೆ, ನಿತ್ಯವೂ ನೀವು ಶಾಸ್ತ್ರಜ್ಞರಾದ ಪಂಡಿತರಿಂದ ತತ್ವಜ್ಞಾನವನ್ನು ಶಿವಕಥೆಗಳನ್ನು ಕೇಳುತ್ತಿದ್ದೀರಿ, ಹಸುಳೆ ನಾನು ! ಅಂಥದೇನನ್ನು ಹೇಳಲು ಶಕ್ತನಾದೇನು ? ಗುರುಗಳ ಆದೇಶವಿದೆ. ಗುರುಪಾದ ಕೃಪೆಯ ಬಲವನ್ನು ಆಶ್ರಯಿಸಿ, ಅವರು ಕಲಿಸಿದ ಪಾಠಗಳಲ್ಲಿಯ ಎರಡು ನುಡಿಗಳನ್ನು ಆಡುವೆನು. ನಿನ್ನೆ ನೀವು ಶ್ರವಣ ಮಾಡಿದುದರ ಮುಂದೆ ಈಗ ವಿವರಿಸಬೇಕಾದ ತೋಂಟದಾರ್ಯರ ವಚನವಿದು :

ಕಾಯವೆಂಬ ಕೆರೆಗೆ ಮನವೆಂಬ ಕಟ್ಟೆಯ ಕಟ್ಟಿ
ದೃಢವೆಂಬ ತೂಬನಿಕ್ಕಬೇಕಯ್ಯಾ
ಸ್ವಾನುಭವವೆಂಬ ಸೋಪಾನವ ಮಾಡಬೇಕಯ್ಯಾ
ಆ ಕೆರೆಯ ಏರಿಯ ಮೇಲೆ ಆಚಾರವೆಂಬ ವೃಕ್ಷವ ಬೆಳಸಿ
ಅರುಹೆಂಬ ಹೂವ ಅದ್ವೈತವೆಂಬ ಹಸ್ತದಿಂದ ಕೊಯ್ದು
ಅನುಪಮ ಲಿಂಗಕ್ಕೆ ಪೂಜಿಸಬಲ್ಲಡೆ ಲಿಂಗಾರ್ಚಕರೆಂಬೆ
ಈ ಭೇದವನರಿಯದೆ ಹುಸಿಯನೆ ಪೂಜಿಸಿ,
ಘಾಸಣೆಗೊಳಗಾಗುವ ಪಿಸುಣೆಗರನೆಂತು ಪೂಜಕರೆಂಬೆನಯ್ಯಾ ?
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ ।

ಲಿಂಗಸಂಗರಾಗಿದ್ದ ಸಿದ್ಧಲಿಂಗ ಶಿವಯೋಗಿಗಳು ಬಾಹ್ಯಾಡಂಭರದ ಲಿಂಗ ಪೂಜೆಯನ್ನು ಖಂಡಿಸಿದ್ದಾರೆ. ವೈಭವಯುತವಾದ ಪೂಜೆ ಪ್ರತಿಷ್ಠೆಯ ಪ್ರದರ್ಶನ-ಕ್ಕಾಗಿ ಇರುವದು. ಮಾಡುವ ಪೂಜೆ ಮನಮುಟ್ಟಿ ಮಾಡುವದಿರಬೇಕು. 'ಬಂಡಿ ತುಂಬಿದ ಪತ್ರಿಯ ತಂದು, ಕಂಡಕಂಡಲ್ಲಿ ಮಜ್ಜನಕ್ಕೆರೆವಿರಿ, ತಾಪತ್ರಯವ ಕಳೆದು ಪೂಜಿಸಿರಿ. ತಾಪತ್ರಯವನೊಲ್ಲ ಕೂಡಲ ಸಂಗಮದೇವ; ಲಿಂಗವ ಪೂಜಿಸುವಡೆ ತನುಮುಟ್ಟಿ, ಮನಮುಟ್ಟಿ ಪೂಜಿಸಬೇಕು' ಎಂದು ಅಣ್ಣ ಬಸವಣ್ಣನವರೂ ಹೇಳಿದ್ದಾರೆ. ಮನಮುಟ್ಟಿ ಮಾಡುವದು ಭಾವಗಮ್ಯವಾಗುವದು. ಅದರ

ಪರಿಯನ್ನು ಪರಮ ಶಿವಯೋಗಿಗಳು ಈ ವಚನದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಕಾಯ ವಿಕಾರವನ್ನು ಅಂದರೆ, ಇಂದ್ರಿಯಗಳು ವಿಷಯಗಳತ್ತ ಹರಿದು ಹಾಳಾಗುವದನ್ನು ಮನೋನಿಗ್ರಹವೆಂಬ ಕಟ್ಟೆಯ ಕಟ್ಟಿ, ತಡೆಯಬೇಕು. ಕಾಯದ ಕೆರೆಯನ್ನು ಕಂಡ ಕಂಡಲ್ಲಿ ಒಡೆದು, ಇಂದ್ರಿಯಗಳು ಹರಿಯುವದನ್ನು ತಡೆಯಬೇಕಾದರೆ ಮನೋನಿಗ್ರಹದ ಆಣೆಯಿಂದ ಅವುಗಳನ್ನು ಹರಿಯಿಸಲು 'ಶಿವನಿಗಾಗಿ' ಎಂಬ ಒಂದು ದೃಢವಾದ ತೂಬ ಕಟ್ಟಬೇಕು. ಅಲ್ಲಿ ಹರಿಯುವ ಇಂದ್ರಿಯಗಳು ಒಳ್ಳೆಯದನ್ನು ಹೊಂದುವವು. ಸ್ವಾನುಭವದ ಮೆಟ್ಟಲು ಅಂದರೆ, ಷಟ್‌ಸ್ಥಲದ ಹಂತಗಳನ್ನು ಏರಬೇಕು. ಏರಿಯ ಮೇಲೆ ಸದಾಚಾರ ರೂಪವಾದ ಸತ್ಕ್ರಿಯಾ ವೃಕ್ಷವು ಬೆಳೆಯುವದು. ಅಲ್ಲಿ ಅರುಹು (ಜ್ಞಾನ) ಹೂವು ಅರಳುವದು. ಅಲ್ಲಿ ಶಿವ–ಜೀವ, ಸುಖ–ದುಃಖ, ಮೇಲು–ಕೀಳು, ನಾನು–ನೀನು ಇತ್ಯಾದಿ ದ್ವಂದ್ವವು ಅಳಿದು ಅದ್ವೈತವು ಮೂಡುವದು. ಆ ಅದ್ವೈತದ ಸದ್ಭಾವ ಹಸ್ತದಿಂದ ಆ ಜ್ಞಾನಪುಷ್ಪವನ್ನು ಪಡೆದು, ಏರಿಸಿ ಲಿಂಗವ ಪೂಜಿಸಿದರೆ ಅವರನ್ನು ಲಿಂಗಪೂಜಕರೆನ್ನಬಹುದು ಅವರೆ ಮೋಕ್ಷಕ್ಕೆ ಅಧಿಕಾರಿಗಳು. ಅದಿಲ್ಲದೆ ಆಡಂಬರಕ್ಕಾಗಿ ಬಹಿರಂಗದ ಪೂಜೆ ನಡೆಸಿ, ಕಷ್ಟಕೋಟಲೆಗೊಳಗಾಗುವವರ ಲಿಂಗ ಪೂಜಕರೆನ್ನಲಾಗದು. ಈ ಮುಖ್ಯಾಂಶಗಳ ವಿವರವಾದ ಪ್ರವಚನ ಮಾಡುತ್ತಿರುವಾಗ, ತರುಣ ಶಿವಯೋಗಿಯ ನುಡಿಮುತ್ತುಗಳನ್ನು ಕೇಳಿ ಭಕ್ತಾದಿಗಳು ತಲೆದೂಗಿದರು. ಚೆನ್ನಮಲ್ಲಸ್ವಾಮಿಗಳು ಶಿಷ್ಯನ ಮೈದಡವಿದರು. ಸಿದ್ಧಲಿಂಗ ಶಿವಯೋಗಿಗಳ ಷಟ್‌ಸ್ಥಲ ಸಿದ್ಧಾಂತದ ಪ್ರಚಾರಕ್ಕೆ ಈತನೂ ಸಿದ್ಧನಾಗುವನೆಂದು ಮನದಲ್ಲಿ ಭಾವಿಸಿಕೊಂಡರು.

ಮುಂದೆ ಕೆಲವೇ ದಿನಗಳು ಸರಿದು ಹೋಗಿದ್ದವು. ಅಂದು ಅದೊಂದು ಅನಂತಕಾಲ ಸ್ಮರಿಸಬೇಕಾದ ದಿನವಾಗಿತ್ತು. ಗುರುನಂಜೇಶ್ವರರು ನಿತ್ಯದಂತೆ ಗುರುಪಾದ ಸೇವೆ ಮಾಡುತ್ತಿದ್ದರು. ರಾತ್ರಿಯ ಹತ್ತುಗಳಿಗೆ ಆಗಿರಬಹುದು. ಇಷ್ಟರಲ್ಲಿ ಗುರುಚೆನ್ನಮಲ್ಲೇಶ್ವರ ಸ್ವಾಮಿಗಳಿಗೆ ಯೋಗನಿದ್ರೆ ಹತ್ತಬೇಕಾಗಿತ್ತು. ಆದರೆ ಅದರ ಸುಳಿವಿಲ್ಲ. ಎಷ್ಟು ಹೊತ್ತು ಶಿಷ್ಯನನ್ನು ಆಯಾಸಗೊಳಿಸುವದು. ಕಾಲ ಕಡೆಗಿದ್ದ ಬಿಳಿಯ ಕಂಬಳಿಯನ್ನು ಮೈ ಮೇಲೆ ಎಳೆದುಕೊಂಡರು. ಗುರುನಂಜರು ಪಾದಕ್ಕೆ ವಂದಿಸಿ ಸರಿದರು. ಶ್ರೀಗಳಿಗೆ ನಿದ್ರೆ ಬರಲೇ ಇಲ್ಲ. ಹೃದಯದಲ್ಲೊಂದು ಕಳವಳ! ಕಾರಣವೇನು ? ಏನೋ ಶುಭಾಕಾಂಕ್ಷೆ ನಿದ್ರೆಗೆ ಅಡ್ಡ ಬರುತ್ತಿರುವಂತೆ ಭಾಸವಾಯಿತು. ಆಕಾಂಕ್ಷೆ ಶುಭವಾಗಿರಲಿ, ಅಶುಭವಾಗಿರಲಿ ಅದು ನಿದ್ರಾಯೋಗಕ್ಕೆ ಆತಂಕಕಾರಿಯೇ ಸರಿ. ಅವರು ಹಾಸಿಗೆಯಲ್ಲಿ ಪವಡಿಸಿ, ಮುಗ್ಗಲಾಗುವಾಗ ಗುರುನಂಜರ ಬಾಡಿದ ಮುಖದಲ್ಲಿಯ ಕಣ್ಣುಗಳು ತೇವವಾಗಿರುವದನ್ನು ಕಂಡಿದ್ದರು. ಆ ಭಾವದ ದೃಶ್ಯವು ಶಿಷ್ಯನ ಕೋರಿಕೆಯನ್ನು ಈಡೇರಿಸುವ ಯೋಚನೆಗೆ ತೀವ್ರತೆಯನ್ನು ತಂದುಕೊಟ್ಟಿತ್ತು. ಆ ನೋಟದ ವಿಶೇಷಾರ್ಥ, ಆ

ಯೋಚನೆ, ಯೋಜನೆ ಇವು ಚನ್ನಮಲ್ಲ ಶಿವಯೋಗಿಗಳ ಮನಸ್ಸನ್ನು ವ್ಯಾಪಿಸಿದ್ದವು. ಮನಸ್ಸು ಅಡಗಲು ಅವಕಾಶವೇ ಇರಲಿಲ್ಲ. ಒಂದು ಗಳಿಗೆಯಷ್ಟು ಸಮಯ ಸರಿದಿರಬೇಕು.

ಶ್ರೀಗಳು ಮುಖದ ಮೇಲಿನ ಹೊದಿಕೆಯನ್ನು ಎತ್ತಿ ತೆಗೆದೊಗೆದರು. ಮತ್ತೆ ಕಂಡರು ಗುರುನಂಜರನ್ನೇ ! ಎದುರಿನ ಗೂಡಿನಲ್ಲಿಯ ಹಣತೆಯ ಮಂದ ಪ್ರಕಾಶದಲ್ಲಿ ಕೈಮುಗಿದು ಕಣ್ಣೀರು ಕರೆಯುತ್ತ ನಿಂತೇ ಇದ್ದ ವರಶಿಷ್ಯನನ್ನು ಕಂಡು ಗುರುಗಳು ಎದ್ದು ಕುಳಿತರು. ಅವರ ಅಂತಃಕರುಣ ತುಂಬಿ ಬಂದಿತು. ಕೈಚಾಚಿ ಅವನ ತೋಳು ಹಿಡಿದು, ಮುಂದೆಳೆದುಕೊಂಡರು. ಗುರುನಂಜರು ಮಂಚದ ಅಂಚಿನ ಕೆಳಗೆ ಕುಳಿತು ತಲೆಬಾಗಿದರು. ಗುರುಗಳು ತಮ್ಮ ಬಲಹಸ್ತವನ್ನು ಅವನ ತಲೆಯ ಮೇಲಿಟ್ಟು, ಎಡಹಸ್ತದಿಂದ ಅವನ ಬೆನ್ನು ಸವರಹತ್ತಿದರು. ಇದೇ ಅಲ್ಲವೇ ಗುರು ಕರುಣೆಯ ಉನ್ನತೋನ್ನತ ರೂಪ ! ಇದಕ್ಕೆ ವಿಧಿ ವಿಧಾನಗಳು ಬೇಕೇ ?

"ಗುರುನಂಜೇಶ್ವರ, ನಿನ್ನ ಕೋರಿಕೆ ನನಗೆ ಅರಿಕೆಯಾಗಿದೆ. ಅದಕ್ಕೆ ಅವಸರ ಅಷ್ಟಾಗಿ ಕಾಣದ್ದರಿಂದ, ಕಾಲ ನೂಕುತ್ತ ಬಂದೆವು. ಬಾಲ್ಯದಲ್ಲಿ ನಿನಗಿತ್ತ ಸಾಧನಾ ದೀಕ್ಷೆಯಿಂದಲೇ ಆರಂಭಿಸಿದ ಸಾಧನೆಯಿಂದ ನೀನು ಪರಮಾರ್ಥ ಸಂಸ್ಕಾರವನ್ನು ಸಂಪಾದಿಸಿಯೇ ಇರುವೆ. ನಿನ್ನ ಪುರಾಕೃತ ತಪಸ್ಸಿದ್ಧಿಯ ಮೇಲೆ ಈ ಉನ್ನತ ಸಾಧನೆ ಪರಮ ಸಿದ್ಧಿಯನ್ನು ಸನ್ನಿಹಿತಗೊಳಿಸಿದೆ. ಪರಮ ನಿರಂಜನತ್ವಕ್ಕೆ ನಿನ್ನ ತನುತ್ರಯಗಳು ಅಣಿಯಾಗಿವೆ. ನನ್ನ ಅಂತರಂಗದಲ್ಲಿ ನೀನು ನೆಲೆಸಿರುವೆ; ನನ್ನ ಕರುಣೆ ನಿನಗೆ ಮೀಸಲಾಗಿದೆ. ನೀನು ನನ್ನ ಹೃದಯದ ಬೆಳಕಾಗಿರುವೆ. ಇನ್ನು ಕೊಡುವ ದೀಕ್ಷಾ ಸಂಸ್ಕಾರದಿಂದ ಹೆಚ್ಚಿನದೇನನ್ನು ನಾವು ನಿನಗೆ ನೀಡಬಲ್ಲೆವು ? ನಿಶ್ಶೂನ್ಯ, ನಿರಾಲಂಬ, ನಿರವಯ, ನಿರಂಜನ ರೂಪಿ ಸಿದ್ಧಲಿಂಗ ಶಿವಯೋಗಿಗಳ ಕೀರ್ತಿಗೆ ನೀನು ಮುಡಿಪಾಗಿರುವೆ."

"ಗುರುವೆ, ಈ ನುಡಿಗಳಿಂದ ನನ್ನನ್ನು ಅನಾಥನನ್ನಾಗಿ ಮಾಡಬಾರದು. ನಾನು ಅಹಂಕಾರಿಯಾಗಲೊಲ್ಲೆನು." ಕಂಠ ಬಿಗಿದು, ಗದ್ಗದ ಸ್ವರದಿಂದ ಬಂದಿದ್ದವು ಗುರುನಂಜರ ಬಾಯಿಯಿಂದ ಆ ಶಬ್ದಗಳು.

"ಅಹಂಕಾರ, ಅದು ನಿನ್ನ ಹುಟ್ಟಿನಲ್ಲಿಯೇ ನಿನ್ನೊಡನೆ ಬಂದಿಲ್ಲ. ಇನ್ನೆಲ್ಲಿಯದು ? ಕಳವಳ ಬೇಡ. ನಿನ್ನ ಇಚ್ಛಿತವನ್ನು ನೆರವೇರಿಸುವ ಯೋಚನೆ ಇದೆ. ನಿನಗಲ್ಲದಿದ್ದರೂ ನಿನ್ನ ಬಗೆಗೆ ಜನರ ಮನಸ್ಸಿನಲ್ಲಿ ಒಂದು ಗೌರವಸ್ಥಾನ ಉಂಟಾಗಿ, ಸಾಂಪ್ರದಾಯಕರ ಭಾವನೆ ಉನ್ನತಗೊಳ್ಳಬೇಕೆಂದು, ನಿನಗೆ ಶ್ರೇಷ್ಠ ಸಂಸ್ಕಾರ ಕೊಡುವ ನಿರ್ಧಾರ ಮಾಡಿದ್ದೇನೆ. ಲೋಕಸೇವೆ ಲೋಕೋದ್ಧಾರ

ಪರಿಯನ್ನು ಪರಮ ಶಿವಯೋಗಿಗಳು ಈ ವಚನದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಕಾಯ ವಿಕಾರವನ್ನು ಅಂದರೆ, ಇಂದ್ರಿಯಗಳು ವಿಷಯಗಳತ್ತ ಹರಿದು ಹಾಳಾಗುವದನ್ನು ಮನೋನಿಗ್ರಹವೆಂಬ ಕಟ್ಟೆಯ ಕಟ್ಟಿ, ತಡೆಯಬೇಕು. ಕಾಯದ ಕೆರೆಯನ್ನು ಕಂಡ ಕಂಡಲ್ಲಿ ಒಡೆದು, ಇಂದ್ರಿಯಗಳು ಹರಿಯುವದನ್ನು ತಡೆಯಬೇಕಾದರೆ ಮನೋನಿಗ್ರಹದ ಆಣೆಯಿಂದ ಅವುಗಳನ್ನು ಹರಿಯಿಸಲು 'ಶಿವನಿಗಾಗಿ' ಎಂಬ ಒಂದು ದೃಢವಾದ ತೂಬ ಕಟ್ಟಬೇಕು. ಅಲ್ಲಿ ಹರಿಯುವ ಇಂದ್ರಿಯಗಳು ಒಳ್ಳೆಯದನ್ನು ಹೊಂದುವವು. ಸ್ವಾನುಭವದ ಮೆಟ್ಟಲು ಅಂದರೆ, ಷಟ್‌ಸ್ಥಲದ ಹಂತಗಳನ್ನು ಏರಬೇಕು. ಏರಿಯ ಮೇಲೆ ಸದಾಚಾರ ರೂಪವಾದ ಸತ್ಕ್ರಿಯಾ ವೃಕ್ಷವು ಬೆಳೆಯುವದು. ಅಲ್ಲಿ ಅರುಹು (ಜ್ಞಾನ) ಹೂವು ಅರಳುವದು. ಅಲ್ಲಿ ಶಿವ–ಜೀವ, ಸುಖ–ದುಃಖ, ಮೇಲು–ಕೀಳು, ನಾನು–ನೀನು ಇತ್ಯಾದಿ ದ್ವಂದ್ವವು ಅಳಿದು ಅದ್ವೈತವು ಮೂಡುವದು. ಆ ಅದ್ವೈತದ ಸದ್ಭಾವ ಹಸ್ತದಿಂದ ಆ ಜ್ಞಾನಪುಷ್ಪವನ್ನು ಪಡೆದು, ಏರಿಸಿ ಲಿಂಗವ ಪೂಜಿಸಿದರೆ ಅವರನ್ನು ಲಿಂಗಪೂಜಕರೆನ್ನಬಹುದು ಅವರೆ ಮೋಕ್ಷಕ್ಕೆ ಅಧಿಕಾರಿಗಳು. ಅದಿಲ್ಲದೆ ಆಡಂಬರಕ್ಕಾಗಿ ಬಹಿರಂಗದ ಪೂಜೆ ನಡೆಸಿ, ಕಷ್ಟಕೋಟಲೆಗೊಳಗಾಗುವವರ ಲಿಂಗ ಪೂಜಕರೆನ್ನಲಾಗದು. ಈ ಮುಖ್ಯಾಂಶಗಳ ವಿವರವಾದ ಪ್ರವಚನ ಮಾಡುತ್ತಿರುವಾಗ, ತರುಣ ಶಿವಯೋಗಿಯ ನುಡಿಮುತ್ತುಗಳನ್ನು ಕೇಳಿ ಭಕ್ತಾದಿಗಳು ತಲೆದೂಗಿದರು. ಚೆನ್ನಮಲ್ಲಸ್ವಾಮಿಗಳು ಶಿಷ್ಯನ ಮೈದಡವಿದರು. ಸಿದ್ಧಲಿಂಗ ಶಿವಯೋಗಿಗಳ ಷಟ್‌ಸ್ಥಲ ಸಿದ್ಧಾಂತದ ಪ್ರಚಾರಕ್ಕೆ ಈತನೂ ಸಿದ್ಧನಾಗುವನೆಂದು ಮನದಲ್ಲಿ ಭಾವಿಸಿಕೊಂಡರು.

ಮುಂದೆ ಕೆಲವೇ ದಿನಗಳು ಸರಿದು ಹೋಗಿದ್ದವು. ಅಂದು ಅದೊಂದು ಅನಂತಕಾಲ ಸ್ಮರಿಸಬೇಕಾದ ದಿನವಾಗಿತ್ತು. ಗುರುನಂಜೇಶ್ವರರು ನಿತ್ಯದಂತೆ ಗುರುಪಾದ ಸೇವೆ ಮಾಡುತ್ತಿದ್ದರು. ರಾತ್ರಿಯ ಹತ್ತುಗಳಿಗೆ ಆಗಿರಬಹುದು. ಇಷ್ಟರಲ್ಲಿ ಗುರುಚೆನ್ನಮಲ್ಲೇಶ್ವರ ಸ್ವಾಮಿಗಳಿಗೆ ಯೋಗನಿದ್ರೆ ಹತ್ತಬೇಕಾಗಿತ್ತು. ಆದರೆ ಅದರ ಸುಳಿವಿಲ್ಲ. ಎಷ್ಟು ಹೊತ್ತು ಶಿಷ್ಯನನ್ನು ಆಯಾಸಗೊಳಿಸುವದು. ಕಾಲ ಕಡೆಗಿದ್ದ ಬಿಳಿಯ ಕಂಬಳಿಯನ್ನು ಮೈ ಮೇಲೆ ಎಳೆದುಕೊಂಡರು. ಗುರುನಂಜರು ಪಾದಕ್ಕೆ ವಂದಿಸಿ ಸರಿದರು. ಶ್ರೀಗಳಿಗೆ ನಿದ್ರೆ ಬರಲೇ ಇಲ್ಲ. ಹೃದಯದಲ್ಲೊಂದು ಕಳವಳ ! ಕಾರಣವೇನು ? ಏನೋ ಶುಭಾಕಾಂಕ್ಷೆ ನಿದ್ರೆಗೆ ಅಡ್ಡ ಬರುತ್ತಿರುವಂತೆ ಭಾಸವಾಯಿತು. ಆಕಾಂಕ್ಷೆ ಶುಭವಾಗಿರಲಿ, ಅಶುಭವಾಗಿರಲಿ ಅದು ನಿದ್ರಾಯೋಗಕ್ಕೆ ಆತಂಕಕಾರಿಯೇ ಸರಿ. ಅವರು ಹಾಸಿಗೆಯಲ್ಲಿ ಪವಡಿಸಿ, ಮುಗ್ಗಲಾಗುವಾಗ ಗುರುನಂಜರ ಬಾಡಿದ ಮುಖದಲ್ಲಿಯ ಕಣ್ಣುಗಳು ತೇವವಾಗಿರುವದನ್ನು ಕಂಡಿದ್ದರು. ಆ ಭಾವದ ದೃಶ್ಯವು ಶಿಷ್ಯನ ಕೋರಿಕೆಯನ್ನು ಈಡೇರಿಸುವ ಯೋಚನೆಗೆ ತೀವ್ರತೆಯನ್ನು ತಂದುಕೊಟ್ಟಿತ್ತು. ಆ ನೋಟದ ವಿಶೇಷಾರ್ಥ, ಆ

ಯೋಚನೆ, ಯೋಜನೆ ಇವು ಚನ್ನಮಲ್ಲ ಶಿವಯೋಗಿಗಳ ಮನಸ್ಸನ್ನು ವ್ಯಾಪಿಸಿದ್ದವು. ಮನಸ್ಸು ಅಡಗಲು ಅವಕಾಶವೇ ಇರಲಿಲ್ಲ. ಒಂದು ಗಳಿಗೆಯಷ್ಟು ಸಮಯ ಸರಿದಿರಬೇಕು.

ಶ್ರೀಗಳು ಮುಖದ ಮೇಲಿನ ಹೊದಿಕೆಯನ್ನು ಎತ್ತಿ ತೆಗೆದೊಗೆದರು. ಮತ್ತೆ ಕಂಡರು ಗುರುನಂಜರನ್ನೇ ! ಎದುರಿನ ಗೂಡಿನಲ್ಲಿಯ ಹಣತೆಯ ಮಂದ ಪ್ರಕಾಶದಲ್ಲಿ ಕೈಮುಗಿದು ಕಣ್ಣೀರು ಕರೆಯುತ್ತ ನಿಂತೇ ಇದ್ದ ವರಶಿಷ್ಯನನ್ನು ಕಂಡು ಗುರುಗಳು ಎದ್ದು ಕುಳಿತರು. ಅವರ ಅಂತಃಕರುಣ ತುಂಬಿ ಬಂದಿತು. ಕೈಚಾಚಿ ಅವನ ತೋಳು ಹಿಡಿದು, ಮುಂದೆಳೆದುಕೊಂಡರು. ಗುರುನಂಜರು ಮಂಚದ ಅಂಚಿನ ಕೆಳಗೆ ಕುಳಿತು ತಲೆಬಾಗಿದರು. ಗುರುಗಳು ತಮ್ಮ ಬಲಹಸ್ತವನ್ನು ಅವನ ತಲೆಯ ಮೇಲಿಟ್ಟು, ಎಡಹಸ್ತದಿಂದ ಅವನ ಬೆನ್ನು ಸವರಹತ್ತಿದರು. ಇದೇ ಅಲ್ಲವೇ ಗುರು ಕರುಣೆಯ ಉನ್ನತೋನ್ನತ ರೂಪ ! ಇದಕ್ಕೆ ವಿಧಿ ವಿಧಾನಗಳು ಬೇಕೇ ?

"ಗುರುನಂಜೇಶ್ವರ, ನಿನ್ನ ಕೋರಿಕೆ ನನಗೆ ಅರಿಕೆಯಾಗಿದೆ. ಅದಕ್ಕೆ ಅವಸರ ಅಷ್ಟಾಗಿ ಕಾಣದ್ದರಿಂದ, ಕಾಲ ನೂಕುತ್ತ ಬಂದೆವು. ಬಾಲ್ಯದಲ್ಲಿ ನಿನಗಿತ್ತ ಸಾಧನಾ ದೀಕ್ಷೆಯಿಂದಲೇ ಆರಂಭಿಸಿದ ಸಾಧನೆಯಿಂದ ನೀನು ಪರಮಾರ್ಥ ಸಂಸ್ಕಾರವನ್ನು ಸಂಪಾದಿಸಿಯೇ ಇರುವೆ. ನಿನ್ನ ಪುರಾಕೃತ ತಪಸ್ಸಿದ್ಧಿಯ ಮೇಲೆ ಈ ಉನ್ನತ ಸಾಧನೆ ಪರಮ ಸಿದ್ಧಿಯನ್ನು ಸನ್ನಿಹಿತಗೊಳಿಸಿದೆ. ಪರಮ ನಿರಂಜನತ್ವಕ್ಕೆ ನಿನ್ನ ತನುತ್ರಯಗಳು ಅಣಿಯಾಗಿವೆ. ನನ್ನ ಅಂತರಂಗದಲ್ಲಿ ನೀನು ನೆಲೆಸಿರುವೆ; ನನ್ನ ಕರುಣೆ ನಿನಗೆ ಮೀಸಲಾಗಿದೆ. ನೀನು ನನ್ನ ಹೃದಯದ ಬೆಳಕಾಗಿರುವೆ. ಇನ್ನು ಕೊಡುವ ದೀಕ್ಷಾ ಸಂಸ್ಕಾರದಿಂದ ಹೆಚ್ಚಿನದೇನನ್ನು ನಾವು ನಿನಗೆ ನೀಡಬಲ್ಲೆವು ? ನಿಶ್ಶೂನ್ಯ, ನಿರಾಲಂಬ, ನಿರವಯ, ನಿರಂಜನ ರೂಪಿ ಸಿದ್ಧಲಿಂಗ ಶಿವಯೋಗಿಗಳ ಕೀರ್ತಿಗೆ ನೀನು ಮುಡಿಪಾಗಿರುವೆ."

"ಗುರುವೆ, ಈ ನುಡಿಗಳಿಂದ ನನ್ನನ್ನು ಅನಾಥನನ್ನಾಗಿ ಮಾಡಬಾರದು. ನಾನು ಅಹಂಕಾರಿಯಾಗಲೊಲ್ಲೆನು." ಕಂಠ ಬಿಗಿದು, ಗದ್ಗದ ಸ್ವರದಿಂದ ಬಂದಿದ್ದವು ಗುರುನಂಜರ ಬಾಯಿಯಿಂದ ಆ ಶಬ್ದಗಳು.

"ಅಹಂಕಾರ, ಅದು ನಿನ್ನ ಹುಟ್ಟಿನಲ್ಲಿಯೇ ನಿನ್ನೊಡನೆ ಬಂದಿಲ್ಲ. ಇನ್ನೆಲ್ಲಿಯದು ? ಕಳವಳ ಬೇಡ. ನಿನ್ನ ಇಚ್ಛಿತವನ್ನು ನೆರವೇರಿಸುವ ಯೋಚನೆ ಇದೆ. ನಿನಗಲ್ಲದಿದ್ದರೂ ನಿನ್ನ ಬಗೆಗೆ ಜನರ ಮನಸ್ಸಿನಲ್ಲಿ ಒಂದು ಗೌರವಸ್ಥಾನ ಉಂಟಾಗಿ, ಸಾಂಪ್ರದಾಯಕರ ಭಾವನೆ ಉನ್ನತಗೊಳ್ಳಬೇಕೆಂದು, ನಿನಗೆ ಶ್ರೇಷ್ಠ ಸಂಸ್ಕಾರ ಕೊಡುವ ನಿರ್ಧಾರ ಮಾಡಿದ್ದೇನೆ. ಲೋಕಸೇವೆ ಲೋಕೋದ್ಧಾರ

ಕಾರ್ಯಗಳು ನಿನಗಾಗಿ ಕಾದಿವೆ. ಷಟ್‌ಸ್ಥಲ ಸಿದ್ಧಾಂತವನ್ನು ಪರಿಶೋಧಿಸಿ, ಪ್ರಚುರ ಪಡಿಸಿ. ಭಕ್ತೋದ್ಧಾರ ಮಾಡುವದು ಸದ್ಗುರು ತೋಂಟದಾರ್ಯರ ಅವತಾರದ ಮಣಿಹವಾಗಿತ್ತು. ಕಾಲಕಾಲಕ್ಕೆ ಮಾರ್ಪಡುತ್ತಲೇ ಬಂದ ಯೋಗದ ವಿಧಾನಗಳ ಪರಿಯನ್ನು ಪರಿಶೀಲಿಸಿ, ಶಿವಯೋಗದಲ್ಲಿ ಸಮನ್ವಯಗೊಳಿಸಿ, ಅದಕ್ಕೆ ಅಂತಿಮ ಸ್ವರೂಪವನ್ನು ಅವರೆ ಕೊಟ್ಟಿದ್ದಾರೆ. ಅದು ನಾಡಿನ ಸಾಧಕರ ಅನುಭವಕ್ಕೆ ಬರಲೆಂಬುದೂ ಅವರ ಹಾರೈಕೆ ! ಈ ಎರಡು ಕಾರ್ಯಗಳನ್ನು ದೇಶದ ಮೂಲೆ ಮೂಲೆಗಳಲ್ಲಿಯೂ ನಡೆಸುವದಕ್ಕೆ ನೂರಾರುಗಟ್ಟಲೆ ನೆಚ್ಚಿನ ಶಿಷ್ಯರನ್ನು ಸಂಪಾದಿಸಿದ್ದಾರೆ. ಅವರು ಬಯಲಾದ ಮೇಲೆಯೂ, ವೀರವಿರಾಗಿಗಳಾದ ಶಿಷ್ಯರು ಅದನ್ನು ಹುರುಪಿನಿಂದ ಮುಂದುವರಿಸುತ್ತಿದ್ದಾರೆ. ಅದರಲ್ಲಿ ನೀನು ಸಹಭಾಗಿ-ಯಾಗಬೇಕು. ಈ ಧರ್ಮಕಾರ್ಯ ನನ್ನಿಂದ ಈ ಪುರದ ಮಟ್ಟಿಗಾಯಿತು. ನನ್ನ ಶರೀರವೂ ಹಣ್ಣಾಗಿದೆ. ಸಿದ್ಧಲಿಂಗ ಶಿವಯೋಗಿಗಳ ಧ್ಯೇಯದ ವಿಶಾಲ ಕ್ಷೇತ್ರವನ್ನು ಸಮರ್ಥನಾದ ನೀನು ಪ್ರವೇಶಿಸಬೇಕು. ಇದು ನನ್ನ ಪ್ರಬಲವಾದ ಇಚ್ಛೆಯಾಗಿದೆ, ಶಿವಸಂಕಲ್ಪವೂ ಆಗಿದ್ದೀತು."

"ತೋಂಟದ ಮಹಾ ಶಿವಯೋಗಿಗಳೇ ಈ ಕಾರ್ಯವನ್ನು ಮಾಡಿಸಬೇಕು. ಅವರೇ ಶಕ್ತಿಯನ್ನು ದಯಪಾಲಿಸಬೇಕು. ತಮ್ಮ ಆಶೀರ್ವಾದವೂ ಬೇಕು."

"ಆಗಲಿ, ಈ ವಿಚಾರವೇ ನನಗೆ ನಿದ್ರೆ ಬಾರದಂತೆ ಮಾಡಿದೆ. ಇನ್ನು ಕಳವಳಗೊಳ್ಳಬೇಡ. ಹೋಗಿನ್ನು ವಿಶ್ರಾಂತಿಗೊಳ್ಳು."

ಗುರುಗಳು ಮಗ್ಗಲು ಹಚ್ಚಿ ಮೇಲುದವನ್ನು ಎಳೆದುಕೊಂಡರು. ಗುರು ನಂಜೇಶ್ವರರು ಅವರ ಪಾದದ ಮೇಲೆ ತಲೆಯಿಟ್ಟು, ವಂದಿಸಿ ಎದ್ದರು. ಅವರ ಕಣ್ಣೀರುಗಳು ಗುರುಪಾದದ ಅಂಗುಷ್ಟಕ್ಕೆ ಅಭಿಷೇಕ ಮಾಡಿದ್ದವು.

ಮರುದಿನವೇ ಸ್ವಾಮಿಗಳ ಕರೆಯಂತೆ, ಪುರದ ಪ್ರಮುಖ ಭಕ್ತರು ಬಂದು, ಮಠದಲ್ಲಿ ಸಮಾವೇಶಗೊಂಡರು. ಅದರಲ್ಲಿ ಸದಾನಂದ ಸೆಟ್ಟಿ, ಸುಜ್ಞಾನಮ್ಮನವರೂ ಆಗಮಿಸಿದ್ದರು. ಚನ್ನಮಲ್ಲ ಶಿವಯೋಗಿಗಳು ಗುರುನಂಜರ ಆಧ್ಯಾತ್ಮಿಕ ಜೀವನದ ಉನ್ನತಿಯನ್ನು ಬಣ್ಣಿಸಿ, ಅವರಿಗೆ ಮಹೇಶ್ವರ ದೀಕ್ಷೆಯನ್ನಲ್ಲದೆ, ನಿರಾಭಾರಿ ಜಂಗಮ ದೀಕ್ಷೆಯನ್ನು ಅನುಗ್ರಹಿಸುವ ಅವಶ್ಯಕತೆಯನ್ನು ಮನಗಾಣಿಸಿದರು. ಭಕ್ತ ಸಮೂಹವು ಸಂತೋಷದಿಂದ ಸಮ್ಮತಿಸಿತು. ಅದನ್ನು ಸಮಾರಂಭವಾಗಿ ನೆರವೇರಿಸಲು ನಿರ್ಧರಿಸಿತು. ಗಣತೃಪ್ತಿ–ಉತ್ಸವಗಳ ಯೋಜನೆಯಾಯಿತು. ದಿನ ನಿಶ್ಚಿತವಾಯಿತು. ದೂರ ದೂರದ ಗುರುಚರ ಮೂರ್ತಿಗಳನ್ನು ಬರಮಾಡಿ ಕೊಳ್ಳಲಾಯಿತು. ಅಂದು ಕಾರ್ಯಕಲಾಪಗಳು ಸಂಭ್ರಮದಿಂದ ಜರುಗಿದವು.

ಗುರುನಂಜೇಶ್ವರರು ಸ್ವಾಮಿಗಳಾದರು; ಶಿವಯೋಗಿಗಳೆಂದು ಗಣ್ಯರಾದರು. ಈ ಸಮಾರಂಭದಲ್ಲಿ ಸದಾನಂದ ಸೆಟ್ಟರು ತಮ್ಮ ಸಂಪತ್ತಿನ ಅಧಿಕ ಭಾಗವನ್ನು ಮಠದ ದಾಸೋಹಕ್ಕಾಗಿ ಚೆನ್ನಮಲ್ಲ ಶ್ರೀಗಳಿಗೆ ಕಾಣಿಕೆಯಾಗಿ ಅರ್ಪಿಸಿದರು.

ಐದನೆಯ ದಿವಸ ಸದಾನಂದ-ಸುಜ್ಞಾನಮ್ಮ ದಂಪತಿಗಳು ಗುರುನಂಜೇಶ್ವರ ಸ್ವಾಮಿಗಳನ್ನು ತಮ್ಮ ಮನೆಗೆ ಬಿಜಯಂಗೈಸಿಕೊಂಡು, ಅವರ ಪಾದಪೂಜೆ ಮಾಡಿ, ತೀರ್ಥಪ್ರಸಾದ ಸ್ವೀಕರಿಸಿದರು.

ಇಂದಿಗೆ ಸುಜ್ಞಾನಮ್ಮನ ಮನಸ್ಸಿನಲ್ಲಿ ಬಹಳಷ್ಟು ಬದಲಾವಣೆಯಾಯಿತು. ಮೋಹ, ಕಾತರ, ವಿಕಲ್ಪಗಳ ಕಳೆ ಕಿತ್ತು ಹೋಗಿದ್ದಿತು. ಚಿಂತೆ ಚಿಂತನೆಗಳು ಶಿವನ ಸೇರಿದ್ದವು. ಕಲ್ಪನೆಗಳು ಕಲ್ಪನಾತೀತವಾಗಿದ್ದವು. ಆ ತಾಯಿಯ ಅಂತರಂಗವು ಹುಲುಸಾದ ಆಧ್ಯಾತ್ಮದ ಬೆಳೆ ಬೆಳೆಯಲು ಹಸನಾದ ಭೂಮಿಯಾಗಿದ್ದಿತು. ಸದಾನಂದ ಸೆಟ್ಟರೂ ಹಾಗೆಯೇ! ಅವರ ಬಾಳು ಈಗ ಪೂರ್ಣವಾಗಿ ಪಾರಮಾರ್ಥಿಕವಾಯಿತು. ಬಾಲರವಿಯನ್ನು ಹೆತ್ತು ಭುವನವನ್ನು ಬೆಳಗಲು ಇತ್ತು ಕೃತಾರ್ಥಳಾದ ಪೂರ್ವದಿಗಂಗನೆಯ ಹೊಂಬೆಳಗಿನಂತೆ, ಅವರ ಬಾಳು ಧನ್ಯತೆಯಿಂದ ಬೆಳಗಿತು. ಅವರನ್ನು ಆಶ್ರಯಿಸಿದ ಅವರ ಕರ್ಮಚಾರಿಗಳು ಅವರ ಮಕ್ಕಳಾದರು; ಬಡವರ ಮಕ್ಕಳು ಅವರ ಮಕ್ಕಳಾದರು. ಆ ಮಕ್ಕಳ ಪೋಷಣೆ, ನಿರಾಶ್ರಿತರ ಸೇವೆ, ದಾಸೋಹ ಮುಂತಾದ ಸತ್ಕಾರ್ಯಗಳಿಗೆ ಅವರ ಸಂಪತ್ತಿನ ವಿನಿಯೋಗವಾಯಿತು. ಆ ಶರಣ ದಂಪತಿಗಳು ಮರಣದ ಮಹಾ ನವಮಿಗೆ ತಲುಪುತ್ತಿರುವಾಗ, ಅವರನ್ನು ಅಂಗೈಯಲ್ಲಿ ಹಿಡಿದು, ಆರೈಕೆ ಮಾಡಲು ಅದೆಷ್ಟೋ ಮಕ್ಕಳು ಸಿದ್ಧವಾಗಿದ್ದರು.

ಇತ್ತ ಗುರುನಂಜೇಶ್ವರರಿಗೆ ಮಠದ ಆವರಣದಿಂದ ಹೊರ ಬೀಳುವ ಬಯಕೆ ಬಲವಾಯಿತು. ಗುರುಸನ್ನಿಧಿಯೆಂಬುದನ್ನು ಬಿಟ್ಟರೆ, ಉಳಿದೆಲ್ಲವೂ ಅವರ ಮನಸ್ಸಿಗೆ ಬೇಸರವನ್ನು ತಂದಿದ್ದವು. ಮೂಢ ಸಂಪ್ರದಾಯದ ಸಮೂಹದಲ್ಲಿ-ಅಜ್ಞಾನಿಗಳ ಮಧ್ಯದಲ್ಲಿ ನಿನ್ನ ಕರ್ತವ್ಯವಿದೆ ಎಂಬ ಗುರುಗಳ ಆದೇಶವು ಹೃದಯದಲ್ಲಿ ನಿನದಿಸುತ್ತಿತ್ತು. ಹುಟ್ಟಿದ ಊರು, ಆ ಜನರ ಸಂಪರ್ಕ ಇವುಗಳ ಮೋಹತಂತುವನ್ನು ಹರಿದು ದೂರ ಸಾರುವದೊಳ್ಳೆಯದೆಂಬ ಭಾವನೆಯೂ ಪ್ರಚೋದಿಸುತ್ತಿತ್ತು. ಹೊರ ಜಗತ್ತಿಗೆ ಬರಲು ಮನಸ್ಸು ತವಕಿಸುತ್ತಿತ್ತು. ಎಲ್ಲಿ ಹೇಗೆ ಕಾರ್ಯಾರಂಭ ಎಂಬ ಆಲೋಚನೆ ಒಂದು ಕಡೆ ತಡೆಯಾಗಿತ್ತು.

❋❋❋❋

೪. ಕತ್ತಲೆ ಕಳೆಯಲು ಮೂಡಿದ ಬೆಳಗು

ಮುಂದೆ ಬಹಳ ದಿವಸ ಕಳೆಯಲಿಲ್ಲ. ಇಬ್ಬರು ತೇಜಸ್ವಿಯಾದ ಶಿವಯೋಗಿಗಳು ಮುಂಜಾವಿನಲ್ಲಿ ಮಂಗಳಪುರಕ್ಕೆ ಬಂದರು. ಅವರಲ್ಲಿ ಒಬ್ಬರು ಮಧ್ಯಮ ವಯಸ್ಸಿನವರು, ಅವರ ಹೆಸರು 'ಸ್ವತಂತ್ರ ಸಿದ್ಧಲಿಂಗೇಶ್ವರ' ಇನ್ನೊಬ್ಬರು ನವ ತರುಣರು, ಅವರ ಹೆಸರು ಚೆನ್ನಮಲ್ಲೇಶ್ವರ! ಇವರು ತಮ್ಮ ಹಿರಿಯ ಗುರು ಬಂಧುಗಳಾದ ಇಲ್ಲಿಯ ಚೆನ್ನಮಲ್ಲ ಸ್ವಾಮಿಗಳನ್ನು ದರ್ಶಿಸಲು ಬಂದಿದ್ದರು. ನೇರವಾಗಿ ಅವರ ಮಠಕ್ಕೆ ತೆರಳಿದರು. ಮಠದ ಬಾಗಿಲಲ್ಲಿಯೇ ಅವರನ್ನು ಕಂಡ ಚೆನ್ನಮಲ್ಲ ಸ್ವಾಮಿಗಳು ಎದ್ದು ಹೋಗಿ ಸ್ವಾಗತಿಸಿದರು. ಪರಸ್ಪರರು ವಂದನೆಗೈದರು, ಚೆನ್ನಮಲ್ಲ ಸ್ವಾಮಿಗಳು ಚೆನ್ನಮಲ್ಲೇಶ್ವರರನ್ನು ಈ ಮೊದಲು ನೋಡಿರಲಿಲ್ಲ. ಅವರನ್ನೂ ಪ್ರೀತಿಯಿಂದ ಕಂಡರು. ಎಡಬಲಕ್ಕೆ ಇಬ್ಬರ ಕೈಗಳನ್ನೂ ಹಿಡಿದು ಒಳಗೆ ಕರಕೊಂಡು ಬಂದು ಆಸನಗಳಲ್ಲಿ ಕುಳ್ಳಿರಿಸಿದರು. ಕ್ರಿಯಾಚಾರಗಳ ಕುಶಲ ವಾರ್ತೆಗಳಾದವು. ಈ ಸಮಾಚಾರ ಕೇಳಿ ಪತ್ರೀ ವನದಲ್ಲಿದ್ದ ಗುರುನಂಜೇಶ್ವರರು ಬಂದು ಮೂವರು ಪೂಜ್ಯರಿಗೂ ವಂದನೆಗೈದರು. ಆಗ ಚೆನ್ನಮಲ್ಲ ಸ್ವಾಮಿಗಳು ಗುರುನಂಜೇಶ್ವರರ ಪರಿಚಯ ಮಾಡಿಕೊಡುತ್ತ: "ಬಾಲ್ಯದಲ್ಲಿಯೇ ಇವರಲ್ಲಿ ಲಿಂಗಗುಣಗಳು ಅಭಿವ್ಯಕ್ತವಾದವು. ಸರ್ವಜೀವ ದಯಾಪರತ್ವ ಇವರ ಸಹಜ ಸ್ವಭಾವ! ಲಿಂಗ ನಿಷ್ಠೆ ಯೋಗಾಸಕ್ತಿಗಳಲ್ಲಿ ಇವರ ತನು-ಮನ-ಭಾವಗಳು ಹುಟ್ಟಿನಿಂದಲೇ ಎರಕಗೊಂಡಿದ್ದವು. ಮೊನ್ನೆ ಮೊನ್ನೆ ಜರುಗಿದ ಇವರ ನಿರಂಜನ-ನಿರಾಭಾರಿ ಜಂಗಮಾಶ್ರಮ ಸ್ವೀಕಾರವು ಬರೀ ವಿಧಾನವು! ಪೂರ್ವಜನ್ಮ ತಪಸ್ಸಿನಿಂದ ಇವರಿಗೆ ಆ ಪದ ಸಿದ್ಧವಿತ್ತು. ಇವರ ಭಕ್ತಿ-ಜ್ಞಾನ-ವೈರಾಗ್ಯಗಳ ಬೆಳೆ ಹುಲುಸಾಗಿದೆ."

ಗುರುನಂಜೇಶ್ವರರು ಕೇಳಲಾಗದೆ ನಡುವೆಯೇ ಕೈಮುಗಿದು "ನಾನು ಕಿಂಕರ! ನಾನು ಕಸ! ಕಸದಲ್ಲಿ ರಸವನ್ನು ಕಾಣುವ, ಜೀವಾತ್ಮರಲ್ಲಿ ಜ್ಯೋತಿಯನ್ನು ಕಾಣುವ ದಿವ್ಯದೃಷ್ಟಿ ಗುರುಗಳದು. ಆ ಒಳಗಣ್ಣ ಬೆಳಕಿನಲ್ಲಿ ಬೆಳ್ಳಗೆ ಕಾಣುವದೆಲ್ಲ ಒಳ್ಳೆಯದೇ ಇರಲಾರದು ಗುರುದೇವಾ! ನೀವು ದಯಾನಿಧಿ, ಹೊಗಳಿ ಹಸುಳೆ-

ಯನ್ನು ನೋಯಿಸಬಾರದು ತಂದೆ!" ಎಂದು ಗುರುಪಾದದಲ್ಲಿ ತಲೆಯಿಟ್ಟು ಬೇಡಿದರು. ಕಣ್ಣು ಹನಿಗೂಡಿದ್ದವು.

ಚೆನ್ನಮಲ್ಲಸ್ವಾಮಿಗಳು ಕೈಹಿಡಿದು ಎಬ್ಬಿಸಿ ನೋಡಿ ಮತ್ತೆ ಸಿದ್ಧಲಿಂಗೇಶ್ವರನನ್ನು ಕುರಿತು, "ದೇವ, ನನ್ನ ಮಾತು ವಾಸ್ತವಿಕವಾಗಿದೆ. ನಿಜವಾಗಿ ಇವರು ಜ್ಯೋತಿ ಸ್ವರೂಪರೇ ! ನಮ್ಮ ಗುರು ಕಾರ್ಯಕ್ಕೆ ಇವರೂ ನಿಮ್ಮ ನೆರವಿಗೆ ಬರತಕ್ಕವರು...."

ಇದನ್ನು ಕೇಳಕೇಳುತ್ತ ಶಿವತೇಜಸ್ಸಿನ ಗುರುನಂಜೇಶ್ವರರ ಮುಖಮಂಡಲವನ್ನು ನೋಡುತ್ತಿದ್ದ ಸ್ವತಂತ್ರ ಸಿದ್ಧಲಿಂಗೇಶ್ವರರು ಹೃದಯ ಹಿಗ್ಗಿ ರೋಮಾಂಚಿತರಾಗಿ ಎದ್ದು ಬಂದು ಅವರನ್ನು ಬರಸೆಳೆದು ಅಪ್ಪಿಕೊಂಡರು; ತಮ್ಮ ಪಕ್ಕದಲ್ಲಿ ಕುಳ್ಳಿರಿಸಿ ಕೊಂಡರು. ಆಗ ಚೆನ್ನಮಲ್ಲೇಶ್ವರರು ಕುಳಿತಲ್ಲಿಯೇ ಎದ್ದು ನಿಂತು ಗುರುನಂಜೇಶ್ವರರಿಗೆ ತಲೆಬಾಗಿ ಕೈ ಮುಗಿದರು. ಈ ಶಿವಯೋಗಿಗಳ ಸಮ್ಮಿಲನ ಆಗ ಮಠದಲ್ಲಿ ಅಪೂರ್ವವಾದ ಶಿವಪ್ರಕಾಶವನ್ನು ಬೀರಿದ್ದಿತು. ತತ್ಕಾಲದಲ್ಲಿ ಆಗಮಿಸಿದ್ದ ಭಕ್ತ ಸಮೂಹವು ಹರ್ಷಸಾಗರದಲ್ಲಿ ಮುಳುಗಿತು.

ಅಂದಿನಿಂದ ಐದು ದಿವಸ ಸ್ವತಂತ್ರ ಸಿದ್ಧಲಿಂಗೇಶ್ವರರಿಂದ ಜನರಿಗೆ ಕಲ್ಯಾಣ ಶರಣರ ಮತ್ತು ತೋಂಟದಾರ್ಯರ ವಚನಗಳ ಪ್ರವಚನದಲ್ಲಿ ಷಟ್‌ಸ್ಥಲ ಶಾಸ್ತ್ರಗಳ ಬೋಧೆಯಾಯಿತು. ಆರನೆಯ ದಿವಸ ಆ ಶಿವಯೋಗಿಗಳು ತಮ್ಮ ನಿಶ್ಚಲ ನಿಯಮದಂತೆ ಮಂಗಳಪುರದಿಂದ ಹೊರಡಲು ಅನುವಾದರು.

ಇವರೊಡನೆ ತಮ್ಮ ಗುರುಗಳ ಸೂಚ್ಯ ಆದೇಶದಂತೆ ಮಂಗಳಪುರವನ್ನು ಬಿಟ್ಟು ಹೊರಡಬೇಕೆಂಬ ಆಕಾಂಕ್ಷೆ. ಗುರುನಂಜೇಶ್ವರರ ಮನದಲ್ಲಿ ಮೂರ್ತಿ ಮಂತವಾಗಿ ನೆಲಸಿತ್ತು. ಗುರುಗಳಿಂದ ಸ್ಪಷ್ಟವಾದ ಒಪ್ಪಿಗೆಯನ್ನು ಪಡೆದಾಯಿತು. ಸಿದ್ಧಲಿಂಗೇಶ್ವರರು ತಾವು ತ್ರಿಮೂರ್ತಿಗಳಾಗಿ ಸಂಚರಿಸಲು ಸಂತೋಷದಿಂದ ಒಪ್ಪಿಕೊಂಡರು.

ಮೂವರು ವೈರಾಗ್ಯ ಮೂರ್ತಿಗಳು ಏಕಾಂತದಲ್ಲಿ ಸಮ್ಮಿಲಿತರಾದರು. 'ತಾವು ಆಶೆ ರೋಷಗಳನ್ನು ಬಿಟ್ಟು, ಲಿಂಗದಲ್ಲಿಯೇ ಮನನಟ್ಟು, ನಿರ್ಮಳ ಭಾವ ತೊಟ್ಟು, ಮಾಯಾ ಪಾಶವನ್ನು ಹರಿಯಬೇಕು. ತೋಂಟದಾರ್ಯರ ಧರ್ಮೋಪ-ದೇಶವನ್ನು ದೇಶದ ಎಡೆ ಎಡೆಯಲ್ಲಿ ಹರಡಿ, ಭಕ್ತರ ಉದ್ಧಾರ ಗೈಯುವದಕ್ಕೆ ತಮ್ಮ ಜೀವನವನ್ನು ಮುಡುಪಾಗಿಡಬೇಕು' ಎಂದು ಆತ್ಮಸಾಕ್ಷಿಯಾಗಿ ಪರಸ್ಪರರಲ್ಲಿ ಬದ್ಧರಾದರು.

ಗುರುನಂಜರು ಕಾವೀಕಫನಿ, ಪೂಜಾ ಪೆಟ್ಟಿಗೆ, ವಚನ ಗ್ರಂಥಗಳ ಗಂಟು ಕಟ್ಟಿದರು. ದಂಡ, ಕಮಂಡಲ, ಲಾಕುಳಗಳನ್ನು ಅದರ ಹತ್ತಿರ ಇಟ್ಟರು; ಪ್ರಯಾಣಕ್ಕೆ ಸಿದ್ಧರಾದರು.

ಆಗ ಕೊಂಚ ಮನೆಯ ನೆನಪಾಯಿತು. ಜನ್ಮ ಕೊಟ್ಟ ತಂದೆ ತಾಯಿಗಳು ಸ್ಮರಣೆಗೆ ಬಂದರು. ಒಂದು ಸಲ ತಾಯಿಯನ್ನು ಕಂಡು ಮಾತನಾಡಿ ಬರಬೇಕೆಂಬ ಬಯಕೆ ತಲೆದೋರಿತು. ಇದು ನೂನವಾದುದೇನೂ ಅಲ್ಲ. ಲೋಕೋದ್ಧಾರವು ಕರ್ತವ್ಯವಾದ ಶಿವಯೋಗಿಗೆ ಲೋಕಾನುಭವದ ಭಾವದಲ್ಲಿ ಈ ಬಯಕೆ ಸಹಜ-ವಾದುದೆ! ಬಾಲ್ಯದಲ್ಲಿಯೇ ಸನ್ಯಾಸಿಯಾಗಿ ದೇಶಸಂಚಾರಿಯಾಗಿದ್ದ ಶ್ರೀ ಶಂಕರ ಭಗವತ್ಪಾದರು ತಮ್ಮ ತಾಯಿಯ ಅಂತ್ಯಕಾಲವನ್ನು ತಿಳಿದಾಗ ಮನೆಗೆ ಓಡಿ ಬಂದಿದ್ದರು, ಇರಲಿ.

ಗುರುನಂಜೇಶ್ವರರು ಸೆಟ್ಟರ ಮನೆಗೆ ಬಂದರು. ಅವರನ್ನು ನೋಡಿದ ಸುಜ್ಞಾನಮ್ಮ ಪಡಸಾಲೆಯಲ್ಲಿ ಗದ್ದುಗೆ ಹಾಕಿ ಕುಳ್ಳಿರಿಸಿ ನಮಿಸಿದಳು. ಅಂಗಳದಲ್ಲಿದ್ದ ಸದಾನಂದರು ಕೈ ಮುಗಿದು ಕಟ್ಟೆಯ ಅಂಚಿನಲ್ಲಿ ಕುಳಿತರು.

ಗುರುನಂಜೇಶ್ವರರು ತಾವು ಈ ಪಟ್ಟಣದಿಂದ ನಿರ್ಗಮಿಸುವದನ್ನು ತಿಳಿಸಿ, ಮಾತು ಮುಂದುವರಿಸಿದರು : "ಸುಜ್ಞಾನಮ್ಮ ತಾಯೀ, ನೀವು ನನ್ನ ಶರೀರಕ್ಕೆ ಜನ್ಮ ಕೊಟ್ಟ ತಂದೆ ತಾಯಿಗಳು. ಆದರೆ ನಾನೀಗ ನಿಮ್ಮ ಮಗನಲ್ಲ; ಗುರುವಿನ ಮಗನು. ಲೌಕಿಕರ ಮಕ್ಕಳಂತೆ ಬಾಲ್ಯದಲ್ಲಿಯೂ ನಾನು ನಿಮಗೆ ಮಗನಾಗಿರಲಿಲ್ಲ. ನನ್ನ ನಡೆವಳಿಯ ದಿಕ್ಕುದೆಸೆಗಳೇ ಬೇರೆಯಾಗಿದ್ದವು. ಅದನ್ನು ನೋಡುತ್ತಿದ್ದ ನೀನು ಬರಬರುತ್ತ, 'ಇದ್ದ ಮಗನೊಬ್ಬ ಹೀಗಾದರೆ ಮುಪ್ಪಿನಲ್ಲಿ ನಮ್ಮನ್ನು ಸಲಹುವವರು ಯಾರು' ಎಂದು ಕಳವಳದಿಂದ ಕೊರಗುವೆಯೋ ಎಂಬ ಸಂದೇಹ ನನಗಾಗಿತ್ತು. ಆದರೆ ನೀನು ಗುರುವಚನದಲ್ಲಿ ನಂಬಿಗೆ ಇಟ್ಟು, ಬೇಗನೆ ಆ ಮಾನಸಿಕ ರೋಗದಿಂದ ಮುಕ್ತಳಾದೆ. ಎದೆ ಗಟ್ಟಿಗೊಳಿಸಿದೆ, ಶಿವಭಾವ ನಿನ್ನಲ್ಲಿ ವ್ಯಾಪಿಸಿತು. ಹಾಗೆಯೇ ಸೆಟ್ಟರು! ನೀವಿಬ್ಬರೂ ಪುತ್ರ ಮೋಹ ತ್ಯಾಗ ಮಾಡಿದಿರಿ. ಅದರಲ್ಲಿ ನನ್ನನ್ನು ಬಂಧಿಸದಿರುವದರಿಂದಲೇ ನಾನು ಬಯಲು ಸಾರಿ ಬೆಳಗ ಕಾಣುವ ಸಾಹಸಕ್ಕೆ ಇಳಿಯಲು ಅನುವಾಯಿತು. ನೀವು ಈ ತ್ಯಾಗ ಭಾವವನ್ನು ನಿಶ್ಚಲಗೊಳಿಸಿಕೊಂಡು, ಮನೆತನದ ಆಗು-ಹೋಗುಗಳಲ್ಲಿಯೂ ಅನಾಸಕ್ತಿ ಅಲಿಪ್ತತೆಯ ವಿರಾಗದಿಂದ-ದಿವ್ಯಾನುಭೂತಿಯಿಂದ ಶಾಂತಿಯನ್ನು ಹೊಂದುವಿರಿ."

ದಂಪತಿಗಳು ನಿರ್ವಿಕಾರ ಭಾವದಿಂದ ಗಂಭೀರವಾಗಿಯೇ ಇದ್ದು ಕೇಳುತ್ತಿದ್ದರು.

"ನಾನು ಗುರುಗಳ ಆದೇಶದಂತೆ ಲೋಗರ ಪಾರಮಾರ್ಥಿಕ ಸೇವೆಗೆ ತೆರಳುವೆ........"

ಕೈ ಜೋಡಿಸಿ ಮೌನವಾಗಿ ನಿಂತ ತಾಯಿ, ಒಳಗೆ ಹೋಗಿ ತತ್‌ಕ್ಷಣ ತಂಬಿಗೆ ಹಳಿಗೆಗಳನ್ನು ತಂದು ಗುರುನಂಜೇಶ್ವರರ ಪಾದ ತೊಳೆದು ಭಸ್ಮ ಧರಿಸಿ ನಮಿಸಿದಳು. ಸದಾನಂದರೂ ಎದ್ದು ಹಣ್ಣು ತಂದು ಮುಂದಿಟ್ಟು ವಂದಿಸಿದರು. ಗುರುನಂಜೇಶ್ವರರು ಹಣ್ಣುಗಳನ್ನು ಅವರ ಉಡಿಗಳಲ್ಲಿ ಹಾಕಿ ಚಟ್ಟನೆ ಎದ್ದು ಹೊರಬಿದ್ದು ನಡೆದರು. ಜ್ಞಾನಾನಂದ ದಂಪತಿಗಳು ಬಾಗಿಲ ಹೊರಗೆ ಹತ್ತು ಹೆಜ್ಜೆ ಅವರನ್ನು ಹಿಂಬಾಲಿಸಿ ನಡೆದರು. ಗುರುನಂಜೇಶ್ವರ ಸ್ವಾಮಿಗಳು ಹೊರಳಿ ಕೂಡ ನೋಡದೆ ಅವಸರದಿಂದ ಹೋಗಿ ಬಿಟ್ಟರು. ಇವರು ಮನೆ ಬಾಗಿಲಿಗೆ ಮರಳುತ್ತಿದ್ದಂತೆ ಓಣಿಯಲ್ಲಿ ನಿಂತು ನೋಡುತ್ತಿದ್ದ ಜನರು ಮೆಲ್ಲನೆ ಇವರ ಮನೆಯತ್ತ ಹೆಜ್ಜೆ ಹಾಕಿದರು. ಆದರೆ ಈ ದಂಪತಿಗಳಿಗೆ ಯಾರೂ ಸಮಾಧಾನ ಹೇಳಿ ಸಂತೈಸುವ ಅಗತ್ಯವಿರಲಿಲ್ಲ.

ಸ್ವತಂತ್ರ ಸಿದ್ಧಲಿಂಗೇಶ, ವೈರಾಗ್ಯದ ಚೆನ್ನಮಲ್ಲೇಶ, ಸಿದ್ಧಯೋಗಿ ಗುರುನಂಜೇಶ ಈ ತ್ರಿಮೂರ್ತಿಗಳು ಕೊನೆಯದಾಗಿ ಶ್ರೀ ಚೆನ್ನಮಲ್ಲ ಸ್ವಾಮಿಗಳಿಂದ ಬೀಳ್ಕೊಂಡು, ಬಂದ ಭಕ್ತರನ್ನು ಆಶೀರ್ವದಿಸಿ, ಮಂಗಳಪುರವನ್ನು ಬಿಟ್ಟು ಹೊರಕ್ಕೆ ಬಂದರು. ಮನಕ್ಕೆ ಬಂದ ದಾರಿಯಲ್ಲಿ ನಡೆದು ಮರೆಯಾದರು.

ಸ್ವತಂತ್ರ ಸಿದ್ಧಲಿಂಗೇಶ್ವರರು ಉಳಿದಿಬ್ಬರಿಗಿಂತ ಹಿರಿಯರು, ಅನುಭಾವಿಗಳು, ಲೋಕಾನುಭವ ಅವರಿಗೆ ಹೆಚ್ಚು! ಅವರ ಅಭಿಮತದಂತೆ ಪ್ರವಾಸ ಮತ್ತು ಕಾರ್ಯಕ್ರಮಗಳು ಏರ್ಪಡುತ್ತಿದ್ದವು. ಜನರ ನೆರವಿ ಇರುವಲ್ಲಿ ಹೋಗುತ್ತಿದ್ದರು. ತಲೆಯಲ್ಲಿ ಟೊಪ್ಪಿಗೆ, ಕೊರಳಲ್ಲಿ ರುದ್ರಾಕ್ಷಿಮಾಲೆ, ಉರದಲ್ಲಿ ಲಿಂಗದಸೆಜ್ಜೆ, ಮೈಯಲ್ಲಿ ಮಹಾಲಿಂಗ ಕಫನಿ, ಕೈಯಲ್ಲಿ ಲಾಕುಳ-ಬೆತ್ತಗಳು, ಬೆರಳಲ್ಲಿ ಜಪಮಾಲೆ, ಬಗಲಲ್ಲಿ ಆಧ್ಯರ ವಚನಗಳ ಗಂಟು, ಹೆಗಲ ಮೇಲೆ ಬಿಳಿಯ ಕಂಬಳಿ, ಭಸಿತದ ಬೆಳಗಿನಿಂದ ಕೂಡಿದ ಮುಖದಿಂದ ಬಂದು ನಿಲ್ಲುವ ಶಿವಸ್ವರೂಪದ ಶಿವಯೋಗಿತ್ರಯರನ್ನು ನೋಡಿ, ಕೂಡಿದ ಜನರು ಸಹಜವಾಗಿಯೇ ಉಂಟಾಗುವ ಭಕ್ತಿಯಿಂದ ವಂದಿಸಿ, ಆದರಿಸುತ್ತಿದ್ದರು. ಅಲ್ಲಿಯ ಜನರ ಕುಂದು ಕೊರತೆಗಳೇನು? ಅವರ ಮನದ ಅಳಲಿನ ಪರಿಯೇನು? ಎಂಬುದನ್ನು ತತ್ಕಾಲದಲ್ಲಿಯೇ ಅರಿತು, ಅವರೊಡನೆ ಹಿತವಚನಗಳನ್ನು ಆಡುತ್ತಿದ್ದರು. ಕಷ್ಟ-ಕೋಟಲೆಗಳಿಂದ ಬೆಂದ ಅಂತಃಕರಣಗಳಿಗೆ ಅಮೃತಸೇಚನವಾಗುವ ಶರಣರ ಸೂಕ್ತಿಗಳನ್ನು ಹೇಳಿ ಉತ್ಸಾಹಗೊಳಿಸುತ್ತಿದ್ದರು. ಹೀಗೆ ಜನರ ಹೃದಯಗಳನ್ನು ಆಕರ್ಷಿಸಿ, ಪ್ರವಚನಕ್ಕೆ ತೊಡಗುತ್ತಿದ್ದರು. ಲಿಂಗ ತತ್ವೋಪದೇಶ ಮಾಡುತ್ತಿದ್ದರು. ಲಿಂಗಾರ್ಚನೆಗೆ ಬಿನ್ನಹ ಮಾಡಿದರೆ, ಅವರ

ಮನೆಗೆ ತೆರಳುತ್ತಿದ್ದರು. ಇಲ್ಲದಿದ್ದರೆ ಜಲಾಶಯದಲ್ಲಿ ಸ್ನಾನ, ವನದೆಡೆಯಲ್ಲಿ ಲಿಂಗಾರ್ಚನೆ. ಭಿಕ್ಷಾನ್ನದಿಂದ ಪ್ರಸಾದ! ಪ್ರಭಾವಯುತ ಮಠ ಇದ್ದರೆ, ಅಲ್ಲಿ ತಂಗುತ್ತಿದ್ದರು. ಇವರು ನಿಂತ ನೆಲ ಪಾವನವಾಗುತ್ತಿತ್ತು. ಕುಳಿತ ನೆಲ ವಿರಾಜಿಸುತ್ತಿತ್ತು. ನುಡಿದ ನುಡಿ ಜನರ ಮನದ ಮಲಿನತೆಯನ್ನು ತೊಳೆಯುತ್ತಿತ್ತು. ಹೀಗೆ ಗ್ರಾಮದಿಂದ ಗ್ರಾಮಕ್ಕೆ ಸಾಗಿತ್ತು ಅವರ ಸಂಚಾರ. ನಗರವಾಗಿದ್ದಲ್ಲಿ ನಾಲ್ಕೈದು ದಿವಸವೂ ನಿಂತು ಉಪದೇಶ ಮಾಡುತ್ತಿದ್ದರು. ಅಪೂರ್ವ ತೇಜಸ್ಸು, ಅನುಭಾವದ ಉಕ್ತಿ, ವಾಕ್ಪಟುತೆ; ವಿಮಲವಚನ ವಿಚಾರ ಉಳ್ಳ ಈ ಶಿವಯೋಗಿಗಳು ಹೋದ ಹೋದಲ್ಲಿ ಸಾಮಾಜಿಕರಿಂದ ಗೌರವ ಪಡೆದು, ಧರ್ಮ ಜಾಗ್ರತಿಯನ್ನು ಉಂಟು ಮಾಡಲು ಶಕ್ತರಾದರು.

ಹೀಗೆ ಈ ಮೂವರು ಮೂರ್ತಿಗಳು ಹಲವು ಹಳ್ಳತೊರೆಗಳನ್ನು ದಾಟಿದರು. ಬೆಟ್ಟಗಳನ್ನು ಏರಿ ಇಳಿದರು. ಬಯಲು ನೆಲದ ಹೊಲ-ಗದ್ದೆಗಳನ್ನು ಹಾಯ್ದರು, ದರಿಕೊಳ್ಳಗಳಲ್ಲಿ ಹಿಂಜರಿಯದೆ ನಡೆದು, ಗಂಹರಗಳನ್ನು ಹೊಕ್ಕು ಹೊರಬಿದ್ದರು. ಮೆಳೆಗಳನ್ನು ದಾಟಿದರು. ಅನೇಕ ಕಾನನಗಳನ್ನು ಹಿಂದೆ ಹಾಕಿದರು. ಪ್ರಸ್ತರಗಳನ್ನು ಮೆಟ್ಟಿ ನಡೆದರು. ಇದೆಲ್ಲ ನಿಸರ್ಗಶೋಭೆ! ಈ ಶಿವನ ಸಿರಿಗೆ ಮನಗೊಟ್ಟು ಆನಂದ ತುಂದಿಲರಾಗುತ್ತಿದ್ದರು. ಮನಕ್ಕೆ ಮೀರಿದ ಆನಂದ ತುಂದಿಲರಾಗುತ್ತಿದ್ದರು. ಮನಕ್ಕೆ ಮೀರಿದ ಆನಂದ ಲಹರಿ ಉಂಟಾದಾಗ, ಆ ವನದೆಡೆಯಲ್ಲಿ ಮನವಾರೆ ಲಿಂಗಾರ್ಚನೆಗೈದು, ತೃಪ್ತಿ-ಸುಖವನ್ನು ಅನುಭವಿಸುತ್ತಿರುವರು. ಗಿಡ-ಮರಗಳ ಫಲಗಳು, ಗೋವಳರ ಕ್ಷೀರ, ಕೃಷಿಕರ ಸೊಪ್ಪು, ಕಾಯಿ, ಕಾಳುಗಳು ಮುಂತಾದ ಲಿಂಗಾವಸರಕ್ಕೆ ಬಂದುದೇ ಲಿಂಗ ಪ್ರಸಾದ! ಹಸಿವೆಗೆ ಆಹಾರ! ಜೀವಾತ್ಮ ವಿಶ್ವಾತ್ಮ ಪರಮಾತ್ಮರುಗಳ ಸಾಮರಸ್ಯ ಸುಖವೇ ಪರಿಪೂರ್ಣಾಹಾರ ಅವರಿಗೆ. ಹಾದಿಯಲ್ಲಿರುವ ಹಿಂಸ್ರ ಪಶುಗಳು ಈ ಮಹಿಮರನ್ನು ಕಂಡು, ಕಣ್ತುಂಬ ನೋಡಿ, ತಲೆವಾಗಿ ತಾವೇ ಮರೆಯಾಗುತ್ತಿದ್ದವು. ಬಿಸಲಿಗೆ ಬಾಡಲಿಲ್ಲ; ಮಳೆಗೆ ನೆನೆಯಲಿಲ್ಲ ಚಳಿಗೆ ಅಳುಕಲಿಲ್ಲ; ಸಾಗಿದರು, ಸಾಗಿದರು; ಸುತ್ತಿದರು ಆಂಧ್ರ, ಕರ್ನಾಟಕ ಪ್ರದೇಶಗಳನ್ನು!

ಅವರಿಗೆ ಬೇಕಾದುದು ಧರ್ಮಜಾಗ್ರತಿ, ಭಕ್ತೋದ್ಧಾರ! ಅವರಿಗೆ ಗೊತ್ತಿಲ್ಲದೆ ಅವರ ಪಯಣ ಶ್ರೀಶೈಲ ಪಥವನ್ನು ಹಿಡಿದಿತ್ತು. ಮೃಗ, ಪಕ್ಷಿಗಳ ಸ್ವಾಗತ ಕಾದಿತ್ತು.

ದಾರಿ ದಟ್ಟಡವಿಯನ್ನು ಸೇರಿತು. ಅದೇನು ಪರಿಸಿ ಜನರು ಹಾಯುವ ಸಾಮಾನ್ಯ ಹಾದಿಯೋ, ಕಾಡು ಜನರು ಅಲೆಯುವ ಕಿರಿದಾರಿಯೋ ತಿಳಿಯುತ್ತಿರ-

ಲಿಲ್ಲ. ಎದುರಿಗೆ ಕಂಡು ನಾಲ್ಕು ಹೆಜ್ಜೆಗಳಲ್ಲಿ ಮಾಯವಾಗುತ್ತಿತ್ತು. ಅಂತು ಗಹನಾರಣ್ಯವನ್ನು ಪ್ರವೇಶಿಸಿ ನಡೆದಿದ್ದರು ನಮ್ಮ ಮೂದೇವರುಗಳು. ಸಾಮಾನ್ಯರಾಗಿದ್ದರೆ ಸಾಧ್ಯವಿರಲಿಲ್ಲ. ಅವರು ಆತ್ಮಬಲಶಾಲಿಗಳೆಂದೇ ಅನುಮಾನವಿಲ್ಲದೆ ಮುಂದುವರಿದರು. ಎಲ್ಲಿಯಾದರೂ ಕಂಡುಬರುವ ಚುಂಚರ ವಾಸಸ್ಥಳಗಳೂ ಹಿಂದೆ ಉಳಿದವು. ಭೈರವರೆಂಬ ಭಯೋತ್ಪಾದಕರೂ ಸರಿದು ಹೋಗಿದ್ದರು.

ಸಿದ್ಧಲಿಂಗೇಶ್ವರರು ನಡುವಯದವರಾದರೂ ಅವರ ಶರೀರಕ್ಕೆ ದೃಢವಾದ ಸಂಕಲ್ಪ, ಮಾನಸಿಕ ಛಲ ಬಲಗೊಡುತ್ತಿದ್ದವು. ಅವರ ಛಲದ ಪಾಠ ಕಲಿಯುತ್ತಿದ್ದ ಗುರುನಂಜರ, ಚೆನ್ನಮಲ್ಲೇಶ್ವರರ ತನುಗಳು ತರುಣವೇ ಆಗಿದ್ದವು. ಮೂವರೂ 'ಕಾಯದ ಕಳವಳ' ಮೀರಿದವರಾಗಿದ್ದರು. ಕಲ್ಲು ನೆಡವು, ಮುಳ್ಳು ಚುಚ್ಚವು, ಬಯಲ ದೇಹಿಗಳ ಪರಿಯಾಗಿತ್ತು ತನು-ಮನ-ಭಾವಗಳ ಬಗೆ!

ಬರಬರುತ್ತ ಜನ ದರ್ಶನ ಅಪ್ಪಿತಪ್ಪಿಯೂ ಆಗಲಿಲ್ಲ. ಯಾವದೋ ಭೀತಿಯಿಂದ ಕಾಡಿನ ಸಾಧು ಮೃಗಗಳೂ ಮರೆಯಾಗಿದ್ದವು. ಪರ್ವತಗಳಲ್ಲಿ ಪ್ರತಿ-ಧ್ವನಿಸುವ ಕ್ರೂರ ಶ್ವಾಪದಗಳ ಭೀಕರ ಗರ್ಜನೆ ಮಾತ್ರ ಕೇಳಿಬರುತ್ತಿತ್ತು. ಇಂತಹ ಗಹನಾರಣ್ಯದ ಜೀವನವನ್ನು, ತಮ್ಮ ಕ್ರೂರಬಲದ ಹಿಡಿತದಲ್ಲಿಟ್ಟುಕೊಂಡಿದ್ದ, ಅತ್ಯಂತಿಕ ಕ್ರೋಧ ಸ್ವರೂಪರಾಗಿದ್ದ ಕಾಡು ರಕ್ಕಸದಂಪತಿಗಳು ಶಿವಯೋಗಿಗಳ ಮುಂದುಗಡೆ ಬಂದು ನಿಂತರು. ನಾಗರಿಕತೆಯನ್ನೇ ಕಾಣದ ಕ್ರೂರ ಮಾನವರವರು-ಕರಡಿಯಂತೆ ಬೆಳೆದ ಕೂದಲುಗಳೇ ಬಟ್ಟೆ! ಮೃಗ ಪಕ್ಷಿಗಳ ಹಸಿಯ ಮಾಂಸವೇ ಆಹಾರ! ಹೊತ್ತು ಬಂದರೆ ಕೈಗೆ ಸಿಕ್ಕ ಮಾನವನೂ ಅವರ ಕ್ರೌರ್ಯಕ್ಕೆ ಬಲಿಯಾಗುತ್ತಿದ್ದನು. ಮಾನವರ ಬೇಟೆಯಾಡುವದೂ ಅವುಗಳಿಗೆ ವಿನೋದ! ರಕ್ತ ಸಿಂಚನ ಪ್ರಿಯಕರ! ಮೂವರೂ ಶಿವಯೋಗಿಗಳು ಈ ರಕ್ಕಸಗಳನ್ನು ನೋಡಿ ಗಾಬರಿಯಾಗಲಿಲ್ಲ. ಓಡಿ ಹೋಗಲು ಯತ್ನಿಸಲಿಲ್ಲ. ಮುಖದಲ್ಲಿ ಭಯಭೀತಿಗಳು ತೋರಲಿಲ್ಲ. ಶಾಂತ ಭಾವದಿಂದ, ತೆರೆದ ಕಣ್ಣುಗಳಿಂದ ಆ ತಾಮಸಿಗಳನ್ನು ದಿಟ್ಟಿಸಿ ನೋಡಿದರು. ಸಾತ್ವಿಕ ತೇಜಸ್ಸು ತಾಮಸದ ಒಡ್ಡನ್ನು ಒಡೆಯಿತೇನೋ, ಆ ರಕ್ಕರಸಗಳ ಧೈರ್ಯ ಅರ್ಧಕುಗ್ಗಿತು. ಕ್ಷಣಹೊತ್ತು ತಡೆದವು. ಆದರೆ ಉಲ್ಬಣಗೊಂಡ ಒಡಲ ಹಸಿವೆಯ ತಾಪ ಉಗ್ರವಾಗಲು, ರಕ್ಕಸನು ಇವರ ಮೇಲೆ ಎರಗಿದನು. ಹಿಡಿಯ ಹೋದನು, ಕಡಿಯ ಹೋದನು, ಟೊಣಪೆ ಬೀಸಿದನು, ಕಣ್ಣಿಗೆ ಕಾಣುತ್ತಾರೆ, ತೆಕ್ಕೆಗೆ ಸಿಗಲೊಲ್ಲರು, ಕೈಗೆ ನಿಲುಕಲೊಲ್ಲರು, ಬಯಲಲ್ಲಿ ಹೊಯ್ದ ಹೊಯ್ಲುಗಳು ವ್ಯರ್ಥವಾಗುತ್ತಲಿವೆ. ಆರ್ಭಟ ಜಡಿದು ಮೇಲೆರಗಿದ, ನಿಷ್ಫಲವಾಯಿತು. ಹತಾಶನಾದರೂ ಕ್ರೋಧ ಆರಿಲ್ಲ, ಆವೇಶ ತಗ್ಗಿಲ್ಲ, ಉರಿಗಣ್ಣು ಕೆಂಡ ಕಾರುತ್ತಿದ್ದವು. ಮತ್ತೆ ಹಾರಲು ಹವಣಿಸುತ್ತಾನೆ. ಆಗ ಗುರುನಂಜರು ದಿಟ್ಟತನದಿಂದ ಮುಂದೆ ಬಂದು, ತಡೆದು :

"ನಮ್ಮಲ್ಲಿ ಯಾರು ಬೇಕು ನಿನಗೆ ? ಅಥವಾ ಏನು ಬೇಕು ?" ಎಂದರು.

"ನೀನೆ ನೀನೇ" ಎಂದು ಕಣ್ಣಿಗಿಸಿದು ಹೇಳಿದ ರಕ್ಕಸ.

ಗುರುನಂಜರು ಬಗಲಿನ ಗಂಟನ್ನು ಮುಂದಿಟ್ಟು, ಸೀಟಾಗಿ ನಿಂತು : "ಇದೋ ನನ್ನ ಒಡವೆ, ಇದೋ ನಾನು ಕೊಳ್ಳು" ಎಂದರು.

ತೋಳುಗಳ ಕಸುವು ಮೊದಲೇ ಕುಗ್ಗಿದ್ದರಿಂದ ರಕ್ಕಸನು ಕುಳಿತು, ಗಂಟನ್ನೇ ಬಿಚ್ಚಿದನು. ನೋಡುತ್ತಾನೆ, ವಿಭೂತಿ ಘಟ್ಟಿಗಳು, ರುದ್ರಾಕ್ಷಿಗಳು, ತಾಡೋಲೆ ಗ್ರಂಥಗಳು ! ಏನಿವು ಎಂದು ಮೇಲೆ ಮುಖವೆತ್ತಿ ನೋಡಿದರೆ, ಅವಿಚಲರಾಗಿ ನಿಂತ ಮೂವರು ಮಂತ್ರಮೂರ್ತಿಗಳು. ಪ್ರಣವದ ನಾದ ಸ್ಫುರಿಸಿ ಬರುತ್ತಿದೆ. ಈ ಶಿವಪ್ರಕಾಶ ಆನಾದ ಆ ಕ್ರೂರ ದಂಪತಿಗಳ ಅಂತರಾಳವನ್ನು ಸೇರಿತು. ಅದು ಅಭೇದ್ಯ ಅಂಧಃ ತಮಸ್ಸನ್ನು ಭೇದಿಸಿತು. ಅವುಗಳ ಉದರದಲ್ಲಿ ಅಲಗನಿಕ್ಕಿ ತಿರುವಿದಂತಾಗಿ, ಕಳವಳಿಸಿ ಚೀರಿ, ಮೂರ್ಛೆ ಹೋದವು. ಆ ಕ್ರೂರ ಕಾಡು ಮಾನವರು ಮರಳಿ ಕಣ್ತೆರೆದಾಗ, ಅವರ ಹೃದಯದಲ್ಲಿ ಅರಿವು ಮೂಡಿತ್ತು. ಆ ಗಂಡ-ಹೆಂಡಿರು ಗುರುನಂಜೇಶ್ವರರ ಪಾದದೆಡೆಗೆ ಉರುಳಿ. ಶರಣಾಗತರಾಗಿ ಕಾಪಾಡಬೇಕೆಂದು ಬೇಡಿಕೊಂಡರು. ಗುರುನಂಜೇಶ್ವರರು ಅವರಿಗೆ ಹಣ್ಣು ಹಂಪಲ ಗಳನ್ನಿತ್ತು, ಸಾತ್ವಿಕ ಜೀವನದ ಉಪದೇಶ ಮಾಡಿ, ಆಶೀರ್ವದಿಸಿದರು. ಕ್ರೋಧನು ಶಾಂತನಾಗಿ, ಮಾಂಸಾಹಾರವನ್ನು ಬಿಟ್ಟು, ಶಾಕಾಹಾರದಿಂದಲೇ ಜೀವಿಸುವದಾಗಿ ಭಾಷೆಯಿತ್ತು, ತನ್ನ ಸತಿಯೊಡನೆ ಹೊರಟು ಹೋದನು.

ಶಿವಯೋಗಿಗಳು ಶ್ರೀಶೈಲ ಕ್ಷೇತ್ರವನ್ನು ತಲುಪಿದರು. ಭಾವುಕರು, ಭಕ್ತಿವಂತರು, ಶ್ರದ್ಧಾಳುಗಳು, ಜ್ಞಾನಿಗಳು, ಸಾಧಕರು, ದರ್ಶನವಿತ್ತು, ಅವ್ಯಕ್ತ ಚೇತನವನ್ನು ನಿಧಿಗೊಳಿಸಿದ ಶಿಖರೇಶ್ವರ, ಅಡಿಕೇಶ್ವರ, ಮುದಿಮಲ್ಲೇಶ್ವರ, ಮಲ್ಲಿಕಾರ್ಜುನ, ಭ್ರಮರಮ್ಮ ಮುಂತಾದ ದೇವಸ್ಥಾನಗಳನ್ನು ಸಂದರ್ಶಿಸಿ, ಆಯಾ ಲಿಂಗಗಳಿಗೆ ಕಳೆಯನಿತ್ತರು, ಸಿದ್ಧರಾಮನ ಕಮರಿ, ಕದಳಿಯ ವನ, ಪಾತಾಳಗಂಗೆ ಮೊದಲಾದ ದಿವ್ಯ ಭವ್ಯ ಚೈತ್ಯಸ್ಥಳಗಳನ್ನು ವೀಕ್ಷಿಸಿ, ಶಿವಶಕ್ತಿ ಸೃಷ್ಟಿಸಿದ ನಿಸರ್ಗ ವಿಲಾಸದಲ್ಲಿ ಬೆರೆತರು. ಅಲ್ಲಲ್ಲಿ ಲಿಂಗಾನುಷ್ಠಾನಗೈದು ಸಂತಸಗೊಂಡರು.

ಆ ಪ್ರದೇಶದ ಅನೇಕ ಗುಹೆಗಳಲ್ಲಿ ಯೋಗಸಾಧಕರು ತಪಸ್ಸನ್ನಾಚರಿಸುತ್ತಿದ್ದರು. ಅವರು ಯೋಗದ ವಿವಿಧ ಕ್ರಮಗಳನ್ನು ಅನುಸರಿಸುತ್ತಿದ್ದರು. ಅವರಲ್ಲಿ ಹಲವರು ವಾಮ ಮಾರ್ಗಿಗಳೂ ಇದ್ದರು. ಲಂಬಿಕಾಯೋಗಿಗಳು, ಹಟಯೋಗಿಗಳು, ಪಂಚಾಗ್ನಿ ಮಧ್ಯದಲ್ಲಿಯುವರು, ನಿರಾಹಾರಿಗಳು ಮುಂತಾದ ವ್ಯರ್ಥವಾಗಿ ದೇಹವನ್ನು

ದಂಡಿಸುತ್ತಿರುವ ವಿಫಲ ಸಾಧಕರನ್ನು ನೋಡಿ ಶಿವಯೋಗಿಗಳಿಗೆ ಕರುಣೆಯುಂಟಾಯಿತು. ಸಿದ್ಧಲಿಂಗೇಶ್ವರರು ಇವರಿಗೆ ಶಿವಯೋಗ ಮಾರ್ಗವನ್ನು ತಿಳಿಸಲು ತಮ್ಮ ಜತೆಗಾರರೊಂದಿಗೆ ಹವಣಿಸಿದರು. ಕೆಲವರು ಗಮನಿಸಿದರು. ಇನ್ನು ಕೆಲವು ಹಟಮಾರಿಗಳು ತಿಳಿಯಲೊಪ್ಪಲಿಲ್ಲ. ಇಂಥವರಿಗಾಗಿಯೇ ಗುರು ತೋಂಟದಾರ್ಯರು ಕೊನೆಗೆ ಕಟುನುಡಿಗಳ ವಚನ ಹೇಳಬೇಕಾಯಿತೆಂದು ಗುರುನಂಜೇಶ್ವರರು ಅವನ್ನು ಪಠಿಸಿಯೂ ತೋರಿಸಿದರು.

"ಲಂಬಿಕಾಯೋಗಿಗಳ ಡೊಂಬರಿಗೆ ಸರಿಯೆಂದೆಂಬೆ
ಹಟಯೋಗಿಗಳ ಅಟಮಟಗಾರರೆಂದೆಂಬೆ
ಅಷ್ಟಾಂಗ ಯೋಗಿಗಳ ಪ್ರಪಂಚಿಗಳೆಂದೆಂಬೆ
ಲಯಯೋಗಿಗಳ ನಾಯಿಗಿಂತ ಕಡೆ ಎಂದೆಂಬೆ
ಅದು ನಾನಾ ದರ್ಶನಗಳಲ್ಲಿ ವರ್ತಿಸುವದು
ಮಂತ್ರಯೋಗವು ಸರ್ವಸಂದೇಹಕ್ಕಿಕ್ಕಿ ಕೊಲ್ಲುವದು
ಇದು ಲಿಂಗದ ನೆನಹ ಸಂಬಂಧಿಸಿಕೊಳ್ಳದು
ರಾಜಯೋಗವು ಗಾಜುಗೋಜು ನೋಡಾ
ಅದು ಲಿಂಗ ವಿರಹಿತವಾಗಿರುವದು
ಇವು ಒಂದೂ ಲಿಂಗಾಂಗಯೋಗದ ಹೆಜ್ಜೆಯಲ್ಲ ನೋಡಾ....
ಅದು ಕಾರಣ ಲಿಂಗನಿಷ್ಠರು ಮೆಚ್ಚರು........।

ತೋಂಟದ ಸಿದ್ಧಲಿಂಗ ಶಿವಯೋಗಿಗಳು ಶಿವಯೋಗಕ್ಕೆ ಅಂತಿಮವಾಗಿ ಪೂರ್ಣ ಸ್ವರೂಪ ನೀಡಿದವರು. ಅವರು ಅಷ್ಟಾಂಗ ಯೋಗದ ಪೂರ್ವಭಾಗದ ಯಮ, ನಿಯಮ, ಆಸನಗಳನ್ನು ಹೀಗೆ ಮಾರ್ಪಡಿಸಿ ಹೇಳಿದರು :

ಅನೃತ, ಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ ಇವನ್ನು ಬಿಟ್ಟು, ಲಿಂಗಪೂಜೆ ಮಾಡುವದೇ ಯಮಯೋಗ.

ಅಶುಚಿತ್ವವ ಬಿಟ್ಟು ಪಾಪ ಭೀರುವಾಗಿ, ಇಂದ್ರಿಯ ನಿಗ್ರಹದಿಂದ ಮಾಡುವ ಲಿಂಗಾರ್ಚನೆಯೇ ನಿಯಮಯೋಗ.

ಸುಖಾಸನಗಳಲ್ಲಿ ಸ್ವಸ್ಥಿರಚಿತ್ತನಾಗಿ ಮಾಡುವ ಪೂಜೆ ಆಸನಯೋಗ.

ಅಷ್ಟಾಂಗ ಯೋಗದ ಉತ್ತರ ಭಾಗವಾದ ಧ್ಯಾನ ಧಾರಣ ಸಮಾಧಿಗಳನ್ನು ಶಿವಯೋಗದ ಇಷ್ಟಲಿಂಗ ಧಾರಣ, ಪ್ರಾಣ ಲಿಂಗ ಧ್ಯಾನ, ಭಾವ ಲಿಂಗದ ಸಮಾಧಿಗಳಲ್ಲಿ ರೂಢಿಸಿಕೊಂಡರು. ರಾಜಯೋಗದ ದೃಷ್ಟಿಯೋಗ ಸಿದ್ಧಿಯನ್ನು

ಕರದ ಇಷ್ಟ ಲಿಂಗದ ಅನಿಮಿಷ ದೃಷ್ಟಿಯೋಗದಿಂದ ಸಾಧಿಸಿ, ಅದರಿಂದ ಮನಸ್ಸಿನ ಚಂಚಲತೆಯನ್ನು ತಡೆದು, ಪ್ರಾಣಲಿಂಗಿಯಾಗುವದು, ಅದರ ಧ್ಯಾನಯೋಗದಿಂದ ಭಾವಲಿಂಗೈಕ್ಯವಾಗಿ ಲಿಂಗಾಂಗ ಸಾಮರಸ್ಯವನ್ನು ಸಾಧಿಸುವ ಸುಲಭವೂ ಸಹಜವೂ ಪರಿಪೂರ್ಣವೂ ಆದ ಶಿವಯೋಗ ಸ್ವರೂಪವನ್ನು ಬೋಧಿಸಿದ್ದಾರೆ. ಅವರ 'ಷಟ್‍ಸ್ಥಲ ಜ್ಞಾನ ಸಾರಾಮೃತ ವಚನಗಳು' ಎಂಬ ದಾರ್ಶನಿಕ ಗ್ರಂಥವನ್ನು ಮುಂದಿಟ್ಟು ವಚನಗಳನ್ನು ವಿವರಿಸಿ ಈ ಶಿವಯೋಗಿತ್ರಯರು ಬೋಧಿಸುತ್ತ ಬಂದರು. ಹೀಗೆ ಹಲವಾರು ಯತಿ ಸಂಯಮಿಗಳನ್ನು ಶಿವಯೋಗ ಮಾರ್ಗಕ್ಕೆ ಹೊರಳಿಸಿ, ಪಾವನಗೊಳಿಸಿದರು. ಈ ಘಟ್ಟದಲ್ಲಿ ಅವರು ತಮ್ಮ ತಪೋಬಲವನ್ನು ಹೆಚ್ಚಿಸಿ ಕೊಂಡರು.

ಈ ಮಹಾ ಶಿವಯೋಗಿಗಳು ಕಲ್ಯಾಣ ಪ್ರಾಂತದಲ್ಲಿ ಸಂಚರಿಸುವ ಬಯಕೆ-ಯುಳ್ಳವರಾಗಿದ್ದರು. ಆಂಧ್ರ ಪ್ರದೇಶದಿಂದ ಪೂರ್ವದ ಕಡೆಯಿಂದ ಶ್ರೀ ಗಿರಿಯನ್ನು ಏರಿದ್ದರು. ಈಗ ಕರ್ನಾಟಕಕ್ಕೆ ಎದುರಾಗಿ ಪಶ್ಚಿಮಾಭಿಮುಖವಾಗಿ, ಈ ಕಡೆಯಿಂದ ಹೋಗುವವರ ದಾರಿಯಲ್ಲಿ ಇಳಿದರು. ಅವರು ಮೊದಲು ನಂದಿ ನಾಡಿನಲ್ಲಿ ಸಂಚರಿಸಿ ಕೊಲ್ಲಿಪಾಕಿಗೆ ಹೋಗಿ ಹಂಪಿಗೆ ಬಂದರು. ಈ ಸಂಚಾರದಲ್ಲಿ ಆಗಮೋಕ್ತ ವೀರಶೈವದಲ್ಲಿಯ ವರ್ಣಭೇದ ನೀತಿಯನ್ನು, ದೀಕ್ಷಾ ಕಾಲದ ಹೋಮ ಹವನಾದಿ ಕರ್ಮಗಳನ್ನೂ ಸೂತಕಾಚರಣೆಗಳನ್ನೂ ನಿರಾಕರಿಸಿ ಶರಣರ ಶುದ್ಧ ವೀರಶೈವಾ-ಚಾರವನ್ನು ತಿಳಿಸುತ್ತಿದ್ದರು.

ಶ್ರೀಶೈಲದಿಂದ ಮರಳಿದಾಗಿನಿಂದ ಗುರುನಂಜೇಶ್ವರರ ದೇಹದಾರ್ಢ್ಯ, ಬುದ್ಧಿ ಚತುರತೆ, ವಾಕ್ಪಟುತೆ, ಜ್ಞಾನಾಭಿವೃದ್ಧಿ, ಪರಿಸ್ಫುಟಗೊಂಡು ಪ್ರಕಟವಾಗುತ್ತ ಬಂದವು. ಹೋದ ಹೋದಲ್ಲಿ ಚಟುವಟಿಕೆ ಜನಸಂಘಟನೆ ಜ್ಞಾನೋಪದೇಶಗಳಲ್ಲಿ ಬಹುಪಾಲು ಅವರದಾಗಿರುತ್ತಿತ್ತು, ಸ್ವತಂತ್ರ ಸಿದ್ಧಲಿಂಗೇಶ್ವರರು ಈ ದೀರ್ಘ ಸಂಚಾರದಲ್ಲಿ ದಣಿದು ಮತ್ತಿಷ್ಟು ಮುಪ್ಪಾಗಿದ್ದರು. ಚನ್ನಮಲ್ಲೇಶ್ವರರು ಬಹುಶಃ ಹಿನ್ನೆಲೆಯ ಸಹಾಯಕರು. ಆದ್ದರಿಂದ ಈ ತ್ರಿವರ್ಗಕ್ಕೆ ಗುರುನಂಜೇಶ್ವರರೇ ನಾಯಕ ಯೋಗಿ ಆಗಿದ್ದರು. ಅವರು ಹಂಪಿಗೆ ಬಂದಾಗ ಅಲ್ಲಿನ ಸ್ಥಾನಿಕ ವಿದ್ಯಮಾನಗಳನ್ನು ಬೇಗನೆ ಅರಿತುಕೊಂಡರು. ಅದರ ಪೌರಾಣಿಕ ಮಹಿಮೆಯೂ ಕ್ಷೇತ್ರಮಹತ್ವವೂ ಐತಿಹಾಸಿಕ ಹಿನ್ನೆಲೆಯೂ ಮೊದಲೇ ಗೊತ್ತಾಗಿದ್ದವು.

ಪಂಪಾಕ್ಷೇತ್ರದ ಹೇಮಕೂಟವು ಶ್ರೀ ಶಿವನ ತಪೋಭೂಮಿ. ಗಿರಿಜಾಕಲ್ಯಾಣ ಜರುಗಿದ ಪುಣ್ಯಭೂಮಿ. ವಿರೂಪಾಕ್ಷನ ಕ್ಷೇತ್ರಸ್ಥಲ. ಅವನನ್ನು ಒಲಿಸಿ ವರ ಪಡೆದುಕೊಂಡು ಭಕ್ತಿರಸ ಕಾವ್ಯಗಂಗೆಯನ್ನು ಹರಿಸಿದ ಶಿವಕವಿ ಹರಿಹರೇಶ್ವರನ

ಕ್ರಿಯಾಭೂಮಿ. ಧರ್ಮರಕ್ಷಣೆಗಾಗಿ ವಿದ್ಯಾರಣ್ಯರಿಂದ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದ ಅಭ್ಯುದಯದ ಕಾಲವದು. ಆಳಿ ಹೋದ ಪ್ರೌಢದೇವರಾಯನ ಕಾಲದಲ್ಲಿ ಉನ್ನತಿಗೊಂಡ ವೀರಶೈವಧರ್ಮ, ಸಾಹಿತ್ಯ-ಸಂಸ್ಕೃತಿ-ಕಲೆಗಳ ಬೆಳಕು ಇನ್ನೂ ಇದೆ. ಈ ಸಮಯದಲ್ಲಿ ನಮ್ಮ ಶಿವಯೋಗಿಗಳು ಅಲ್ಲಿಗೆ ಬಂದರು.

ಅವರು ವಿರೂಪಾಕ್ಷೇಶ್ವರ-ಪಂಪಾಂಬಿಕೆಯರ ದರ್ಶನ ಪಡೆದರು. ವಿದ್ಯಾರಣ್ಯ ಸ್ವಾಮಿಗಳ ಮಹತ್ಕಾರ್ಯವನ್ನು ನೆನೆದು, ಅವರ ಮೂರ್ತಿಯ ಮುಂದೆ ನಿಂತು ಕೃತಜ್ಞತಾ ಭಾವವನ್ನು ಅರ್ಪಿಸಿದರು. ಹಂಪಿಯ ಉಳಿದ ದೇವಸ್ಥಾನಗಳನ್ನು ವಿಜಯನಗರ ವೈಭವದ ದೃಶ್ಯವನ್ನು ನೋಡಲು ಮಾತಂಗ ಶಿಖರವನ್ನು ಏರಿದರು. ಪುಣ್ಯ ಕ್ಷೇತ್ರಗಳಲ್ಲಿ ಅನುಚಿತ ಕಾರ್ಯ ಮಾಡಿ ದುರ್ಮರಣಕ್ಕೀಡಾದವರ ಪಿಡಂಭೂತಗಳು ಈ ಶಿವಯೋಗಿಗಳ ಶಿವತೇಜಸ್ಸನ್ನು ಸಹಿಸದೆ ಓಡಿ ಹೋದವಂತೆ ! ಮಾತಂಗ ಶಿಖರದಲ್ಲಿಯೇ 'ಇದು ಹರಿಹರಾಚಾರ್ಯರ ಮಠವು' ಎಂದು ಹೇಳಲಾದ ಮಂದಿರವನ್ನು ಪ್ರವೇಶಿಸಿದರು. ಅಲ್ಲಿ ರಾಘವಾಂಕರ ಪರಂಪರೆಯ ಚಿಕ್ಕ ನಂಜೇಶ್ವರರು (ಇವರು ರಾಘವಾಂಕ ಚರಿತ್ರೆ ಬರೆದ ಸಿದ್ಧನಂಜೇಶ್ವರರಿಗಿಂತ ನೂರು ವರ್ಷ ಮೊದಲಿನವರಾಗಿರಬೇಕಾಯಿತು.) ಪಂಡಿತರೊಡನೆ ಸಭೆಗೂಡಿ ಕುಳಿತಿದ್ದರು- ಅವರು ಗುರುನಂಜೇಶ್ವರರನ್ನು ಕಂಡೊಡನೆ ಎದ್ದು ಬಂದು ಪೊಡಮಟ್ಟು, ಸ್ತುತಿಸಿ, ಕರೆದೊಯ್ದು ಪಾದಪೂಜೆ ಮಾಡಿ ಪಾದ ತೀರ್ಥ ಸ್ವೀಕರಿಸಿದರು.

ಈ ಮೂವರು ಪರಜಂಗಮಶ್ರೇಷ್ಠರು ಮುಂದೆ ತುಂಬಿ ಹರಿಯುವ ತುಂಗಭದ್ರಾ ನದಿಯನ್ನು ತಪೋಬಲದಿಂದ ಲೀಲಾ-ಜಾಲವಾಗಿ ದಾಟಿ ಆನೆಗೊಂದಿಗೆ ಬಂದರು. ಅಲ್ಲಿ ಅತಿ ವೃದ್ಧರಾಗಿದ್ದ ಕರಸ್ಥಲದ ನಾಗಿದೇವರು ಗತಪ್ರಾಣರಾದುದನ್ನು ಕೇಳಿ ಗುರುನಂಜೇಶ್ವರರು ಅವರ ಮಠಕ್ಕೆ ಧಾವಿಸಿದರು. ಲಿಂಗಪ್ರಾಣಿಗಳಾದ ನಾಗಿ ದೇವರ ಪ್ರಾಣ ಹೋದುದರ ಕಾರಣ ಪರಿಶೀಲಿಸಿದಾಗ ಲಿಂಗ ಕಳಚಿದುದು ಗೊತ್ತಾಯಿತು. ಅವರ ಲಿಂಗವನ್ನು ಶೋಧಿಸಿ ತರಿಸಿ, ಸಂಬಂಧ ಪಡಿಸಿ ಪ್ರಾಣ ಪಡೆದರು. ವಿರಕ್ತ ಮಹಾಯೋಗಿ ನಾಗಿದೇವಜ್ಜನ ಪಾದಗಳಿಗೆ ವಂದಿಸಿ, ಆಶೀರ್ವಾದ ಪಡೆದರು. ಈ ಸಮಾಚಾರವನ್ನು ತಿಳಿದು, ನಗರದ ಅಸಂಖ್ಯ ಭಕ್ತರು, ನರೇಂದ್ರರು ಗುರು ನಂಜೇಶ್ವರರನ್ನು ಕಂಡು, ನಮಿಸಿ ಹರುಷದಿಂದ ಉಬ್ಬಿ ಕೊಂಡಾಡಿದರು. 'ಶರಣ ಸರ್ವಾಂಗಲಿಂಗಿ, ಅವನಿಗೆ ಮರಣವಿಲ್ಲ. ಅವನಿಗೆ ಪ್ರಾಣವೇ ಲಿಂಗ, ಲಿಂಗವೇ ಪ್ರಾಣ, ಅಚ್ಚರಿಯ ಮಾತೇನಿಲ್ಲ' ಎಂದು ಹೇಳಿ, ಆ ಜನರನ್ನು ಸಂತುಷ್ಟಗೊಳಿಸಿ, ಮುಂದೆ ನಡೆದರು.

× × × × × × × ×

ಶಿವಯೋಗಿ ಸ್ವಾಮಿಗಳವರು ಉತ್ತರಾಭಿಮುಖರಾಗಿ ತುಂಗಭದ್ರಾ, ಕೃಷ್ಣಾ ತೊರೆಗಳ ಮಧ್ಯದ ಫಲವತ್ತಾದ ಪ್ರದೇಶದಲ್ಲಿ ಪಯಣ ಕೈಕೊಂಡರು. ಆ ಪ್ರದೇಶದ ಜನಜೀವನದಲ್ಲಿ ನೆಮ್ಮದಿ ಇಲ್ಲಿಲ್ಲ. ಈ ಭಾಗದ ರಾಯಚೂರು, ಮಾಲದಗಲ್ಲು ಕೋಟೆಗಳ ಸಲುವಾಗಿ ವಿಜಯನಗರ ಮತ್ತು ಬಹಮನಿ ರಾಜ್ಯಗಳ ನಡುವೆ ಕಾಳಗಗಳು ಆಗುತ್ತಿದ್ದವು. ಬಲಾಢ್ಯವಾದ ಉಭಯ ರಾಜ್ಯಗಳ ಸೈನ್ಯಗಳು ಯುದ್ಧಕ್ಕಾಗಿ ಈ ಭೂಮಿಯನ್ನು ತೊತ್ತಳದುಳಿದು ಹಾಳು ಮಾಡುತ್ತಿದ್ದವು. ಜನರು ಜೀವರಕ್ಷಣೆಗೆ ಅಲೆದಾಡಬೇಕಾಗುತ್ತಿತ್ತು. ಹೀಗಿರುವಾಗ ಧರ್ಮದ ವಿಚಾರ ಮತ್ತು ಆಚರಣೆಗಳಿಗೆ ಆಸ್ಪದವೆಲ್ಲಿ ? ಧರ್ಮಾಭಿವೃದ್ಧಿ--ಸಾಮಾಜಿಕ ವ್ಯವಸ್ಥೆಗಳಿಗೆ ಸ್ಥಿರವಾದ, ಬಲವಾದ, ಉದಾರವಾದ ಪ್ರಭುತ್ವದ ಆಡಳಿತ ಅವಶ್ಯವಾಗಿರುತ್ತದೆ- ಅದು ಇಲ್ಲದೆ ಜನಜೀವನ ಹದಗೆಟ್ಟಿತ್ತು ಈ ಭಾಗದಲ್ಲಿ! ಆದರೂ ಗುರು ನಂಜೇಶ್ವರರು ಉದಾಸೀನರಾಗದೆ ಉಳಿದಿಬ್ಬರನ್ನು ಜಗ್ಗಿಕೊಂಡು ಆ ಪ್ರಾಂತದಲ್ಲಿ ಅಲೆದಾಡಿದರು. ಮನೆಮಾರುಗಳನ್ನು ತೊರೆದು, ಅಡವಿಗಳಲ್ಲಿ ಅವಿತುಕೊಂಡು ಬದುಕುತ್ತಿದ್ದವರನ್ನೂ ಮುಗ್ಧ ಜಿಜ್ಞಾಸುಗಳನ್ನೂ ಕಂಡು, ಧರ್ಮ ತತ್ವಗಳ ಮೂಲಕ ವಾಗಿಯೇ ಅವರಲ್ಲಿ ಧೈರ್ಯವನ್ನು ತುಂಬಿ, ಶಾಂತಿಸುಧೆಯನ್ನು ಎರೆಯುತ್ತಿದ್ದರು. ಇದರಿಂದ ಹಿಂದೆ ಆಗಿಹೋದ ಶರಣರ, ಸಂತರ, ಮಹಂತರ ಸ್ಮರಣೆ ಪುನರುಜ್ಜೀವಿಸಿ, ಧಾರ್ಮಿಕಾಚಾರಗಳು ಕಂಡು ಬಂದು, ಸಾಮಾಜಿಕ ದುಗುಡ ಸರಿಯಹತ್ತಿತು.

ಬಳಿಕ ಈ ಜಂಗಮ ಸ್ವಾಮಿಗಳು ಕೃಷ್ಣಾನದಿಯನ್ನು ದಾಟಿ, ಕಲ್ಯಾಣ ಪ್ರಾಂತವನ್ನು ಪ್ರವೇಶಿಸಿದರು. ಈ ನಾಡಿನ ಧಾರ್ಮಿಕ ಪರಿಸ್ಥಿತಿ ಮತ್ತೊಂದು ರೀತಿಯಿಂದ ತೀರ ಹೀನಾಯವಾಗಿತ್ತು. ಅಲ್ಲಿ ಶರಣರ ಧಾರ್ಮಿಕ ಕ್ರಾಂತಿಯೊಡನೆ ರಾಜಕೀಯ ಕ್ರಾಂತಿಯೂ ಉಂಟಾಯಿತು. ಚಾಲುಕ್ಯ ಸಾಮ್ರಾಜ್ಯವು ಅಳಿದು ಹೋಯಿತು. ಅದರ ಭಾಗವನ್ನು ಆಕ್ರಮಿಸಿ, ಆಳಿದ ದೇವಗಿರಿ ಮಾಧವ ಅರಸರೂ ಮಠಮಾನ್ಯಗಳಿಗೆ, ಅಗ್ರಹಾರಗಳಿಗೆ, ದೇವಸ್ಥಾನಗಳಿಗೆ ದತ್ತಿಗಳನ್ನು ಬಿಟ್ಟು ಪೋಷಿಸಿಕೊಂಡು ಬಂದರು. ಆದರೆ ದಿಲ್ಲಿಯ ಮಹಮ್ಮದೀಯ ಅರಸರು ದಕ್ಷಿಣದ ಹಿಂದೂ ರಾಜ್ಯಗಳನ್ನು ಅಳಿಸಿ ಹಾಕಿದ ಮೇಲೆ, ಅದೂ ಸಾಲದೆ ಕಲ್ಯಾಣ ಪ್ರಾಂತದಲ್ಲಿ ಕಲಬುರ್ಗಿಯಲ್ಲಿ ಬಹಮನಿ ಸುಲ್ತಾನರ ಮಹಮ್ಮದೀಯ ರಾಜ್ಯಸ್ಥಾಪನೆ ಯಾಯಿತು. ಅನುಕರಣೆ ಮಾನವ ಸಹಜಗುಣ! ರಾಜಕೀಯ ಪ್ರಭಾವಕ್ಕೆ ಒಳಗಾದ ಜನತೆ ಭಿನ್ನ ಸಂಸ್ಕೃತಿಗೆ ಒಲಿಯಿತು, ಮತ್ತು ಧರ್ಮ ರಕ್ಷಣೆ, ಪೋಷಣೆಗಳಿಗೆ ಅನುಕೂಲತೆಯೂ, ಆಸ್ಪದವೂ ಇಲ್ಲದಾಗಿ, ಧಾರ್ಮಿಕರಲ್ಲಿ ಮತ್ತಷ್ಟು ಅವಜ್ಞೆ ಉಂಟಾಯಿತು, ಅಜ್ಞಾನ ಕವಿಯಿತು. ಜನರು, ದೆವ್ವ–ಭೂತಗಳ ವಿಚಾರಗಳಿಗೂ ಕೀಳು ದೈವಗಳಿಗೂ ಮೊರೆಹೊಕ್ಕರು. ಈ ಶಕ್ತಿಗಳ ಪ್ರೀತಿಗೆಂದು ಅನೀತಿಯ, ಮೂಢತನದ ಅಸಹ್ಯವಾದ ಪೂಜಾಚರಣೆಗೆ ಇಳಿದಿದ್ದರು, ಕರ್ತವ್ಯಹೀನರಾಗಿದ್ದರು.

ಒಂದೆರಡು ತಲೆಮಾರು ಹೋಗುವದರೊಳಗಾಗಿ ಸಮತೆ, ಸದ್ಭಾವ, ಸದಾಚಾರಗಳ ಷಟ್‌ಸ್ಥಲ ದರ್ಶನದ-ಶರಣ ಧರ್ಮದ-ಪ್ರಭಾವ ಅಡಗಿ ಹೋಗಿದ್ದಿತು. ಶರಣರ ವಚನ ವಾಙ್ಮಯದ ಕಟ್ಟುಗಳು ಗೂಡು ಮಾಡುಗಳಲ್ಲಿ ಹಾಳುಗಂಡಿದ್ದವು. ಜನರಿಗೆ ಅವೊಂದು ಶನಿಯಾಗಿ ಕಾಣುತ್ತಿದ್ದವು. ಇದುವರೆಗೆ ಸಂಚರಿಸಿದ ಕೃಷ್ಣೆಯ ದಕ್ಷಿಣದ ಸ್ಥಿತಿ ಇದಕ್ಕೆ ಭಿನ್ನವಾಗಿತ್ತು. ವಿಜಯನಗರದ ಅರಸರು ಸರ್ವ ಧರ್ಮಗಳಿಗೂ ಆಶ್ರಯ ಕೊಟ್ಟಿದ್ದರು. ಪ್ರೌಢದೇವರಾಯನು ವೀರಶೈವನಾಗಿದ್ದನು. ಆ ಆಳಿಕೆಯಲ್ಲಿ ಈ ಧರ್ಮದ ಗುರುವಿರಕ್ತರು, ವಚನ ಸಂಕಲನಕಾರರು, ಸ್ವಧರ್ಮದ ಪುನರುತ್ಥಾನಗೈದರು. ಇಂತಹ ಪ್ರಯತ್ನಗಳು ಬಹಮನಿ ರಾಜ್ಯದಲ್ಲಿ ನಡೆಯುವದಕ್ಕೆ ಅನುಕೂಲತೆ ಇರಲಿಲ್ಲ. ಆದ್ದರಿಂದಲೇ ಜನಜೀವನ ಮೇಲೆ ಹೇಳಿದಂತೆ ಅಜ್ಞಾನದಲ್ಲಿ ಮುಳುಗಿತ್ತು. ಈ ಮೊದಲೂ ತೋಂಟದಾರ್ಯರ ಶಿಷ್ಯರು ಇಲ್ಲಿ ಸುಳಿದಿದ್ದರು. ಪರಿಣಾಮ ಅಷ್ಟಾಗಿ ಕಂಡಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಮೂವರು ಶಿವಯೋಗಿಗಳು ಈ ನಾಡಿನಲ್ಲಿ ಬಂದರು. ಆತ್ಮಸಾಧನೆಯ ಅನುಷ್ಠಾನ-ದೊಡನೆ ಧರ್ಮಪ್ರಚಾರವನ್ನೂ ನಡೆಸುತ್ತ ಸಂಚರಿಸಿದರು. ಅವರು ಕಲಬುರ್ಗಿಯ ಸಮೀಪದ ಕಮಲಾಪುರಕ್ಕೆ ಬಂದರು.

೫. ಜ್ಞಾನದಾರತಿ

ಕಲ್ಯಾಣ ಶರಣರ ಕಾಲದಲ್ಲಿ ಉದಯವಾಗಿ, ಮತ್ತೆ ಕ್ರಿಯಾಹೀನವಾದ ಮುರುಕು ಮಠವೊಂದು ಕಮಲಾಪುರದಲ್ಲಿತ್ತು. ಅಲ್ಲಿ ಬಂದು ಉಳಿದುಕೊಂಡರು. ಒಂದು ಭಾವಿ, ಹಳೆಯ ಬಿಲ್ವವೃಕ್ಷ, ಒಂದೆರಡು ಗದ್ದುಗೆಗಳು ಮಠದ ಅವಶೇಷ-ವಾಗಿದ್ದವು. ಅಷ್ಟು ನಮ್ಮ ಶಿವಯೋಗಿಗಳಿಗೆ ಸಾಕಾಗಿತ್ತು. ಭಿಕ್ಷೆಯಿಂದ ಪ್ರಸಾದವನ್ನು ಅಣಿಗೊಳಿಸಿಕೊಳ್ಳುತ್ತಿದ್ದರು.

ಕಮಲಾಪುರದಲ್ಲಿ ಯಾವ ಮತಪಂಥಗಳೂ ಉಛ್ರಾಯ ಸ್ಥಿತಿಯಲ್ಲಿ ಇರಲಿಲ್ಲ. ಶೈವ, ವೈಷ್ಣವ. ಜೈನ, ಲಿಂಗವಂತ ಎಲ್ಲ ಮತಗಳೂ ತಮ್ಮ ತೇಜಸ್ಸನ್ನು ಕಳೆದುಕೊಂಡಿದ್ದವು. ಅವು ಜಾತಿಯಾಗಿ ಹೇಳಿಕೊಳ್ಳಲಿಕ್ಕೆ ಮಾತ್ರ ಉಳಿದಿದ್ದವು. ಇದಕ್ಕೆ ಕಾರಣವೇನೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಊರಲ್ಲಿ ಜಾತಿಯ ಜೈನರೇ ಹೆಚ್ಚಾಗಿದ್ದರು. ಲಿಂಗಾಯತ ಜಾತಿಯವರು ಕಡಿಮೆ.

ಎಂದಾದರೊಮ್ಮೆ ಅಪರೂಪವಾಗಿ ಬರುತ್ತಿದ್ದ ಶಿವಲಾಂಛನ ಭೂಷಿತರಾದ ಜಂಗಮ ಮೂರ್ತಿಗಳನ್ನು ಕಂಡು. ಸಂತೋಷ ಪಡುವ ಪಕ್ವ ಹೃದಯದ ಮುಗ್ಧ ಹಿರಿಯರು ನಾಲ್ಕಾರು ಜನರು ಹಳೆಯ ಮಠಕ್ಕೆ ಬಂದು, ನಮ್ಮ ಶಿವಯೋಗಿಗಳ ಪಾದಕ್ಕೆ ನಮಿಸಿ, ಹತ್ತಿರ ಕೂಡ್ರಹತ್ತಿದರು. ಗುರುನಂಜರು ಅವರನ್ನು ಆದರದಿಂದ ಕೂಡ್ರಿಸಿಕೊಂಡು, ನಗುಮೊಗದಿಂದ ಮಾತನಾಡುತ್ತಿದ್ದರು. ಎರಡು ದಿನಗಳಲ್ಲಿ ಆಗಮಿಕರ ಸಂಖ್ಯೆ ಬೆಳೆಯಿತು. ಆಗ ಶಿವಸ್ತುತಿಗಳನ್ನು, ಶರಣರ ವಚನಗೀತೆಗಳನ್ನು ಹಾಡಹತ್ತಿದರು. ಭವದ ದುಃಖ, ಮಾನವ ಜನ್ಮದ ಸಾರ್ಥಕತೆಯನ್ನು ಮೊದಲು ಮಾಡಿಕೊಂಡು, ತತ್ವಜ್ಞಾನವನ್ನು ತಿಳಿಯಾದ ನುಡಿಗಳಿಂದ ಹೇಳಹತ್ತಿದರು. ಸಿದ್ಧಲಿಂಗೇಶ, ಚೆನ್ನಮಲ್ಲೇಶರೂ ನೆರವಾದರು. ಬರಬರುತ್ತ ಅದು ಅನುಭಾವ ಗೋಷ್ಠಿಯಾಯಿತು. ನಿಯಮಿತ ವೇಳೆಯಲ್ಲಿ ತಪ್ಪದೆ ನಡೆಯುವಂತಾಯಿತು. ಗ್ರಾಮದಲ್ಲಿ ಬತ್ತಿ ಹೋಗಿದ್ದ ಶಿವಭಕ್ತಿಯ ಸೆಲೆ ಮತ್ತೆ ಚಿಮ್ಮಿತು. ಜನರು

ಸ್ವಾಮಿಗಳ ಸೇವೆಗೆ ಮುಂದೆ ಬಂದರು. ಕೆಲವರು ಪ್ರಮುಖರಾಗಿ ಗೋಷ್ಠಿಯ ಸಂಚಾಲಕರಾದರು. ಕೆಲವೇ ದಿವಸಗಳಲ್ಲಿ ಗೋಷ್ಠಿಯು ವಿಶಾಲವಾದ ಬೇರೊಂದು ಸ್ಥಳದಲ್ಲಿ ನಡೆಯಹತ್ತಿತು. ಶಿವಯೋಗಿಗಳ ಅಮೋಘ ಪ್ರವಚನಗಳು ಅಮೃತ ವೃಷ್ಟಿಗರೆಯಹತ್ತಿದವು. ಸಚರಾಚರ ವಿಶ್ವಕ್ಕೆಲ್ಲ ಅಧಿಷ್ಠಾನವಾಗಿರುವ ಪರವಸ್ತುವೇ ಸ್ಥಲ ಎಂಬುದರಿಂದ ಆರಂಭಿಸಿ, ಅದರ ಲೀಲಾಭಾವ, ಶಕ್ತಿವಿಲಾಸ, ಲಿಂಗ–ಅಂಗ, ಪರಮಾತ್ಮ–ಆತ್ಮರುಗಳ ವಿವೇಚನೆಗಳನ್ನು ಜನರು ಮನಗೊಟ್ಟು ಆಲಿಸಿದರು. ಭವಬಂಧನದಿಂದ ಮಾನವನು ದುಃಖಿಯಾಗಿದ್ದಾನೆ. ಉಪಾಧಿಗಳನ್ನು ಮೀರಿ, ಒಳಗಿರುವ ಆತ್ಮ ಸ್ವರೂಪವನ್ನು ಅರಿತು ಧ್ಯಾನಿಸಿ ಪರಮಾತ್ಮನಲ್ಲಿ (ಲಿಂಗದಲ್ಲಿ) ಸಾಮರಸ್ಯ ಹೊಂದಬೇಕು. ಇದಕ್ಕೆ ಗುರುವಿನ ಅನುಗ್ರಹದಿಂದ ಸಂಸ್ಕಾರ ಪಡೆದು ಷಟ್‌ಸ್ಥಲ ಮಾರ್ಗದಲ್ಲಿ ಅಷ್ಟಾವರಣಗಳ ಆಚರಣೆ ಮಾಡಿ, ಪಂಚಾಚಾರಗಳ ನೈತಿಕ ಬಲದಿಂದ ಸಾಧನೆ ಮಾಡಿ, ಶಿವಸಾಮರಸ್ಯ ಪಡೆದು, ಸುಖಿಯಾಗುವ ಪರಿ, ಇವು ಮುಖ್ಯವಾಗಿರುವ ಉಪದೇಶಪರ ಪ್ರವಚನಗಳನ್ನು ಕ್ರಮವಾಗಿ ಕೈಕೊಂಡರು. ಪರಿಣಾಮವು ಉತ್ಕೃಷ್ಟವಾಯಿತು. ಜನರಲ್ಲಿ ಉತ್ಸಾಹ ಮೂಡಿತು. ಭಕ್ತಿ ನೈದೋರಿತು, ಲಿಂಗನಿಷ್ಠೆ ತಲೆಯೆತ್ತಿತು. ಲಿಂಗಾರ್ಚನೆ ಕ್ರಮಗೊಂಡಿತು, ಹೆಸರಿನ ಲಿಂಗವಂತರೆಲ್ಲ ಲಿಂಗಧಾರಿಗಳಾದರು. ದೀಕ್ಷೆಹೊಂದಿ ಲಿಂಗೋಪಾಸಕರೂ ಸದಾಚಾರಿಗಳೂ ಆದರು.

ಈ ಲಿಂಗ ವೈಭವ ಇನ್ನುಳಿದ ಜನಾಂಗದವರನ್ನೂ ಆಕರ್ಷಿಸಿತು. ಯಾವ ಬೆಳಕನ್ನೂ ಕಾಣದೆ, ಕತ್ತಲೆಯಲ್ಲಿ ಕೇವಲ ಪಶುಗಳಂತೆ ಜೀವನ ನಡೆಸುತ್ತಿದ್ದ ಇನ್ನಿತರ ಜಾತಿಯವರೂ ದಿನವೊಂದಕ್ಕೂ ತಂಡತಂಡವಾಗಿ ಬಂದು ಶಿವಯೋಗಿಗಳಿಗೆ ಶರಣಾಗತರಾದರು. ತಮ್ಮನ್ನು ಉದ್ಧರಿಸಬೇಕೆಂದು ಬೇಡಿಕೊಂಡರು. ಗುರು–ನಂಜೇಶ್ವರರು ಆಲಸದೆ ಅವಿಶ್ರಾಂತವಾಗಿ ಕಾರ್ಯಕ್ರಮ ನಡೆಸಿದರು. ಎಲ್ಲರಿಗೂ ಕೃಪೆ ಮಾಡಲು ಮುಂದಾದರು. ಅವರ ಕಾರ್ಯಕ್ಷಮತೆಯು, ಹೆಚ್ಚಾಗಿ ಅಂತರ್ಮುಖರಾಗಿರುತ್ತಿದ್ದ ಸಿದ್ಧಲಿಂಗೇಶ್ವರನನ್ನೂ ಮರಳಿ ಕ್ರಿಯಾತ್ಮಕ ಚಟುವಟಿಕೆ–ಗಳಿಗೆ ಪ್ರೇರೇಪಿಸಿತು. ಚೆನ್ನಮಲ್ಲೇಶ್ವರರೂ ಜ್ಞಾನದಾಸೋಹದಲ್ಲಿ ಬಲಗೈಯಾಗಿ ಬಿಟ್ಟರು- ಊರವರೆಲ್ಲ, ಮುಖ್ಯವಾಗಿ ಜೈನರೆಲ್ಲ ಲಿಂಗಧಾರಣ ದೀಕ್ಷೆ ಹೊಂದಿ ಲಿಂಗ ಪೂಜಕರಾದರು, ಶಿವಭಕ್ತರಾದರು. ಈ ಧಾರ್ಮಿಕ ಆಂದೋಲನದಿಂದ ಹಲವರ ಬುದ್ಧಿ ಶಕ್ತಿಯೂ ಬೆಳೆಯಲು ಆಸ್ಪದವಾಗಿ ಅವರ ವಾಣಿಯಲ್ಲಿ ಶರಣರ ಚರಿತ್ರೆಗಳೂ, ವಚನಗಳೂ ನೆಲೆಯಾಗಿ ನಿಂತವು.

ಹಳೆಯ ಮಠ ಹೊಸ ರೂಪ ತಾಳಿತು; ವಿಶಾಲವಾಯಿತು. ಧಾರ್ಮಿಕ ಕ್ರಿಯೆಗಳ ಕೇಂದ್ರವಾಯಿತು. ಈ ವೀರಶೈವ ಧರ್ಮದ ಬೆಳಕು ಸುತ್ತಲಿನ

ಹಳ್ಳಿಗಳಿಗೂ ಹರಡಿತು. ಸಾಧ್ಯವಾದ ಬೇರೆ ಊರಿನವರೂ ನಿತ್ಯ ಬಂದು ಧರ್ಮ ಬೋಧೆಯ ಶ್ರವಣ ಮಾಡಿದರು; ಪುಳಕಿತರಾದರು; ಪ್ರೇರಿತರಾದರು. ಕುಟುಂಬ ಪರಿವಾರದೊಡನೆ ದೀಕ್ಷೆ ಪಡೆದು ಲಿಂಗಧಾರಣ ಮಾಡಿಕೊಂಡರು. ತಾವು ಲಿಂಗವಂತರೇ ಎನಿಸಿದವರು ನಿಜವಾಗಿ ಲಿಂಗಪೂಜಕರಾಗಿ ನಿಜದ ನಿಲುವಿನ ಮಾರ್ಗ ಹಿಡಿದರು. ಹೀಗೆ ಹರವ, ಹಟಗಾರ, ಹಾಲಗೌಳಿಗ, ಗೊರವ, ಗಾಣಿಗ, ರಡ್ಡಿ, ಕುಡುವೊಕ್ಕಲಿಗ, ಕಮ್ಮಾರ, ಕುಂಬಾರ, ಎಲ್ಲರೂ ಲಿಂಗಧಾರಿಗಳಾಗಿ ಸಂಗಡಗಳನ್ನು ಮರೆತು, ಶಿವಭಕ್ತ ಸಮುದಾಯವನ್ನು ಸೇರಿ ಶೋಭಿಸಿದರು. ಶಿವಯೋಗಿಗಳ ಪ್ರಭಾವ, ಪ್ರವಚನದ ಕೀರ್ತಿ, ಧರ್ಮಾಚಾರದ ಬೆಳವಣಿಗೆ ಇವುಗಳ ವಾರ್ತೆ ಹತ್ತಿರದ ರಾಜಾಪುರದ ನಾಡೊಡೆಯ ಲಿಂಗೊಂಡ (ಲಿಂಗಗೌಡ) ದೊರೆಗೆ ಗೊತ್ತಾಗದೆ ಇರುವದೇ ? ತಮ್ಮ ಗ್ರಾಮದವರೂ ವೀರಶೈವದ ಅನುಯಾಯಿಗಳಾದುದನ್ನೂ ಗಮನಿಸಿದ್ದರು. ಈ ದೊರೆಗಳೂ ಕುಡುವೊಕ್ಕಲಿಗರು. ಅವರ ಮನೆತನವೂ ಸಂತಾನದ ಕ್ಷೇಮಕ್ಕಾಗಿ, ಸಂಪತ್ತಿನ ಹೆಚ್ಚಳಕ್ಕಾಗಿ, ಮೂಢ ಭಕ್ತಿಯಿಂದ ಅನೇಕ ದೇವತಾ ಮೂರ್ತಿಗಳನ್ನು ಪೂಜಿಸುವ ಸಂಪ್ರದಾಯದ್ದೇ ಆಗಿದ್ದಿತು. ಆದರೂ ಸದುಹೃದಯದ ಲಿಂಗಗೌಡರು ಕಮಲಾಪುರಕ್ಕೆ ಬಂದು ಶಿವಯೋಗಿಗಳ ಚರಣಕ್ಕೆರಗಿ ಕಾಣಿಕೆ ಸಲ್ಲಿಸಿ ಆಶೀರ್ವಾದ ಪಡೆದುಕೊಂಡರು. ಕೆಲವು ಸಲ ಬಂದು ಅವರ ಪ್ರವಚನಗಳನ್ನು ಆಲಿಸಿದರು. ಕ್ರಮವಾಗಿ ಅವರಲ್ಲಿ ಶಿವಭಕ್ತಿ ಬೆಳೆಯಿತು. ಪರಿವಾರ ಸಹಿತ ಲಿಂಗಸಂಸ್ಕಾರ ಪಡೆದು ಗುರುನಂಜೇಶ್ವರರ ಭಕ್ತರಾದರು.

ರಾಜಾಪುರದ ಲಿಂಗಗೌಡರಂತೆ ಸುತ್ತಮುತ್ತಲೂ ಕೋಡಲಿ ರಾಮಲಿಂಗರೆಡ್ಡಿ ಮುಂತಾದ ದೇಶಮುಖರು ನಾಡ ದೊರೆಗಳಿದ್ದರು. ಈ ದೊರೆಗಳ ಅಧಿಕಾರ ಮತ್ತು ರಾಜಕೀಯ ಸ್ಥಾನಮಾನಗಳೇನೆಂಬುದನ್ನು ಇಲ್ಲಿ ತಿಳಿಯುವದು ಅಪ್ರ-ಸ್ತುತವಾಗಲಾರದು. ಕಲಬುರ್ಗಿಯ ಬಹಮನಿ ಸುಲ್ತಾನರ ಆಳ್ವಿಕೆಗೆ ಮಹಾರಾಷ್ಟ್ರ, ಕರ್ನಾಟಕದ ಉತ್ತರ ಭಾಗ, ಆಂಧ್ರದ ಬಹುಭಾಗ ಒಳಪಟ್ಟಿದ್ದವು ಕೆಲವೊಂದು ಹಳ್ಳಿಗಳ ಗುಂಪಿಗೆ ಒಬ್ಬ ದೇಶಮುಖ, ದೇಸಾಯಿ, ನಾಡಗೌಡ ಎಂಬ ಹುದ್ದೆಯ ಸಾಮಂತರು ಬಾದಶಹರ ಅಂಕಿತದಲ್ಲಿರುತ್ತಿದ್ದರು. ಇವರಿಗೆ ನಾಡ ದೊರೆಗಳೆಂದೂ ಅನ್ನಬಹುದು. ಗ್ರಾಮೀಣ ಜನರ ಪ್ರತ್ಯಕ್ಷ ಪ್ರಭುಗಳು ಅವರೇ ಆಗಿರುತ್ತಿದ್ದರು. ಇವರು ತೆರಿಗೆ ವಸೂಲ ಮಾಡಿ ಸುಲ್ತಾನರ ಅಧಿಕಾರಿಗಳಿಗೆ ಒಪ್ಪಿಸುತ್ತಿದ್ದರು. ಅವರು ಕೆಲವೊಂದು ಸೈನ್ಯ ಪಡೆಯನ್ನೂ ಹೊಂದಿರುತ್ತಿದ್ದರು. ಅವುಗಳ ವೆಚ್ಚಕ್ಕೆ ಉಂಬಳಿಗಳಿರುತ್ತಿದ್ದವು. ಸುಲ್ತಾನರು ಯುದ್ಧಕ್ಕೆ ಕರೆದರೆ ಈ ಪಡೆಗಳೆಲ್ಲ ಕೂಡಿ ಹೋಗಬೇಕಾಗುತ್ತಿತ್ತು. ಸುಲ್ತಾನರ ರಾಜ್ಯದಲ್ಲಿ ಐದು ಸುಭೆಗಳಿದ್ದವು. ಅವುಗಳ ಸುಭೇದಾರರು ಈ ನಾಡ ದೊರೆಗಳ ಮೇಲ್ವಿಚಾರಣೆ ನಡೆಸಿ ಸುಲ್ತಾನ ಬಾದಶಹರಿಗಾಗಿ ನಜರಾಣೆಗಳನ್ನು ಪಡೆಯುತ್ತಿದ್ದರು. ಲಿಂಗಗೌಡರು ಅಂತಹ ಒಬ್ಬ ನಾಡದೊರೆ

ದೇಶಮುಖ. ರಾಜಾಪುರ, ಕೋಡಲಿ, ದೇಶಮುಖಿಗಳು ಗೋವಳಕೊಂಡ ಸುಭೆಗೆ ಸೇರಿದ್ದವು.

ಕಮಲಾಪುರದಲ್ಲಿಯೂ ನೆರೆಯೂರುಗಳಲ್ಲಿಯೂ ಇರುವ ಲಿಂಗ ಭಕ್ತರಿಗೆ ನಿರಂತರ ಮಾರ್ಗದರ್ಶನಕ್ಕೆ ಸಿದ್ಧವಾಗಿ ನೆಲಸಿರುವ ಗುರುವೊಬ್ಬರು ಬೇಕೆಂಬ ಪ್ರಮುಖರ ಕೋರಿಕೆಯನ್ನು ಗುರುನಂಜೇಶ್ವರರು ಸರಿಯೆಂದು ಸಮ್ಮತಿಸಿದರು. ತಮ್ಮ ಸಹಯೋಗಿಗಳಾದ ಚೆನ್ನಮಲ್ಲೇಶ್ವರರಿಗೆ, "ಇನ್ನು ನೀವು ಇಲ್ಲಿಯೇ ಇದ್ದು ನಿಮ್ಮ ಲಿಂಗಾನುಷ್ಠಾನದೊಂದಿಗೆ ಭಕ್ತರನ್ನೂ ಉದ್ಧರಿಸಬೇಕೆ"ಂದು ಹೇಳಿ ಒಪ್ಪಿಸಿದರು. ಭಕ್ತರೆಲ್ಲರೂ ಅವರನ್ನು ಗುರುಗಳೆಂದು ಭಾವಿಸಿ, ಸೇವೆ ಸಲ್ಲಿಸಲು ಒಪ್ಪಿ, ಜಯಘೋಷ ಮಾಡಿದರು. ಆಗ ಚೆನ್ನಮಲ್ಲೇಶ್ವರರು ಎದ್ದು ಬಂದು, ಗುರುನಂಜೇಶ್ವರರಿಗೆ ಕೈಮುಗಿದು, ಆಕಸ್ಮಿಕ ಬಂದ ಭಾರಕ್ಕಾಗಿ ಭಯಗೊಂಡಂತೆ, ಮಾತು ಬಾರದೆ ಮೌನವಾಗಿ ನಿಂತರು. ಅವರ ಭಾವನೆಯನ್ನು ಅರಿತು, ಗುರುನಂಜೇಶ್ವರರು ಸ್ವಲ್ಪ ದಿವಸ ತಾವೂ ಅವರ ಜೊತೆಯಲ್ಲಿ ಇರುವದಾಗಿ ಹೇಳಿ ಸಮಾಧಾನಗೊಳಿಸಿದರು.

× × × × × × × ×

ಪ್ರಾತಃಕಾಲದ ಲಿಂಗೋಪಾಸನೆಯನ್ನು ಪೂರೈಸಿಕೊಂಡು ಸಿದ್ಧಲಿಂಗೇಶ್ವರ, ಗುರುನಂಜೇಶರು ಹೊರಗೆ ಬಂದು, ಪರಸ್ಪರ ವಂದನೆಗೈದು, ಪೀಠಸ್ಥರಾಗಿ ಎರಡು ನಿಮಿಷವಾಗಿತ್ತು. ಒಳಗೆ :

"ಬಯಲ ಮೂರ್ತಿಯ ಮಾಡಿ ಎನ್ನ ಕರಸ್ಥಲಕ್ಕೆ
ಕೊಟ್ಟನಯ್ಯಾ ಶ್ರೀಗುರು;
ಬಯಲ ಮೂರ್ತಿಯ ಅಮೂರ್ತಿಯ ಮಾಡಿ ಎನ್ನ
ಪ್ರಾಣದೊಳಗಿರಿಸಿದನಯ್ಯಾ ಶ್ರೀಗುರು
ಬಯಲು ಬಯಲನೇ ಬಯಸಿ ಬಯಲೆಂದೆನಿಸಿ
ಎನ್ನ ಭಾವದಲ್ಲಿ ಇರಿಸಿದನಯ್ಯಾ ಶ್ರೀಗುರು
ಇದು ಕಾರಣ ಎನ್ನ ಕರಸ್ಥಲ ಮನಸ್ಥಲ ಭಾವಸ್ಥಲದಲ್ಲಿ ಧರಿಸಿ,
ನಾನು ಲಿಂಗಾಂಗ ಸಂಬಂಧಿಯಾದೆನಯ್ಯಾ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ."

ಈ ವಚನ ಗೀತವನ್ನು ಸರಾಗವಾಗಿ ಹಾಡುತ್ತ ಚೆನ್ನಮಲ್ಲೇಶ್ವರರು ಪೂಜೋಪಕರಣಗಳನ್ನು ಹೊಂದಿಸಿಟ್ಟು, ಗೀತೆ ಮುಗಿಯುತ್ತಿದ್ದಂತೆ ಗುರುಮನೆಯಿಂದ ಹೊರಗೆ ಬಂದು, ಗುರು ಬಂಧುಗಳಿಗೆ ವಂದಿಸಿದರು. ವಚನದ ಕೊನೆಯ 'ಪ್ರಭುವೇ.......' ಎಂಬ ಪದದ ನಾದ ಇನ್ನೂ ಮುಖದಲ್ಲಿತ್ತು.

ಚೆನ್ನಮಲ್ಲೇಶ್ವರರ ಗೀತ ಪಠಣ ಕೇಳುತ್ತಿರುವಾಗಲೇ ಹರ್ಷಿತರಾಗಿರುವ ಗುರುನಂಜೇಶ್ವರರು ಇಂದು ಇಷ್ಟು ಮನಬಿಚ್ಚಿ, ಬಾಯಿಬಿಚ್ಚಿ, ಮೈಮರೆತು ಹಾಡುತ್ತ ಬಂದ ಅವರ ರಂಜಿಸುವ ಮುಖಮಂಡಲ ನೋಡಿ ನಸುನಕ್ಕರು ಮತ್ತು ಸಿದ್ಧಲಿಂಗೇಶ್ವರರತ್ತ ಹೊರಳಿ ಕಿಂಚಿತ್ ಹಾಸ್ಯಕ್ಕಾಗಿ:

"ದೇವರು, ಚೆನ್ನಮಲ್ಲೇಶ್ವರ ದೇವರಿಗೆ ಭಕ್ತೋದ್ಧಾರದ ಹೊಣೆಯತ್ತ ಪೂರ್ತಿಯಾಗಿ ಗಮನ ಹರಿದಿದೆ. ಅಧಿಕಾರದೊಡನೆ ಹೊಣೆಗಾರಿಕೆಯು ಅರಿವೂ ಆಗಬೇಕಷ್ಟೇ" ಎನ್ನಲು, ಸಿದ್ಧಲಿಂಗೇಶ್ವರರು, 'ಇವರು ಪ್ರವಚನ ಗೋಷ್ಠಿಯಲ್ಲಿ ಬಹುಶಃ ಭಾಗವಹಿಸಿದ್ದಿಲ್ಲ" ಎಂದರು. ಅದಕ್ಕೆ ಉತ್ತರವಾಗಿ ಗುರುನಂಜೇಶ್ವರರು :

"ಇನ್ನು ಭಾಗವಹಿಸುವರು ನೋಡಿರಿ. ನೀವು ಗುರು ಪೀಠಾರೋಹಣ ಮಾಡಿಸಿದ್ದೀರಿ. ಇನ್ನು ಪ್ರವಚನಗೋಷ್ಠಿಯ ಅಗ್ರಪೀಠದಲ್ಲಿ ಮಂಡಿಸಿ ಬೋಧಿಸು-ವರು. ಇದುವರೆಗೆ ಸುಪ್ತವಾಗಿದ್ದ ಅವರ ಜ್ಞಾನನಿಧಿ ಪ್ರಕಾಶಗೊಳ್ಳುವದು. ಇವರ ವಾಣಿ ವೈಖರಿಯ ಶಕ್ತಿಯನ್ನು ನಾನು ಗ್ರಹಿಸಿದ್ದೇನೆ ಈ ದೇವರು ತೋರಿಸಿ ಕೊಳ್ಳಲೊಲ್ಲರು."

ಎನ್ನುತ್ತ ಚೆನ್ನಮಲ್ಲೇಶ್ವರರತ್ತ ನೋಡಿ ನಗೆ ಬೀರಿದರು. ಅದಕ್ಕೆ ಅವರು :

"ಹೋ, ಹೋ, ದೇವರೂ, ಸ್ವಾಮಿಗಳೇ ಹೊಗಳಿ ನನ್ನನ್ನು ಕೊಲ್ಲಬೇಡಿ. ನಿನ್ನೆ ನೀವು ಈ ವಚನವನ್ನು ಪಠಿಸಿ, ಆಧರಿಸಿ, ಶಿವಾದ್ವೈತದ ಸಾರವನ್ನು, ಸಾಧನೆಯ ಮರ್ಮವನ್ನು ಅಮೃತ ವರ್ಷವಾಗಿ ಸುರಿದಿರಲ್ಲಾ! ಅದು ನನ್ನನ್ನು ಎಚ್ಚರಗೊಳಿಸಿದೆ. ಈ ಪೀಠಾರೋಹಣವೊಂದು ಹೊಸ ಉಪಾಧಿ! ಅದೇನು ಮಹಾ? ನೀವಿನ್ನೂ ಇದನ್ನು ಕಟ್ಟಿಕೊಂಡಿಲ್ಲವಲ್ಲಾ, ನಿಮ್ಮ ಮಾತು ಎಷ್ಟು ಸುಂದರ, ಎಷ್ಟು ಸೊಗಸು, ಎಷ್ಟು ಪರಿಣಾಮಕಾರಿ! ಬಯಲ ಸ್ವರೂಪದ ನಿಶ್ಶೂನ್ಯ ವಸ್ತುವನ್ನು ಘನೀಭೂತಗೊಳಿಸಿ. ಗುರು ಶಿಷ್ಯನ ಕರಸ್ಥಳಕ್ಕೆ ಕೊಟ್ಟು, ಕ್ರಿಯಾಶುದ್ಧಿಗೊಳಿಸುವನು; ಅದು ಸಕಲ. ಬಯಲವ ೂರ್ತಿಯು ಅಮೂರ್ತಿಯ ಮಾಡಿ, ಅಂದರೆ ಸಕಲ ನಿಷ್ಕಲಗೊಳಿಸಿ, ಪ್ರಾಣದಲ್ಲಿರಿಸಿ, ಧ್ಯಾನದಲ್ಲಿ ಮನವ ಅಡಗಿಸಹಚ್ಚುವನು. ಬಯಲು ಬಯಲನೆ ತಾಳಿದಂತೆ ನಿಷ್ಕಲಗೊಳಿಸಿ, ಭಾವದಲ್ಲಿ ಬೆರಿಸಿ, ಭಾವಿಸಿ, ಲಿಂಗಾಂಗಯೋಗ ಹೊಂದುವ ದಿವ್ಯ ಸಾಧನೆಯನ್ನೂ ತೋರುವನು. ಇದನ್ನೆಲ್ಲ ನೀವು ವಿವರಿಸಿದ್ದರ ಪರಿಣಾಮ ನನಗೆ ಬಂದ ಹುರುಪು."

"ಈಗ ನೀವು ಸೊಗಸಾಗಿ ವಿವರಿಸಿದಿರಿ. ನಾನೆಷ್ಟು ಹೇಳೇನು ?"

"ನೀವು ಭಕ್ತರ ಹೃದಯಗಳಿಗೆ ಜ್ಞಾನದಾರತಿ ಬೆಳಗಿದಿರಿ. ಅಲ್ಲಿ ಆತ್ಮ ಜ್ಯೋತಿಯನ್ನು ಹೊತ್ತಿಸಿದಿರಿ. ಸ್ವಾಮೀ ಎಷ್ಟೆಂದರೇನು ? ಶ್ರೋತೃಗಳನ್ನು ಮಂತ್ರ ಮುಗ್ಧರನ್ನಾಗಿಸಿ ಬಿಟ್ಟದ್ದಿರಿ."

"ಇಷ್ಟು ಆವೇಶದಿಂದ ಹೇಳಿದರೆ, ಅಲ್ಪವು ಮಹವಾದೀತೇ ದೇವರೂ ?" ನಗುತ್ತಲೆಂದರು ಗುರುನಂಜೇಶ್ವರರು.

"ನಾನೂ ಮೈ ಮರೆತಿದ್ದೆ ಎಚ್ಚರವೇ ಇರಲಿಲ್ಲ" ಸಿದ್ಧಲಿಂಗೇಶ್ವರರೆಂದರು.

"ಅದು ನಿಮ್ಮ ಭಾವಸಮಾಧಿ, ಪರಮಗುರು ತೋಂಟದಾರ್ಯರ ಅನೌಲ್ಯ-ವಚನದ ಸಾರದಂತೆಯೇ ನಿಮ್ಮ ಸರ್ವಾಂಗವೂ ಲಿಂಗ ಸಂಬಂಧಿಯಾಗಿದೆ. ನೀವು ಸರ್ವಾಂಗ ಲಿಂಗಿಗಳು. ಈ ವಚನದ ಸ್ಮರಣೆಯಿಂದ ಆ ಭಾವ ಆವರಿಸಿ, ಹೊರಗಣದನ್ನು ಮರೆಸಿ, ಸಮಾಧಿ ಹತ್ತುತ್ತದೆ."

"ಅದು ಗುರುಗಳ ವಚನೋಪದೇಶದಂತೆ ಅವರ ಹಸ್ತಸಿದ್ಧಿಯ ಮಹಿಮೆಯೂ ಆಗಿದೆ" ಎಂದು ಸಿದ್ಧಲಿಂಗೇಶ್ವರರೆಂದರು.

ಚೆನ್ನಮಲ್ಲ ಯೋಗಿಗಳು ತಮ್ಮ ಎದೆದುಂಬಿದ ಮಾತನ್ನು ಮುಂದುವರಿಸಿದರು :

"ಗುರುನಂಜೇಶ್ವರ ದೇವರೇ, ನಿನ್ನೆ ನೀವು ಪ್ರಕಟಿಸಿದ ನಿಮ್ಮ ವಿಚಾರಗಳು ಸೀಮಾತೀತವಾಗಿದ್ದವು. ಉಪನಿಷದಾಗಮಗಳಿಗೆ ಮಿಕ್ಕಿದ್ದವು. ನಿಮಗೇನು ಯಾವ ಪಂಡಿತರೂ ವೇದೋಪನಿಷತ್ತುಗಳ, ಆಗಮಗಳ ಅಧ್ಯಯನ ಮಾಡಿ ಸಿದ್ದಾರೆಯೇ ?

ಸಿದ್ಧಲಿಂಗೇಶ್ವರರು ನಡುವೆ ಬಂದು–ಎಂದರು :

"ಚೆನ್ನಮಲ್ಲೇಶಾ ಗುರುನಂಜರು ಪ್ರಥಮತಃ ಶಿವಬೀಜವಾಗಿದ್ದಾರೆ. ಅಲ್ಲಿ ಪ್ರಫುಲ್ಲವಾಗ ಬೆಳೆದಿದೆ ಶಿವಜ್ಞಾನದ ವೃಕ್ಷ ! ಗುರುತೋಂಟದಾರ್ಯರ ನುಡಿಯೊಂದು ನೆನಪಾಗುತ್ತಿದೆ.

ಸೂರ್ಯನ ಬೆಳಗಿಂಗೆ
ಕೊಳ್ಳಿಯ ಬೆಳಗ ಹಿಡಿಯಲುಂಟೇ ಮರುಳೇ ?
ತನ್ನ ಮುಖವ ತಾ ಬಲ್ಲವಂಗೆ
ಕನ್ನಡಿ ಹಿಡಿದು ನೋಡಲುಂಟೇ ಹೇಳಾ ?
ಆಗಮ ಶಿಕ್ಷೆಯೆಂಬುದು ಲೋಗರಿಗಲ್ಲದೆ

ಆದಿಯಲ್ಲಿ ಶಿವಬೀಜವಾದ ಮಹಾಮಹಿಮುಂಗುಂಟೇ ?
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ !"

'ನಿಜ ನಿಜ' ಎಂದರು ಚೆನ್ನಮಲ್ಲೇಶರು.

ಅರ್ಚನೆ, ಅರ್ಪಣೆಯ ನಂತರ ಅನುಭವದ ಅಂಗವಾಗಿ, ಪರಮಾನುಭಾವದಲ್ಲಿ ಮೂವರು ಶಿವಯೋಗಿಗಳು ಈ ಬಗೆಯಾಗಿ ವಿಹರಿಸುತ್ತಿದ್ದರು ಈ ಸಮಯದಲ್ಲಿ ದರ್ಶನಕ್ಕೆ ಬಂದು ಕುಳಿತಿರುತ್ತಿದ್ದ ಭಕ್ತರಾರೂ ಇಂದು ಮುಂದೆ ಇಲ್ಲಿಲ್ಲ. ನಿನ್ನೆ ಮೊನ್ನೆ ಜರುಗಿದ ವಿರಕ್ತ ಗುರುಪೀಠಾರೋಹಣ ಸಮಾರಂಭದ ಸಾಮಾನು ಸಲಕರಣೆಗಳನ್ನು ಅಂಗಳದಲ್ಲಿ ವಿಂಗಡಿಸಿ ಕಳಿಸುವವರಲ್ಲಿ ಅವರು ತೊಡಗಿದ್ದರು. ಗುರುನಂಜೇಶ-ಚೆನ್ನಮಲ್ಲೇಶರು ಅತ್ತ ಗಮನ ಹರಿಸಿ ನೋಡಹತ್ತಿದ್ದರು. ಇತ್ತ ಸಿದ್ಧಲಿಂಗೇಶ್ವರರಿಗೆ ಮೇಲಿನ ವಚನ ಹೇಳಿದ ನಂತರ ಗುರುವಚನ ಪ್ರಕಾಶ ಮೈದುಂಬಿದಂತಾಗಿ ಮೈಮರೆತಿದ್ದರು. ಕ್ಷಣ ಕಾಲದ ನಂತರ ಪ್ರಕೃತಕ್ಕೆ ಬಂದು ತಟ್ಟನೆ ಎದ್ದು ಮುಂದೆ ಬಂದು ಗುರುನಂಜೇಶರ ಹೆಗಲ ಮೇಲೆ ಅಕಸ್ಮಾತ್ತಾಗಿ ಕೈಯಿಟ್ಟರು. ಮೊಗದಿರುವಿ ನೋಡಿದ ಗುರುನಂಜರು ಅಚ್ಚರಿ ಪಟ್ಟು ಎದ್ದು ನಿಂತು 'ಯಾಕೆ ದೇವರು ?' ಎಂದರು. ಚೆನ್ನಮಲ್ಲೇಶ್ವರರೂ ಕುತೂಹಲದಿಂದ ಎದ್ದು ನಿಂತರು. ಸಿದ್ಧಲಿಂಗೇಶ್ವರರ ಧ್ವನಿ ಮೆದುವಾಗಿತ್ತು. ಮೆಲ್ಲಗೆ ನುಡಿದರು :

"ಗುರುನಂಜೇಶ್ವರಾ, ಯೋಗೀಶ್ವರಾ, ನನಗಿನ್ನು ಅಪ್ಪಣೆ ಕೊಡಬೇಕು. ನನ್ನ ಜೀವನದ ಮಣಿಹ ಮುಗಿದಿದೆ. ಶಿವನ ಕರೆ ಸಮೀಪಿಸಿದೆ. ಗುರುವಿನ ಆದೇಶ ಬಂದಿದೆ. ಮೂರು ದಿನಗಳಿಂದಲೂ ಅವರು ನನ್ನನ್ನು ಪ್ರೇರಿಸುತ್ತಿದ್ದಾರೆ. ಲಿಂಗ ಧ್ಯಾನದಲ್ಲಿ ಕೊನೆಯದಾಗಿ ಲೀನನಾಗಬೇಕು........"

"ಇದೇನು ಸ್ವಾಮೀ ನಮ್ಮನ್ನು ಅನಾಥರನ್ನಾಗಿ ಮಾಡುವ ನುಡಿಯಿದು !"

"ನೀವು ಅನಾಥರಲ್ಲ; ಪರಶಿವಸ್ವರೂಪರು. ನಿಮಗೆ ನಾಥ ಕಿಂಕರ ಭಾವನೆ ಬೇಡ."

"ನಿಮ್ಮ ಲಿಂಗನಿಷ್ಠೆಯ ಬೆಳಕು ನಮ್ಮನ್ನು ನಡಿಸುತ್ತಿದೆ."

"ಮಹಾಲಿಂಗ ಸ್ವಾಯತ ಮಾಡಿಕೊಂಡ ನೀವು ಸ್ವಯಂ ಜ್ಯೋತಿಯಾಗಿರುವಿರಿ. ಈಗ ದುಗುಡ ದುಮ್ಮಾನಗಳು ಸರಿಯಲ್ಲ. ಶ್ರೀಗುರು ತೋಂಟದಾರ್ಯರ ಕಾರ್ಯವನ್ನು ನೀವಿಬ್ಬರೂ ಇಮ್ಮಡಿ ಮುಮ್ಮಡಿಯಾಗಿ ಮುಂದುವರಿಸುವಿರಿ."

ಹನಿಗೂಡಿದ ಕಣ್ಣುಗಳಿಂದ ಚೆನ್ನಮಲ್ಲೇಶ್ವರರು, ಸಿದ್ಧಲಿಂಗೇಶರ ಪಾದವನ್ನು ಹಿಡಿದು : "ಬಾಲ್ಯದಿಂದಲೂ ನಿಮ್ಮನ್ನು ಅನುಸರಿಸಿ ಬಂದ ನನ್ನನ್ನು ಇಲ್ಲಿ ಇಟ್ಟು, ಬಿಟ್ಟು ತೆರಳುವದೇ ಸ್ವಾಮೀ ? ಶಿವಯೋಗೀಶ್ವರಾ !" ಎಂದು ದುಃಖಿಸಿದರು.

"ಅನುಸರಿಸುವದು, ಮಾರ್ಗದರ್ಶನ ಮಾಡುವದು ಇವೆರಡು ಅಧ್ಯಾತ್ಮ ಸಾಧನೆಯಲ್ಲಿ ಸ್ವಯಂ ಸಾಧನೆಯ ರೀತಿಯೇ ಆಗಿವೆ. ಆದ್ದರಿಂದ ನಾನು ಆಶ್ರಯ ದಾದೆನೆಂಬುದು ಸರಿಯಲ್ಲ. ನೀವಿಬ್ಬರೂ ಮರ್ತ್ಯವನ್ನು ಮಹವನ್ನಾಗಿ ಮಾಡುವ ತೋಂಟದಾರ್ಯರ ದೃಷ್ಟಿಯಲ್ಲಿ ಸಮರ್ಥ ಶಿವಯೋಗಿಗಳಾಗಿದ್ದೀರಿ. ಈಗ ಚಿಂತೆ ಕಳವಳಗಳು ಉಚಿತವಲ್ಲ !"

"ತಾವು ಈಗ ದಯಮಾಡಿಸುವದೆಲ್ಲಿಗೆ ?" ಎಂದರು ಗುರುನಂಜರು.

"ಈ ಶರೀರವು ತನ್ನ ಕರ್ಮಫಲವನ್ನು ಉಂಡು ಆಗಲಿದೆ; ಇನ್ನು ಇದರ ವಿಸರ್ಜನೆಯಾಗಬೇಕು. 'ಕಾಯ-ಜೀವದ ಹೊಲಿಗೆಯ ಬಿಚ್ಚುವ' ಕೊನೆಯ ಲಿಂಗಾನುಷ್ಠಾನಕ್ಕೆ ಎಲ್ಲಿ ಅನುಕೂಲವೋ ಅಲ್ಲಿಯವರೆಗೆ, ಶಿವನು ಅದನ್ನು ಎಲ್ಲಿ ತೋರಿಸುವನೋ ಅಲ್ಲಿಯವರೆಗೆ, ಪಯಣಿಸುವೆ."

"ತಮ್ಮ ಶರೀರ ಹಣ್ಣಾಗಿದೆ ಜತೆಗೆ ನಾನು ಬರುತ್ತೇನೆ."

"ಇಲ್ಲಿ ಮಾಡಬೇಕಾದ ಕೆಲಸ ನಿಮಗೆ ಬಹಳವಿದೆ, ಪರಮ ಗುರುವಿನ ಕಾರ್ಯ ಬಿಟ್ಟು ನೀವಿಬ್ಬರೂ ಬರುವದು ಯೋಗ್ಯವಲ್ಲ."

"ಬೇರೆ ಯಾರನ್ನಾದರೂ ಹೊಂದಿಸೋಣ."

"ಅದೂ ನನಗೆ ತೊಡಕು."

"ಶಿವಶಿವಾ ಕಳವಳಕ್ಕೆ ಎಡೆ ಮಾಡುತ್ತೀರಿ" ಚೆನ್ನಮಲ್ಲೇಶರ ದುಃಖದ ಧ್ವನಿ.

"ಶಾಂತರಾಗಿರಿ ಇದು ಶುಭ ಸಮಯ; ಶುಭ ಸಂದರ್ಭ; ಆತಂಕದ ಮಾತು ಸರಿಯಲ್ಲ. ನೀವು ಸಾಧಿಸಿದ ಬೆಳಕಿನಲ್ಲಿ ಅದನ್ನು ಕಾಣಿರಿ."

"ಆಗಲಿ ಯೋಗೀಶ್ವರಾ, ನಮ್ಮ ಹೃದಯದಲ್ಲಿ ನಿಮ್ಮ ಪಾದಗಳ ನೆನಹು ನಿಲ್ಲುವಂತೆ ಕರುಣಿಸಿರಿ. ಯಾವಾಗ ಪಯಣ ?"

"ನಾಳೆ ಬೆಳಗಿನ ಜಾವದಲ್ಲಿ."

"ಆಗಲಿ" ಇಬ್ಬರೂ ಕೈ ಮುಗಿದು ನುಡಿದರು. ಮರಳಿ ಮೂವರೂ ಆಸೀನರಾದರು.

ಅಂಗಳದಲ್ಲಿ ಕಾರ್ಯನಿರತರಾಗಿರುವ ಭಕ್ತರು ಇವರ ಮಾತುಗಳತ್ತ ಆಕರ್ಷಿತರಾಗಿ ನಿಂತು ಕೇಳಿದರು; ಕೇಳಿ ಕಕ್ಕಾವಿಕ್ಕಿಯಾದರು; ಯಾರಿಗೂ ಏನನ್ನೂ ಆಡಲು ತಿಳಿಯದು; ಧೈರ್ಯವೂ ಆಗದು. ಮೂಕ ವೇದನೆ ಸಹಿಸುತ್ತ ಮೇಲೆ ಬಂದು ಸಾಷ್ಟಾಂಗವೆರಗಿ ಮೌನವಾಗಿ ಕುಳಿತರು. ಅವರ ಮನದ ವ್ಯಥೆಯನ್ನರಿತು ಗುರುನಂಜೇಶ್ವರರು :

"ಭಕ್ತ ಬಂಧುಗಳೆ, ಒದಗಿದ್ದ ಪ್ರಸಂಗ ನಿಮಗೆ ತಿಳಿದಿದೆ. ಚಿಂತಿಸಿ ಫಲವಿಲ್ಲ. ಎಲ್ಲವೂ ಶಿವನ ಕರುಣೆಯೆಂದೇ ಭಾವಿಸಬೇಕು. ನಾಳೆ ಮುಂಜಾನೆ ಸಾಧ್ಯವಾದಷ್ಟು ಜನರು ಶುಚಿರ್ಭೂತರಾಗಿ ಮಠಕ್ಕೆ ಬನ್ನಿರಿ. ಶಿವಭಜನೆ ಮಾಡುತ್ತ ಸಂಭ್ರಮದಿಂದ ಶಿವಯೋಗಿಗಳನ್ನು ಊರ ಹೊರವಲಯದವರೆಗೆ ಬಿಜಯಂಗೈಯಿಸಿ, ಆಶೀರ್ವಾದ ಪಡೆದು ಬೀಳ್ಕೊಡೋಣ, ಈಗ ತೆರಳಬಹುದು" ಎಂದರು.

ಇದ್ದುದರಲ್ಲಿ ಸಮಾಧಾನ ಮಾಡಿಕೊಂಡು ಭಕ್ತರೆಲ್ಲರು ಮನೆಗೆ ನಡೆದರು. ಸಿದ್ಧಲಿಂಗ ಶಿವಯೋಗಿಗಳ ನಿರ್ಗಮನದ ಸುದ್ದಿ ಸಂಜೆಯೊಳಗಾಗಿ ಊರಲ್ಲೆಲ್ಲ ಗೊತ್ತಾಯಿತು.

ಸಂಜೆಯ ಗೋಷ್ಠಿಗೆ ಸ್ಥಳ ಸಾಲದಂತೆ ಭಕ್ತಜನರು ಬಂದರು. ಸಿದ್ಧಲಿಂಗ ಶಿವಯೋಗಿಗಳ ಕೊನೆಯ ಪ್ರವಚನ! ಗುರುಸ್ತೋತ್ರ ಮಾಡಿ ಸ್ಮರಿಸಿ ಆರಂಭಿಸಿದರು :

"ಪುಣ್ಯವಂತರೆ ನೀವು ಭವ ಮುಕ್ತರಾಗುವದಕ್ಕಾಗಿ ಲಿಂಗ ದೀಕ್ಷೆ ಹೊಂದಿ, ಪರಶಿವ ಭಕ್ತರು ಲಿಂಗ ಪೂಜಕರು ಆಗಿದ್ದೀರಿ. ಕೆಲವರು ಅರಿತು, ಕೆಲವರು ಒಬ್ಬರನ್ನು ಕಂಡು ಒಬ್ಬರಂತೆ ಈ ಶಿವಸಂಸ್ಕಾರ ಹೊಂದಿರಬಹುದು. ಇದರಲ್ಲಿ ಶ್ರೀಗುರು ಅಂಗದಲ್ಲಿ ಲಿಂಗಸ್ಥಾಪ್ಯವ ಮಾಡುವ ಎಂತಹ ಮಹತ್ಕಾರ್ಯವ ಮಾಡುವನೆಂಬುದನ್ನು ನಿನ್ನೆ ಗುರುನಂಜೇಶ್ವರರು ತಿಳಿಯಪಡಿಸಿದ್ದಾರೆ. ಈ ತ್ರಿವಿಧ ದೀಕ್ಷೆಯ ಪ್ರಯೋಜನ ಏನು ಎಂಬುದನ್ನು ಇನ್ನೂ ಅರಿತು ದೃಢಪಡಿಸಿಕೊಳ್ಳೋಣ. ಇದಕ್ಕಾಗಿ ಗುರು ತೋಂಟದಾರ್ಯರ ಇನ್ನೊಂದು ವಚನ ಹೀಗಿದೆ :

ಶ್ರೀಗುರು ಕ್ರಿಯಾ ದೀಕ್ಷೆಯಿಂದ ತನುಗುಣವ ಭಸ್ಮೀಕೃತವ
ಮಾಡಿದ ಬಳಿಕ ಅದು ಜಡ ತನುವಲ್ಲ !
ಶಿವಸತ್‌ಕ್ರಿಯಾಚಾರದ ಮೂಲ ಸೂತ್ರವೇ ತನ್ನ ತನುವೆಂದರಿವುದು
ಶ್ರೀಗುರು ಮಂತ್ರದೀಕ್ಷೆಯಿಂದ ಮನದ ಪೂರ್ವಾಶ್ರಯವ ಕಳೆದು
ಮನಕ್ಕೆ ಘನ ನೆನಹ ಸಂಬಂಧಿಸಿದನಾಗಿ

ಮನ ನಿರ್ಮಲವಾಗಿ ಲಿಂಗಕ್ಕಾಶ್ರಯವೆಂದು ಅರಿವುದು.
ಶ್ರೀಗುರು ಜ್ಞಾನ ದೀಕ್ಷೆಯಿಂದ ಪ್ರಾಣನ ಪ್ರಪಂಚಿನ ಪಶುಭಾವನ ಕಳೆದು,
ಅಖಂಡಿತ ಜ್ಞಾನ ಲಿಂಗ ಕಳೆಯು
ತನ್ನ ಪ್ರಾಣನಾಥನೆಂದು ತಿಳುಹಿದನಾಗಿ ಪ್ರಾಣನ ಮಲಿನವಳಿದು
ಲಿಂಗಭಾವ ಸಮನಿಪುದು ಎಂದರಿವುದು,
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

ಈ ವಚನವನ್ನು ಪಠಿಸಿ, ಕ್ರಮವಾಗಿ ಕ್ರಿಯಾ, ಮಂತ್ರ, ಮೇಧಾ ದೀಕ್ಷೆಗಳಿಂದ ತನು-ಮನ ಪ್ರಾಣಗಳು ಪವಿತ್ರವಾಗಿ, ಬದ್ಧ ಜೀವನು ಲಿಂಗಾಂಗ ಸಾಮರಸ್ಯಕ್ಕೆ ತಕ್ಕ ಶುದ್ಧ ಜೀವನು (ಲಿಂಗನು) ಆಗುವ ಪರಿಯನ್ನು ವಿವರಿಸಿ ಮುಂದುವರಿದು ಹೀಗೆ ಹೇಳಿದರು :

"ಲಿಂಗಾಂಗ ಸಾಮರಸ್ಯಕ್ಕೆ ಸಾಧನೆ ಮಾಡುವ ಅಂಗನು, ಲಿಂಗಾರ್ಚನೆ-ಜಪ-ತಪಗಳನ್ನು ಮಾತ್ರ ಮಾಡಿದರೆ ಆಗುವದಿಲ್ಲ. ಅವನ ಪ್ರತಿಕ್ಷಣದ ನುಡಿಯೂ ನಡೆಯೂ, ಲಿಂಗದ ನುಡಿ, ಲಿಂಗದ ನಡೆಯಾಗಿರಬೇಕು. ಆದರೆ ಬಹು ಜನರು ಹಾಗೆ ಇರುವದಿಲ್ಲ. 'ಇತ್ತ ಜಪಗೈವರು. ಅತ್ತ ಅನೃತವ ನುಡಿವರು. ಇತ್ತ ತಪ ಮಾಡುವರು, ಅತ್ತ ಪರರಿಗೆ ಕೇಡು ಬಗೆಯುವರು. ತಾವು ಪಂಚಾಚಾರ ನಿರತರೆಂಬರು; ಒಳಗೆ ಪಾತಕಕ್ಕೆ ಮನಗೊಡುವರು. ಇಂತಹ ಹೊರಬಳಿಕೆಯ ಲೋಕರಂಜನೆಯಲ್ಲಿಪ್ಪವರಿಗೆ, ಅಂಜಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ದೂರದಲ್ಲಿ ಓಡುವನು (ದೇವರು ದೂರ ಸರಿಯುವನು).' ಅನಾಚಾರವನ್ನೇ ಆಚಾರವೆಂಬ, ಅಸತ್ಯವನ್ನೇ ಸತ್ಯವೆಂಬ, ವಿಷವನ್ನೇ ಅಮೃತವೆಂಬ, ಸಹಜವನರಿಯದ ಅಸಹಜರಿಗೆ ಶಿವನು ಒಲಿಯೆಂದರೆ ಹೇಗೆ ಒಲಿದಾನು ?

ಜನರು ಜೊಳ್ಳುಮಾತೆಂದೊಡೆ ನಲಿನಲಿದು ಆಡುವರು
ಕಾಳುಗೆಲಿಸವೆಂದೊಡೆ ನಲಿನಲಿದು ಮಾಡುವರು
ಶ್ರೀಗುರು ಸೇವೆ, ನಿತ್ಯಲಿಂಗಾರ್ಚನೆ, ಮತ್ತೆ ಪಂಚಾಕ್ಷರಿ
ಜಪ ಎಂದೊಡೆ ಅಳಲುವರು ಬಳಲುವರು

ಇಂತಹರಿಗೆ ದುಃಖವೇ ಪ್ರಾಪ್ತಿಯಲ್ಲದೆ ನಿಜ ಸುಖವೆಂಬುದಿಲ್ಲ. ಸುಖ ಬೇಕಿದ್ದರೆ ಆಕರ್ಷಕವಲ್ಲದಿದ್ದರೂ, ಒಳಿತಾದುದನ್ನೇ ಮಾಡಬೇಕು. ಕೈಯಲ್ಲೊಂದು ಅಮೃತ ಫಲವಿದೆ. ಅದನ್ನು ಮೆದ್ದವರೆಲ್ಲ ಅಮರರಾಗುವರು ಎಂಬುದು ನಮ್ಮ ಗುರುಗಳ ಅಮರವಾಣಿ ! ಗುರುನಂಜೇಶ್ವರ ಶಿವಯೋಗಿಗಳು ನಿಮ್ಮ ಕೈಯಲ್ಲಿಯೂ

ಅಮೃತ ಫಲವನ್ನಿತ್ತಿದ್ದಾರೆ. ಅದನ್ನು ಸೇವಿಸಿರಿ. ಅದು ನಿಮ್ಮ ಸರ್ವಾಂಗಗಳಲ್ಲಿ ವೇಧಿಸಲಿ! ನೀವೂ ಅಮರರಾಗಿರಿ. ಮಂಗಲಮಸ್ತು.” ಆವೇಶವಿಲ್ಲದ ಅವರ ಶಾಂತ, ಮೃದು, ಮಧುರ ವಾಣಿಯನ್ನು ಆಲಿಸಿ, ಭಕ್ತರು ಸಂತುಷ್ಟರಾದರು. ಆದರೆ ಈ ಸವಿನುಡಿಯ ಶಿವಯೋಗಿಗಳು ನಾಳೆ ನಮ್ಮನ್ನು ಅಗಲುವರಲ್ಲಾ ಎಂದು ಹಲವರಿಗೆ ಕಳವಳವಾಗಿತ್ತು.

ಮರುದಿನ ಶಿವಯೋಗಿಗಳ ಪೂಜಾ ಪ್ರಸಾದಗಳು ನೆರವೇರುವಷ್ಟರಲ್ಲಿ ಅಪಾರವಾದ ಭಕ್ತಜನ ಸಂದೋಹ ಮಠಕ್ಕೆ ಬಂದು ಸೇರಿತು. ಗುರುನಂಜೇಶ್ವರರು ಅವರೆಲ್ಲರೊಡನೆ ಗ್ರಾಮದ ಹೊರವಲಯದಲ್ಲಿ ಶ್ರೀ ಸಿದ್ಧಲಿಂಗ ಶಿವಯೋಗಿಗಳನ್ನು ಅವರ ಆಶೀರ್ವಾದ ಪಡೆದು ಬೀಳ್ಕೊಟ್ಟರು.

ಭಕ್ತಾದಿಗಳನ್ನು ಆಶೀರ್ವದಿಸಿದ ಈ ಸ್ವತಂತ್ರ ಸಿದ್ಧಲಿಂಗ ಶಿವಯೋಗಿಗಳು ಬೆಳಕು ನಡೆದಂತೆ ನಡೆದುಬಿಟ್ಟರು. ದಾರಿಯಲ್ಲಿ ಹತ್ತುವ ಚಿಕ್ಕ ನದಿಗಳನ್ನು ದಾಟುತ್ತ, ಸಾಗಿರುದ್ನೂರ (ರುದ್ರನ ಊರು) ಎಂಬಲ್ಲಿಗೆ ಬಂದರು. ಅಲ್ಲಿಯ ಒಂದು ಗುಹೆಯಲ್ಲಿ ಲಿಂಗಧ್ಯಾನದಲ್ಲಿ ನಿರತರಾಗಿ, ಅಲ್ಲಿಯೇ ಬಯಲಾದರು. ಅವರ ಗದ್ದುಗೆ ರುದ್ದನೂರಿನಲ್ಲಿ ಇಂದಿಗೂ ವಿರಾಜಮಾನವಾಗಿರುವದನ್ನು ನಾವು ಕಾಣಬಹುದು.

ಸ್ವತಂತ್ರ ಸಿದ್ಧಲೀಗೇಶ್ವರರು ಭಗವಾನ ತೋಂಟದ ಸಿದ್ಧಲಿಂಗ ಶಿವಯೋಗಿಗಳ ನಚ್ಚಿನ ಪ್ರಮುಖ ಶಿಷ್ಯರಲ್ಲಿ ಒಬ್ಬರು. ಇವರು ಗ್ರಂಥರಚನೆ ಮಾಡಿದುದಾಗಿ, ‘ಕರ್ನಾಟಕ ಕವಿ ಚರಿತೆ’ಯಿಂದ ತಿಳಿಯುತ್ತದೆ. ಜಂಗಮ ರಗಳೆ, ಮುಕ್ತ್ಯಂಗನಾ ಕಂಠಮಾಲೆ ಇವು ಅವರ ಮುಖ್ಯ ಕೃತಿಗಳು. ಬಿಡಿವಚನಗಳೂ ಇವರಿಂದ ರಚಿತವಾದವುಗಳಿರುತ್ತವೆ. ‘ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ’ ಎಂಬುದು ಇವರ ನಾಮಾಂಕಿತ.

೬. ಭ್ರಷ್ಟಮತಿಗೆ ಸಾತ್ವಿಕ ಪ್ರಜ್ಞೆ

ಸ್ವತಂತ್ರ ಸಿದ್ಧಲಿಂಗೇಶ್ವರರು ಒಬ್ಬರೇ ತೆರಳಿದ ಬಳಿಕ, ಗುರುಸಂಜೇಶ್ವರರು, ಚೆನ್ನಮಲ್ಲೇಶರು ಕೆಲವು ದಿವಸ ಬಹಿರಂಗದ ಕಾರ್ಯಗಳಲ್ಲಿ ಉತ್ಸಾಹವಿಲ್ಲದೆ, ಸ್ವಾನುಷ್ಠಾನದಲ್ಲಿ ಮೌನವಾಗಿ ಕಳೆದರು ಆದರೂ ಕರ್ತವ್ಯ ಜಾಗ್ರತೆ, ಬೇಗನೆ ಮತ್ತೆ ತಲೆದೋರಿತು. ಭಕ್ತರ ಅಂತರಂಗದ ಕರೆ ಕೇಳಿಸಿತು. ಗುರುಸಂಜೇಶ್ವರರು ಗುರುಮಠದಿಂದ ಹೊರಬಂದು, ಭಕ್ತರಲ್ಲಿ ಬೆರೆದು, ನಲಿದಾಡಹತ್ತಿದರು. ಕೆಲದಿವಸಗಳ ನಂತರ ಅವರು ಚೆನ್ನಮಲ್ಲೇಶರನ್ನು ಕುರಿತು, "ದೇವರೂ, ಇನ್ನು ಈ ಮಠಪ್ರದೇಶದ ಮಹಾಜನರಿಗೆ ಪಾರಮಾರ್ಥಿಕ ಮಾರ್ಗದರ್ಶನ ಮಾಡುವದನ್ನು ನೀವು ನೋಡಿಕೊಳ್ಳಿರಿ. ನಾನು ಮುಂದೆ ಸಾಗುವೆ. ಇಲ್ಲಿಯ ಭಕ್ತಾದಿಗಳ ಪರಿಚಯವೂ, ಆತ್ಮೀಯತೆಯೂ ನಿಮಗೆ ಉಂಟಾಗಿದೆ. ನಾನು ಇಲ್ಲಿ ಇರಬೇಕಾಗಿಲ್ಲ. ಗುರು ಕಾರ್ಯ ವ್ಯಾಪಕವಾಗಿ ಸಾಗಬೇಕು" ಎಂದು ಹಿತವಚನಗಳನ್ನು ಹೇಳಿ, ಅವರನ್ನು ಸಮಾಧಾನ ಪಡಿಸಿ, ಅವರಿಂದ ಬೀಳ್ಕೊಂಡರು. ತಮ್ಮನ್ನು ಬಿಡದಾದ ಕಮಲಾಪುರದ ಭಕ್ತರನ್ನೂ ಪ್ರೀತಿಯಿಂದ ತಿಳಿಹೇಳಿ, ಮೈದಡವಿ ಒಪ್ಪಿಸಿ, ಆಶೀರ್ವದಿಸಿ, ಅಲ್ಲಿಂದ ಹೊರಬಂದರು.

ಶ್ರೀಗಳು ಅಲ್ಲಿಂದ ಮುಗ್ಗಿ (ಮುಗಿ) ಕ್ಷೇತ್ರಕ್ಕೆ ಬಂದರು. ಸುಂದರವಾದ ನಿಸರ್ಗಶೋಭೆ! ಆ ಅರಣ್ಯಮಧ್ಯದಲ್ಲಿ ರಾಮಲಿಂಗೇಶ್ವರ ದೇವಸ್ಥಾನ. ಈ ಲಿಂಗವನ್ನು ಶ್ರೀರಾಮನು ಪಂಚವಟಿಯಿಂದ ಕಿಷ್ಕಿಂದೆಯತ್ತ ದಕ್ಷಿಣಕ್ಕೆ ಸಾಗುತ್ತ, ಇಲ್ಲಿ ತಂಗಿದಾಗ, ಸ್ಥಾಪಿಸಿ ಅರ್ಚಿಸಿದನೆಂದು ಪ್ರತೀತಿಯಿದೆ. ನಿರ್ಮಲವಾದ ನೀರಿನ ಮೂರು ಕುಂಡಗಳಿವೆ. ಪ್ರಶಾಂತಸ್ಥಳ! ಉನ್ನತ ಮಟ್ಟದ ಸಾಧನೆಗೆ ಅನುಕೂಲ ಸ್ಥಳ! ಈ ಶಿವಸೊಬಗು ಗುರುಸಂಜೇಶ್ವರರ ಮನಸ್ಸನ್ನು ಹಿಡಿಯಿತು. ಅಲ್ಲಿ ಕೆಲವು ದಿವಸ ಅನುಷ್ಠಾನಗೈದು, ಶಿವಸಾಮರಸ್ಯ ಸುಖವನ್ನು ಅನುಭವಿಸಿದರು. ಕರ್ತವ್ಯದ ಕರೆ ಮುಂದೆಳೆಯಿತು. ಭಕ್ತಜನ ಸಂದೋಹವನ್ನು ಚಿತ್ತದಲ್ಲಿ ನೆನೆಯುತ್ತ ಅಲ್ಲಿಂದ ಆರು ಮೈಲು ದೂರದ ಜೀರ್ಲಗುಡ್ಡದ ಮೇಲಿಂದ ಜೋಗಿಗುಡ್ಡಕ್ಕೆ

ಬಂದರು. ಅಲ್ಲಿಯೂ ಬಯಲ ಸೊಬಗಿನಲ್ಲಿ ಮನವಾರೆ ಲಿಂಗಾರ್ಚನೆಗೈದು ಕೆಳಗೆ ಬಂದರು. ಮುಂದೆ ಮೂರು ಮೈಲಿಗಿರುವ ರಾಜಾಪುರಕ್ಕೆ ಬಂದು, ಭೋಗಲಿಂಗೇಶ್ವರ ದೇವಸ್ಥಾನದಲ್ಲಿ ಬಿಡಾರ ಮಾಡಿದರು. ಕಮಲಾಪುರಕ್ಕೆ ಬಂದು ಗುರುನಂಜೇಶ್ವರರಿಂದ ಲಿಂಗ ದೀಕ್ಷೆ ಪಡೆದ ಹಲವು ಜನ ಭಕ್ತರೂ, ಶಿಷ್ಯೋತ್ತಮರೂ ರಾಜಾಪುರದಲ್ಲಿದ್ದರು. ಅವರಲ್ಲಿ ರಾಜಾಪುರದ ದೊಡ್ಡ ಲಿಂಗಗೌಡರು ಮುಖ್ಯರು. ಅವರೆಲ್ಲರೂ ಗುರುದರ್ಶನ ಪಡೆದು, ಸೇವಿಸಿ, ಷಟ್‌ಸ್ಥಲ ಜ್ಞಾನೋಪದೇಶ ಪಡೆಯ ಹತ್ತಿದರು. ಬೇರೆ ಹಲವರು ಹೊಸದಾಗಿ ಲಿಂಗದೀಕ್ಷೆಯನ್ನು ಪಡೆದರು. ಹೊಸ ಹೊಸ ಜನರ ಲಿಂಗಧಾರಣದ ಅಪೇಕ್ಷೆಯೂ ಷಟ್‌ಸ್ಥಲ ತತ್ವಜ್ಞಾನದ ಪ್ರವಚನದಲ್ಲಿ ಲಾಲಸೆಯೂ ಹೆಚ್ಚುತ್ತಲೇ ಇರುವದರಿಂದ, ರಾಜಾಪುರದಲ್ಲಿಯ ಶ್ರೀಗಳ ಬಿಡಾರವು ಹಲವು ದಿವಸ ಮುಂದುವರಿಯಿತು.

ಒಂದು ದಿನ ಉದಯದ ಲಿಂಗಾರ್ಚನೆಯ ನಂತರ ಗುರುನಂಜೇಶ ಶಿವ ಯೋಗಿಗಳು ಲೀಲಾರ್ಥವಾಗಿ ಅಡ್ಡಾಡುತ್ತ ಊರ ಹೊರಗೆ ಹೊರಟರು, ಸಂಗಡ ಯಾರೂ ಇರಲಿಲ್ಲ. ಇವರು ಒಬ್ಬರೇ ಹೊಲಗಳ ದಾರಿಗುಂಟ ನಡೆದು, ಮುಂದೆ ಕವಲು ದಾರಿಗೆ ಹೊರಳಿ ವೇಗವಾಗಿ ನಡೆದರು. ಭೂದೇವಿಯ ಅಲಂಕಾರಿಕ ಉಡುಗರೆಗಳಂತೆ, ವಿವಿಧ ಬೆಳೆಗಳು ಹುಲುಸಾಗಿ ಬೆಳೆದು ನಿಂತ ಹೊಲಗಳು, ಒಂದಾದ ಮೇಲೊಂದರಂತೆ ಮುಂದೆ ಬಂದು, ಕಾದು ನಿಂತು ಕರೆದಂತೆ, ಶಿವಯೋಗಿ-ಗಳನ್ನು ಮುಂದೆ ಮುಂದೆ ಬರಮಾಡಿಕೊಳ್ಳುತ್ತಿದ್ದವು, ಶಿವನ ಸಿರಿ, ಶಕ್ತಿಯ ಸೊಬಗು ! ಅವರ ಭಾವಸೌಂದರ್ಯ ವಿಶ್ವಭಾವದಲ್ಲಿ ವಿಲೀನಗೊಂಡಿತ್ತು. ಹಿಂದೆಗೆಯಲಾರದೆ ಮುಂದುವರಿದಿದ್ದರು. ನಡೆದರು ನಡೆದರು, ದೂರ ನಡೆದರು. ಮರಳುವ ಯೋಚನೆ ಉಂಟಾಗಿಲ್ಲ, ತಂಗಾಳಿ ತೊಲಗಿತ್ತು, ಬಿಸಿಲು ಬಿಸಿಯಾಗಿತ್ತು. ಎಡಬದಿಗೆ ಜನರ ಮಾತುಗಳೂ, ಬೆಳೆಯಲ್ಲಿ ಧಾವಿಸಿ ಬರುವವರ ಸದ್ದುಗಳೂ ಒಳಿತಾಗಿ ಕೇಳಹತ್ತಿದಾಗಲೇ ಸ್ವಾಮಿಗಳು 'ನಾನು ಎಲ್ಲಿಗೆ ಬಂದಿದ್ದೇನೆ' ಎಂದು ಯೋಚಿಸಿದರು, ತಮ್ಮ ಮುಂದೆ ಸಾಲುಸಾಲಾಗಿ ಸಾಷ್ಟಾಂಗವಾಗಿ ಎರಗುತ್ತಿದ್ದ ಭಕ್ತರನ್ನು ಕಂಡರು, ನಿಂತು ಬಿಟ್ಟರು.

"ಶಿವಮಸ್ತು, ಏಳಿರಯ್ಯಾ. ಇದೇನು ಒಂದೇ ಹೊಲದಲ್ಲಿ ಇಷ್ಟು ಜನರು ಒಂದುಗೂಡಿದ್ದೀರಿ, ವಿಶೇಷವಿದೆಯೋ ?" ಎಂದು ಜನರ ಮುಖ ನೋಡಿದರು. ಅದರಲ್ಲಿ ಕೆಲವರ ಮುಖ ಪರಿಚಯವಾಯಿತು. ಅವರು ಆ ಸ್ವಾಮಿಗಳಿಂದ ಲಿಂಗ ಪಡೆದ ಭಕ್ತರೇ ಆಗಿದ್ದರು. ಸ್ವಾಮಿಗಳ ಪ್ರಶ್ನೆಗೆ ಉತ್ತರವಾಗಿ ಒಬ್ಬ ಹಿರಿಯನು ಕೈ ಮುಗಿದು :

"ಹೌದು ಪೂಜ್ಯರೇ, ಇಲ್ಲಿ ಬದುವಿನಾಚೆ, ಅಲ್ಲಿ ದೂರ, ಆ ಕಡೆಗೆ, ಮತ್ತೊಂದು ಕಡೆಗೆ ಹೀಗೆ ಕೆಲಕೆಲವು ಕುಟುಂಬಗಳವರು ಗುಂಪು ಗುಂಪಾಗಿ ನಾವು ಗುಡಿಸಲು ಗಳನ್ನು ಕಟ್ಟಿಕೊಂಡು ವರ್ಷಾನುಗಟ್ಟಲೆ ವಾಸಿಸುತ್ತಿದ್ದೇವೆ. ಊರು ಬಿಟ್ಟು ಇಲ್ಲಿ ಇದ್ದೇವೆ. ಇದೊಂದು ನಮಗೆ ಸಂಕಟದ ಸಮಸ್ಯೆ ಎದುರಾಗಿದೆ. ಅದಕ್ಕೆ ಪರಿಹಾರ ಕಾಣದೆ ಪರಿತಪಿಸುತ್ತಿದ್ದೇವೆ. ಇಂದು ನಾವೆಲ್ಲ ಕಮಲಾಪುರಕ್ಕೆ ಬಂದು, ತಮ್ಮ ದರ್ಶನ ಪಡೆದು ನಮ್ಮ ಕಷ್ಟದ ನಿವಾರಣೆಗೆ ಬಿನ್ನವಿಸಲು ಆಲೋಚಿಸುತ್ತಿದ್ದೇವೆ. ಅದಕ್ಕಾಗಿ ನೆರೆದಿದ್ದೇವೆ. ಪರಮ ದಯಾಳು ದೇವರು ತಾನೇ ಈ ದಾರಿಯಿಂದ ದಯಮಾಡಿಸಿದ್ದೀರಿ, ನಮ್ಮ ಪಾಪ ಕರಗುವ ವೇಳೆಯೇ ಬಂದಂತೆ ಬಂದಿದ್ದೀರಿ, ಇದು ಶುಭ ಸೂಚನೆಯೆಂದು ಭಾವಿಸುತ್ತೇವೆ" ಎಂದು ತಲೆವಾಗಿದನು. ಶಿವಯೋಗಿಗಳು ಕ್ಷಣ ಹೊತ್ತು ಕಣ್ಮುಚ್ಚಿ ಬಳಿಕ ಮುಖವೆತ್ತಿ : "ಹೇಳಿರಿ; ಕಲ್ಯಾಣಪ್ಪ ಅಲ್ಲವೇ ನೀವು ? ಹೇಳಿರಿ ಅದರ ಯೋಚನೆ ಮಾಡೋಣ" ಎಂದರು.

ಶಿವಯೋಗಿಗಳು ಬಹು ಜನರ ಪರಿಚಯ ಪಡೆದಿರುವಂತೆ, ಸಂಸ್ಕಾರ ನೀಡುವ ಕಾಲದಲ್ಲಿ ಈ ಭಕ್ತನ ಹೆಸರನ್ನೂ ಗೊತ್ತು ಮಾಡಿಕೊಂಡಿದ್ದರು. ಕಲ್ಯಾಣಪ್ಪ ಗಟ್ಟಿಯಾಗಿ ಅವರ ಪಾದಗಳನ್ನು ಹಿಡಿದು, "ಪೂಜ್ಯರೇ ಬಿಸಿಲಾಗಿದೆ, ಇದೇ ನಮ್ಮ ವಸತಿಗೆ ದಯಮಾಡಿಸಬೇಕು. ನಾವೆಲ್ಲ ನಿಮ್ಮ ಮಕ್ಕಳು, ಇಲ್ಲಿ ಮಧ್ಯಾಹ್ನ ಅರ್ಚನೆ-ಅರ್ಪಿತಗಳಾಗಬೇಕು. ಅಗ್ಗವಣಿ ಪತ್ರಿ, ಪುಷ್ಪ, ಬೆಳಸು ಶಿವನ ಪ್ರಸಾದವಾಗಿ ಸುತ್ತಲೂ ಚಲ್ಲುವರಿದಿವೆ. ದಯವಿಟ್ಟು ಈ ಕುಟೀರಗಳಲ್ಲಿ ಪಾದವಿಟ್ಟು ಪಾವನಗೊಳಿಸಬೇಕು. ತೀರ್ಥ ಪ್ರಸಾದಗಳನ್ನಿತ್ತು ಕೃತಾರ್ಥರನ್ನಾಗಿ ಮಾಡ ಬೇಕು. ಆ ಮೇಲೆ ತಮ್ಮ ಚಿತ್ತ ಹೇಗೋ ಹಾಗೆ, ನಮ್ಮ ಇರವ ಪರಾಮರ್ಶಿಸ ಬೇಕು" ಎಂದು ನಮಸ್ಕರಿಸಿದನು. ಶ್ರೀಗಳು ಹುಬ್ಬೇರಿಸಿ ನೋಡಿದರು. ತಮ್ಮ ಉತ್ತರಕ್ಕಾಗಿ ಕೈ ಮುಗಿದುಕೊಂಡು ನಿಂತಿದ್ದ ಭಕ್ತರನ್ನು ಕಂಡರು. ಸಂತೋಷದಿಂದ 'ಆಗಲಿರೆಪ್ಪಾ' ಎಂದರು. ಕೂಡಲೇ ಅವರೆಲ್ಲ ಜಯಘೋಷ ಮಾಡಿದರು; ಸಾಲಾಗಿ ಮುಂದಾಗಿ ದಾರಿ ತೋರುತ್ತ ಸ್ವಾಮಿಗಳನ್ನು ಕರೆದುಕೊಂಡು ವಸತಿಗಳಿಗೆ ಹೋದರು. ಉಚಿತಾಸನದಲ್ಲಿ ಕುಳ್ಳಿರಿಸಿದರು. ಆ ಬೀಡಾರದವರೆಲ್ಲ ಬಂದು ದರ್ಶನ ಪಡೆದು ನಮಿಸಿದರು. ಸ್ವಾಮಿಗಳು ಸಂಜೆಗೆ ಬರುವರೆಂದು ರಾಜಾಪುರಕ್ಕೆ ಹೇಳಿಕಳುಹಿಸಿದರು.

ಇಪ್ಪತ್ತು ಜನರು ಸ್ನಾನಮಾಡಿ, ಸ್ವಾಮಿಗಳ ಸೇವೆಗೆ ಸಿದ್ಧರಾದರು. ಅದು ಅವರ ಭಕ್ತಿ ಭರ! ಆದರೆ ಗುರುನಂಜೇಶ್ವರರು ಎಲ್ಲದಕ್ಕೂ ಸ್ವಯಂಸಿದ್ಧರು. ಅವರ ಲಿಂಗಾರ್ಚನೆ ನಡೆಯಿತು, ಪ್ರಸಾದವಾಯಿತು. ಪ್ರಸಾದ ಪಡೆದು ಬೀಡಾರದ ಭಕ್ತರು ಪ್ರಸನ್ನರಾದರು. ಸ್ವಲ್ಪ ವಿಶ್ರಮಿಸಿದ ನಂತರ ಮುಂದಿನ ಮರದ ಕೆಳಗೆ

ಪೀಠರಚಿಸಿ, ಗಣ್ಯರು ನೆರೆದ ಸ್ಥಳಕ್ಕೆ ಶಿವಯೋಗಿಗಳನ್ನು ಬರಮಾಡಿಕೊಂಡರು. ಶಿಷ್ಟಾಚಾರವಂತ ಕಲ್ಯಾಣಪ್ಪ ಅವರ ಪಾದಸನ್ನಿಧಿಯಲ್ಲಿ ಕುಳಿತು, ತಮ್ಮ ಸ್ಥಿತಿಯನ್ನು ವಿವರಿಸಿದನು.

"ಪೂಜ್ಯ ಗುರುದೇವರೇ, ನಮ್ಮ ಕಥೆ ಅದ್ಭುತವಾಗಿದೆ. ವಿಚಿತ್ರವಾಗಿದೆ. ಆಲಿಸಬೇಕು. ನಮ್ಮದು ಭರತನೂರು. ಅದು ಈಗ ಬೀಳಾಗಿದೆ. ಭೂತದ ಬೀಡಾಗಿದೆ. ಮನೆಮಂದಿರಗಳೆಲ್ಲ ಹಾಳಾಗಹತ್ತಿವೆ. ಕ್ರೂರವಾದ ಹೆಣ್ಣು ಭೂತವೊಂದು ನಮ್ಮನ್ನು ಊರ ಬಿಡಿಸಿದೆ. ಹಲವು ವರ್ಷಗಳ ಹಿಂದೆ ಅದು ಊರು ಸೇರಿತು. ಗರ್ಭಿಣಿಯರ ಹಾಗು ಬಾಣಂತಿಯರ ಮೇಲೆ ಎರಗಿತು. ಕೂಸುಗಳನ್ನು ಹಿಡಿದು ಕೊಂದಿತು. ಹುಲ್ಲು ಹರವಿಗಳನ್ನು ಸುಟ್ಟಿತು. ಕಣಜಗಳನ್ನು ಹಾಳು ಮಾಡಿತು. ರಾತ್ರಿಯಲ್ಲಿ ಮನೆಯ ಒಡನೆಗಳನ್ನು ಬೀದಿಗೆ ಒಗೆಯಿತು. ಬಾಗಿಲು ತೆರೆದು ಕೊಟ್ಟಿಗೆಯ ದನಕರುಗಳನ್ನು ಓಡಿಸಿ ಬಿಟ್ಟಿತು. ದಿನಕ್ಕೊಂದರಂತೆ ಮನೆಗಳು ಬರಿದಾದವು. ನೀರು ಮಲೀನವಾದವು. ಜನರು ಕಂಗಾಲಾದರು. ಕಡೆಗೆ ಅನ್ಯ ಗತಿಯಿತಿಯಿಲ್ಲದೆ ಬಂದು, ನಮ್ಮ ನಮ್ಮ ಹೊಲಗಳೆಡೆಯಲ್ಲಿ ಗುಂಪುಗುಂಪಾಗಿ, ಚಲ್ಲುವರಿದು ವಾಸಿಸುತ್ತಿದ್ದೇವೆ. ನಮ್ಮ ದೇವರುಗಳೆಲ್ಲ ಕಲ್ಲಾಗಿ ಊರಲ್ಲಿಯೇ ಕುಳಿತಿವೆ. ಇದುವರೆಗೆ ಯಾವ ಮಹಾತ್ಮರೂ ನಮ್ಮ ಅರಣ್ಯವಾಸವನ್ನು ನೀಗಿಸಲು ನೆರವಾಗಿಲ್ಲ. ತಾವು ಕಮಲಾಪುರಕ್ಕೆ ಬಂದಂದಿನಿಂದ ನಮಗೊಂದು ಆಶೆ ಮೂಡಿದೆ. ತಮ್ಮ ಉಪದೇಶದಿಂದ ಧನ್ಯರಾಗಿದ್ದೇವೆ. ಅದು ಎಂಥ ಕ್ರೂರ ಶಕ್ತಿಯೋ ಅದನ್ನು ನಿಗ್ರಹಿಸಿ ಕಾಪಾಡಬೇಕು" ಎಂದು ಎಲ್ಲರ ಪರವಾಗಿ ಬೇಡಿಕೊಂಡನು.

"ಆ ಭೂತ ನಿಮಗೆ ಕಾಣಿಸಿಕೊಂಡಿದೆಯೇ ?" ಶ್ರೀಗಳು ಕೇಳಿದರು.

"ಕಾಣಿಸುವದೆಂದರೆ, ಅದು ಒಬ್ಬ ಯುವತಿಯನ್ನು ಸೇರಿ ಭೀಕರ ರೂಪ ಪ್ರಕಟಿಸಿದೆ. ಬಹುಶಃ ಹಗಲು ಹೊರಬರುವದಿಲ್ಲ. ರಾತ್ರಿ ಅದರ ಆಟ ! ಆಕೆಗೆ ಬಾಗಿಲಚಿಲಕಗಳು ಈಡಲ್ಲ, ಬಿಚ್ಚಿ ಬೀಳುತ್ತಿವೆ. ಜನವೆಲ್ಲ ಭೀತಿಗೊಂಡಿದೆ."

"ಆಕೆ ಹಗಲು ಎಲ್ಲಿ ಇರುತ್ತಿರಬಹುದು ?"

"ಆಕೆ ಮೊದಲು ಹಾಳುಗೆಡಹಿದ ಮನೆಯಲ್ಲಿಯೇ ಇರುತ್ತಿರಬಹುದೆಂದು ಯಾರೂ ಆ ಮನೆಯ ಮುಂದೆ ಹಾಯುತ್ತಿರುವದಿಲ್ಲ. ಆದರೆ ಆ ಭೂತಕೃತಿ ಮಾತ್ರ ಊರ ತುಂಬೆಲ್ಲ ಕಾಣಬರುತ್ತಿವೆ."

ಶ್ರೀಗಳು ನಸುನಕ್ಕರು : "ಶಾಪಗ್ರಸ್ತ ಜೀವವಾಗಿರಬಹುದು. ಪಾಪವು ಘನೀಭೂತಗೊಂಡಿರಬೇಕು. ಶಾಪದಿಂದ ಉಂಟಾದ ಭಯದ ಅತಿರೇಕವಾಗಿ ಭ್ರಮೆ

ಬಲಿತಿರಬೇಕು. ಒಳ್ಳೇದು, ಅಲ್ಲಿ ನಾವು ಲಿಂಗಾರ್ಚನೆ ಮಾಡುತ್ತೇವೆ. ಆ ಸ್ಥಳವನ್ನು ತೋರಿಸಿ. ಮನಸ್ಸು ಗಟ್ಟಿಗೊಂಡವರು ಬೇಕಾದರೆ ನಮ್ಮ ಹತ್ತಿರ ಇರ್ರಿ ! ನಮಗೇನೂ ಭಯವಿಲ್ಲ, ಮುಂದೆ ನೀವು ಬಂದೇ ಬರುವಿರಿ."

ಸಂತೋಷದಿಂದ ಸರ್ವರೂ ಅಡಿಗಳಿಗೆ ಪೊಡಮಟ್ಟರು. ಸ್ವಾಮಿಗಳು ಎದ್ದು ಹೊರಟರು. ಸಂಗಡ ಅವರೆಲ್ಲರೂ ರಾಜಾಪುರಕ್ಕೆ ಬಂದರು. ಸಾಯಂಕಾಲದ ಶಿವಗೋಷ್ಠಿಯ ಬಳಿಕ ಕಲ್ಯಾಣಪ್ಪ ಅವನ ಜತೆಗಾರರು ನಾಳಿನ ಕಾರ್ಯಕ್ರಮಗಳ ನಿರ್ಣಯ ಮಾಡಿಕೊಂಡು. ಅಪ್ಪಣೆ ಪಡೆದು ಬೀಡಾರಕ್ಕೆ ಮರಳಿದರು.

ಮೂರನೆಯ ದಿವಸ ಕಲ್ಯಾಣಪ್ಪ ಮತ್ತೆ ಕೆಲವರೊಡನೆ ಗುರುಗಳನ್ನು ಕರೆಯ ಬಂದನು. ಗುರುನಂಜೇಶ್ವರರು ಪೂಜಾ ಸಾಮಗ್ರಿಗಳನ್ನು ತಕ್ಕೊಂಡು, ಭರತನೂರ ಜನರೊಡನೆ ಆ ಊರಿಗೆ ಹೊರಟರು. ಶಿವಮಂತ್ರ ಭಜನೆ, ಶಿವನಾಮ ಘೋಷಣೆ-ಗಳೊಡನೆ ಹಾಳೂರನ್ನು ಹೊಕ್ಕರು. ಬ್ರಹ್ಮಭೂತದ ಮೊದಲ ಮನೆಯಲ್ಲಿ ಬೀಡಾರ ಮಾಡಿದರು.

ಕಲ್ಯಾಣಪ್ಪ ಮುಂತಾದ ಭಕ್ತರು ಆ ಮನೆಯನ್ನು ಸಾರಿಸಿ ಹಸನಾಗಿಸಿದರು. ಶ್ರೀಗಳು ಅಲ್ಲಿ ಲಿಂಗಾರ್ಚನೆ, ಜಪ, ಧ್ಯಾನ, ಯೋಗಾನುಷ್ಠಾನಗಳನ್ನು ನೆರವೇರಿಸುತ್ತ ನಿಂತರು. ಹಗಲು ಮಾತ್ರ ಭಕ್ತರು ಸಾಮಾನು ಸಲಕರಣೆಗಳನ್ನು ಒದಗಿಸಿ, ಸಂಜೆಗೆ ಹೋಗಿ ಬಿಡುತ್ತಿದ್ದರು. ನಿರಂಜನ ಸ್ವರೂಪದ ಶಿವಯೋಗಿಗೇನು ಭಯವೇ ? ಅವರು ಇರುಳೆಲ್ಲ ಲಿಂಗ ತಪದಲ್ಲಿ ತೊಡಗಿರುತ್ತಿದ್ದರು. ಲಿಂಗಾರ್ಚನೆ ಮಾಡುವಾಗಿನ ಘಂಟೆ ಥಣ್‌ಥಣಗೊಡುತ್ತಿತ್ತು. ಶಿವಮಂತ್ರದ ನಾದ ಹವೆಯ ಅಲೆಅಲೆಗಳಲ್ಲಿ ತುಂಬಿರುತ್ತಿತ್ತು. ಪೂಜೆಯ ಪೆಂಪು ಕರ್ಪುರದ ಕಂಪಿನಲ್ಲಿ ಬೆರೆತು, ಗಾಳಿಯಲ್ಲಿ ಪಸರಿಸಿತ್ತು.

ಶಿವಪ್ರತಾಪವು ಬೊಮ್ಮರಕ್ಕಸಿಯ ಎದೆಯನ್ನು ಇರಿಯಿತು, 'ಎಲ್ಲಿ ಹೋಗಲಿ' ಎಂದು ಅಚೆ ಈಚೆ ಹರಿದಾಡಿತು; ಕಿರುಚಿತು; ಅಡಗಲು ಯತ್ನಿಸಿತು. ಎಲ್ಲಿ ಹೋದರೂ ಶಿವಾಗ್ನಿ ಸುಡದೆ ಬಿಡಲೊಲ್ಲದು. ಕೂಳು ನೀರಿಗೂ ಕೈ ಹಾಕಲು ಇಂಬಿಲ್ಲ. ಎರಡು ದಿನ ಹಾಳು ಗೋಡೆಯ ಮಡಿಲಲ್ಲಿ ಬಿದ್ದು ಬೆಂದಿತು. ಬಸವಳಿಯಿತು. ಶಾಪ ಮುಕ್ತಿಯ ಕಾಲ ಸನ್ನಿಹಿತವಾಗಿತ್ತು. ಅಗ್ನಿಯಲ್ಲಿ ಅದಿರು ಕರಗಿ ಅಪರಂಜಿ ಹೊರಗೆ ಬರುವಂತೆ, ಶಿವತೇಜದೆಡೆಯಲ್ಲಿ ಅವಳ ಹೃದಯ ಕರಗಿ, ಅಲ್ಲಿ ಶಿವಕಳೆ ತಲೆದೋರಿತು. ತಾಮಸ ಹರಿದು ಸಾತ್ವಿಕತೆಯ ಕಿರಣ ಮೂಡಿತು. ಆಕಳಿಸಿದಳು, ಮೈ ಕೊಡವಿದಳು, ಮೆಲ್ಲಗೆ ಎದ್ದಳು, ಮಧ್ಯರಾತ್ರಿ ! ಕಠೋರವಾದ ಶಿವನ ಪರಿಸರ ಹಿತಕರವಾಗಿ ಕಂಡಿತು. ಆಗ ಯಾರು ಹಿತಚಿಂತಕರು ? ಶಿವನೆ ಗತಿ !

ಶಿವಯೋಗಿಯ ಯೋಗ ಮಂದಿರದ ಬಾಗಿಲು ತೆರೆದೇ ಇತ್ತು. ಬಾಗಿಲಲ್ಲಿ ತಲೆವಾಗಿ ಕೈ ಮುಗಿದು, ಒಳ ಹೊಕ್ಕಳು ಆ ಮಹಿಳೆ! ಶಿವಪ್ಪಗೂಪನ ಲಿಂಗ ಪೂಜಾ ವೈಭವವನ್ನು ನೋಡಿ ಹೊರಗಣ್ಣು ಹಸನಾದವು. ಮನವಂತೆ ಮನೆಯೆಲ್ಲಾ ಮಂಗಳಮಯವಾಗಿ ಕಂಡಿತು. ಸಾಷ್ಟಾಂಗವಾಗಿ ಎರಗಿದಳು. ಧ್ಯಾನನಿರತರಾದ ಶಿವಯೋಗಿ ಕಣ್ದೆರೆದು ನೋಡಿ, "ಬಾ ಏಳು ಮಗಳೆ ಬಾ ಕೂಡ್ರು, ನಿನ್ನ ಬರುವಿಗಾಗಿ ಹಾರೈಸಿ ಕಾದಿದ್ದೆ, ಒಳಿತಾಯಿತು ಕಣಮ್ಮ!" ಎಂದು ಕರುಣೆಯಿಂದ ಆದರದ ಮಾತನಾಡಿದರು. ಆ ಪತಿತ ದೀನೆ ಕೈ ಮುಗಿದು ಕುಳಿತು ಕಣ್ಣೀರು ಕರೆದಳು ಮಾತ್ರ! ತಲೆ ಮುಳ್ಳ ಪುಂಜರವಾಗಿತ್ತು, ಬಟ್ಟೆ ಕಟಿಯಾಗಿದ್ದವು, ಕೈ ಕಾಲು ಮೈಯು ಹೊಲಸಾಗಿದ್ದವು. ಮತ್ತೆ ಶಿವಯೋಗಿಗಳು :

"ನೋಡಮ್ಮ, ಶಿವಭಾವದಿಂದ ಮನದ ಕೊಳೆ ಅಳಿಯುವದು. ತನುವಿನ ಕೊಳೆಯನ್ನು ತೊಳೆದೇ ಅಳಿಯಬೇಕು. ನೀನು ಹಳ್ಳಕ್ಕೆ ಹೋಗಿ, ಹಸನಾಗಿ, ಮೈದೊಳೆದುಕೊಂಡು, ಮಡಿಯಿಂದ ಉಷಃಕಾಲದ ಪೂಜಾಸಮಯಕ್ಕೆ ಬಾರವ್ವಾ. ಶಿವಪ್ರಸಾದ ಸ್ವೀಕರಿಸುವೆ ಮಗಳೆ" ಎಂದರು.

ಮೌನವಾಗಿಯೇ ಆ ಮಹಿಳೆ ಹಿಂದೆ ಹಿಂದೆ ಸರಿಯುತ್ತ, ಹೊರಗೆ ಹೋದಳು. ಯಾವದೋ ಮನೆಯಿಂದ ಬೇರೆ ಸೀರೆ ತಕ್ಕೊಂಡು ಹೋಗಿ, ಹಳ್ಳದ ಮಡುವಿನಲ್ಲಿ ಮುಳುಗಿ, ಬಟ್ಟೆಗಳನ್ನು ಮಡಿಮಾಡಿ ಹಾಕಿದಳು. ತಲೆ, ಮೈ, ಕೈಕಾಲುಗಳನ್ನು ಸ್ವಚ್ಛವಾಗಿ ತೊಳೆದುಕೊಂಡಳು. ತಲೆಗೂದಲ ನೇವರಿಸಿಕೊಂಡಳು. ಒಗೆದ ಬಟ್ಟೆ ಉಟ್ಟು ಬಂದಳು.

ಇತ್ತ ಶ್ರೀಗಳು ಸ್ವಲ್ಪವೇಳೆ ಯೋಗನಿದ್ರೆಗೈದು, ಎದ್ದು ಶುಚಿಸ್ನಾನಗಳನ್ನು ಮುಗಿಸಿ, ಲಿಂಗಾರ್ಚನೆಯಲ್ಲಿ ತೊಡಗಿ ಪೂರೈಸಿದ್ದರು. ಮೂಡಲಲ್ಲಿ ಅರುಣೋದಯ ವಾಗುತ್ತಿತ್ತು. ಆ ತಾಯಿ ಬಂದು, ಮಹಿಗೆ ಮೈಯಿಕ್ಕಿ ವಂದಿಸಿದಳು. ಶಿವಯೋಗಿಗಳು ಮುಂದಕ್ಕೆ ಕರೆದು, ಭಸ್ಮವನ್ನು ಕೊಟ್ಟು, ಧರಿಸ ಹೇಳಿದರು. ಶಿವಮಂತ್ರವನ್ನು ಹೇಳಿ, ಪರಣ ಮಾಡಿಸಿದರು. ಹಸ್ತದಲ್ಲಿ ತೀರ್ಥವನ್ನು ಎರೆದು, ಪ್ರಸಾದವನ್ನಿತ್ತರು. ಆಕೆ ಸ್ವೀಕರಿಸಿ, ಬಾಹ್ಯಾಂತರಂಗವನ್ನೆಲ್ಲ ಪರಿಶುದ್ಧಗೊಳಿಸಿ-ಕೊಂಡಳು.

ಬೆಳಗಿಗೆ ಮುನ್ನ ಗುರುಗಳ ಸೇವೆಗೆ ನಿತ್ಯದಂತೆ ಬಂದ ಯುವಕ ಭಕ್ತರು ಈ ನೋಟವನ್ನು ನೋಡಿ ಅವಕ್ಕಾದರು. ಶಿವಯೋಗಿಗಳ ಪಾದಕ್ಕೆರಗಿ, ಜಯಘೋಷ ಮಾಡಿ ಕುಣಿದರು. ಸ್ವಾಮಿಗಳ ಸೂಚನೆಯಂತೆ ಸುಮ್ಮನಾಗಿ ತಮ್ಮ ಕೆಲಸದಲ್ಲಿ ನಿರತರಾದರು.

ಇತ್ತ ಶ್ರೀಗಳು, "ನಿನ್ನ ಹೆಸರೇನಮ್ಮ?" ಎಂದು ಆ ಹೆಣ್ಣು ಮಗಳನ್ನು ಕೇಳಿದರು.

"ಭಾರತಿ."

"ಯಾಕಮ್ಮಾ ನಿನಗೆ ಈ ಅವಸ್ಥೆ ಬಂದದ್ದು ?"

"ನನ್ನ ದುರ್ದೈವದಿಂದ ನಡೆದ ದುರ್ಘಟನೆಯೊಂದು ಕಾರಣವಾಯಿತು. ಆ ಆ ಮಹಾಪಾಪದ ಕಥೆಯನ್ನು ತಾವು ಕೇಳುವಿರಾ ಸ್ವಾಮೀ ?"

"ಹೇಳಮ್ಮಾ ಭಾರತಿ ಕೇಳುವೆನು. ಹೃದಯಕ್ಕೆ ಭಾರವಾಗಿರುವ ಸಂಗತಿಯನ್ನು ಹೇಳಿ ಹಗುರಾಗಿಸಿಕೊಳ್ಳು. ನೀನು ಪಶ್ಚಾತ್ತಾಪ ಪಡುತ್ತಿರುವೆ. ಶಿವನು ಕ್ಷಮಿಸುತ್ತಾನೆ."

ಭಾರತಿ ಕಣ್ಣೊರಸಿಕೊಂಡು, ನೀಳವಾಗಿ ಉಸಿರು ಹೇಳಹತ್ತಿದಳು :

"ಇಲ್ಲಿಗೆ ಸಮೀಪದಲ್ಲಿರುವ ಕಾಳಗಿ ಗ್ರಾಮದ ಹರದ (ವರ್ತಕ) ನೊಬ್ಬನ ಸೊಸೆ ನಾನು. ನಾನೂ ನನ್ನ ಪತಿಯೂ ಯೌವನ ಮದೋನ್ಮತ್ತರಾಗಿ, ಅತ್ತೆ-ಮಾವಂದಿರ ಸೇವೆ ಮಾಡದೆ ಬೇರೆಯಾಗಿದ್ದು, ಯಾರನ್ನೂ ಲೆಕ್ಕಿಸದೆ, ಮೋಸದ ಗಳಿಕೆಯಿಂದ ಲೋಭಿಗಳಾಗಿ, ಕಾಮುಕರಾಗಿ, ವಿಲಾಸಿಗಳಾಗಿ ಸೊಕ್ಕಿನಿಂದ ಇದ್ದೆವು. ಒಂದು ದಿನ ನೀರಿಗೆ ಹೋಗಿದ್ದೆ, ಆಗ ಜಂಗಮರೊಬ್ಬರು ಭಿಕ್ಷೆಗೆ ಬಂದಿರಲು, ನನ್ನ ಗಂಡ ಭಿಕ್ಷೆನೀಡದೆ, 'ಮನೆಯಾಕೆ ಇಲ್ಲ, ಹೋಗಿದ್ದಾಳೆ ಹೋಗು. ಇಲ್ಲೇನು ಕೊಟ್ಟು ಇಟ್ಟಿದ್ದೀಯಾ ?' ಎಂದು ಕಟುವಾಗಿ ಹೇಳಿದ್ದನು. 'ಹೆಂಡತಿ ಹೋಗ್ಯಾಳ, ಇವ ಗಂಡ ಕಳ್ಳವ್ಯಾಪಾರಿ, ಪರರ ದ್ರವ್ಯ ಅಪಹರಿಸುತ್ತಿದ್ದಾನೆ ಕೃಪಣ ! ತಾನ್ಯಾಕ ನೀಡ್ಯಾನು ?' ಎಂದು ನಿಂದೆಯನಾಡುತ್ತ, ಜಂಗಮನು ಮರುಳುತ್ತಿರುವಾಗ ನಾನು ಬಂದೆ. ಆ ಶಬ್ದಗಳನ್ನು ಕೇಳಿದೆ. ಕೋಪಾವಿಷ್ಟಳಾದೆ. ಕೊಡ ಇಕ್ಕರಿಸಿ, 'ಯಾಕೆಲಾ' ಎನ್ನುತ್ತ ಆ ಜಂಗಮ ಮೂರ್ತಿಯ ಮೇಲೆ ಹುಲಿಯಂತೆ ಹಾರಿದೆ, ಗಂಡನೂ ಬಂದ. ಇಬ್ಬರೂ ಅವನನ್ನು ಹಿಡಿದು ಎಳೆದಾಡಿದೆವು. ಜೋಳಿಗೆ ಜಗ್ಗಿ ಹರಿದೆವು. ಹಿಟ್ಟು, ಕಾಳು ನೆಲಕ್ಕೆ ಚೆಲ್ಲಿತು. ನೊಂದು ಕ್ರುದ್ಧನಾದ ಆ ಜಂಗಮಮೂರ್ತಿ 'ಎಲೆ ರಕ್ಕಸಿ, ನೀನು ಜನರ ಜೀವ ಹಿಂಡುವ ಪಿಶಾಚಿ ! ಬ್ರಹ್ಮಭೂತನಾಗು. ಎಲೆ ಮೂರ್ಖಾ ನೀನು ಕಳ್ಳ ಹಂತಕನಾಗ.' ಎಂದು ನಮ್ಮಿಬ್ಬರನ್ನು ಶಪಿಸಿದನು. ನನ್ನ ತಲೆಗೆ ಚಕ್ರಬಂದಿತು, ನಾವು ಮಾಡಿದ ದುಷ್ಕೃತಿ, ಜಂಗಮರ ಉಗ್ರರೂಪ, ನೀಡಿದ ಶಾಪ ! ಗಡಗಡ ನಡುಗಿದೆವು. ಅತ್ತೆವು, ಅವನ ಪಾದಕ್ಕೆ ಬಿದ್ದೆವು. 'ದೇವಾ ಕ್ಷಮಿಸಬೇಕು, ಇದರ ವಿಮೋಚನೆಯಾಗಲಿ' ಎಂದು

ಅಂಗಲಾಚಿ ಕೇಳಿದೆವು. ಕರುಣೆ ಬರಲಿಲ್ಲ, ಕ್ಷಮಿಸಲಿಲ್ಲ. ದುರುದುರುನೆ ನಡೆದು ಬಿಟ್ಟರು. 'ಪಾವನ ಮೂರ್ತಿ ಶಿವಯೋಗಿಯೊಬ್ಬರ ದರ್ಶನವಾದಾಗ, ಅವರ ತಪಃ ಪ್ರಭಾವದಿಂದ ನಿಮ್ಮ ವೈಧವ್ಯಜನ್ಮ ಅಳಿದೀತು' ಎಂದು ಹೋಗುವಾಗ ಅನ್ನುತ್ತಿದ್ದುದು ಮಾತ್ರ ಕೇಳಿಸಿತಷ್ಟೇ! ಕಣ್ಣಿಗೆ ಕತ್ತಲು ಕವಿಯಿತು. ಬಾಯಿ ಒಣಗಿತು. ನೆನಪು ಆರಿತು, ಭೀತಿ ಆವರಿಸಿ ನೆತ್ತಿಗೇರಿತು. ಭ್ರಮಿಷ್ಟಳಾದೆ; ಬ್ರಹ್ಮಪಿಶಾಚಿಯಾದೆ. ಮುಂದೆ ಏನಾಯಿತೆಂಬುದು ಗೊತ್ತಾಗಲಿಲ್ಲ. ಈಗ ತಿಳಿಯುತ್ತದೆ, ಏನಾಯಿತು, ಏನು ಮಾಡಿದೆನೆಂಬುದು!"

ಅಳಹತ್ತಿದಳು ಭಾರತಿ. 'ಈ ಪಾಪದಿಂದ ಮುಕ್ತಗೊಳಿಸಬೇಕು ತಂದೆ' ಎಂದು ಅವರ ಪಾದಜೆಡೆಯಲ್ಲಿ ಹೊರಳಿ, ಸೆರಗೊಡ್ಡಿ ಬೇಡಿದಳು.

"ಶಾಂತಳಾಗು ಮಗಳೆ, ಭಾರತಿ, ಶಿವಾಚಾರ, ಶಿವಮಂತ್ರ ಜಪದಿಂದ ನೀನು ಪುನೀತಳಾಗುವೆ. ಪಾಪ ಪರಿಹಾರ ಆಗುವದು. ನಿನ್ನ ಪತಿ ಎಲ್ಲಿ ಗೊತ್ತಿದೆಯೇ?"

"ಗೊತ್ತಿದೆ ಮಹಾದೇವಾ, ಅವನು ಅರಣ್ಯದಲ್ಲಿ ಅಡಗಿ ಕಳವು, ಕೊಲೆ, ದರೋಡೆಗಳನ್ನು ಮಾಡುತ್ತ ಜೀವಿಸುತ್ತಿದ್ದ, ಜನರ ಕೈಗೆ ಸಿಕ್ಕುತ್ತಿರಲಿಲ್ಲ. 'ಕುಪ್ರಸಿದ್ಧ ಕಳ್ಳ'ನೆಂದು ಹೆಸರು ಪಡೆದಿದ್ದ. ಒಮ್ಮೆ ಒಬ್ಬ ಬ್ರಾಹ್ಮಣರ ಮಗಳನ್ನು ಆಭರಣಗಳ ಆಸೆಯಿಂದ ಎತ್ತಿಕೊಂಡು ಹೋಗಿರಲು, ಕೋಡಲಿಯ ದೊರೆಗಳು ಭಟರಪಡೆ ಕಳಿಸಿ, ಹಿಡಿದು ತರಿಸಿ, ಬಂಧನದಲ್ಲಿಟ್ಟಿದ್ದಾರೆ. ಕಾಳಗಿ ಕೋಡಲಿ ದೇಶ ಮುಖಿಯ ಗ್ರಾಮ!"

"ನೀನು ಈ ಊರ ಯಾಕೆ ಹಿಡಿದೆ ಅಮ್ಮಾ?"

"ಇದು ನನ್ನ ಹುಟ್ಟೂರು, ನಾನೊಬ್ಬಳೇ ಮಗಳು. ತಂದೆ–ತಾಯಿಗಳು ಈ ಮನೆಯನ್ನು ನನಗೆ ಕೊಟ್ಟು ಸತ್ತು ಹೋಗಿದ್ದರು. ನನ್ನ ಮನೆಯೆಂದು ಬಂದೆ ಪಿಶಾಚಿ ನಾನು!"

ಭಾರತಿ ಮತ್ತೆ ಅಳಹತ್ತಿದಳು. 'ಅಳಬೇಡ ಶಾಂತಳಾಗು ಮಗು' ಎಂದು ಶ್ರೀಗಳು ಶಾಂತಿ ಹಸ್ತವನ್ನು ಎತ್ತಿ ಸೂಚಿಸಿದರು ಅಷ್ಟರಲ್ಲಿ ಈ ಸಮಾಚಾರ ಹೊಲದಲ್ಲಿಯ ಬೀಡಾರಗಳಿಗೆ ಗೊತ್ತಾದ್ದರಿಂದ ಸಂತೋಷದಿಂದ ಜನ ಬರಹತ್ತಿದ್ದರು. ಸ್ವಾಮಿಗಳು ಅವರಿಗೆ ಸದ್ದು ಮಾಡದಂತೆ ಸುಮ್ಮನೆ ಕುಳ್ಳಿರಲು ಸನ್ನೆಯಿಂದ ತಿಳುಹಿ ಕೂಡ್ರಿಸಿದ್ದರು.

ಭಾರತಿಯನ್ನು ಸಮಾಧಾನಗೊಳಿಸಿ ಮುಂದಕ್ಕೆ ಕರೆದು ತಾತ್ಕಾಲಿಕವಾಗಿ ಒಂದು ಲಿಂಗವನ್ನು ಅಭಿಷೇಕ ಮಾಡಿ ಕೊಟ್ಟು ಧಾರಣ ಮಾಡಿಸಿದರು. ಮತ್ತೆ ತೀರ್ಥ ಪ್ರಸಾದ ಕರುಣಿಸಿದರು. ತಾವು ಅನುಷ್ಠಾನ ಪೂರೈಸಿ ತಾವು ಪ್ರಸಾದ ಸೇವಿಸುವಾಗ ಆಕೆಗೂ ಹಣ್ಣು ಹಾಲು ಕೊಟ್ಟು ಎದ್ದರು.

ಗುರುನಂಜೇಶ್ವರ ಶಿವಯೋಗಿಗಳು ಊರ ಜನರನ್ನೆಲ್ಲ ಊರಿಗೆ ಕರೆಯಿಸಿ ಕೊಂಡರು. ಕೋಡಲಿಯ ದೊರೆಗಳಿಗೆ ಹೇಳಿ, ಭಾರತಿಯ ಪತಿಯನ್ನು ಕರೆದು ಕೊಂಡು ಬರಲು ಮುಖಂಡ ಕಲ್ಯಾಣಪ್ಪನನ್ನೇ ಕಳಿಸಿದರು. ಕೋಡಲಿಯ ದೊರೆ ರಾಮಲಿಂಗರೆಡ್ಡಿಯವರು ಸ್ವತಃ ಆ ಕಾಳ ಕಳ್ಳನನ್ನು ಕರಕೊಂಡು ಶಿವಯೋಗಿಗಳ ದರ್ಶನಕ್ಕೆ ಬಂದರು. ಆ ಮಹಾಮಹಿಮರ ದರ್ಶನ ಹಾಗು ಅವರ ತಪಸ್ತೇಜದ ಪರಿಸರ ಇವುಗಳ ಪರಿಣಾಮವಾಗಿ ಕಾಳನ ಅಂತರಂಗದಲ್ಲಿ ತೀವ್ರತರವಾದ ಪಶ್ಚಾತ್ತಾಪದ ಅಲೆಗಳೆದ್ದವು. ಸದ್ಭಾವದ ಬೆಳಗು ಮೂಡಿತು. ಅವನು ಸ್ವಾಮಿಗಳ ಸನ್ನಿಧಿಯಲ್ಲಿ ಮಹಿಗೆ ಮೈಯಿಕ್ಕಿ ಹೊರಳಿ, ಅಪರಾಧಗಳನ್ನು ಮನ್ನಿಸಲು ಬೇಡಿ ಕೊಂಡನು. ಸ್ವಾಮಿಗಳು ಸಂತೈಸಿ ಸತ್ಪಥದ ಉಪದೇಶ ಮಾಡಿದರು. ಬಳಿಕ ಸರ್ವರನ್ನು ಕೂಡ್ರಿಸಿಕೊಂಡು ಶಿವನ ಕರುಣೆ ತಪ್ಪಿದರೆ ಏನೆಲ್ಲ ಅನರ್ಥಗಳು ಒದಗುತ್ತವೆ. ಶಿವಭಕ್ತಿ, ಸದಾಚಾರ, ಸತ್ಯಶುದ್ಧ ಕಾಯಕ, ಪೂಜೆ, ಪರೋಪಕಾರ ಮುಂತಾದ ಸದ್ಗುಣ ಸತ್ಕ್ರಿಯೆಗಳಿಂದ ಶಿವನನ್ನು ಒಲಿಸಬೇಕು. ಕೀಳು ಸ್ವಾರ್ಥದ ಬಲಿಗೆ ಬಿದ್ದು ಪರಪೀಡೆ ಮುಂತಾದ ದುಷ್ಕೃತ್ಯಗಳನ್ನು ಮಾಡುತ್ತ ಹೋದರೆ ಪಾಪದ ಮಡುವಿಗೆ ಬೀಳಲೇಬೇಕು. ಹೀನ ಜನ್ಮಗಳಲ್ಲಿ ಬಂದು ದುಃಖಪಡಲೇಬೇಕು !

ಕಲ್ಯಾಣದ ಅಣ್ಣನವರು ಹೇಳಿದ ಒಂದು ಮಾತು ಹೀಗಿದೆ :

ಎಲವೋ ಎಲವೋ ಪಾಪಕರ್ಮವ ಮಾಡಿದವನೇ,
ಒಮ್ಮೆ ಶರಣೆನ್ನೆಲವೋ ! ಒಮ್ಮೆ ಶರಣೆಂದರೆ ಪಾಪಕರ್ಮ ಓಡುವವು
ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನಪರ್ವತಂಗಳು ಐದವು
ಓರ್ವಂಗೆ ಶರಣೆನ್ನ ನಮ್ಮ ಕೂಡಲ ಸಂಗನು ದೇವರಿಗೆ

ಈಗ ಈ ದಂಪತಿಗಳ ಹೃದಯ ಪಶ್ಚಾತ್ತಾಪದಿಂದ ಪರಿಶುದ್ಧವಾಗಿದೆ. ಶಿವನಿಗೆ ಶರಣಾಗತರಾಗಿದ್ದಾರೆ. ಇವರಿಗೆ ಶಿವಕರುಣೆಯಾಗಿದೆ. ಇವರ ಪಾಪ ಪರಿಹಾರವಾಗಿ ಹೋಗಿದೆ. ಇವರ ಮುಂದಿನ ಜೀವನದ ಬಗೆಗೆ ಯಾರೂ ಸಂದೇಹಿತರಾಗಬಾರದು."

ಎಂದು ಹೇಳಿ ಕಾಳನನ್ನು ಕಾಳಗಿಯ ನಾಯಕನನ್ನಾಗಿ ಮಾಡಲು ಕೋಡಲಿಯ ದೊರೆ ರಾಮಲಿಂಗರೆಡ್ಡಿ ಅವರಿಗೆ ಆದೇಶವಿತ್ತರು. ದೊರೆ ಸಂತೋಷದಿಂದ ಒಪ್ಪಿ, ಆಶೀರ್ವಾದ ಪಡೆದು ಕಾಳನನ್ನು ಕರಕೊಂಡು ಹೋದರು.

ಭಾರತಿ ಮಾತ್ರ ಮತ್ತೆ ಸಂಸಾರಕ್ಕೆ ಒಪ್ಪಲಿಲ್ಲ. ವೈರಾಗ್ಯ ಭಾವ ಉಂಟಾಗಿತ್ತು. ಆಕೆ:

"ಅಪ್ಪಾ, ನಾನು ಮಾಯಾ ಬದ್ಧ ಪ್ರಪಂಚಕ್ಕೆ ಮರಳಲಾರೆ. ಇದುವರೆಗೆ ನನ್ನದೆನಿಸಿದ್ದ ಈ ಸ್ಥಳವನ್ನು ತಾವು ಪೂಜೆಗಾಗಿ ಸ್ವೀಕರಿಸಿ ಇಲ್ಲಿ ಇರಬೇಕು. ನಾನು ಅಂಗಳದ ಕಸಗೂಡಿಸಿ ತೆಗೆದು, ತಮ್ಮ ಅಡಿಯ ಮತ್ತು ಬರುವ ಭಕ್ತರ ಸೇವೆ ಮಾಡಿಕೊಂಡು ಇರುವೆ. ಅಪ್ಪಣೆಯಾಗಬೇಕು" ಎಂದು ಬೇಡಿಕೊಂಡಳು. ಕೂಡಲೆ ಜನರೆಲ್ಲ ಹೀಗೆ ಇಲ್ಲಿಯೇ ಇದ್ದು ತಮ್ಮೆಲ್ಲರನ್ನು ಉದ್ಧರಿಸಬೇಕೆಂದು ಏಕ ಕಂಠದಿಂದ ಪ್ರಾರ್ಥಿಸಿದರು. ಅದೇನು ಶಿವಸಂಕಲ್ಪವೋ ಗುರುನಂಜೇಶ್ವರ ಶಿವಯೋಗಿಗಳು 'ಆಗಲಿ' ಎಂದರು. ಭಕ್ತರು ಗಗನ ಬಿರಿವಂತೆ ಜಯಘೋಷ ಮಾಡಿದರು.

ಶಿವಯೋಗಿಗಳು ಭಾರತಿಗೆ ವಿಧ್ಯುಕ್ತ ಅನುಗ್ರಹ ಮಾಡಿ, ಶಿವ ಲಾಂಛನಗಳನ್ನು ಕೊಟ್ಟು ಧಾರಣೆ ಮಾಡಿಸಿದರು. ಆಕೆಗೆ 'ಶಿವಬಸವಮ್ಮ' ಎಂಬ ಹೊಸ ಹೆಸರನ್ನಿತ್ತು ಕರೆದರು. ತಮ್ಮ ಬಿಡದಿಗಳನ್ನು ಕಿತ್ತುಕೊಂಡು ಬಂದು ಜನರೆಲ್ಲ ಊರು ಸೇರಿದರು. ಮನೆಗಳನ್ನು ಸಾರಿಸಿ ಸಿಂಗರಿಸಿಕೊಂಡು ವಾಸಿಸಿದರು. ಶಿವಯೋಗಿಗಳ ಸನ್ನಿಧಿಯಲ್ಲಿ ಸಮಾರಂಭಗಳು ನಡೆದವು. ಆ ಮನೆ ಮಠವಾಯಿತು; ವೃದ್ಧಿಗೊಂಡಿತು. ಇಲ್ಲಿ ಭಕ್ತೋದ್ಧಾರ ಗೈಯಲು ಶಿವನಿಗೆ ಸೇವೆ ಸಲ್ಲಿಸಲು ಸಾಕಷ್ಟು ಅವಕಾಶವೂ ಇದೆ, ಅಗತ್ಯವೂ ಇದೆ ಎಂದು ಗುರುನಂಜೇಶ್ವರರು ಭರತನೂರಿನಲ್ಲಿಯೇ ಉಳಿದುಕೊಂಡರು. ಇವರೂ ಚೆನ್ನಮಲ್ಲೇಶ್ವರರೂ ಆಗಾಗ ಕೂಡಿ ಪರಮಾನುಭಾವ ವಿನಿಮಯದಲ್ಲಿ ಬೆರೆಯುತ್ತಿದ್ದರು. ಭರತನೂರು ಶಿವಭಕ್ತಿ ಭರದ ಊರಾಯಿತು. ಆ ಕ್ಷೇತ್ರ ಪುಣ್ಯ ಕ್ಷೇತ್ರವಾಯಿತು.

ಅಲ್ಲಿ ನಡೆಯುವ ದಾಸೋಹಕ್ಕೆ ಶಿವಬಸವಮ್ಮ ಸಂಚಾಲಿಕೆಯಾದಳು. ಹಸಿದವರ ತಾಯಿಯಾದಳು, ಊರವರಿಗೆ ಮಹಾದೇವಿಯಾದಳು, ಮುಪ್ಪಾಗಿ ಅಲ್ಲಿಯೇ ಬಯಲಾದಳು. ಈ ಭಕ್ತಳ ಗದ್ದುಗೆ ಭರತನೂರ ಮಠದ ಆವಾರದಲ್ಲಿ ಇದೆ.

೭. ತಪಶ್ಶಕ್ತಿಯ ಅಭಿವ್ಯಕ್ತಿ

ಶ್ರೀಗುರುನಂಜೇಶ್ವರರ ವ್ಯಕ್ತಿತ್ವವು ಸಕಲ ವರ್ಗದವರಿಗೂ ವ್ಯಾಪಕವಾಗಿ ಪರಿಚಿತವಾಯಿತು. ಅವರು ಸಾಧಕರಿಗೆ ತಪಸ್ವಿಗಳಾಗಿ, ವೀರಶೈವರಿಗೆ ತತ್ವ ಜ್ಞಾನಿಗಳಾಗಿ, ಆರ್ತ ಹೃದಯಿಗಳಿಗೆ ಘನಗುರುವಾಗಿ, ಭಕ್ತಿಭಾವುಕರಿಗೆ ಮಹಾ ಮಹಿಮರಾಗಿ, ಮೂಢಶಕ್ತಿಗಳಿಗೆ ದಮನಕಾರಕರಾಗಿ ಕಂಡರು. ಸರ್ವರಿಗೂ ಕ್ರಿಯಾಜ್ಞಾನಶೀಲರಾಗಿ, ಶಿವಯೋಗಿಗಳಾಗಿ ಪೂಜ್ಯ ಮಹಾಸ್ವಾಮಿಗಳಾದರು. ಭೂತಗ್ರಸ್ಥ ಭರತನೂರಿನ ಉದ್ಧಾರ ಮಾಡಿದ ಅವರ ಹೆಸರು ದೂರ ದೂರ ಕೇಳ ಬರಹತ್ತಿತು. ಅದರೊಡನೆ ಭರತನೂರು ಮಿಗಿಲಾದ ಹೆಸರು ಪಡೆಯಿತು. ಕ್ಷೇತ್ರವೆನಿಸಿತು. ದರ್ಶನೋತ್ಸುಕರ ಯಾತ್ರಾ ಸ್ಥಳವಾಯಿತು.

ಶ್ರೀಗಳ ದರ್ಶನಕ್ಕೆ ಬರುವ ಅತಿಥಿಗಳು ತನುವಿನ ಬಳಲಿಕೆ ನೀಗಿ ವಿಶ್ರಾಂತಿಯನ್ನು ಪಡೆಯುಲು ಅನುಕೂಲವಾಗುವಂತೆ ಕಲ್ಯಾಣಪ್ಪನು ಗುರುಭಕ್ತನಾದ ತನ್ನ ಆತ್ಮೀಯ ಸಹಕಾರ್ಯಕರ್ತರೊಡನೆ ಮಠದ ಕಟ್ಟಡವನ್ನು ವಿಸ್ತರಿಸಿ ಅಭಿವೃದ್ಧಿಗೊಳಿಸಿದನು. ಶಿವಬಸವಮ್ಮ ಪ್ರಾಣಾಧಾರವಾದ ಅನ್ನ ದಾಸೋಹವನ್ನು ದಕ್ಷತೆಯಿಂದ ನಡಿಸಿದಳು. ಗುರುನಂಜೇಶ್ವರರು ತಮ್ಮ ಲಿಂಗತಪಸ್ಸಿನೊಡನೆ ಭಕ್ತಸಂತತಿಯ ಆತ್ಮಕ್ಕೆ ಜ್ಞಾನದಾಸೋಹಿಗಳಾಗಿದ್ದರು. ಹೀಗೆ ಭರತನೂರು ಮಠವು ಜೀವಾತ್ಮರ ತನು-ಪ್ರಾಣ ಆತ್ಮಗಳಿಗೆ ಆಶ್ರಯವೂ ಉನ್ನತಿಗೆ ಆಧಾರವೂ ಆಗಿ ಮೆರೆಯ ಹತ್ತಿತು. ಅಂಗತ್ರಯದಲ್ಲಿಯೂ ಸಮರಸಗೊಂಡ ಆಧ್ಯಾತ್ಮ ಜೀವನದ ದಿವ್ಯ ಪ್ರತೀಕವಾಯಿತು.

ಕಲ್ಯಾಣಪ್ಪ ಸರಳ ಸಾತ್ವಿಕ ಜೀವಿ. ಆತನು ಕೃಷಿ ಕಾಯಕದವನಾಗಿದ್ದ-ನಲ್ಲದೆ, ವರ್ತಕನೂ ಆದುದರಿಂದ ಕಲ್ಯಾಣಶೆಟ್ಟಿಯೂ ಆಗಿದ್ದನು. ಮಠದ ಉನ್ನತಾವಸ್ಥೆಯೊಡನೆ ಅವನ ವ್ಯವಹಾರಗಳೂ ಉನ್ನತಗೊಂಡವು. ಬರುವ ಆದಾಯವನ್ನು ದಾನ-ಧರ್ಮಗಳಲ್ಲಿ ವೆಚ್ಚಮಾಡುತ್ತ, ಗುರುನಂಜೇಶ್ವರರ ಪ್ರೀತಿಯ

ಶಿಷ್ಯನೂ ಭಕ್ತನೂ ಆವನು. ಮಠದ ಆದರಾತಿಥ್ಯಗಳ ನಡವಳಿಕೆಗೆ ಮುಖ್ಯಾ-ಧಾರವಾದನು.

ರಾಜಾಪುರದ ದೊರೆ ಲಿಂಗಗೌಡನು ಕುಡುವೊಕ್ಕಲಿಗ ಸಮಾಜದವನು ಎಂದು ಹಿಂದೆ ಹೇಳಿದೆ. ಕುಡುವೊಕ್ಕಲಿಗರು ಧಾರ್ಮಿಕ ವಿಚಾರದಲ್ಲಿ, ಸಂಸ್ಕೃತಿಯಲ್ಲಿ ಬಹಳ ಹಿಂದುಳಿದವರು. ಮೂಢ ಸಂಪ್ರದಾಯಗಳಲ್ಲಿ ಮುಳುಗಿದವರು. ಶಿವಯೋಗಿ ಸಿದ್ಧರಾಮ ದೇವರು ನಮ್ಮ ಸಮಾಜದವರೆಂಬ ಒಂದು ಸಂಕುಚಿತ ಭಾವನೆಯಲ್ಲಿ ಹೆಮ್ಮೆ ಪಡುತ್ತಿದ್ದರು. ಹೆಸರಿಗೆ ತಕ್ಕಂತೆ ಒಕ್ಕಲುತನದಲ್ಲಿ ಆಸಕ್ತರು. ಕುಡುವದಕ್ಕೆ ಮುಂದಾದವರು. ಶೌರ್ಯವು ಅವರ ಮುಖ್ಯಗುಣ! ಅಂತೆಯೇ ಅವರು ಇರುವಲ್ಲಿ ದೇಶಮುಖರು, ದೇಸಾಯರು, ಗೌಡರು ಅವರೇ ಆಗಿರುವರು. ಹಾಗೆಯೇ ರಾಜಾಪುರದ ದೇಶಮುಖಿ ಲಿಂಗಗೌಡರು! ಅವರೊಬ್ಬರು ಧಾರ್ಮಿಕ ಪ್ರಜ್ಞೆಯುಳ್ಳವರು ಆಗಿದ್ದರು. ಕಮಲಾಪುರದಲ್ಲಿಯೇ ಗುರುನಂಜೇಶ್ವರ ಶಿವಯೋಗಿ ಗಳ ದರ್ಶನ ಪಡೆದು. ಅವರಿಂದ ಸಾಧನೆಯ ದೀಕ್ಷೆ ಪಡೆದಿದ್ದರು ಲಿಂಗಾಚಾರಗಳನ್ನು ಶ್ರದ್ಧೆಯಿಂದ ಅನುಸರಿಸಿದ್ದರು. ಗುರುಗಳು ತಮ್ಮೂರಲ್ಲಿದ್ದಾಗ, ಅವರ ಸೇವೆಮಾಡಿ ಧನ್ಯರಾಗಿದ್ದರು. ಇವರು ನ್ಯಾಯವಾದ ಆಡಳಿತದವರಾಗಿದ್ದರಿಂದ ಅವರ ಪ್ರಜೆಗಳು ಅವರಲ್ಲಿ ಗೌರವಾದರಗಳನ್ನು ತಾಳಿ, ಅಂಕಿತರಾಗಿ ನಡೆದಿದ್ದರು.

ರಾಜಾಪುರದಲ್ಲಿ ಬಹುಪಾಲು ಜನರು ಗುರುನಂಜೇಶ್ವರರ ಕರುಣೆಗೆ ಪಾತ್ರರಾದ ಶಿಷ್ಯರಾಗಿದ್ದರು. ಅವರು ಭಕ್ತಿ-ವಿಶ್ವಾಸಗಳಲ್ಲಿ ನಿಸ್ಸೀಮರಾಗಿದ್ದರು. ಅವರು ಒಮ್ಮೆ ಗುರುನಂಜೇಶ್ವರರನ್ನು ರಾಜಾಪುರಕ್ಕೆ ಬಿಜಯಂಗೈಸಿಕೊಂಡು ಸೇವಿಸಿ, ಕೃತಾರ್ಥರಾಗಬೇಕೆಂದು ಅಪೇಕ್ಷೆ ಪಟ್ಟರು. ಅವರೆಲ್ಲರು ತಮ್ಮ ಧ್ವನಿ ದೇಶಮುಖರ ಹತ್ತಿರ ಸೇರಿ, ಈ ಬಗೆಗೆ ಆಲೋಚಿಸಿದರು. ಲಿಂಗಗೌಡರು ಸಂತೋಷದಿಂದ ಸಮ್ಮತಿಸಿ, ಗುರುಗಳನ್ನು ವೈಭವದಿಂದ ಬರಮಾಡಿಕೊಳ್ಳಲು ನಿರ್ಧರಿಸಿದರು. ಭರತನೂರಿಗೆ ಬಂದು ಬಿನ್ನಹ ಮಾಡಿದರು. ಮಕ್ಕಳ ಮನೆಯ ಕರೆಯನ್ನು ಆನಂದದಿಂದ ಸ್ವೀಕರಿಸಿದರು ಶ್ರೀಗಳು! ವೈಭವೋತ್ಸವಗಳು ಬೇಡ ವೆಂದರು. ಆಗ್ರಹದಿಂದ ಒಪ್ಪಿಸಬೇಕಾಯಿತು.

ಶಿವಯೋಗಿಗಳ ರಾಜಾಪುರ ಪ್ರವೇಶದ ಆಂದೋಲಿಕೋತ್ಸವದ ಏರ್ಪಾಡಾ-ಗಿತ್ತು. ನಗಾರಿ ನೌಬತ್ತುಗಳು ಭೋರ್ಗರೆಯುತ್ತಿದ್ದವು. ವಿವಿಧ ವಾದ್ಯಗಳು ಮೊಳಗುತ್ತಿದ್ದವು. ಕಹಳೆ, ನಾಗಸ್ವರ, ತಮ್ಮಟೆಗಳು, ಒಳಗೆ ಭಜನೆಯ ಮೇಳಗಳು ಶಿವಸಂಕೀರ್ತನೆಗಳನ್ನು ಹಾಡುತ್ತಿದ್ದವು. ಪ್ರಣವದ ಧ್ವಜಗಳು ಎದ್ದು ಮೆರೆದಿದ್ದವು. ಜನರ ನೂಕುನುಗ್ಗಲು ತಡೆಯುವದಕ್ಕಾಗಿ ಪಲ್ಲಕ್ಕಿಯ ಎಡಬಲದಲ್ಲಿ ಭಟರು

ನಡೆದಿದ್ದರು. ದೇಶಮುಖ ಲಿಂಗಗೌಡರು ಪಲ್ಲಕ್ಕಿಯ ಮುಂಭಾಗದಲ್ಲಿ ನೇತೃತ್ವ ವಹಿಸಿದ್ದರು. ಹಿಂದೆ ಸುಮಂಗಲೆಯರು ಆರತಿ ಹಿಡಿದು ಸಾಲಾಗಿ ಬರುತ್ತಿದ್ದರು. ಊರಿಗೆ ಊರೇ ಆ ಮೆರವಣಿಗೆಯಲ್ಲಿ ಪಾಲುಗೊಂಡಿದ್ದಿತು. ನೆರೆದ ಗ್ರಾಮಗಳವರೂ ಬಂದು ನೆರೆದಿದ್ದರು. ಉತ್ಸವವು ಊರ ಮುಖ್ಯ ಬೀದಿಗಳಲ್ಲಿ ಹಾಯ್ದು, ದೇಶಮುಖರ ವಾಡೆಯ ಮುಂದೆ ಹಾಕಿದ ಭವ್ಯ ಮಂಟಪಕ್ಕೆ ಬಂದಿತು. ಪಲ್ಲಕ್ಕಿಯನ್ನು ಇಳಿಸಿ, ಶ್ರೀಗಳವರನ್ನು ಜೋಪಾನವಾಗಿ ವೇದಿಕೆಯ ಮೇಲೆ ಕರೆದೊಯ್ದು, ಜಯಘೋಷದೊಡನೆ ಉಚ್ಚಾಸನದಲ್ಲಿ ಕೂಡ್ರಿಸಿದರು.

ನಮಸ್ಕರಿಸುವದಕ್ಕೆ, ಹಣ್ಣು-ಕಾಯಿಗಳನ್ನು ಅರ್ಪಿಸುವದಕ್ಕೆ, ಆಶೀರ್ವಾದ ಪಡೆಯುವದಕ್ಕೆ ಜನರು ನುಗ್ಗಿ ನುಗ್ಗಿ ಬರಹತ್ತಿದರು. ಜನದಟ್ಟಣೆ ಅಪಾರವಾಯಿತು. ವ್ಯವಸ್ಥಾಪಕರ ನಿಯಂತ್ರಣ ನಡೆಯದಂತಾಯಿತು. ಮಂಟಪದ ಬಾಗಿಲಲ್ಲಿ ಹೋಗುವ, ಬರುವ ಜನಜಂಗುಳಿಯ ತಿಕ್ಕಾಟದ ಮಧ್ಯದಲ್ಲಿ, ಎದುರು ಬರುವ ಒಬ್ಬ ಧಾಂಡಿಗನ ಧಡಕಿಗೆ ಸಿಕ್ಕು ಒಬ್ಬ ತಾಯಿಯ ಬಗಲಲ್ಲಿಯ ಹೆಣ್ಣು ಮಗುವೊಂದು ಕಳಚಿ ಬಿದ್ದಿತು. ಜನರ ಕಾಲ ತುಳಿತದಲ್ಲಿ ಕೂಸು ತಾಯಿಯ ಕೈಗೆ ಸಿಕ್ಕಲೊಲ್ಲದು. ತಾಯಿ ಚಿಟ್ಟನೆ ಚೀರಿ ಚೀತ್ಕಾರ ಮಾಡಿದುದನ್ನು ಎಷ್ಟು ಜನರು ಕೇಳಿದರೋ ಇಲ್ಲವೋ ಗದ್ದಲದಲ್ಲಿ! ಆದರೆ ಗುರುನಂಜೇಶ್ವರರು ಮಾತ್ರ ಕೇಳಿದರು. ಆ ಶಿವಯೋಗಿಗಳು ಸಟ್ಟನೆ ಎದ್ದು ವೇದಿಕೆಯಿಂದ ಕೆಳಗೆ ಜಿಗಿದು ತಮ್ಮ ಸ್ಥಾನಮಾನ-ಗಳನ್ನು ಸಮಯ ಅಸಮಯಗಳನ್ನು ಲೆಕ್ಕಿಸದೆ, ಎರಡೂ ಕೈಗಳಿಂದ ಜನರನ್ನು ಇಬ್ಭಾಗಗೊಳಿಸುತ್ತ ಗದ್ದಲದಲ್ಲಿ ಹೊಕ್ಕರು. ರಭಸದಿಂದ ಬರುವ ಸ್ವಾಮಿಗಳನ್ನು ನೋಡಿ ಜನರು ಚಕಿತರಾಗಿ ದಾರೀ ಕೊಟ್ಟರು. ಅವರ ಹಿಂದೆಯೇ ಕೆಲವರು ಬಂದರು. ಸ್ವಾಮಿಗಳು ಮಗು ಬಿದ್ದಲ್ಲಿಗೇ ಬಂದರು. ತಾಯಿ ಕೂಸನ್ನು ಕೈಗೆ ತೆಗೆದುಕೊಳ್ಳಲು ತಡಕಾಡುತ್ತಿದ್ದಳು. ಬಂದು ನೋಡುತ್ತಾರೆ, ಮಗುವಿನ ಪ್ರಾಣ ಹೋಗಿತ್ತು, ತಾಯಿ ಬೋರಾಡಿ ಅಳಹತ್ತಿದಳು. ಜನರನ್ನು ಸರಿಸಿ ಬಯಲು ಮಾಡಲಾಯಿತು. ಶ್ರೀಗಳು ತಮ್ಮ ಮೇಲಿದ್ದ ವಸ್ತ್ರವನ್ನು ಮಗುವಿಗೆ ಹೊಚ್ಚಿ, ತಮ್ಮ ತೊಡೆಯ ಮೇಲೆ ತಕ್ಕೊಂಡು ಆಸನ ಹಾಕಿ ಕುಳಿತರು. ಭಸ್ಮದ ಗಟ್ಟಿಯನ್ನು ತಕ್ಕೊಂಡು ಕೂಸಿನ ಮೈಯೆಲ್ಲ ಪೂಸಿದರು. ಭಸ್ಮದಿಂದ ಪ್ರಣವ-ಪಂಚಾಕ್ಷರಿಯನ್ನು ಬರೆದ ತಮ್ಮ ಹಸ್ತವನ್ನು ಮಗುವಿನ ಮೈ ಮೇಲೆ ಎಳೆಯುತ್ತ ಮಂತ್ರ ಜಪ ಮಾಡಿದರು. ತಾಯಿ ಕಾತರದಿಂದ ನೋಡುತ್ತಿದ್ದಳು. ಜನರೆಲ್ಲ ಮೌನವಾಗಿದ್ದರು. ಐದು ನಿಮಿಷ! ಶ್ರೀಗಳು ವಸ್ತ್ರವನ್ನು ಸರಿಸಿ ನೋಡಿದರು, ಮಗು ಕಣ್ದೆರೆದಿತ್ತು. ಮುಖದ ಮೇಲೆ ಕೈಯೆಳೆದು, ಮೊಲೆಯುಣಿಸಲು ಹೇಳಿ ಅದನ್ನು ತಾಯಿಯ ಉಡಿಗೆ ಹಾಕಿದರು, ಜನರು ಉಗ್ಗಡಿಸಿದ 'ಹರಹರ ಮಹಾದೇವ' ಧ್ವನಿ ದೆಸೆದೆಸೆಗೆ ಪಸರಿಸಿತು. ಶಿವಯೋಗಿಗಳು ವೇದಿಕೆಗೆ ಮರಳಿ ಬಂದರು, ಅನಾಹುತವೊಂದರಿಂದ ನೊಂದ ಜನರು,

ಕೊನೆಗೆ ಸ್ವಾಮಿಗಳ ಪವಿತ್ರ ಹಸ್ತ ಮಹಿಮೆಯಿಂದ ಪರಿಹಾರವನ್ನು ಕಂಡು, ಮತ್ತೆ ಉಲ್ಲಸಿತರಾದರು ಸಹನೆ ಇಲ್ಲದೆ ವರ್ತಿಸುವದರಿಂದ ಆಗುವ ಅನರ್ಥವನ್ನು ಅರಿತು, ಶಿಸ್ತು-ಸಂಯಮನಗಳಿಂದ ನಡೆದರು. ಸಮಾರಂಭವು ಇಮ್ಮಡಿ ಮುಮ್ಮಡಿ ಹುಮ್ಮಸದಿಂದ ನಡೆಯಿತು. ನಮಸ್ಕರಿಸುವವರ ಭರ ಕಡಿಮೆಯಾದ ಮೇಲೆ ಶ್ರೀಗಳು ಆಶೀರ್ವಚನ ಹೇಳುತ್ತ :

"ಶಿವನು ನಿರಂಜನ ಜಂಗಮ ರೂಪದಿಂದ ಜಗವೆಲ್ಲ ವ್ಯಾಪಿಸಿರುವನು. ಜಂಗಮನು ಆನಂದ ರೂಪಿ ! ಅವನನ್ನು ಅಂತರಂಗದಲ್ಲಿ ಸಾಕ್ಷಾತ್ಕರಿಸಿಕೊಳ್ಳಬೇಕು, ಅವನನ್ನು ಬಹಿರಂಗವಾಗಿ ಕಂಡು ಆಶೀರ್ವಾದ ಪಡೆಯುವದಕ್ಕಾದರೂ ಒಂದು ನಿಯಮಿತ ರೀತಿಯಿದೆ. ಸಹನೆ ಓರಣಗಳು ಅದರಲ್ಲಿ ಅವಶ್ಯ ! ಉತ್ಕಟವಾದ ಸದ್ಭಾವ ಭಕ್ತಿಗಳು ಬಹಿರಂಗವಾಗಿ ಉಲ್ಬಣಗೊಳ್ಳಬಾರದು, ಅದು ಶಾಂತಿ ಸುಖಕ್ಕೆ ಆತಂಕವಾಗಬಾರದು ಶಿವ ವಸ್ತು" ಎಂದು ನುಡಿದರು. ಜನರು ಶಾಂತವಾಗಿ ಆಲಿಸಿ ಕೃತಾರ್ಥರಾದರು.

ಸಭಾಂಗಣದ ಆಚೆಯ ಅಂಚಿನಿಂದ ಆಘಾತಕ್ಕೊಳಗಾದ ಮಗುವಿನ ತಂದೆ ಮಲ್ಲರೆಡ್ಡಿಗೌಡನು ಮಡದಿಯೊಡನೆ ಆ ಮಗುವನ್ನೆತ್ತಿಕೊಂಡು ವೇದಿಕೆಯ ಕಡೆಗೆ ಬಂದನು. ಜನರೆಲ್ಲರು ಕುತೂಹಲದಿಂದ ನೋಡುತ್ತಿದ್ದಂತೆ, ಆ ಸತಿಪತಿಗಳು ನಗುಮೊಗದ ಆ ಮಗುವನ್ನು ಶಿವಯೋಗಿಗಳ ಪಾದಸನ್ನಿಧಿಯಲ್ಲಿ ಹಾಕಿ ನಮಸ್ಕರಿಸಿ :

"ಗುರುವೇ, ತಮ್ಮ ಪಾದದ ಘನತರವಾದ ಮಹಿಮೆಯಿಂದ ಈ ಶಿಶುವಿಗೆ ಮರಳಿ ಪ್ರಾಣ ಪ್ರತಿಷ್ಠೆಯಾಯಿತು. ಇನ್ನು ಇದು ನಮ್ಮ ಮಗುವಲ್ಲ; ತಮ್ಮ ಚರಣ ಸೇವೆಗೆ ಮೀಸಲು ! ಸ್ವೀಕರಿಸಬೇಕು" ಎಂದು ಕೈ ಮುಗಿದು ನಿಂತು ಬೇಡಿ ಕೊಂಡರು. ಪೂಜ್ಯರು ಏನು ಹೇಳುವರೋ ಎಂದು ಎಲ್ಲರೂ ಆತುರದಿಂದ ನಿರೀಕ್ಷಿಸುತ್ತಿರುವಾಗ, ಶ್ರೀಗಳು : "ಈಗ ಮಗು ನಿಮ್ಮಲ್ಲಿಯೇ ಇರಲಿ, ಬೆಳೆದು ದೊಡ್ಡದಾಗಲಿ, ಅದುವರೆಗೆ ನಿಮ್ಮದು, ಆ ಮೇಲೆ ನಿಮ್ಮ ಇಚ್ಛೆಯಂತೆ ಮಾಡ ಬಹುದು" ಎಂದರು. 'ಗುರುವಿನ ಹಸ್ತಮಹಿಮೆಯೂ ಹಿರಿದು; ಈ ತಾಯಿ-ತಂದೆಗಳ ತ್ಯಾಗವೂ ಹಿರಿದು ಎಂದು ಭಕ್ತರು ಅವರನ್ನು ಮನವಾರೆ ಅಭಿವಂದಿಸಿದರು.

ದೇಶಮುಖರ ವಾಡೆಯಲ್ಲಿ ಪ್ರಶಾಂತ ಭಾಗದಲ್ಲಿ ಶಿವಯೋಗಿಗಳ ಅನುಷ್ಠಾನದ ವ್ಯವಸ್ಥೆಯಾಗಿತ್ತು. ರಾಜಾಪುರದ ಶಿಷ್ಯರು, ಭಕ್ತರು ಈ ಚಿನ್ಮಯ ಮೂರ್ತಿ ಘನಮಹಿಮೆಯ ಗುರುವಿನ ಪಾದತೀರ್ಥ ಪ್ರಸಾದಗಳನ್ನು ಪಡೆದು ಧನ್ಯರಾದರು.

ದೇಶಮುಖ ಲಿಂಗಗೌಡನು ತನ್ನ ಜನರೊಂದಿಗೆ ಟೊಂಕಕಟ್ಟಿ ನಿಂತು, ಶಿವಯೋಗಿಗಳ ಸೇವೆ ಮಾಡಿದನು. ಶಿವಯೋಗಿಗಳು ಹರ್ಷಚಿತ್ತರಾಗಿದ್ದರು.

ರಾಜಾಪುರದಲ್ಲಿ ಮೂರು ದಿವಸವೂ ಶಿವಯೋಗಿಗಳು ಪ್ರವಚನ ಮಾಡಿದರು. ತೋಂಟದಾರ್ಯರ ಕಾರ್ಯಪರಂಪರೆಯಲ್ಲಿ ಭವಮುಕ್ತಿಗೆ ಸುಲಭಮಾರ್ಗವಾದ ವೀರಶೈವಾಚರಣೆಯನ್ನು ನೆಲೆಗೊಳಿಸುವದು ಗುರುನಂಜೇಶ್ವರರ ಮುಖ್ಯ ಕಾಯಕ ವಾಗಿತ್ತು. ಜೀವನದ ಮಣಿಹವಾಗಿದ್ದಿತು. ಇದುವರೆಗೆ ಶಿವಭಕ್ತಿ ಪಥಕ್ಕೆ ತಿರುಗದಿದ್ದವರನ್ನು ಆ ಪಥಕ್ಕೆ ಒಲಿಸುವದಕ್ಕಾಗಿ, ಆ ಮಾರ್ಗದಲ್ಲಿ ಇದ್ದವರ ಆಚರಣೆಯನ್ನು ಪರಿಶುದ್ಧಗೊಳಿಸುವದಕ್ಕಾಗಿ, ಷಟ್‌ಸ್ಥಲ ಮಾರ್ಗದಲ್ಲಿ ಆತ್ಮವು ವಿಕಾಸಗೊಂಡು, ಮಹಾಲಿಂಗವಾಗುವ ಬಗೆಯನ್ನು ಶರಣರ ಅನುಭಾವದ ವಚನಗಳ ಮೂಲಕ ವಿವರಿಸಿದರು. ಕೊನೆಯಲ್ಲಿ ಸಾರಾಂಶವಾಗಿ ಸೊಡ್ಡಳ ಬಾಚರಸರ ಒಂದು ವಚನವ ಹೇಳಿ, ಮಂಗಲ ಮಾಡಿದರು :

"ಭಕ್ತನಾದಡೆ ತನು ಮನದಾಶೆಯುಮಳಿದಿರಬೇಕು
ಮಹೇಶ್ವರನಾದಡೆ ಪರಧನ ಪರಚಿಂತೆ
ಪರಾಂಗನೆಯರ ಎಡೆಯುಳಿದಿರಬೇಕು
ಪ್ರಸಾದಿಯಾದಡೆ ಸುಖರುಚಿಯುಮಗ್ರಹನ
ಮರೆದು ಪ್ರಸಾದ ಘಟವಳಿದೆ ಉಳಿದಿರಬೇಕು
ಪ್ರಾಣಲಿಂಗಿಯಾದಡೆ ಘಟದಾಸೆಯ ತೊರೆದು
ಪ್ರಾಣಲಿಂಗದೊಳಗೆ ಬೆರಸಿ ಬೇರಿಲ್ಲದಿರಬೇಕು
ಶರಣನಾದಡೆ ತನಗೆ ಲಿಂಗವಾಗಿ ಲಿಂಗಕ್ಕೆ
ತಾನಾಗಿ ನಿಬ್ಬೆರಗಿನರಲ್ಲಿಬೇಕು
ಐಕ್ಯನಾದಡೆ ಆಪ್ಯಾಯಮನದೆಡೆಯಡಗಿ
ಸುಖ-ದುಃಖಮಂ ತಾಳದೆ ನಿಭ್ರಾಂತನಾಗಿರಬೇಕು
ಸೊಡ್ಡಳದೇವನು ಇಂತೀ ಷಟ್‌ಸ್ಥಲದ
ಭಕ್ತಿಯನು ಬಸವಣ್ಣನವರಿಗೆ ಮಾಡಿದನು"

ಗುರುನಂಜೇಶ್ವರ ಶಿವಯೋಗಿಗಳು ರಾಜಾಪುರದ ಗ್ರಾಮ ಜೀವನವನ್ನು ಪಾವನಗೊಳಿಸಿದರು. ಜನರ ಭಕ್ತಿ ಭಾವನೆಯನ್ನು ಉದ್ದೀಪನಗೊಳಿಸಿದರು ಅಲ್ಲಿಯ ಸದ್ಭಕ್ತರು ಲಿಂಗಗೌಡರ ಹಿರಿಯತನದಲ್ಲಿ ಶ್ರೀಗಳನ್ನು ಪೂಜಿಸಿ, ಅವರ ವಚನಾಮೃತ ಉಪದೇಶ ಶ್ರವಣ ಮಾಡಿ ಪುನೀತರಾದರು. ಶಿವಯೋಗಿಗಳು ಭರತನೂರಿಗೆ ಮರಳಿ ಹೊರಟರು. ಕಲ್ಯಾಣಸೆಟ್ಟಿ ಮುಂತಾದ ಅವರ ಪರಿವಾರದವರು ಬಂಡಿ-

ಗಳನ್ನು ಕಟ್ಟಿ, ಹಯುಗಳನ್ನು ಹಲ್ಲಣಿಸಿ ಸಿದ್ಧರಾದರು. ದೇಶಮುಖರು ರಾಜವೈಭವದಿಂದ ಬೀಳ್ಕೊಡಲು ಅಣಿಗೊಳಿಸಿದರು. ರಾಜಾಪುರ ಪ್ರವೇಶ ಮಾಡುವಾಗಿನಂತೆ ಈಗ ನಿರ್ಗಮಿಸುವಾಗಲೂ ಸ್ವಾಮಿಗಳವರ ತಪಶ್ಶಕ್ತಿಯನ್ನು ಅಭಿವ್ಯಕ್ತಗೊಳಿಸುವ ಇನ್ನೊಂದು ಪ್ರಸಂಗವು ಕಾದಿತ್ತು.

ರಾಜಾಪುರದ ಒಂದು ಮಗ್ಗುಲಲ್ಲಿ ರಾಜಾಬಕ್ಷ ಮೌಲ್ವಿಯ ಮಕಾನವಿತ್ತು. ರಾಜಾಬಕ್ಷನು ಅಲ್ಲಾನಲ್ಲಿ, ಅಲ್ಲಾನ ದೂತನಾದ ಪ್ರವಾದಿ ಮಹಾತ್ಮಾ ಪೈಗಂಬರರಲ್ಲಿ ತುಂಬಾ ನಿಷ್ಠೆಯುಳ್ಳವನು; ಸದ್‌ವರ್ತನೆಯುವನು, ಸಾಧು, ಫಕೀರನು. ಅವನನ್ನು ಜನರು ಪೂಜ್ಯ ಭಾವನೆಯಿಂದ ಕಂಡು,'ಪೀರಾ ರಾಜಾಬಕ್ಸ' ಎಂದು ಹೆಸರಿಸುತ್ತಿದ್ದರು. ಈತನಲ್ಲಿ ಅನ್ಯ ಮತಮಾರ್ಗಗಳ ಬಗೆಗೆ ಅಸೆಹನೆಯಿದ್ದುದೊಂದು ದೋಷವಾಗಿತ್ತು. ಇಸ್ಲಾಮು ಮತಾಚರಣೆಯಿಂದಲೇ ಮಾನವನಿಗೆ ಮೋಕ್ಷ, ಸುಖ, ಉಳಿದ ಧರ್ಮಗಳೆಲ್ಲ ನಿರರ್ಥಕವೆಂದು ರಾಜಾಬಕ್ಸರ ಭಾವನೆ. ಈ ನಾಲ್ಕು ದಿನ ಗ್ರಾಮದಲ್ಲಿ ನಡೆದ ಶ್ರೀಗುರುನಂಜೇಶ ಶಿವಯೋಗಿಗಳ ಆರಾಧನೆ, ಧರ್ಮೋಪದೇಶ, ಉತ್ಸವಾದಿ-ಗಳನ್ನು ತಿಳಿದು, ಇದು ಜನರ ಮೂಢತನವೆಂದು ಪೀರಾ ಕರುಬಿದ್ದರು. ಮೇಲಾಗಿ ಈಗ ಮಕಾನದ ಮುಂದೆಯೇ ಹಾಯುವ ಸ್ವಾಮಿಗಳ ಬೀಳ್ಕೊಡುಗೆಯ ವೈಭವದ ಉತ್ಸವವು ಅವರ ಭಿನ್ನ ಕಲ್ಪನೆಗೆ ಮತ್ತಿಷ್ಟು ಅವಕಾಶ ಮಾಡಿಕೊಟ್ಟಿತ್ತು.

ಸ್ವಾಮಿಗಳನ್ನು ಪಲ್ಲಕ್ಕಿಯಲ್ಲಿ ಕಳಿಸಿಕೊಡುವ ಉತ್ಸವವು ದೇಶಮುಖರ ವಾಡೆಯಿಂದ ಹೊರಟಿತು. ಊರ ಬೀದಿಯಲ್ಲಿ ಮನೆಮನೆಗಳ ಮುಂದೆ ಭಕ್ತರು ಪಲ್ಲಕ್ಕಿಯ ಹತ್ತಿರ ಬಂದು, ಕರ್ಪುರ ಬೆಳಗಿ, ಹಣ್ಣು-ಕಾಯಿಗಳನ್ನು ಇಟ್ಟು, ಆಶೀರ್ವಾದ ಪಡೆಯುತ್ತಿದ್ದರು. ಹೀಗೆ ಊರ ಮುಂಭಾಗಕ್ಕೆ ಬಂದಿರುವಾಗ ಪೀರಾನು ತಾನೂ ಸ್ವಾಮಿಗಳನ್ನು ಕಾಣಲೆಂದು ಸಹಜವಾಗಿಯೋ ಅಥವಾ ಕೊಂಕು ನಡೆಯಿಂದಲೋ, ತಬರುಕದಲ್ಲಿ ಮಾಂಸದ ತುಂಡುಗಳನ್ನು ಇಟ್ಟು, ಮೇಲೆ ವಸ್ತ್ರ ಮುಚ್ಚಿ ತಕ್ಕೊಂಡು ಬಂದನು. ಇಸ್ಲಾಮುದ ಮೌಲ್ವಿಯು ಲಿಂಗಾಯತ ಸ್ವಾಮಿಗಳ ದರ್ಶನಕ್ಕೆ ಬಂದುದನ್ನು, ಅವನ ಹಸ್ತದಲ್ಲಿಯ ವಸ್ತುವನ್ನು ಕಂಡು, ಹತ್ತಿರದ ಜನರು ಚಕಿತರಾದರು. ಭಾವುಕರಾದ ಅವರು ತಡೆಯುವದಕ್ಕೂ ಆಗದೆ ಬೆಪ್ಪಾಗಿ ನಿಂತರು. ಅಮರ ಶಿವಯೋಗಿಗಳು ತಮ್ಮ ಮುಂದೆ ಹಿಡಿದ ತಬರುಕದ ಮೇಲಿನ ವಸ್ತ್ರವನ್ನು ತೆಗೆದರು.

ಒಳಗೆ ಮಗಮಗಿಸುವ ಮಲ್ಲಿಗೆಯ ಹೂವು! ಸುವಾಸನೆ ಪಸರಿಸಿತು. ಶ್ರೀಗಳು ಅವುಗಳನ್ನು ಕೈಯಿಂದ ತಕ್ಕೊಂಡು ಗಂಧ ಗ್ರಹಣಮಾಡಿ, ಮಾನವರ ಕಲ್ಯಾಣಕ್ಕೆಂದೇ ಉದಯವಾದ ಒಂದು ಮತದ ಸುವಾಸನೆಯಿದು, ಅದರ ಅನುಯಾಯಿಯ ಅಂತರಂಗ ಒಂದುವೇಳೆ ಪರಿಶುದ್ಧವಿರಬಹುದು; ಇರದಿರಬಹುದು.

ಆ ಮಾತು ಬೇರೆ' ಎಂದು ನಕ್ಕರು. ಶಿವಯೋಗಿಗಳ ಈ ಲೀಲಾತ್ಮಕ ಘಟನೆಯನ್ನು ನೋಡಿ, ಬೆದರಿ ನಿಂತಿದ್ದ ಭಕ್ತರಗುಂಪು ಆಶ್ಚರ್ಯ-ಆನಂದಗಳಿಂದ ಜಯಘೋಷ ಮಾಡಿದರು. ರಾಜಾಸಾಹೇಬನು ಮಹಾತ್ಮರನ್ನು ಕೆಣಕಿದ್ದಕ್ಕೆ ಪಶ್ಚಾತ್ತಾಪ ಪಟ್ಟು, ಕ್ಷಮೆ ಕೇಳಿ, ತಬರುಕ ತಕ್ಕೊಂಡು ಹಿಂದೆ ಸರಿದನು. ಉತ್ಸವಕ್ಕೆ ಎಲ್ಲಿಲ್ಲದ ಕಳೆ ಬಂದಿತು. ಅದು ಸ್ವಲ್ಪ ಮುಂದೆ ನಡೆದು, ಒಂದು ಜಲಾಶಯದ ಹತ್ತಿರ ಬಂದಿತು. ಅಲ್ಲಿ ಗ್ರಾಮದ ಪ್ರಮುಖರು ಪರಮ ಶಿವಯೋಗಿಗಳಿಗೆ ಪುನಃ ಪುನಃ ವಂದಿಸಿ ಅವರನ್ನೂ ಭರತನೂರಿನ ಪರಿವಾರವನ್ನೂ ಬೀಳ್ಕೊಟ್ಟರು.

ರಾಜಾಬಾಕ್ಸ ಸಾಹೇಬರ ಮನಸ್ಸಿನಲ್ಲಿ ಅಂದು ಧರ್ಮ ಸಮನ್ವಯದ ಬೆಳಕು ಮೂಡಿತು. ರಾತ್ರಿಯೆಲ್ಲ ಧರ್ಮ ತತ್ವಗಳ ಬಗೆಗೆ ಆಲೋಚಿಸಿದರು. ಗುರು-ನಂಜೇಶ್ವರರ ತಪದ ಮಹಿಮೆ ಅವರ ಕಣ್ಣ ಮುಂದೆ ಕಟ್ಟಿ ನಿಂತಿದ್ದಿತು. ಪ್ರತ್ಯೇಕವಾಗಿ ಅವರ ದರ್ಶನ ಪಡೆಯಲು ಬಯಸಿದರು. ಅವರ ಕಾಲಾವಕಾಶವನ್ನು ಅರಿಯಲು ಮೂರನೆಯ ದಿನ ತಮ್ಮ ದೂತನನ್ನು ಭರತನೂರಿಗೆ ಕಳುಹಿದರು. ಸ್ವಾಮಿಗಳು ಸಂತೋಷಿಸಿ ತಮ್ಮ ಅನುಕೂಲ ವೇಳೆ ತಿಳಿಸಿದರು. ಪೀರಾ ರಾಜಾಬಾಕ್ಸರು ಭರತನೂರಿಗೆ ಬಂದರು, ಸ್ವಾಮಿಗಳು ಪ್ರೇಮದಿಂದ ಬರಮಾಡಿಕೊಂಡರು.

ರಾಜಾಬಾಕ್ಸರ ಬುದ್ಧಿ ಹರಿತವಾದದ್ದು. ನಿಷ್ಠಾವಂತ ಸರಳ ಜೀವಿ! ಶಾಂತಿ ಸುಖಕ್ಕಾಗಿ ಹಂಬಲಿಸಿ ಧರ್ಮಾಚಾರದಲ್ಲಿ ಸಾಧನೆ ಮಾಡುತ್ತಿರುವವರು. ಆತ್ಮ ತೃಷೆಯ ಪೂರೈಕೆಗೆ ಮಾರ್ಗದರ್ಶನ ಬೇಕಾಗಿತ್ತು. ಗುರುನಂಜೇಶ್ವರರ ದರ್ಶನ ಆಶಾ ಕಿರಣವನ್ನು ಕಾಣಿಸಿತ್ತು "ಮರ ಮರ ಮಥನದಿಂದ ಅಗ್ನಿ ಹುಟ್ಟಿತ್ತು. ಬೆಳಗು ಬೆಳಗು ಹಣಚುವಲ್ಲಿ ಮಹಾ ಬೆಳಕು ತೋರಿತ್ತು" ಎಂಬ ಶರಣರ ವಚನದಂತೆ ಗುರುನಂಜೇಶ್ವರರ ಅನುಭಾವದ ನುಡಿಗಳನ್ನು ಆಲಿಸಿ ಚರ್ಚಿಸುವದರಿಂದ ರಾಜಾ ಸಾಹೇಬರ ಅಂತರಂಗದಲ್ಲಿ ಬೆಳಗು ಮೂಡುತ್ತ ಬಂದಿತು.

'ದೇವರು ದೊಡ್ಡವನು. ಪರಶಿವ, ಅಲ್ಲಾ, ಆತನ ಹೆಸರುಗಳು. ಅವನು ಮಹತ್ತಿಗಿಂತ ಮಹನಾಗಿದ್ದಾನೆ, ಅವನು ಒಬ್ಬನೇ ಇದ್ದಾನೆ, ವಿಶ್ವದ ಆದಿಯೂ ಅಂತ್ಯವೂ ಅವನೇ! ಅವನು ಸರ್ವಕರ್ತ, ಸರ್ವಜ್ಞ. ಮಾನವನು ಎಲ್ಲಿದ್ದರೂ ಅವನಲ್ಲಿ ದೇವರು ಇರುತ್ತಾನೆ. ಬೆಳಕು, ಗಾಳಿ, ಇಳೆ, ಬೆಳೆ, ಬಿತ್ತು, ಎತ್ತು, ತೊರೆ, ಗಿರಿ, ಸಾಗರ ಎಲ್ಲವೂ ದೇವನ ದಾನ! ಜೀವನು ದೇವನಿಂದ ಬಂದು ದೇವನಲ್ಲಿ ಕೂಡುವನು. ಅಂತರಂಗದಲ್ಲಿ ನೋಡಬೇಕು; ಒಳಗೆ ದೇವನ ಪ್ರಕಾಶವಿದೆ, ದೇವನನ್ನು ನಂಬಿದರೆ ಕಷ್ಟ ತಾಪತ್ರಯುಗಳು ಬಾಧಿಸವು. ಭಕ್ತನು ದೇವ, ಶರಣರಲ್ಲಿ ವಿಶ್ವಾಸವಿಟ್ಟು ಅವರ ವಚನಗಳನ್ನು ನಂಬಿದರೆ, ಕತ್ತಲೆಯಿಂದ ಬೆಳಕಿಗೆ ಬರುವನು.

ದಯೆಯು ಧರ್ಮದ ಮೂಲವು. ದಾನವು ಶ್ರೇಷ್ಠವಾದ ವ್ರತವು. ತ್ಯಾಗ, ಸೇವೆ, ಸತ್ಯಾಚರಣೆ, ಪ್ರೇಮ, ಭಕ್ತಿ, ಪರೋಪಕಾರ ಇವು ಧಾರ್ಮಿಕಾಚಾರದ ಮುಖ್ಯಾಂಶಗಳು. ಆಶೆಯಿಂದ ದುಃಖ, ನಿರಾಶೆಯಿಂದ ಶಾಂತಿ, ತಂದೆ-ತಾಯಿಗಳನ್ನು ಬಡವರನ್ನು ಸಂತ ಮಹಾತ್ಮರನ್ನು ಆದರಿಸಬೇಕು. ಈ ಮುಂತಾದ ದೇವ-ಜೀವ ವಿಶ್ವ ಸಂಬಂಧದ ತಾತ್ವಿಕ ವಿಷಯದ, ಹಾಗು ಧಾರ್ಮಿಕ ಜೀವನದ ರೀತಿನೀತಿಗಳ ವಿಷಯದ ಮುಖ್ಯವಾದ ವಿಚಾರಗಳು ವೀರಶೈವ ಮತ್ತು ಇಸ್ಲಾಮ ಧರ್ಮಗಳಲ್ಲಿ ಸಮಾನವಾಗಿರುವವು.

ಈ ಬಗೆಯಾಗಿರುವ ಉಭಯ ಧರ್ಮಗಳಲ್ಲಿ ಸಾಮಾನ್ಯವಾಗಿರುವ ಅಮೌಲ್ಯ ವಿಚಾರಗಳನ್ನು ಗುರುನಂಜೇಶ್ವರರು ವಿವೇಚನೆಯಿಂದ ತೋರಿಸಿಕೊಟ್ಟರು. ಮೌಲ್ವಿಯು ಪ್ರಾರ್ಥನೆ, ಧ್ಯಾನ, ಯೋಗ ಸಾಧನೆಗಳ ವಿಷಯದಲ್ಲಿ ಹಲವಾರು ಪ್ರಶ್ನೆಗಳನ್ನು ಮುಂದಿಟ್ಟು ವಿವರಣೆ ಪಡೆದರು. ಅವರಿಗೆ ಪರಮಾನಂದವಾಯಿತು. ಭೇದಭಾವ ಅಡಗಿ ಹೋಯಿತು. ಎಂತಹ ಮಹಾತ್ಮರಿವರು ಎನಿಸಿತು. ಇಂತಹ ಈ ಶಿವಯೋಗಿಯನ್ನು ಮೊನ್ನೆ ಕೆಣಕಿ ಭಂಗಿತನಾದುದು ನೆನಪಾಯಿತೋ ಏನೋ ಎದುರಿಗೆ ಎದ್ದು ನಿಂತು ಕಣ್ಣೀರು ಕರೆದರು. ಇಂಗಿತವನ್ನು ಅರಿತ ಸ್ವಾಮಿಗಳು ಎದ್ದು ಅವರನ್ನು ಬರಸೆಳೆದು ಅಪ್ಪಿಕೊಂಡರು, ಎರಡು ಆತ್ಮಗಳು ಎಂಬುದನ್ನು ಇಬ್ಬರೂ ಮರೆತಿದ್ದರು. ಒಂದೆರಡು ನಿಮಿಷ! ಸರಿದು ಮತ್ತೆ ಆಸೀನರಾದರು.

ಬಳಿಕ ಮಾತುಕತೆಗಳು ವ್ಯಾವಹಾರಿಕ ಕುಶಲದ ಕಡೆಗೆ ತಿರುಗಿದವು. ಸ್ವಲ್ಪ ಹೊತ್ತಿನ ನಂತರ ಸ್ವಾಮಿಗಳ ನಿಯಮಿತ ಕಾರ್ಯಗಳ ಸಲುವಾಗಿ ಸೇವಕರಿಂದ ಸೂಚನೆ ಬಂದುದರಿಂದ, ರಾಜಾ ಬಾಕ್ಸರು ಮತ್ತೆ ಬರುವೆನೆಂದು ಹೇಳಿ ನಮಸ್ಕರಿಸಿ ರಾಜಾಪುರಕ್ಕೆ ಹೋದರು. ಮೂರು ದಿವಸಗಳ ನಂತರ ಗೊತ್ತಿದ್ದ ವೇಳೆಗೆ ಮತ್ತೆ ಭರತನೂರಿಗೆ ಬಂದರು. ಸ್ವಾಮಿಗಳ ದರ್ಶನ ಪಡೆದರು. ಅವರ ಹೃದಯದ ಹಂಬಲವನ್ನು ಗ್ರಹಿಸಿದ್ದರು ಸ್ವಾಮಿಗಳು!

ರಾಜಾಬಾಕ್ಸರಿಗೆ 'ಮರ್ತ್ಯದಲ್ಲಿ ಅಲ್ಪ ಸುಖ–ಅತಿ ಕಷ್ಟ' ಈ ಅರಿವು ಈಗ ಪೂರ್ಣವಾಗಿತ್ತು. ವೈರಾಗ್ಯದ ಬೆಳಕು ತಲೆದೋರಿತ್ತು. ನಿತ್ಯ ಸತ್ಯ ಶಾಂತಿಯ ಪಡೆವುದಕ್ಕೆ ಉಪಾಯವೇನು? ಮಾರ್ಗ ಯಾವದು? ಎಂದು ಮನಸ್ಸು ತವಕಗೊಂಡಿತ್ತು. ಸ್ವಾಮಿಗಳು ಅವರನ್ನು ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಸತ್ಕರಿಸಿದರು. ರಾಜಾಸಾಹೇಬರು ತಮ್ಮ ಜೀವದ ಕಳವಳವನ್ನು ನಿಜಸುಖದ ಹಂಬಲವನ್ನು ತೋಡಿಕೊಂಡರು. ಶ್ರೀಗಳು ಅವರ ಆತ್ಮೋನ್ನತಿಯ ವಿಚಾರಗಳನ್ನು ಕೇಳಿ ಆನಂದಿಸಿದರು. ಅವರಿಗೆ ಮುಕ್ತಿಯ ಹೊಲಬು ತಿಳಿಸಿದರು. 'ನೀವು ಎಲ್ಲಿ

ಯಾವ ಪರಿಸರದಲ್ಲಿ ಜನ್ಮಿಸಿರುವಿರಿ, ಯಾವ ಧರ್ಮ ಸಿದ್ಧಾಂತವನ್ನು ಹೊಂದಿರುವಿರಿ, ಅವುಗಳನ್ನು ನಂಬಿ ಸಾಧನೆ ಮಾಡಿರಿ, ಯಾವ ಮತ ಸಿದ್ಧಾಂತಗಳೂ ಜಾತಿ ಕೋಮುಗಳನ್ನು ನಿರ್ಮಿಸಿಲ್ಲ. ಅವೆಲ್ಲ ಅಪಕ್ವ ವಿಚಾರದವರ ಕೈವಾಡಗಳು ಅವುಗಳಲ್ಲಿ ತಾರತಮ್ಯಗಳನ್ನು ಕಲ್ಪಿಸಿ ಸೆಣಸಾಡುವದನ್ನು ಬಿಟ್ಟು ದೇವರಿಗೆ ಎಲ್ಲರೂ ಸಮಾನರೆಂದು ಭಾವಿಸುವಿರಷ್ಟೇ ? ಆಶೆ, ಆಮಿಷ, ಮೋಹ ಇವು ಅಧ್ಯಾತ್ಮ ಸಾಧನೆಗೆ ಪ್ರತಿಕೂಲ ! ಇವುಗಳನ್ನು ಅಳಿಯಬೇಕಲ್ಲವೇ ? ಆದರೆ ಹುಟ್ಟಿದ ಸ್ಥಳದಲ್ಲಿಯೇ ಇದ್ದರೆ ಅದು ಸಾಧ್ಯವಾಗದು. ಹುಟ್ಟಿದ ಸ್ಥಳದ ವ್ಯಾಮೋಹ-ಕ್ಕೊಳಗಾಗಬೇಕಾಗುವದು. ತ್ಯಾಗವು ವೈರಾಗ್ಯದ ಪ್ರಾರಂಭಿಕ ರೂಪ ! ಆದ್ದರಿಂದ ನೀವು ಇಲ್ಲಿಯದೆಲ್ಲವನ್ನು ತೊರೆದು ದೂರ ಹೋಗಿರಿ. ನಾನೊಂದು ಸ್ಥಳವ ಸೂಚಿಸುವೆ; ಬೇಕಾದರೆ ನೀವು ಅಲ್ಲಿಗೆ ಹೋಗಬಹುದು. ಧಾರವಾಡ ಪ್ರಾಂತದ ನವಲುಗುಂದದ ಹತ್ತಿರ,ಬೆಣ್ಣಿ ಹಳ್ಳದ ದಡದಲ್ಲಿ ಯಮನೂರು ಎಂಬ ಚಿಕ್ಕಮುರಡಿಯ ಗ್ರಾಮವಿದೆ. ಅದು ಯೋಗ್ಯವಾಗುವದು. ಅಲ್ಲಿ ನಿರಾತಂಕ ಮನಸ್ಸಿನಿಂದ ದೇವರ ಪ್ರಾರ್ಥನೆ ನಡೆಸಿರಿ. ಜೀವನದಲ್ಲಿ ನೊಂದವರನ್ನು ಸಂತೈಸಿರಿ, ನಿಮ್ಮ ಮನಸ್ಸು ಬುದ್ಧಿ ಚಿತ್ತ ಅಹಂಕಾರಗಳನ್ನು ದೇವರಿಗೆ ಅರ್ಪಿಸಿರಿ. ಅಂತರಂಗದಲ್ಲಿ ಅವನ ರಾಜ್ಯದ ಸುಖ ಭೋಗಿಸಿರಿ. ಲೋಕದ ಕೀರ್ತಿಗೆ ಬಲಿಯಾಗಬೇಡಿರಿ, ನಿರ್ಮೋಹಿಯಾಗಿರ ಬೇಕು. ಫಲಾಹಾರವನ್ನೇ ಸ್ವೀಕರಿಸಬೇಕು. ಅದರಿಂದ ಸತ್ವಗುಣ ಹೆಚ್ಚುತ್ತದೆ' ಎಂದರು.

ಸ್ವಾಮಿಗಳ ಅಂತಃಕರಣ ಪೂರ್ವಕವಾದ ಸಲಹೆಯನ್ನು ಮೆಚ್ಚಿ, ಮೌಲ್ವಿ-ಸಾಹೇಬರು ಹರ್ಷತುಂಬಿದ ಹೃದಯದಿಂದ ಅಭಿವಂದಿಸಿ ಅಪ್ಪಣೆ ಪಡೆದು ಮರಳಿದರು.

ರಾಜಾಬಾಕ್ಸರು ಸ್ವಸ್ಥಲದ ಮೋಹವನ್ನೆಲ್ಲ ತ್ಯಜಿಸಿ, ಸ್ವಾಮಿಗಳು ಸೂಚಿಸಿದ ಸ್ಥಳವನ್ನು ಅರಸುತ್ತ, ಯಮನೂರ ಮರಡಿಗೆ ಬಂದು ಅಲ್ಲಿ ವಾಸಿಸಿದರು. ಅನೇಕ ಮಹಿಮೆಗಳನ್ನು ತೋರಿ, ಭಕ್ತರ ಕಷ್ಟಗಳನ್ನು ನಿವಾರಿಸಿದ ಅವರ ಚರಿತ್ರೆ ಹೆಸರಾಗಿ ಇರುವದು. ಯಮನೂರು ಅಂದಿನಿಂದ ಪ್ರಸಿದ್ಧ ಯಾತ್ರಾ ಸ್ಥಳವಾಗಿದೆ. ಹಿಂದು ಮುಸ್ಲಿಮರೆನ್ನದೆ, ಸಕಲ ಮತೀಯ ಭಕ್ತರೂ ಇಲ್ಲಿಗೆ ಆಗಮಿಸಿ, ದರ್ಶನ ಪಡೆದು ಕೃತಾರ್ಥರಾಗುತ್ತಾರೆ. ಪೀರದ ಗಂಧ ಮತ್ತು ಉರುಸು, 'ರಾಜಾಬಾಗಸವಾರಿ' ಎಂಬ ಜಾತ್ರೆ ಮಾರ್ಚ ತಿಂಗಳಲ್ಲಿ ವಿಜೃಂಭಣೆಯಿಂದ ನಡೆಯುತ್ತಿವೆ. ಇನ್ನೂ ಇಲ್ಲಿ ಪವಾಡಗಳು ಜರುಗುತ್ತವೆಂದು ಭಾವುಕರ ನಂಬಿಕೆಯಿದೆ. ಯಮನೂರ ಮುಸ್ಲಿಮ್ ಪೀರನ ಸಮಾಧಿ ಸ್ಥಳ. ಅಲ್ಲಿ ಹಿಂದುಗಳೂ ಬಂದು ದರ್ಶನ ಪಡೆಯುತ್ತಾರೆ. ಬರ್ಗಿ ಮನೆತನದ ಕ್ಷತ್ರಿಯರು ಅಲ್ಲಿನ ಪೂಜಾರಿಗಳಾಗಿರುತ್ತಾರೆ. ಮಹಾತ್ಮರ ಜೀವನವು ಸರ್ವಧರ್ಮ ಸಮನ್ವಯದ್ದಾಗಿರುತ್ತದೆಂಬುದಕ್ಕೆ ಮೇಲೆ ವಿವರಿಸಿದ

ಶಿವಯೋಗಿಗಳು ಹಾಗು ರಾಜಾಬಾಕ್ಸರ ಸಮ್ಮಿಲನಗಳೂ, ಇಂಥ ಕ್ಷೇತ್ರಗಳೂ ಪ್ರಮಾಣವಾಗಿರುತ್ತವೆ. 'ಹಿಂದು ಮುಸ್ಲಿಮ್ ಭಾಯಿ ಭಾಯಿ' ಎಂಬ ತತ್ವ ಬರಿ ಬಾಯಲ್ಲಿಲ್ಲ, ಇಲ್ಲಿ ಆಚರಣೆಯಲ್ಲಿದೆ ಎಂಬುದನ್ನು ಯಮನೂರಿಗೆ ಹೋದವರು ಕಂಡುಕೊಳ್ಳಬಹುದು.

(ಗುರುನಂಜೇಶ್ವರರು ಮತ್ತು ರಾಜಾಬಕ್ಸರು ಇವರ ಸಮ್ಮಿಲನದ ಘಟನೆ ಹಾಗು ಅವರಿಬ್ಬರಲ್ಲಿ ನಡೆದ ತಾತ್ವಿಕ ವಿವೇಚನೆಗಳ ಬಗೆಗೆ 'ಶ್ರೀಗುರುನಂಜೇಶ್ವರ ಪುರಾಣ'ದ ೧೪ನೆಯ ಸಂಧಿಯಲ್ಲಿ ಬಂದ ವಿಷಯವನ್ನೇ ಆಧರಿಸಿ ಈ ಪ್ರಕರಣದಲ್ಲಿ ಹೇಳಲಾಗಿದೆ. ಸಂಶೋಧಕ ಸಾಹಿತಿಗಳು ಇನ್ನಿತರ ಸಾಹಿತ್ಯದಲ್ಲಿಯೂ ಶೋಧಿಸಿ, ಈ ಘಟನೆಯ ಐತಿಹಾಸಿಕತೆಯನ್ನು ಖಚಿತಪಡಿಸಿಕೊಳ್ಳಬಹುದು.)

ಕುಷ್ಟರೋಗದಿಂದ ಬಳಲುತ್ತಿದ್ದ ಅಮೀನ ಬೇಗಮ್ ಎಂಬ ಮಹಿಳೆ ಅದರ ನಿವಾರಣೆಗಾಗಿ ಶ್ರೀಗುರುನಂಜೇಶ್ವರರಿಗೆ ಮೊರೆಯಿಟ್ಟು, ಬೇಡಿಕೊಂಡಳು. ಗುರುಗಳ ಕರುಣಾಮಯ ದೃಷ್ಟಿಯಿಂದ, ಉಪಚಾರ ನೀಡಿದ ಅವರ ಅಮೃತಹಸ್ತಗುಣದಿಂದ, ಆ ತಾಯಿಯ ರೋಗ ಪರಿಹಾರಗೊಂಡಿತು. ಆಕೆಯು ಆಕೆಯ ಪತಿ ಹುಸೇನ ಪಟೇಲ ಇವರು ಶಿವಯೋಗಿಗಳಲ್ಲಿ ಅತ್ಯಂತ ನಿಷ್ಠೆಯನ್ನಿರಿಸಿ, ನಡೆದುಕೊಂಡರು. ಅವರಿಬ್ಬರ ಸಮಾಧಿಗಳು ಮಠದ ಮುಂದುಗಡೆಯಲ್ಲಿ ಈಗಲೂ ಇರುವವು.

ಮೇಲಿನ ಘಟನೆಗಳಿಂದ ಶ್ರೀಶಿವಯೋಗಿಗಳು ಪರಮದಯಾಳುಗಳೂ, ಜಾತ್ಯಾತೀತ ಭಾವನೆಯವರೂ ಆಗಿದ್ದರೆಂಬುದರಲ್ಲಿ ಸಂದೇಹವಿಲ್ಲ. ಲಿಂಗವೂ, ಲಿಂಗವಂತಿಕೆಯೂ ಒಂದು ಜಾತಿ ಅಥವಾ ಮತವಾಗಿರದೆ, ದೇವತ್ವದ ಸಾಧನೆಯ ಒಂದು ಯುಕ್ತ ಮಾರ್ಗದ ಸ್ವರೂಪವೆಂಬುದನ್ನು ನಾವು ಗಮನಿಸಬೇಕು.

❀❀❀❀

೮. ಕಲ್ಯಾಣ ಲೀಲೆ

ರಾಜಾಪುರ ಕೋಡಲಿ ದೇಶಮುಖಿಗಳ ಸೀಮೆಗಳು ಮೇರೆಯಲ್ಲಿ ಒಂದಕ್ಕೊಂದು ಹೊಂದಿದ್ದವು. ಭೂಮಿಯಲ್ಲಿ ಎಳೆದ ಸೀಮಾ ರೇಖೆಯ ಆಚೆಯ ಈಚೆಯ ಎರಡು ಶ್ರೀಮಂತಿಕೆಗಳು ಸಹಕರಿಸಿ ಸ್ನೇಹದಿಂದ ನಡೆದದ್ದು ನಮ್ಮ ದೇಶದ ಇತಿಹಾಸದಲ್ಲಿಯೇ ಕಂಡು ಬರುವದಿಲ್ಲ. ಆ ಶ್ರೀಮಂತಿಕೆಗಳ ಒಡೆಯರು ಯಾವಾಗಲೂ ವೈಮನಸ್ಸು, ಅಸೂಯೆ, ಹೇವಗಳಲ್ಲಿ ಕುದಿಯುತ್ತಿರುತ್ತಾರೆ. ಈ ಸಾಂಪ್ರದಾಯಿಕ ದೋಷದಿಂದಲೇ ಲಿಂಗಗೌಡ, ರಾಮರೆಡ್ಡಿ ಈ ಇಬ್ಬರು ದೇಶಮುಖರ ನಡುವಿನ ಸಂಬಂಧ ಸುಗಮವಾಗಿರಲಿಲ್ಲ; ಪ್ರೇಮಮಯವಾಗಿರಲಿಲ್ಲ.

ಗುರುನಂಜೇಶ್ವರರ ಲಿಂಗಭಕ್ತಿ, ತಪಸ್ಸು, ಮಹಿಮೆ, ತತ್ತ್ವೋಪದೇಶಗಳ ಪ್ರಭಾವವನ್ನು ಕೇಳಿದವರು ಅವರಿದ್ದಲ್ಲಿಗೆ ಬಂದು ದರ್ಶನ ಪಡೆದು ಪಾವನಗೊಳ್ಳು-ತ್ತಿದ್ದರು. ಶಿವಭಕ್ತಿ ಮಾರ್ಗಿಗಳಾಗುತ್ತಿದ್ದರು. ಬಡವರು ಬಲ್ಲಿದರು ಎಲ್ಲರೂ ಅವರ ಚರಣಗಳಿಗೆ ಶರಣಾಗತರಾಗುತ್ತಿದ್ದರು. ಶಿವಯೋಗಿಗಳು ಕಮಲಾಪುರ-ದಲ್ಲಿರುವಾಗಲೇ ರಾಜಾಪುರದ ಲಿಂಗಗೌಡರು ಪ್ರಜೆಗಳೊಡನೆ ಬಂದು ಶ್ರೀಗಳ ಕೃಪೆಗೆ ಪಾತ್ರರಾಗಿದ್ದರು. ಅದು ರಾಮರೆಡ್ಡಿಯವರ ಗಮನ ಸೆಳೆದಿತ್ತು. ಚೋರ ಚಕ್ರವರ್ತಿ ಕಾಳನನ್ನು ಒಪ್ಪಿಸುವ ನೆವದಿಂದ ಭರತನೂರಿಗೆ ಬಂದು, ಒಮ್ಮೆ ಸ್ವಾಮಿಗಳ ದರ್ಶನಾಶೀರ್ವಾದ ಪಡೆದಿದ್ದನು. ರಾಜಾಪುರದ ಜನರು ದೇಶಮುಖರನ್ನು ಮುಂದೆ ಮಾಡಿಕೊಂಡು ಗುರುನಂಜೇಶ್ವರ ಸ್ವಾಮಿಗಳನ್ನು ರಾಜಾಪುರಕ್ಕೆ ಬಿಜಯಂಗೈಯಿಸಿಕೊಂಡು ಜ್ಞಾನಸತ್ರ ನಡೆಸಿದುದನ್ನು ತಿಳಿದ ಬಳಿಕ ರಾಮರೆಡ್ಡಿಯ ಮನಸ್ಸಿನಲ್ಲಿ ಹೇವ ಹುಟ್ಟಿತು, ತಾನು ಹಿಂದುಳಿಯಬಾರದೆಂದು ಎಣಿಕೆ ಹಾಕಿದ; ತಾನೊಂದು ದೊಡ್ಡ ಕೊಡುಗೆ ನೀಡಿ ಮುಂದಾಗಬೇಕೆಂದು ಬಯಸಿದ.

ಒಂದು ದಿನ ದೇಶಮುಖ ರಾಮರೆಡ್ಡಿಯು ಪರಿವಾರದೊಡನೆ ಭರತನೂರಿಗೆ ಬಂದನು. ಪೂಜ್ಯ ಮಹಾಸ್ವಾಮಿಗಳವರಿಗೆ ಪೊಡಮಟ್ಟು, ಮಠದ ಆಗು ಹೋಗು-

ಗಳನ್ನು ಔಪಚಾರಿಕವಾಗಿ ಪರಿಶೀಲಿಸಿದನು. ಬಳಿಕ ಶ್ರೀಗಳ ಸನ್ನಿಧಿಯಲ್ಲಿ ಹೀಗೆ ಬಿನ್ನವಿಸಿದನು :

"ಗುರುದೇವಾ, ಪೂಜ್ಯರೇ, ಭರತನೂರನ್ನು ಭೂತಬಾಧೆಯಿಂದ ರಕ್ಷಿಸಿದಿರಿ, ಲೋಕ ಕಂಟಕ ಕಳ್ಳನಾಗಿದ್ದ ಕಾಳನ ಮನಸ್ಸನ್ನು ಪರಿವರ್ತನೆಗೊಳಿಸಿ, ಅವನನ್ನು ಸಾತ್ವಿಕ ಜೀವನಕ್ಕೆ ಹಚ್ಚಿದ್ದೀರಿ, ಸದ್ಬೋಧಾಮೃತದಿಂದ ಅಂದಿಂದಿಗೂ ಜನರನ್ನು ತಣಿಸುತ್ತಿದ್ದೀರಿ, ನಾಡಿಗೆ ನಾಡೇ ತಮಗೆ ಕೃತಜ್ಞವಾಗಿದೆ. ತಮ್ಮ ಲಿಂಗಾರ್ಚನೆಗಾಗಿ ನಾನು ಒಂದು ಭೂಮಿ ದಾನ ಮಾಡಬೇಕೆಂದಿರುವೆ, ಇದಲ್ಲದೆ ಒಂದು ಸುಂದರವಾದ ರಾಜ ಮಠವನ್ನು ಕಟ್ಟಿಸಬೇಕೆಂದಿರುವೆ, ಈ ಭಕ್ತಿಯನ್ನು ಸ್ವೀಕರಿಸಿ ನಡೆಸಿ ಕೊಡಬೇಕು."

ಶಿವಸ್ವರೂಪಿಗೆ ತಿಳಿಯದ ವಿಷಯ ಯಾವದು ? ಇದು ಅಭಿಮಾನಕ್ಕಾಗಿ ಮಾಡುವ ಭಕ್ತಿಯೆಂದು ಶ್ರೀಗಳಿಗೆ ಅರಿಕೆಯಾಯಿತು. ಅವರು ಅದನ್ನು ಒಪ್ಪಲಿಲ್ಲ.

"ದೇಶಮುಖರೇ, ಈಗಾಗಲೇ ಭಾರತಿ ತನ್ನ ಸ್ಥಳವನ್ನು ನನಗೆ ಸಲ್ಲಿಸಿದ್ದಾಳೆ. ಹನ್ನೆರಡು ಪ್ರಮಾಣದ ಈ ಸ್ಥಳ ನನ್ನ ಲಿಂಗಪೂಜೆ ಜಪ ತಪಾದಿಗಳಿಗೆ ಮೀಸಲಾಗಿದೆ. ಅವಳು ಈಗ ಶಿವಬಸವಮ್ಮ ಹೆಸರಿನಿಂದ ಶಿವದೂತೆಯಾಗಿ ಇಲ್ಲಿಯೇ ದಾಸೋಹ ನಡೆಸುತ್ತಿದ್ದಾಳೆ. ಇದಕ್ಕಿಂತ ಹೆಚ್ಚಿಗೆ ಈ ಸನ್ಯಾಸಿಗೆ ಇನ್ನೇನು ಬೇಕು ? ನಿಮ್ಮದನ್ನು ಸ್ವೀಕರಿಸಿದರೆ ಹೆಚ್ಚಿನ ಆಸೆಗೆ ಆಸರ ಮಾಡಿಕೊಟ್ಟಂತಾಗುವದು, ಅದು ಬೇಡ ! ನೀವು ನಾಡ ದೊರೆಗಳು, ಭಕ್ತಿಯುಳ್ಳವರಾಗಿ ಧರ್ಮದಿಂದ ರಾಜ್ಯವಾಳಿರಿ, ಪ್ರಜೆಗಳಿಗೆ ಹಿತವಾಗುವಂತೆ ಮಾಡಿರಿ, ಅದುವೇ ಗುರುಸೇವೆಯಾಗುವದು. ಧರ್ಮಕ್ಕೆ ವಿರೋಧವಾಗಿ ಆಳಿದ ರಾಜನ ರಾಜ್ಯ ಬಹುದಿನ ಉಳಿಯಲಾರದು" ಎಂದು ಬೋಧಿಸಿ ದೊರೆಗಳನ್ನು ಸಂತೈಸಿದರು. ಗುರುನಂಜೇಶ್ವರರ ನಿಸ್ಪೃಹತೆಯಿಂದ, ದೊರೆ ರಾಮರೆಡ್ಡಿಯ ಶ್ರದ್ಧೆ ನಿರ್ಮಲವಾಯಿತು; ವೃದ್ಧಿಯಾಯಿತು. ತಮ್ಮ ಜೀವನ ಪರ್ಯಂತ ಸ್ವಾಮಿಗಳ ದರ್ಶನ ಪಡೆಯುತ್ತ, ಅವರ ಆದೇಶಗಳನ್ನು ವಿಶ್ವಾಸವಿಟ್ಟು ಪಾಲಿಸುತ್ತ ಅವರ ಕೃಪೆಗೆ ಪಾತ್ರನಾಗಿದ್ದನು.

× × × × × × ×

ಶಿವನು ಸರ್ವಜ್ಞ ! ಶಿವಸಾಕ್ಷಾತ್ಕಾರ ಪಡೆದ ಶಿವಯೋಗಿಗಳೂ ತ್ರಿಕಾಲ ಜ್ಞಾನಿಗಳಾಗಿರುವದು ಸಹಜವಾಗಿದೆ. ಒಮ್ಮೆ ಗುರುನಂಜೇಶ್ವರ ಶಿವಯೋಗಿಗಳು ಬೆಳಗಿನ ಅನುಷ್ಠಾನ ಮುಗಿಸಿ, ದರ್ಶನ ಶಾಲೆಯಲ್ಲಿ ಕುಳಿತಿದ್ದರು. ಬ್ರಾಹ್ಮಣ ದಂಪತಿಗಳಿಬ್ಬರು ಬಂದು ನಮಸ್ಕರಿಸಿದರು. ಶ್ರೀಗಳು ಬನ್ನಿರಿ ಕುಳಿತುಕೊಳ್ಳಿರಿ

ಎಂದರು. ಮಹಿಳೆ ಕೂಡ್ರದೆ ನಿಂತು ಕೈ ಮುಗಿದು : "ಪೂಜ್ಯರೇ, ಯಾವ ಕಂಟಕದಿಂದಲೋ ಗರ್ಭಪಾತವಾಗುತ್ತ ನಮಗೆ ಮಕ್ಕಳಾಗುತ್ತಿಲ್ಲ. ನಮಗೆ ದಿಕ್ಕು ಕಾಣದಂತಾಗಿದೆ. ಈ ಸಂಕಟವನ್ನು ಪರಿಹರಿಸಬೇಕು" ಎಂದು ಬೇಡಿಕೊಂಡಳು. ಶ್ರೀಗಳು ಆ ಮಹಿಳೆಯ ಮುಖ ಲಕ್ಷಣವನ್ನು ನಿರೀಕ್ಷಿಸಿದರು. ಕ್ಷಣಹೊತ್ತು ಕಣ್ಣು ಮುಚ್ಚಿ ಚಿಂತಿಸಿದರು. ಬಳಿಕ ಆ ಬ್ರಾಹ್ಮಣನನ್ನು ಮುಂದಕ್ಕೆ ಬರಮಾಡಿಕೊಂಡು : "ತಮ್ಮಾ ಈಕೆಯು ಪೂರ್ವಕರ್ಮ ಬಾಧೆಯಿಂದ ಹೀಗಾಗುತ್ತದೆ. ಹಿಂದಿನ ಜನ್ಮದಲ್ಲಿ ಇವಳು ಕಲಬುರ್ಗ ಪ್ರಾಂತದ ಹಾಗರಗುಂಡಿಗೆ ಗ್ರಾಮದ 'ಸಜ್ಜನ ಚೌದರಿ' ಎಂಬ ಮನೆಯ ಸೊಸೆಯಾಗಿದ್ದಳು. ಒಂದು ದಿನ ತವರಿಗೆ ಹೋಗುವಾಗ ಐನೂರು ವರಹಗಳ ಸಂಚು ಗಂಟನ್ನು ಒಲೆಯ ಮುಂದೆ ನೆಲದಲ್ಲಿ ಬಚ್ಚಿಟ್ಟು ಹೋದಳು. ಮರಳಿ ಬರಲಿಲ್ಲ. ರೋಗ ಬಾಧೆಯಿಂದ ಅಲ್ಲಿಯೇ ಮೃತಪಟ್ಟಳು. ಆದಕ್ಕೂ ಹಿಂದಿನ ಜನ್ಮಗಳ ಇನ್ನೂ ಉಳಿದ ಪುಣ್ಯದ ಫಲದಿಂದ ಈ ಜನ್ಮದಲ್ಲಿ ನಿನ್ನ ಪತ್ನಿಯಾಗಿದ್ದಾಳೆ. ಆದರೆ ಈಗ ಬಡವರಾಗಿದ್ದ ಸಜ್ಜನ ಚೌದರಿ ಮನೆಯಲ್ಲಿಯ ಮಕ್ಕಳು ಒರಬರ ಒರಲುತ್ತಿವೆ. ಅವುಗಳ ಶಾಪ, ಮತ್ತು ಆ ಸಂಚು ವಂಚನೆಯ ಪಾಪ ತಟ್ಟಿ, ಈಗಿನ ಮಕ್ಕಳು ಬಾಳಲೊಲ್ಲವು. ಹಾಗರಗುಂಡಿಗೆಗೆ ರಹಸ್ಯವಾಗಿ ಹೋಗಿ, ಆ ಧನವನ್ನು ಅಲ್ಲಿನವರಿಗೆ ತೋರಿಸಿ ಬಂದರೆ ಈ ಕಂಟಕದ ಪರಿಹಾರ-ವಾಗುವದು" ಎಂದರು. ಆಶ್ಚರ್ಯವೆನಿಸಿದರೂ ಆ ಗಂಡ-ಹೆಂಡಿರು ಸ್ವಾಮಿಗಳ ಮಾತಿನಲ್ಲಿ ವಿಶ್ವಾಸವಿಟ್ಟು, ಹಾಗೆ ಮಾಡುವೆವೆಂದು ಅಪ್ಪಣೆ ಪಡೆದುಕೊಂಡು ಬಂದರು.

ದಂಪತಿಗಳು ಹಾಗರಗುಂಡಿಗೆಗೆ ಬಂದರು. ಗಂಡ ಊರ ಹೊರಗೆ ಉಳಿದು, ಹೆಂಡತಿ ಆ ಹೆಸರಿನ ಮನೆಯನ್ನು ಕೇಳುತ್ತ ಊರಲ್ಲಿ ಹೋದಳು. ಆ ಮನೆಗೆ ಬಂದಳು. ಬಾಗಿಲಲ್ಲಿ ಗಂಡಸರಿದ್ದರು. ಈಕೆ ಗೊತ್ತಿದ್ದವರಂತೆ ಒಳಗೆ ಹೋದಳು. ಮನೆಯ ಯಜಮಾನಿಯ ಮುಂದೆ ಕೈಮುಗಿದು ನಿಂತು : "ಅಮ್ಮನವರೆ, ನಿಮ್ಮ ಮನೆಯಲ್ಲಿ ಒಳಗೆ ನೆಲದಲ್ಲಿ ದ್ರವ್ಯವಿದೆ; ಒಬ್ಬ ಮಹಾಪುರುಷರು ಸ್ಥಳದ ಗುರ್ತನ್ನು ಹೇಳಿ, ಅದನ್ನು ತೆಗೆದುಕೊಟ್ಟು ಬರಬೇಕೆಂದು ನನಗೆ ಸೂಚಿಸಿದ್ದಾರೆ. ಮಹಾತ್ಮರ ಮಾತು ಸುಳ್ಳಾಗದು. ನಾನು ನೋಡಿ, ಇದ್ದರೆ ತೆಗೆದುಕೊಟ್ಟು ಹೋಗುವೆ. ಇದು ಮನೆಯ ಹೊರಗೆ ಹೋಗುವ ಮಾತಲ್ಲ" ಎಂದಳು. ಯಜಮಾನಿಯು ಮನಸ್ಸು ವಿಚಲಿತವಾಯಿತು. ಆದರೂ ಆಶೆ ಉಂಟಾಯಿತು. 'ಹೇಗೂ ಗಂಡಸರು ಮನೆ-ಯಲ್ಲಿಯೇ ಇದ್ದಾರೆ. ನೋಡೋಣ' ಎಂದು ಧೈರ್ಯಮಾಡಿ, "ಆಗಲಿ ತಾಯೀ ಒಳಗೆ ಬನ್ನಿರಿ" ಎಂದು ಕರೆದುಕೊಂಡು ಹೋದಳು. ಒಲೆಯ ಮುಂದಿನ ನೆಲ ಕೆದರುತ್ತಿರಲು, ಐನೂರು ನಾಣ್ಯಗಳ ಕುಡಿಕೆ ಹೊರಬಂದಿತು. ಹಿಗ್ಗಿದ ಯಜಮಾನಿ, ಬಾಗಿಲಲ್ಲಿದ್ದ ಯಜಮಾನನನ್ನು ಕರೆದಳು. ಅವನಿಗೂ ಹರ್ಷ!

"ನೀವು ಈ ಹಣವನ್ನು ದಾನಧರ್ಮದೊಡನೆ ನೀವೂ ಉಣ್ಣುವದಕ್ಕೆ ಉಪಯೋಗಿಸಿರಿ" ಎಂದು ಹೇಳುತ್ತ ಆಕೆ ಹೊರಬಂದಳು. ಅವರು ಆಕೆಯನ್ನು ಆದರಿಸಿ ಸತ್ಕರಿಸ-ಬೇಕೆಂದರೆ ಯಾವದಕ್ಕೂ ಆಸ್ಪದ ಕೊಡದೆ, ಬಾಗಿಲು ದಾಟಿ ನಡೆದೇ ಬಿಟ್ಟಳು. ಬೇರೆಯವರಿಗೆ ಏನೂ ತಿಳಿಯದು. ಆಕೆ ಭರದಿಂದ ಊರ ಹೊರಗೆ ಬಂದು, ಗಂಡನನ್ನು ಕೂಡಿಕೊಂಡಳು. ತ್ರಿಕಾಲ ಜ್ಞಾನದ ಶಿವಯೋಗಿಗಳನ್ನು ಕೊಂಡಾಡುತ್ತ ಮನಸ್ಸಿನಲ್ಲಿಯೇ ಸಾವಿರ ಸಾವಿರ ನಮನಗಳನ್ನು ಅರ್ಪಿಸುತ್ತ ಅವರಿಬ್ಬರು ತಮ್ಮ ಊರಿಗೆ ಬಂದರು.

ಮುಂದೊಂದು ವರ್ಷಕ್ಕೆ ಅವರಿಗೆ ಗಂಡುಮಗು ಹುಟ್ಟಿತು. ಚೆನ್ನಾದ ಕೂಸು. ಗುರುನಂಜೇಶ್ವರರ ಕೃಪೆಯೆಂದು ನೆನಿಸಿ, ಅದಕ್ಕೆ ಗುರುರಾಜನೆಂದು ಹೆಸರಿಟ್ಟರು. ಭರತನೂರ ಮಠಕ್ಕೆ ಬಂದು, ಶಿವಯೋಗಿಗಳ ಸನ್ನಿಧಿಯಲ್ಲಿ ಕೂಸಿನ ಜಾವಳ ಕಾರ್ಯಕ್ರಮವನ್ನು ಸಂಭ್ರಮದಿಂದ ನೆರವೇರಿಸಿ, ಜಂಗಮರಿಗೆ ಅನ್ನ ಸಂತರ್ಪಣೆ ಮಾಡಿ ಧನ್ಯರಾದರು.

× × × × × × × ×

ಈ ಸಮಾಚಾರವನ್ನು ಕೇಳಿದ ಚಿತಾಪುರದ ಬೇರೆ ಬ್ರಾಹ್ಮಣ ಗಂಡ-ಹೆಂಡಿರಿಬ್ಬರು ಗುರುನಂಜೇಶ್ವರರಲ್ಲಿ ಮೊರೆಯಿಡಲು ಬಂದರು. ಅವರು ಶ್ರೀಗಳಿಗೆ ವಂದಿಸಿ, ತಮ್ಮ ಕರುಣೆಯ ಕಥೆಯನ್ನು ತೋಡಿಕೊಂಡರು. ಆ ಸತಿಗೆ ಗರ್ಭಕೋಶದಿಂದ ಹೊರಬರುತ್ತಲೇ ಕೂಸು ಮೃತಪಟ್ಟಿರುತ್ತಿದ್ದವು. ವ್ಯರ್ಥವಾಗಿ ಗರ್ಭದ ಭಾರ, ಹೆರಿಗೆಯ ಶೂಲಿ! ನಿಜವಾಗಿ ಮನೆಗೆ ಮಕ್ಕಳಿಲ್ಲದೆ ಗೋಳಾಡುತ್ತಿದ್ದರು. ಆ ಕತೆ ಕೇಳಿ ಸ್ವಾಮಿಗಳಿಗೆ ಮರುಕವಾಯಿತು. ಆಲೋಚಿಸಿದರು. ಬಾಹ್ಯ ದೃಷ್ಟಿಯನ್ನು ಸ್ಥಿಮಿತಗೊಳಿಸಿ, ಕಾಲ ಕಂಚುಕಿಯ ಓಸರಿಸಿ ನೋಡಿ ಹೇಳಿದರು :

"ನೋಡಮ್ಮಾ, ನಿಮ್ಮ ತಂದೆ ಸಾಯುವಾಗಿನ ವಾಂಛಿತವನ್ನು ನೀವು ಪೂರೈಸಿಲ್ಲ. ಆ ಪಿತೃಋಣದ ಬಾಧೆ ಈಗ ನಿಮ್ಮನ್ನು ಕಾಡುತ್ತಿದೆ. ಆತನ ಆತ್ಮಕ್ಕೆ ಶಾಂತಿ ದೊರೆತಿಲ್ಲ. ಸಂತ್ರಸ್ತಗೊಂಡ ಆತನು ಪಂಚಭೂತಗಳಲ್ಲಿ ಸೇರಿಕೊಂಡು, ಗರ್ಭದ ಶಿಶು ಹೊರಗೆ ಬರುತ್ತಲೇ ಅದನ್ನು ಕೊಲ್ಲುತ್ತಿರುವನು. ನೀವು ನೂರೊಂದು ವಿಪ್ರ ದಂಪತಿಗಳಿಗೆ ಅನ್ನಸಂತರ್ಪಣೆ ಮಾಡಿ, ಗಂಧ ಪುಷ್ಪಗಳಿಂದ ಸತ್ಕರಿಸಿದರೆ ಈ ಕಂಟಕ ನಿವಾರಣೆಯಾಗುತ್ತದೆ."

ವಿಶ್ವಾಸದಿಂದ ಇದನ್ನು ಕೇಳಿದ ದಂಪತಿಗಳು ಶಿವಯೋಗಿಗಳಿಗೆ ನಮಸ್ಕರಿಸಿ ಹೋಗಿ, ಅದನ್ನು ಆಚರಿಸಿದರು. ಅವರಿಗೆ ಮಕ್ಕಳಾದವು. ಅವರು ಮೇಲಿಂದ ಮೇಲೆ ಭರತನೂರಿಗೆ ಬಂದು, ಸ್ವಾಮಿಗಳ ದರ್ಶನ ಪಡೆಯುತ್ತಿದ್ದರು.

ಈ ಬಗೆಯಾದ ಗುರುನಂಜ ಶಿವಯೋಗಿಗಳ ಹಲವಾರು ಲೀಲೆಗಳನ್ನು ಭಕ್ತ ಜನರು ಕಣ್ಣಾರೆ ಕಂಡು ಪುನೀತರಾಗುತ್ತಿದ್ದರು.

× × × × × × ÷ ×

ಶಿವಬಸಮ್ಮನ ಪೋಷಣೆಯಲ್ಲಿ ಬೆಳೆಯುತ್ತಿದ್ದ ಕನ್ಯೆ ಶಿವಯೋಗಿಗಳ ಸಾಕು ಮಗಳು. ಆಕೆ ರಾಜಾಪುರದ ಮಲ್ಲರಡ್ಡಿಯ ಪುತ್ರಿ. ಮಗುವಾಗಿದ್ದಾಗ ತಂದೆ ತಾಯಿಗಳಿಂದ ಸ್ವಾಮಿಗಳ ಅಡಿಗೆ ಅರ್ಪಿಸಲ್ಪಟ್ಟುದನ್ನು ಇಲ್ಲಿ ಸ್ಮರಿಸಬಹುದು. ಸ್ವಲ್ಪ ದೊಡ್ಡವಳಾದ ಮೇಲೆ ಭರತನೂರಿಗೆ ಕಳಿಸಿದ್ದರು. ಆಕೆಯ ಯೌವನೋದಯ-ಗಮನಿಸಿ, ಶ್ರೀಗಳು ಆಕೆಯ ಮದುವೆ ಮಾಡಲು ಬಗೆದರು. ಭಕ್ತಾದಿಗಳನ್ನು ಕರೆಯಿಸಿಕೊಂಡು, ತಮ್ಮ ವಿಚಾರ ತಿಳಿಸಿದರು.

“ನಮ್ಮ ಸಾಕುಮಗಳು ಪ್ರೌಢೆಯಾಗಿದ್ದಾಳೆ. ಈಕೆಗೆ ರೂಪ ಗುಣಸಂಪನ್ನನಾದ ವರನನ್ನು ಹುಡುಕಿರಿ. ಮದುವೆ ಮಾಡೋಣ, ವರನು ಬಡವನಾದರೂ ಇರಲಿ, ಸುಪುತ್ರನಾಗಿರಬೇಕು. ಅವನ ಯೋಗಕ್ಷೇಮವನ್ನು ನಾವು ನೋಡಿಕೊಳ್ಳುತ್ತೇವೆ. ಇದು ಲೋಕಕಲ್ಯಾಣದ ಕಾರ್ಯ! ಇದನ್ನು ಮನ ಮುಟ್ಟಿ ಮಾಡಬೇಕು” ಎಂದರು. ಅವರ ಭಕ್ತರು ಉತ್ಸಾಹದಿಂದ ಸಿದ್ಧರಾದರು. ಶ್ರೀಗಳು ಒಪ್ಪುವಂತಹ ವರನನ್ನು ಆರಿಸಿ ನಿರ್ಣಯಿಸಿದರು.

ಶಿವಯೋಗಿಗಳವರು ಸ್ವತಃ ಸಂಸಾರ ಬಂಧನಕ್ಕೊಳಗಾಗದವರು. ಆದರೂ ಸಂಸಾರಿಗಳನ್ನು ತಿರಸ್ಕರಿಸರು. ‘ಮಾಯಾ ಬದ್ಧರಾಗದೆ ಭಕ್ತಿ ಮಾರ್ಗದಲ್ಲಿ ನಡೆಯುವ ಸಂಸಾರಿಗಳು ಸಮಾಜದ ನೆಮ್ಮದಿಗೆ ಮೂಲಾಧಾರರು, ಸಮಾಜದ ನೆಮ್ಮದಿಯೇ ಧಾರ್ಮಿಕ ಬದುಕಿನ ಭದ್ರ ಬುನಾದಿ! ಆದ್ದರಿಂದ ಸಂಸಾರ ತ್ಯಾಜ್ಯವಲ್ಲ’ ಎಂದು ಭಾವಿಸಿದ್ದ ಅವರು ಶಿವಭಕ್ತಿ, ಸದಾಚಾರ, ಕಾಯಕ ನಿಷ್ಠೆಗಳಿಂದ ಹಸನಾದ ಬಾಳು ಬಾಳುತ್ತಿರುವ ಸದ್ಭಕ್ತ ಗೃಹಸ್ಥರನ್ನು ಸನ್ಮಾನಿಸುತ್ತಿದ್ದರು. ಅಂತೆಯೇ ಸಾಕು ಪುತ್ರಿಯ ಮದುವೆಗೆ ಇಷ್ಟು ಆಸಕ್ತಿ ತೋರಿಸಿದರು.

ಸಾಕು ಮಗಳ ಮದುವೆಗೆ ಸಕಲ ಸಾಮಾಜಿಕರನ್ನೂ ಕರೆಯಿಸಿಕೊಂಡರು. ಸಂಭ್ರಮದಿಂದ ಲಗ್ನಮಂಟಪವನ್ನು ರಚಿಸಿದರು. ಪಟ್ಟ ಚರಮೂರ್ತಿಗಳನ್ನೂ ಬರಮಾಡಿಕೊಂಡರು. ಉಡುಗೊರೆಗಳನ್ನು ತರಿಸಿದರು. ವಾದ್ಯ ಮೇಳಗಳನ್ನು ಬರಿಸಿದರು. ಸಹಸ್ರಾರು ಜನರಿಗೆ ಭೋಜನ ಮಾಡಿಸಿ, ರಾಜವೈಭವಕ್ಕೆಣೆಯಾಗುವ ರೀತಿಯಲ್ಲಿ ವಿವಾಹಕಾರ್ಯ ನೆರವೇರಿಸಿದರು. ಹಿಂದೆ ಪರಿಶುದ್ಧ ಭಾವನ ವಧೂವರರ

ಲಗ್ನಗಳನ್ನು ನಿಯಮಿಸಿ 'ಈ ಜಗದ ಜೀವರ ಪುಣ್ಯದೊಡವಿಂಗೆ ಕೈಕೊಂಡು' ನೆರವೇರಿಸುವದು ಶಿವಯೋಗಿ ಸಿದ್ಧರಾಮರ ಅನುಷ್ಠಾನದ ಒಂದು ಅಂಗವಾಗಿತ್ತು.

× × × × × × ×

ರಾಜಾಪುರದ ಲಿಂಗಗೌಡ, ಕೋಡಲಿಯ ರಾಮಲಿಂಗರೆಡ್ಡಿ ಈ ಉಭಯ ದೊರೆಗಳ ನಡುವಿನ ವೈಮನಸ್ಸು ಹರಿದಿರಲಿಲ್ಲ, ಸಂಬಂಧ ಹಸನಾಗಿರಲಿಲ್ಲ. ಅವರ ಪ್ರದೇಶಗಳ ಸೀಮಾ ರೇಖೆ ಅತ್ತೊಮ್ಮೆ ಇತ್ತೊಮ್ಮೆ ಸರಿಯುವದರ ಮೂಲಕ ವೈರಭಾವ ಬೆಳೆಯುತ್ತಲೇ ಇತ್ತು. ಇಬ್ಬರೂ ಶ್ರೀ ಗುರುನಂಜೇಶ್ವರರಂತಹ ಮಹಾ ಶಿವಯೋಗಿಗಳ ಭಕ್ತರು, ಕೃಪಾಪಾತ್ರರು. ಆದರೂ ಪ್ರತಿಷ್ಠೆಯ ಭಾವನೆ, ನೆಲದ ಆಸೆ, ಮಣ್ಣಿನ ಮೋಹ ಅವರನ್ನು ಕಾಡುತ್ತಲಿದ್ದವು. ಅವರಿಬ್ಬರಲ್ಲಿ ಹಲವಾರು ಸಲ ಘರ್ಷಣೆಗಳು ಉಂಟಾಗಿದ್ದವು; ಸಾವು ನೋವುಗಳು ಸಂಭವಿಸಿದ್ದವು. ಗುರುನಂಜೇಶ್ವರ ಸ್ವಾಮಿಗಳು ಜೀವದಯಾಪರರು. ಹಿಂಸೆ ಅತ್ಯಾಚಾರಗಳನ್ನು ಅವರು ಸಹಿಸುತ್ತಿರಲಿಲ್ಲ, ಅವು ತಾಮಸ ಜೀವನದ ಕರಾಳ ರೂಪಗಳೆಂದು ಅವರ ಅಭಿಪ್ರಾಯ! ಆದ್ದರಿಂದಲೇ ಸಾತ್ವಿಕತೆಯ ಅಲೌಕಿಕ ತೇಜಸ್ಸು ಅವರಲ್ಲಿತ್ತು. ಆ ರಾಜರಿಬ್ಬರಿಗೂ ಶಾಂತಿಯಿಂದ ಸಹನೆಯಿಂದ ಇರಲು ಸೂಚನೆ ಕಳಿಸಿದ್ದರು. ಆದರೆ ಆ ಪ್ರಭುಗಳು ಇವರ ಆದೇಶ ಬಂದಾಗ ಕೆಲವು ದಿವಸ ತಣ್ಣಗಿದ್ದು, ಮತ್ತೆ ಸಣ್ಣ ಮಾತಿಗೂ ಸೆಣಸಿ ಕದನ ಕೆದರುತ್ತಿದ್ದರು. ಬಾದಶಹರ ಭ್ರಷ್ಟಾಚಾರಿ ಸುಭೆದಾರರು ಒಮ್ಮೆ ಇವರಿಗೆ, ಮತ್ತೊಮ್ಮೆ ಅವರಿಗೆ ಬೆಂಬಲವಾಗಿರುತ್ತಿದ್ದರು. ಪ್ರಜೆಗಳ ಕಲ್ಯಾಣ ಅವರಿಗೆ ಮುಖ್ಯ ವಿಷಯವಾಗಿರಲಿಲ್ಲ. ಒಮ್ಮೆ ಯಾವದೋ ನೆವದಿಂದ ಉಂಟಾದ ಜಗಳ ಉಗ್ರವಾಯಿತು, ರುದ್ರರೂಪ ತಾಳಿತು. ಇಬ್ಬರೂ ದೊರೆಗಳೂ ಬಾಹು ಬಲದವರು; ಭಟರ ಪಡೆಗಳನ್ನೂ ಹೊಂದಿದವರು. ರಾಜಾಪುರದ ದೇಶಮುಖರು ಕಲಬುರ್ಗಿಯಿಂದ ಕುದುರೆಗಳನ್ನೂ, ಶಸ್ತ್ರಗಳನ್ನೂ ತರಿಸಿದರು. ರಾಮರೆಡ್ಡಿಯೂ ಸಜ್ಜಾದ ಪಡೆಯೊಡನೆ ಎದುರಿಸಿದನು.

ಭೀಕರ ಹೋರಾಟ ನಡೆಯಿತು. ಜನರ ಬೆಳೆ, ಬದುಕು ಉಧ್ವಸ್ತವಾದವು. ನೆರೆಹೊರೆಯ ಹಳ್ಳಿಯವರು ಊರು ಬಿಟ್ಟು ಹೋಗಿ ನಿರಾಶ್ರಿತರಾದರು. ಸ್ತ್ರೀಯರು, ಮುದುಕರು, ಮಕ್ಕಳು ಕಂಗೆಟ್ಟರು. ಉಭಯ ದೊರೆಗಳ ಮನಸ್ತಾಪದಿಂದ ನಾಡು ದುಃಖದ ಬೀಡಾಯಿತು.

ಗುರುನಂಜೇಶ್ವರ ಶಿವಯೋಗಿಗಳು ನಡುವೆ ಬಂದು ಶಾಂತಿಯನ್ನು ಸ್ಥಾಪಿಸ ಬೇಕಲ್ಲದೆ, ಬೇರೆ ಉಪಾಯವಿಲ್ಲವೆಂದು ಭಕ್ತರು ಭಾವಿಸಿದರು. ಕಲ್ಯಾಣ ಸೆಟ್ಟಿಯಂತಹ ಹಲವು ನಿಷ್ಪಕ್ಷಪಾತ ಸಜ್ಜನ ಭಕ್ತರು ಸ್ವಾಮಿಗಳ ಸನ್ನಿಧಿಗೆ ಬಂದು,

ಈ ಕದನದ ಬೇಗೆಯನ್ನು ಆರಿಸಿ, ಶಾಂತಿಯನ್ನು ಉಂಟು ಮಾಡಿ ಜನರನ್ನು ಕಾಪಾಡ ಬೇಕೆಂದು ಮೊರೆಯಿಟ್ಟರು. ಸ್ವಾಮಿಗಳು ರಹಸ್ಯವಾಗಿ ಇಬ್ಬರೂ ದೊರೆಗಳನ್ನು ಕರೆಯಿಸಿಕೊಂಡರು. ಯಾವ ದೊರೆಯಾದರೇನು ? ಮಹಾತ್ಮರ ತಪಃಪ್ರಭಾವಕ್ಕೆ ತಲೆ ಬಾಗಿ ಬರಲೇಬೇಕು; ಬಂದರು. ಸ್ವಾಮಿಗಳು ಒಳ್ಳೆಯ ರೀತಿಯಿಂದಲೇ ಅವರನ್ನು ಕೇಳಿದರು :

"ಯಾವ ಶ್ರೇಯಸ್ಸಿಗಾಗಿ ನಿಮ್ಮಿಬ್ಬರಲ್ಲಿ ಕಾಳಗ ? ನೀವು ಯುದ್ಧಕ್ಕಿಳಿದು ನಿಮ್ಮ ಕೀರ್ತಿಯನ್ನು ಹಾಳುಮಾಡಿಕೊಳ್ಳುತ್ತಿರುವಿರಲ್ಲಾ ! ಮಕ್ಕಳು ಮರಿಗಳ, ಬಾಲೆಯರ, ವೃದ್ಧರ ಆಕ್ರಂದನದ ದನಿಯನ್ನು ನೀವು ಕೇಳಲಾರಿರಿ. ಅವರನ್ನು ಗೋಳಿಗಿಟ್ಟ ಪಾಪಕ್ಕೂ ಪಾತ್ರರಾಗುತ್ತಿದ್ದೀರಿ. ಕೌರವ, ಪಾಂಡವರು ಪೊಡವಿಗಾಗಿ ಹೊಡೆದಾಡಿ ಕೆಟ್ಟ ಕಥೆ ನಿಮಗೆ ಗೊತ್ತಿಲ್ಲವೇ ? ಹೊನ್ನು-ಮಣ್ಣುಗಳಿಗಾಗಿ, ಮೋಹಕ್ಕಾಗಿ ಹೊಡೆದಾಡಿದ ಯಾರೂ ಜನರ ನೆನಹಿನಲ್ಲಿ ಘನವಂತರಾಗಿ ಉಳಿದಿಲ್ಲ. ಅವರು ದುರ್ಜನರೆಂದು ಮಾತ್ರ ಹೇಳಲ್ಪಡುತ್ತಾರೆ. ಸತ್ಯ, ಶಾಂತಿ, ಧರ್ಮಗಳಿಂದ ಆಳಿದ ರಾಜರುಗಳ ಹೆಸರು ಇತಿಹಾಸದಲ್ಲಿ ಚಿರಮಾನ್ಯವಾಗಿ ಉಳಿದಿವೆ. ನೀವಿಬ್ಬರೂ ಪ್ರಜಾಕಲ್ಯಾಣವೇ ಮುಖ್ಯವಾಗಿ ಭಾವಿಸಿ ಆಳುವದಾದರೆ ಯಾವದೊಂದು ಹಳ್ಳಿ ಯಾವ ರಾಜ್ಯಕ್ಕೊಳಪಟ್ಟರೇನು ? ಅದರ ಜನರು ಸುಖವಾಗಿದ್ದರೆ ಸಾಕಷ್ಟೇ ! ಅದನ್ನು ನೋಡಿ ನೀವಿಬ್ಬರೂ ಸಂತೋಷಪಡಬಹುದಲ್ಲ ! ಪ್ರಜೆಗಳ ಕಲ್ಯಾಣಕ್ಕಾಗಿ ಈ ಹೋರಾಟ ನಡೆಸಿದ್ದೀರಾ ? ಇದರಿಂದ ಜನರ ಹಿತ ಸಾಧಿಸುವ ಬದಲು ಅವರಿಗೆ ಕಷ್ಟ ಕೊಟ್ಟಿಲ್ಲವೇ ? ನೀವು ಪ್ರತಿಷ್ಠೆ, ಅಭಿಮಾನಗಳಿಗಾಗಿ ಕಾದುವದನ್ನು ಶಿವನು ಮೆಚ್ಚುವನೇ ? ಶರಣರು ನಮಗಾಗಿ ಪ್ರಸ್ಥಾಪಿಸಿದ ದಯಾ ಮೂಲವಾದ ಧರ್ಮಕ್ಕೆ ಇದು ಅನುಗುಣವಾದುದೇ ? ನೀವು ವಿಚಾರವಂತರು. ಇದೊಂದು ವಿಷಯದಲ್ಲಿ ನಿಮಗೆ ಹಿತಾಹಿತಗಳ ಅರಿವಾಗಬಾರದೇ ? ಸಾಮ್ರಾಜ್ಯಗಳು ಆಳಿದವು, ಸಮ್ರಾಟರೂ ಶಾಂತಿಯಿಲ್ಲದೆ ಭವಕ್ಕೆ ಪಕ್ಕಾದರು. ವ್ಯರ್ಥವಾಗಿ ಹಿಂಸೆಯಾಗುವದನ್ನು ನಿಲ್ಲಿಸಿ, ತತ್ವ-ನೀತಿ-ಧರ್ಮಗಳನ್ನು ಆಶ್ರಯಿಸಿ ರಾಜ್ಯವನ್ನು ಆಳಿರಪ್ಪಾ ! ಒಪ್ಪುವಿರಾ ? ನನ್ನ ಮಾತು ಸರಿಯೆನಿಸುವದಿಲ್ಲವೇ ?" ಎಂದು ಪ್ರಶ್ನೆಯನ್ನು ಮುಂದಿಟ್ಟು, ಮಾತು ಮುಕ್ತಾಯಗೊಳಿಸುವಾಗ, ಪಶ್ಚಾತ್ತಾಪ ಪಟ್ಟ ಇಬ್ಬರೂ ದೊರೆಗಳು ಎದ್ದು ಬಂದು, ಶ್ರೀಗಳ ಪಾದಕ್ಕೆರಗಿ, 'ಕೂಡಲೇ ಯುದ್ಧ ನಿಲ್ಲಿಸುತ್ತೇವೆ. ತಾವು ಅಪ್ಪಣೆ ಮಾಡಿದಂತೆ ನಡೆಯುತ್ತೇವೆ' ಎಂದು ಭಾಷೆ ಕೊಟ್ಟು ನುಡಿದರು. ಶ್ರೀಗಳು ಎದ್ದು, ಅವರ ಕೈಗಳನ್ನು ಹಿಡಿದು ಎಬ್ಬಿಸಿ, ಇಬ್ಬರ ಕೈಕೈ ಕೂಡಿಸಿ, 'ನಿಮಗೆ ಶುಭವಾಗಲಿ' ಎನ್ನುತ್ತ ಹತ್ತಿರ ಕೂಡ್ರಿಸಿಕೊಂಡರು. ಹಾಗು ಜತೆಯಲ್ಲಿ ಅವರನ್ನು ಉಪಚರಿಸಿ, ಫಲಪುಷ್ಪಗಳನ್ನಿತ್ತು, ಆಶೀರ್ವದಿಸಿ ಕಳಿಸಿಕೊಟ್ಟರು.

ಆ ಕೂಡಲೆ ಕಾಳಗ ನಿಂತಿತು. ಜನರಿಗೆ ಶಾಂತಿಯ ಆಶ್ವಾಸನೆಯನ್ನು ನೀಡಲಾಯಿತು. ಜನರು ಮನೆಮಾರುಗಳಿಗೆ ಹಿಂದಿರುಗಿ, ಸಮಾಧಾನದ ಉಸಿರು ಬಿಟ್ಟರು. ಗುರುನಂಜೇಶ್ವರ ಶಿವಯೋಗಿಗಳ ಶ್ರೀಪಾದಕ್ಕೆ ಮನಸ್ಸಿನಲ್ಲಿಯೇ ಅನಂತ ಕೃತಜ್ಞತೆಗಳನ್ನು ಅರ್ಪಿಸಿದರು.

ದೇಶಮುಖರಿಬ್ಬರೂ ಮತ್ತೆ ಶಿವಯೋಗಿಗಳ ಹತ್ತಿರಕ್ಕೆ ಬಾಗಿ ಬಂದರು. ಅವರ ಸನ್ನಿಧಾನದಲ್ಲಿ ಕುಳಿತುಕೊಂಡು ತಾವಿಬ್ಬರೇ ಮಾತನಾಡಿಕೊಂಡು, ತಮ್ಮ ನಡುವಿನ ತಂಟೆಗಳನ್ನು 'ದ್ವಿಪಕ್ಷೀಯ ಸಂಧಾನ'ವಾಗಿ ಬಗೆಹರಿಸಿಕೊಂಡರು. ಅಂದಿನಿಂದ ಹಿಂದಿನ ವೈರ ಅಳಿಯಿತು; ಮುಂದೆ ಸ್ನೇಹ ಬೆಳೆಯಿತು; ಅಂದವಾಗಿ ಹೊಂದಿಕೊಂಡು ಆಳಿದರು. ಬಂಧುಗಳಾಗಿ ಬಾಳಿದರು.

೯. ಆಚಾರದಲ್ಲಿ ಅಷ್ಟಾವರಣಗಳು

ಗುರುನಂಜೇಶ್ವರರ ಮನಸ್ಸು ಶಾಂತಿಯಲ್ಲಿ ಸಮರಸಗೊಂಡಿತ್ತು. ಭಾವ ಬಲ್ಲಿದವಾಗಿತ್ತು. ಆದರೆ ಶರೀರವು ಖಿಲವಾಗಿತ್ತು. ಕಳೆದ ಹತ್ತೆಂಟು ವರ್ಷಗಳಲ್ಲಿ ಅವರು ಬಹುಶಃ ಭರತನೂರು ಬಿಟ್ಟು ಎಲ್ಲಿಯೂ ಹೋಗಿರಲಿಲ್ಲ. ಪರಮ ಭಕ್ತನಾದ ಕಲ್ಯಾಣಸೆಟ್ಟಿಯೂ ತನ್ನ ಮನೆ ವ್ಯವಹಾರಗಳಲ್ಲಿಯ ಆಸಕ್ತಿಯನ್ನು ಕಡಿಮೆ ಮಾಡಿ ಕೊಂಡಿದ್ದನು. ಶಿವಯೋಗಿಗಳ ಹತ್ತಿರವೇ ಬಂದು ಕುಳ್ಳಿರುತ್ತಿದ್ದನು. ಗುರುಭಕ್ತರ ಕಾಲಕ್ಷೇಪ ಜತೆ ಜತೆಯಾಗಿ ಸಾಗುತ್ತಿತ್ತು. ಇನ್ನೂ ಅನೇಕ ಒಡನಾಡಿಗಳೂ ಆದರಲ್ಲಿ ಬೇಕಾದಾಗ ಭಾಗ ವಹಿಸುತ್ತಿದ್ದರು. ಅವರೆಲ್ಲರು ಗುರುಗಳ ಪ್ರೇಮಲ ಹೃದಯಕ್ಕೆ ಸಲುಗೆಯ ಮಕ್ಕಳಾಗಿದ್ದರು. ಅವರಲ್ಲಿ ನಡೆಯುತ್ತಿದ್ದ ಮಾತುಗಳು ಸತ್‌ಸಲ್ಲಾಪಗಳು ಧರ್ಮ, ನೀತಿ, ತತ್ವಗಳ ವಿಚಾರಗಳಿಗೆ ಸಂಬಂಧಿಸಿರುತ್ತಿದ್ದವು. ಅಲ್ಲಮ ಪ್ರಭುಗಳೆಡೆಯಲ್ಲಿ ನಡೆಯುತ್ತಿದ್ದ ಕಲ್ಯಾಣದ ಅನುಭವ ಮಂಟಪದಂತೆ ಗುರುನಂಜೇಶ್ವರರ ಸಮ್ಮುಖದಲ್ಲಿ ನಡೆಯುತ್ತಿತ್ತು, ಅವರ ಅನುಭವಗೋಷ್ಠಿ !

ಒಂದು ದಿನ ಗೋಷ್ಠಿಯಲ್ಲಿ ಕಲ್ಯಾಣಪ್ಪ ಕೇಳಿದ: "ಗುರುಗಳೇ, ಜೀವ, ಜಗತ್ತು, ಆತ್ಮ ಪರಮಾತ್ಮರುಗಳ ಬಗೆಗೆ ವೀರಶೈವರು ತಿಳಿಯಬೇಕಾದುದನ್ನು, ಅವರು ನಡೆಯಬೇಕಾದುದನ್ನು ನಮಗೆ ಮತ್ತೆ ಮತ್ತೆ ಹೇಳುತ್ತ ಬಂದಿದ್ದೀರಿ. ಸಾಧ್ಯ-ವಾದಷ್ಟು ತಿಳಿದುಕೊಂಡಿದ್ದೇವೆ. ದೃಢಪಡಿಸಿಕೊಳ್ಳಲೂ ಬಹುದು. ದಿನಬಳಕೆಯ ಧಾರ್ಮಿಕಾಚಾರದಲ್ಲಿಯ ಅಷ್ಟಾವರಣಗಳ ಜ್ಞಾನ ಮತ್ತು ಪಾಲನೆ ಇವುಗಳನ್ನು ಮೊದಲು ಗಟ್ಟಿಗೊಳಿಸಿಕೊಳ್ಳುವದು ಅತೀ ಮುಖ್ಯವಾದುದು. ಅದನ್ನು ಮತ್ತೆ ಹೇಳಬೇಕು, ನೀವು ಕೈ ಹಿಡಿದು ನಡೆಸುತ್ತಿದ್ದರೂ ನಾವು ಎಡಹುತ್ತಿದ್ದೇವೆ...."

"ನಡೆಸುವಾಗ ನಾವೂ ಎಡಹುತ್ತಿರಬೇಕಲ್ಲಾ ?"

"ಇಲ್ಲ ಗುರುಗಳೇ, ನಾವು ಎಡಹಿದಾಗ, ಕೈ ಹಿಡಿದ ನಿಮ್ಮ ಹೆಜ್ಜೆಗಳೂ ಹಿಂದು ಮುಂದಾಗುತ್ತವೆ ಅಷ್ಟೇ !"

"ಅಂದರೆ... ?"

"ಅಂದರೆ, ನೀವು ನಮ್ಮನ್ನು ನಡೆಸುನವರು; ನಾವು ನಿಮ್ಮನ್ನು ಎಡಹಿಸುವವರು" ಕೈ ಮುಗಿದು ನಗುತ್ತ ಹೇಳಿದ, ಕಲ್ಯಾಣಪ್ಪ! ಗುರುಗಳಾದಿಯಾಗಿ ಎಲ್ಲರಿಗೂ ನಗು.

"ನಮ್ಮಿಂದ ಏನೆಲ್ಲಾ ಕೇಳಿ ತಿಳಿದಿರುವೆವೆಂದೆಯಲ್ಲಾ, ಏನು ತಿಳಿದಿರುವೆ ಹೇಳು ಮೊದಲು!"

"ನಾನೆಲ್ಲಾ ತಿಳಿದಿರುವದು ತಮ್ಮೊಬ್ಬರನ್ನು ಮಾತ್ರ!"

"ಹೌದು ಹೌದು, ಎಲ್ಲರೂ ಅಷ್ಟೇ!" ಎಂದರು ಮಿಕ್ಕವರು.

ಸಂತೋಷದಿಂದ ಶ್ರೀಗಳು: "ಇರಲಿ ಕಲ್ಯಾಣಪ್ಪ, ನಮ್ಮ ಸಿದ್ಧಾಂತದ ಬಗೆಗೆ ನಾಲ್ಕು ಮಾತು ಹೇಳು ನೋಡೋಣ! ಆ ಮೇಲೆ ಅಷ್ಟಾವರಣಗಳ ವಿವರಣೆ ಕೇಳುವಿರಂತೆ."

'ಅಪ್ಪಣೆಯಂತೆ ಆಗಲಿ' ಎಂದು ಕಲ್ಯಾಣಪ್ಪ ವಂದಿಸಿ, ಒಡನಾಡಿಗಳ ಕಡೆಗೆ ಮುಖ ಮಾಡಿ ಕುಳಿತನು:

"ಶಕ್ತಿ ವಿಶಿಷ್ಟನಾದ ಶಿವನು ತನಗೆ ಅಭಿನ್ನವಾದ ಶಕ್ತಿಯ ಮೂಲಕ ಈ ಪ್ರಪಂಚಕ್ಕೆ ಕಾರಣನಾಗಿದ್ದಾನೆ. ಕಾರ್ಯರೂಪ ವಿಶ್ವವೂ ಆಗಿದ್ದಾನೆ. ಇದು ಅವನ ಲೀಲೆಗಾಗಿ ಉಂಟಾದುದು. 'ಪರವಸ್ತು', 'ಸ್ಥಲ' ಎನಿಸುವ ಅವನು ಪೂಜ್ಯ-ಪೂಜಕ ಲೀಲೆಗಾಗಿ ಲಿಂಗ ಅಂಗ ಎಂದು ಎರಡಾದನು. ಲಿಂಗನು, ಆರು ಲಿಂಗವಾಗಿ ಪೂಜೆಗೊಳ್ಳುವನು. ಅಂಗನು ಆರು ಅಂಗವಾಗಿ ಪೂಜಿಸುವನು. ಷಡಂಗಗಳಲ್ಲಿ ಷಡ್ಲಿಂಗಗಳನ್ನು ಅನುಗೊಳಿಸಿ, ಒಂದಾಗಿ ಬೆರೆಸಿ, ಬೇರಿಲ್ಲದಿಪ್ಪುದೇ ಲಿಂಗಾಂಗ ಸಾಮರಸ್ಯ ಸಿದ್ಧಿ! ಅದುವೇ ವೀರಶೈವರ ಮೋಕ್ಷ ಸ್ವರೂಪ! ಜೀವನು ಈ ಸಾಧನೆಯ ಬಗೆಗಿನ ಜ್ಞಾನ ಕ್ರಿಯೆಗಳನ್ನು ಗುರುವಿನಿಂದ ಸಂಸ್ಕಾರ ಮುಖಾಂತರ ತಿಳಿದಾಗ ಅಂಗನೆನಿಸುವನು; ಲಿಂಗ ಸಮರಸಕ್ಕೆ ಅರ್ಹನಾಗುವನು. ಈ ಸಾಮರಸ್ಯ ಸಿದ್ಧಿಗೆ ಷಟ್‌ಸ್ಥಲವು ಮಾರ್ಗವಾಗಿದೆ. ಅಷ್ಟಾವರಣವು ಅದರಲ್ಲಿ 'ನಡೆ'ಯಾಗಿದೆ, ನೈತಿಕ ಬಲವೇ ಪ್ರಾಣವಾಗಿ ಉಳ್ಳ ಪಂಚಾಚಾರಗಳು ಆ ನಡೆಗೆ ಪ್ರಾಣಶಕ್ತಿ ಆಗಿರುವವು. ಆತ್ಮನನ್ನು ವಿಕಾಸಗೊಳಿಸಿ ಪರಮಾತ್ಮನಾಗಿಸುವ ಪಥವೇ ಷಟ್‌ಸ್ಥಲ! ಶರಣು, ಶರಣು."

"ಭಲೆ ಭಲೆ, ಮುಖ್ಯ ಮಾತುಗಳನ್ನು ಚೆನ್ನಾಗಿ ಹೇಳಿದೆ. ವಿವರವೆಲ್ಲ ನಿನಗೆ ತಿಳಿದಿದೆ. ಇನ್ನು ಅಷ್ಟಾವರಣಗಳ ಬಗೆಗೆ ವಿವರವಾಗಿ ಮತ್ತೆ ಹೇಳುವೆ ಕೇಳಿರಿ:

ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವು ಅಷ್ಟಾವರಣಗಳು. ಪರಶಿವನ ಅಧಿಷ್ಠಾನದಲ್ಲಿರುವ ವಿಮರ್ಶಾ ಶಕ್ತಿಯು ಜ್ಞಾನಕ್ರಿಯಾ ರೂಪದಲ್ಲಿರುವದು. ಅಷ್ಟಾವರಣಗಳ ಮೂಲಕ ನಡೆಯುವ ಸಾಧನೆಯು ಕ್ರಿಯಾಜ್ಞಾನತ್ಮಕವಾಗಿಯೇ ನಡೆದು, ಸಾಮರಸ್ಯ ಸಿದ್ಧಿಯಾಗಬೇಕು. ಆದ್ದರಿಂದ ಈ ಆವರಣಗಳು ಕ್ರಿಯಾಷ್ಟಾವರಣಗಳು, ಜ್ಞಾನಷ್ಟಾವರಣಗಳು ಎಂದು ಎರಡು ವಿಧ. ಕ್ರಿಯಾವರಣಗಳು ಬಹಿರಂಗದ-ವಾದುದರಿಂದ ಅವು ಸಾಮಾಜಿಕವಾಗಿರುವವು. ಪ್ರತ್ಯಕ್ಷವಾದ ಈ ಬಹಿರಂಗ ಆವರಣಗಳ ಆಚರಣೆಯು, ಅಂತರಂಗದಲ್ಲಿಯ ಜ್ಞಾನಷ್ಟಾವರಣಗಳಾಗಿ ಪರಿವರ್ತನೆ ಹೊಂದಬೇಕು. ಅಂದರೆ, ಗುರುವಿನಿಂದ ಅರಿವು, ಲಿಂಗದಿಂದ ಅನುಭವವು, ಜಂಗಮದಿಂದ ಆನಂದವು, ಪಾದೋದಕದಿಂದ ಚಿದ್ರಸವು, ಪ್ರಸಾದದಿಂದ ಪ್ರಸನ್ನತೆಯು (ತೃಪ್ತಿಯು), ವಿಭೂತಿಯಿಂದ ಶಿವಪ್ರಕಾಶವು, ರುದ್ರಾಕ್ಷಿಯಿಂದ ಜ್ಞಾನದೃಷ್ಟಿಯು, ಮಂತ್ರದಿಂದ ಏಕತ್ವವು ಉಂಟಾಗಬೇಕು. ಹೀಗೆ ಪರಿಣಾಮವು ಉಂಟಾಗದಿದ್ದರೆ, ಬಹಿರಂಗದಲ್ಲಿಯ ಅಷ್ಟಾವರಣಗಳ ಕ್ರಿಯಾಚರಣೆಯು ನಿರರ್ಥಕವಾಗುವದು; ಕೇವಲ ಡಾಂಭಿಕವಾಗುವದು. ಪರಶಿವನು ಲಿಂಗವಾಗಿ ಅಂಗನಿಂದ ಪೂಜಿಸಿಕೊಳ್ಳುವದ-ರೊಡನೆ, ಅಂಗನ ಉದ್ಧಾರಕ್ಕಾಗಿ ಕ್ರಿಯಾ ಭೇದದಿಂದ ಗುರುಲಿಂಗ, ಇಷ್ಟಲಿಂಗ, ಜಂಗಮಲಿಂಗ ಎಂಬ ಮೂರು ರೂಪದಲ್ಲಿ ಪೂಜೆಗೊಳ್ಳುವನು. ಹರ ತನ್ನ ರೂಪವ ತೋರಲೆಂದು ಗುರು ರೂಪದಿಂದ ಮರ್ತ್ಯಕ್ಕೆ ಬಂದು, ಕರಸ್ಥಲಕ್ಕೆ ಲಿಂಗವಾಗಿ, ಪ್ರಾಣಸ್ಥಲಕ್ಕೆ ಜಂಗಮವಾಗಿ.......... ಸಾಹಿತ್ಯವಾದನಯ್ಯಾ.........' ಎಂದು ಚೆನ್ನಬಸವಣ್ಣನವರು ಹೇಳುತ್ತಾರೆ. ಈ ಮೂರು ರೂಪಗಳ ಪೂಜೆಯಲ್ಲಿ ಶಿವನು ಭಕ್ತರು ಬೇರೆ ಬೇರೆಯಾಗಿರುತ್ತಾರೆ. ಆದರೆ ಸಾಧನೆಯು ದೇವಭಕ್ತರ ಸಾಮರಸ್ಯ-ಕ್ಕಾಗಿ ಇರುವದಿಲ್ಲವೆ ? ಪಾದೋದಕ ಪ್ರಸಾದಗಳ ಕ್ರಿಯೆಗಳಲ್ಲಿ ಸಾಧಕರು ಶಿವಸಾಮರಸ್ಯವನ್ನು ಆಚರಿಸಿ, ಅನುಭವಿಸುತ್ತ, ಆ ಭಾವನೆಯನ್ನು ಬಲಪಡಿಸಿಕೊಳ್ಳು ತ್ತಿರುವರು. ವಿಭೂತಿ, ರುದ್ರಾಕ್ಷಿ, ಮಂತ್ರಗಳು ಉಪಾಸನಾ ಕ್ರಿಯೆಯಲ್ಲಿ ಸಾಧನೆಗಳಾಗಿವೆ. ಹೀಗೆ ಮೊದಲಿನ ಮೂರು ಪೂಜಾಮೂರ್ತಿಗಳು, ಎರಡು ಪೂಜಾ ಫಲಗಳು, ಮುಂದಿನ ಮೂರು ಪೂಜಾ ಸಾಧನೆಗಳು. ಇನ್ನು ಪ್ರತಿಯೊಂದರ ಸ್ವರೂಪ :

ಗುರು

ಧಾರ್ಮಿಕ ಆಚಾರದಲ್ಲಿ ಗುರುವಿಗೆ ಪ್ರಥಮ ಪ್ರಾಶಸ್ತ್ಯವಿದೆ. ವಿಶ್ವದ ಎಲ್ಲ ಮತ-ಧರ್ಮಗಳಲ್ಲಿ ಗುರುವಿಗೆ ಗೌರವ ಸ್ಥಾನವಿದೆ. ಭಾರತೀಯ ಉಪನಿಷತ್ತುಗಳು 'ನಗುರೋಃರಧಿಕಂ' ಎಂದು ಸಾರುತ್ತಿವೆ. ಅಷ್ಟಾವರಣಗಳನ್ನು ಸದ್ಭಕ್ತ-ಸಾಧಕನ ಆಚರಣೆಯಲ್ಲಿ ಸಂಸ್ಥಾಪಿಸಿ ನಡೆಸುವವನೇ ಶ್ರೀಗುರು.

'ಮಡಿಕೆಯ ಮಾಡುವರೆ ಮಣ್ಣೆ ಮೊದಲು, ತೊಡಿಗೆಯ ಮಾಡುವರೆ, ಹೊನ್ನೆ ಮೊದಲು. ಹರಪಥವನರಿವಡೆ ಗುರುಪಥನೆ ಮೊದಲು' ಎಂದು ನಿಜ ಸತ್ಯವನ್ನು ಸಾರಿದ್ದಾರೆ ಬಸವಣ್ಣನವರು. ಸಾಧಕನ ಹೃದಯಕ್ಕೆ ಗುರುಕಾರುಣ್ಯದ ಸೋನೆ (ವೃಷ್ಟಿ) ಸುರಿದಾಗಲೆ ಮುಂದಿನ ಅಂಕುರ ಎಲೆ ಹೂ ಕಾಯಿಗಳು! ರಸವತ್ ಫಲಸಿದ್ಧಿ! ಶಿಷ್ಯನನ್ನು ತನ್ನಂತೆ ಮಾಡಿಕೊಳ್ಳುವ ಗುರುವಿನ ಮಹಿಮೆ ಎಲ್ಲಕ್ಕೂ ಹೆಚ್ಚಿನದು. ಇಚ್ಛಾ-ಜ್ಞಾನ-ಕ್ರಿಯೆಗಳ ಸಂಕುಚಿತತ್ವದ ಮಲತ್ರಯಗಳ ಬಂಧನವು ಜೀವನದ ಶಿವತ್ವಕ್ಕೆ ತಡೆಯಾಗಿದೆ. ಗುರು ತ್ರಿವಿಧ ದೀಕ್ಷೆಗಳಿಂದ ಶಿಷ್ಯನ ಮಲತ್ರಯಗಳ ಮುಸುಕನ್ನು ಭೇದಿಸಿ, ಆತ್ಮಸ್ವರೂಪವನ್ನು ತೋರುವನು. ಆತ್ಮ ಸಾಧನೆಗಾಗಿ ಕ್ರಿಯಾ-ಜ್ಞಾನಗಳನ್ನು ಬೋಧಿಸುವನು. ಆ ಆತ್ಮ ಕಳೆಯನ್ನು ಶಿಷ್ಯನ ಹಸ್ತದಲ್ಲಿ ಇಷ್ಟಲಿಂಗವಾಗಿರಿಸುವನು- ಅದರ ಉಪಾಸನೆ, ಮಂತ್ರಜಪ, ಲಿಂಗಮುಖವಾದ ಜಂಗಮದಾಸೋಹ, ಪ್ರಸಾದಭೋಗ ಇವುಗಳನ್ನು ತಿಳಿಸುವನು. ಶುದ್ಧಾಂತರಂಗಿಯಾಗಿರಲು ಸದಾ ಎಚ್ಚರಿಸುತ್ತ, ಉತ್ತೇಜನ ನೀಡುತ್ತಿರುವನು. ಬಂಧು ಬಳಗದ ನಂಟುತನವು ಭಿನ್ನತೆಯಲ್ಲಿಯೇ ಉಳಿಯುತ್ತದೆ. 'ನಾನೇ ನೀನು, ನೀನೇ ನಾನು' ಎಂಬುವ ಗುರು ಶಿಷ್ಯರ ಸಂಬಂಧವು ಅಭೇದದಲ್ಲಿ ಬೆಳಗುತ್ತದೆ. ಗುರುವಿನ ಹಸ್ತ ವೈದಡವಿದಾಗ, ಮಸ್ತಕದ ಮೇಲೆ ಇರಿಸಲ್ಪಟ್ಟಾಗ ಆಗುವ ಅನಿರ್ವಚನೀಯ ಅನುಭವವನ್ನು ಅನುಭವಿಸಿಯೇ ತೀರಬೇಕು. ಕರ್ತವ್ಯ ಭೇದದಿಂದ ಗುರುವಿನ (ಅಭಿಧಾನದ) ಲ್ಲಿ ಮೂರು ಪ್ರಕಾರ :

ದೀಕ್ಷಾ ಗುರು : ಸಂಸ್ಕಾರ, ಉಪದೇಶ.

ಶಿಕ್ಷಾ ಗುರು : ಸಾಧನೆಯಲ್ಲಿ ಸದಾ ನೆರವಾಗುವದು.

ಮೋಕ್ಷ ಗುರು (ಜ್ಞಾನ ಗುರು) : ಅನುಭಾವವನ್ನು ಬೀರಿ ಜ್ಞಾನ ನೀಡುವದು. ಈ ಬಹಿರಂಗದ ಗುರುವಿನ ಆಚರಣೆಯಿಂದ ಶಿಷ್ಯನ ಅಂತರಂಗದಲ್ಲಿ ಮೂಡುವ ಅರಿವೇ ಅಂತರಷ್ಟಾವರಣದ ಗುರು !

ಲಿಂಗ

ಇಷ್ಟಲಿಂಗವು ಗುರುಕರುಣೆಯ ಸಾಕಾರ ರೂಪವು ಅದು ಶಿಷ್ಯನ ಹೃದಯ–ದಲ್ಲಿಯ ಆತ್ಮಜ್ಯೋತಿ ! ಅದನ್ನೇ ಶ್ರೀಗುರು ತನ್ನ ತಪೋಬಲದಿಂದ ಶಿಷ್ಯನ ಬ್ರಹ್ಮರಂಧ್ರದ ಮೂಲಕ ಗ್ರಹಿಸಿ, ಅವನ ಕರಕ್ಕೆ ಕೊಟ್ಟು. ಇದು ನಿನ್ನ ಸ್ವರೂಪ-ವೆಂದು ತಿಳಿಸಿ ಉಪಾಸಿಸಲು ಹೇಳುವನು. ಇಷ್ಟಲಿಂಗವು ಆತ್ಮದ ಕುರುಹು ಅಲ್ಲದೆ, ಪರಮಾತ್ಮನ ಮಹಾ ಘನಸ್ವರೂಪದ ಪ್ರತೀಕವೂ ಆಗಿದೆ. ಬಸವಣ್ಣನವರ ವಚನದಲ್ಲಿ ಕಾಣುವ ಇಷ್ಟಲಿಂಗದ ವಿಶ್ವರೂಪವಿದು :

"ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ !
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಮುಕುಟ !
ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೆ
ಕೂಡಲ ಸಂಗಮ ದೇವಯ್ಯಾ,
ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ

ಇಷ್ಟಲಿಂಗವು ಪೂಜಾಮೂರ್ತಿ, ಇಷ್ಟಲಿಂಗೋಪಾಸನೆಯಲ್ಲಿಯೇ ಸೂಕ್ಷ್ಮ ಶರೀರದಲ್ಲಿಯ ಪ್ರಾಣಲಿಂಗ ಪೂಜೆಯನ್ನೂ, ಕಾರಣ ಶರೀರದಲ್ಲಿಯ ಭಾವಲಿಂಗ ಪೂಜೆಯನ್ನೂ ಸಾಧಿಸಲಾಗುವದು. ಲಿಂಗವನ್ನು ಅಷ್ಟವಿಧಾರ್ಚನೆಯಿಂದ ಪೂಜಿಸುವದು ಇಷ್ಟಲಿಂಗಪೂಜೆ; ಅನ್ಯಮನಸ್ಕನಾಗಿ ಧ್ಯಾನಿಸುವದು ಪ್ರಾಣಲಿಂಗ ಪೂಜೆ; ಮನವು ಧ್ಯಾನದಲ್ಲಿ ಮುಳುಗಿದಾಗ ಆಗುವ ಆನಂದಾನುಭವವು ಭಾವಲಿಂಗ ಪೂಜೆ! ಹೀಗೆಯೇ ಅರ್ಪಣ ಕ್ರಿಯೆಯಲ್ಲಿ ಇಂದ್ರಿಯಗಳಲ್ಲಿ ಸ್ಥಾಪಿತವಾಗಿರುವ ಷಡ್ಲಿಂಗಗಳ ಉಪಾಸನೆಯೂ ಸಂಘಟಿಸುವದು.

ಪಂಚಾಚಾರಗಳನ್ನು ಪ್ರಾಣವಾಗಿ ಆಚರಿಸುವದು ಆಚಾರಲಿಂಗ ಪೂಜೆ.
ಶಿವಮಂತ್ರವನ್ನು ಜಪಿಸುವದು ಗುರುಲಿಂಗ ಪೂಜೆ.
ಲಿಂಗನಿರೀಕ್ಷಣೆ ಶಿವಲಿಂಗ ಪೂಜೆ.
ನೈರ್ಮಲ್ಯ ಮತ್ತು ಏಕಾಗ್ರತೆ ಜಂಗಮಲಿಂಗ ಪೂಜೆ.
ಪ್ರಸನ್ನತೆ ಪ್ರಸಾದಲಿಂಗ ಪೂಜೆ.
ಪ್ರಸಾದ ಕಾಯನಾದೆನೆಂಬ ತೃಪ್ತಿಯೇ ಮಹಾಲಿಂಗ ಪೂಜೆ.

ಇಷ್ಟ ಲಿಂಗವು ಬಹಿರಷ್ಟಾವರಣದಾರೆ. ಸರ್ವಾಂಗ ಲಿಂಗ ರೂಪವಾದ ಸಂಸ್ಕಾರದ ಅನುಭವವು ಅಂತರಂಗದ ಆವರಣದ ಲಿಂಗವು !

ಜಂಗಮ

ಭಕ್ತಿ–ಜ್ಞಾನ–ವೈರಾಗ್ಯಗಳ ಸಂಗಮದಿಂದ ಪರಿಪೂರ್ಣ ಶಿವಸ್ವರೂಪನಾದವನೇ ಜಂಗಮ ಮೂರ್ತಿಯು. ಗುರುವು ದೀಕ್ಷಾ ಸಂಸ್ಕಾರಗಳಿಂದ ಧರ್ಮಬೋಧೆ ಮಾಡಿದರೆ, ಧರ್ಮ ರಕ್ಷಣೆ ಮಾಡುವದು ಜಂಗಮನ ಸಾಮಾಜಿಕ ಕರ್ತವ್ಯವು ! ಗುರು ಬೋಧಿಸಿದ ಧಾರ್ಮಿಕ ಜ್ಞಾನ ಕ್ರಿಯೆಗಳು ಸಮಾಜದ ವ್ಯಕ್ತಿಗಳಿಂದ ನಡೆಸಲ್ಪಡುವವೇ ? ಆ ಮೂಲಕ ಆ ವ್ಯಕ್ತಿಗಳು ಲಿಂಗಾನಂದವನ್ನು ಅನುಭವಿಸು–ತ್ತಿರುವರೇ ಎಂಬುದನ್ನು ನೋಡುವದು, ನ್ಯೂನತೆಗಳನ್ನು ಸರಿಪಡಿಸುವದು ಧರ್ಮ ರಕ್ಷಣೆಯಾಗಿರುವದು. ಗುರು ದೀಕ್ಷಾ ಮೂರ್ತಿ, ಲಿಂಗವು ಪೂಜಾ ಮೂರ್ತಿ,

ಜಂಗಮವು ಭೋಗ ಮೂರ್ತಿ ಎನಿಸಿರುವರು. ಜಂಗಮವು ಲಿಂಗಕ್ಕೆ ಮುಖವು. ಭಕ್ತನು ಅರ್ಪಿಸುವ ಧನ-ಧಾನ್ಯ-ಪದಾರ್ಥಗಳನ್ನು ಜಂಗಮಕ್ಕೆ ಅರ್ಪಿಸಿ, ಆ ಜಂಗಮದಿಂದ ಪಡೆದ ಪ್ರಸಾದವನ್ನು ಭೋಗಿಸುವನು. ಜಂಗಮನು ವೈರಾಗ್ಯ ಶೀಲನು, ಭಕ್ತರಿಂದ ಪಡೆದ ಧನವನ್ನು ಸಮಾಜ ಹಿತಕ್ಕೆ ಪ್ರಸಾದವಾಗಿ ಹಂಚಬೇಕು. ಪೂಜಾ ಫಲಗಳಾದ ಪಾದೋದಕ-ಪ್ರಸಾದಗಳ ಕ್ರಿಯೆಗಳಲ್ಲಿ ಭೋಗಮೂರ್ತಿಯಾದ ಜಂಗಮಕ್ಕೆ ಪ್ರಾಶಸ್ತ್ಯವುಂಟು. ಜಂಗಮವು ಮೂರು ತೆರನಾಗಿದೆ:

೧. ಸ್ವಯ ಜಂಗಮವು ಮಠದಲ್ಲಿದ್ದು ಭಕ್ತರ ಭಕ್ತಿ ಮಾರ್ಗದಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತ, ಸಮಾಜದಲ್ಲಿ ನೀತಿ ಸಮತೆ ಐಕ್ಯಗಳನ್ನು ಕಾಪಾಡುವದು.

೨. ಚರ ಜಂಗಮವು ಗ್ರಾಮಾಂತರಗಳಲ್ಲಿ ಸಂಚರಿಸುತ್ತ ಜ್ಞಾನ ಬೋಧೆ ಮಾಡುವದು. ಸಮಾಜ ಧರ್ಮದ ಉನ್ನತಿಗಾಗಿ ಅಗ್ರಪಾತ್ರ ವಹಿಸುವದು.

೩. ಪರ ಜಂಗಮವು ಕೇವಲ ವೈರಾಗ್ಯ ಮೂರ್ತಿ, ಯಾವ ಆಸಕ್ತಿಯೂ ಇಲ್ಲದೆ ತನ್ನ ಲೀಲೆಗಳಿಂದಲೇ ಭಕ್ತರ ಲೋಪದೋಷಗಳನ್ನು ತಿದ್ದಿಕೊಳ್ಳುವಂತೆ ಮಾಡುವದು.

ಒಟ್ಟಿನಲ್ಲಿ ತ್ರಿವಿಧ, ಷಡ್ವಿಧ, ಲಿಂಗಗಳ ಅನುಭವವೇ ಒಂದಾಗಿ ಉಂಟಾದ ಆನಂದದ ಸಾಕಾರ ರೂಪವೇ ಜಂಗಮವು! ಆದ್ದರಿಂದ ಅಂತರಂಗದ ಜಂಗಮಾವರಣವೆಂದರೆ ಆನಂದವು!

ಸಾಧಕನ ನಿತ್ಯದ ಅಷ್ಟಾವರಣಾಚರಣೆಗೆ ಪ್ರತಿ ದಿನವೂ ಗುರು–ಜಂಗಮರು ಪ್ರಾಪ್ತವಾಗದಿರಬಹುದು. ಆಗ ಗುರು ಇದ್ದು ಜಂಗಮ ಇಲ್ಲದಿದ್ದರೆ ಗುರುವಿನಲ್ಲಿಯೇ ಜಂಗಮ ಸಂಬಂಧವನ್ನು ಭಾವಿಸಿ ಆಚರಿಸಬೇಕು. ಜಂಗಮವಿದ್ದು ಗುರುವಿಲ್ಲದಿದ್ದರೆ, ಜಂಗಮದಲ್ಲಿಯೇ ಗುರು ಸಂಬಂಧವನ್ನು ಭಾವಿಸಿ ಆಚರಿಸಬೇಕು. ಗುರು-ಜಂಗಮರಿಬ್ಬರೂ ಇಲ್ಲದಿದ್ದರೆ, ಲಿಂಗದಲ್ಲಿಯೇ ಅವರಿಬ್ಬರನ್ನು ಭಾವಿಸಿ ಆಚರಿಸಬೇಕು. ಇದಕ್ಕೆ ಸಂಬಂಧಾಚರಣೆಯೆನ್ನುವರು. ಪ್ರತ್ಯಕ್ಷವಾಗಿ ಇದ್ದಾಗಿನ ಆಚರಣೆಗೆ ಸಹಜಾಚರಣೆಯೆನ್ನುವರು.

ಗುರು–ಲಿಂಗ-ಜಂಗಮರು ಕರ್ತವ್ಯಭೇದದಿಂದ ಮೂರು ರೂಪಾದರೂ ಸಾಮರಸ್ಯದಲ್ಲಿ ಒಂದೇ ಆಗಿರುವರು. ಈ ಮೂರು ಪರಶಿವ ತತ್ವದ ಉಪಾಸ್ಯ–ಲಿಂಗಸ್ಥಲದ ಮೂರು ರೂಪವಾಗಿವೆ. ಆನಂದವು ಅಂತರಂಗದ ಜಂಗಮಾವರಣವು.

ಪಾದೋದಕ

ಪಾದೋದಕ ಪ್ರಸಾದಗಳು ಉಪಾಸನೆಯ ಫಲಗಳು! ವೀರಶೈವರ ಸಾಧನೆಯ ಫಲ ಸಾಮರಸ್ಯವಷ್ಟೇ! ಪಾದೋದಕ ಪ್ರಸಾದಗಳ ಅರ್ಥದಲ್ಲಿ, ಅವುಗಳನ್ನು ಪಡೆಯುವ ವಿಧಾನದಲ್ಲಿ, ಸೇವಿಸುವ ಕ್ರಮದಲ್ಲಿ, ಸಾಧಕನು ಸಾಮರಸ್ಯವನ್ನು ಅನುಭವಿಸುತ್ತಿರುವನು. ಉಪಾಸ್ಯ ಜಂಗಮ ಇಲ್ಲವೆ ಗುರು-ಲಿಂಗ ಹಾಗು ಉಪಾಸಕನ, ಭಕ್ತನ ಸಾಮರಸ್ಯ ಭಾವದಲ್ಲಿ ಮೂಡಿಬರುವ ಚಿದ್ರಸವು ಅಂದರೆ ಜ್ಞಾನಾಮೃತವು ಪಾದೋದಕವು! ಉಪಾಸ್ಯಗಳಾದ ಗುರು-ಲಿಂಗ-ಜಂಗಮ ರೂಪದ ಶಿವನ ಚಿಚ್ಛಕ್ತಿ. ಉಪಾಸಕನಾದ ಭಕ್ತನಿಗೆ ಫಲಕೊಡಲು ಪಾದೋದಕವೆಂಬ ಚಿದ್ರಸವಾಗಿ ಬರುವದು. ಗುರುವಿನ ಹಸ್ತ, ಶಿಷ್ಯನ ಮಸ್ತಕಗಳ ಸಂಬಂಧದಿಂದ ಗುರುವು ಶಿಷ್ಯನ ಒಳಗಿನ ಶಿವಕಳೆಯನ್ನು ಹೊರತೆಗೆದು ಇಷ್ಟಲಿಂಗದಲ್ಲಿ ಇರಿಸಿಕೊಡುವಂತೆ, ಶಿಷ್ಯನ ಹಸ್ತ, ಗುರುವಿನ ಪಾದಗಳ ಸಂಯೋಗದಿಂದ ಶಿಷ್ಯನು ಗುರುವಿನಲ್ಲಿಯ ಜ್ಞಾನರಸವನ್ನು ಪಡೆಯುತ್ತಾನೆ.

> 'ಗುರುವಿನಿಂದ ಬರುವದು ದೀಕ್ಷಾಪಾದೋದಕ,
> ಲಿಂಗದಿಂದ ಬರುವದು ಶಿಕ್ಷಾಪಾದೋದಕ.'

'ಜಂಗಮದಿಂದ ಬರುವದು ಜ್ಞಾನಪಾದೋದಕ' ಎಂದು ಹೇಳುವದುಂಟು. ಪ್ರತಿಯೊಂದರಲ್ಲಿ ಒಂದು ಪ್ರಧಾನವಾಗಿದ್ದರೆ ಉಳಿದವೆರಡು ಸಮನ್ವಯಗೊಂಡು ಇದ್ದೇ ಇರುವವು. ಇದಲ್ಲದೆ ಈ ಮೂರರಲ್ಲಿಯೂ ೧. ಸ್ಪರ್ಶನೋದಕ, ೨. ಅವಧಾನೋದಕ, ೩. ಅಪ್ಯಾಯನೋದಕ, ೪. ಹಸ್ತೋದಕ, ೫. ಪರಿಣಾಮೋದಕ, ೬. ನಿರ್ನಾಮೋದಕ, ೭. ಸತ್ಯೋದಕ. ಹೀಗೆ ಏಳು ಪ್ರಕಾರಗಳಿವೆ. ವಿವರಣೆಯನ್ನು ಆಚರಣೆಯಲ್ಲಿ ನೋಡಿ ತಿಳಿಯಬಹುದು. ಜ್ಞಾನಚೇತನದ ಉಜ್ವಲತೆ ಅಂತರಂಗದ ಪಾದೋದಕಾವರಣವು.

ಪ್ರಸಾದ

ಸಾಧಕನ ಸಮಗ್ರ ತತ್ವಾಚರಣೆಯ ಫಲವು ಪ್ರಸಾದವು. ಪ್ರಸಾದವೆಂದರೆ ಪ್ರಸನ್ನತೆ! ಚಿರಂತನ ಶಾಂತಿ! ಇದು ಅರ್ಪಣಭಾವದ ಪರಿಣಾಮವಾಗಿದೆ. ಶಿವನು ಪ್ರಸಾದ ಸ್ವರೂಪನಾಗಿದ್ದಾನೆ.

ಸಾಧಕನು ಅಹಂಕಾರರಹಿತನಾಗಿರಬೇಕು. ಇದು ನನ್ನದು. ಇದನ್ನು ನಾನು ದುಡಿದು ಸಂಪಾದಿಸಿದ್ದೇನೆ; ನಾನು ಉಣ್ಣುವೆನು ಎಂಬ ಭಾವನೆ ಇಲ್ಲದೆ, ಇದೆಲ್ಲ ಶಿವನ ದಾನ, ಇದೆಲ್ಲ ಶಿವನಿಗಾಗಿ ಬಂದಿದೆ ಎಂದು ಎಲ್ಲವನ್ನು ಶಿವನಿಗೆ ಅರ್ಪಿಸಿ,

ಪ್ರಸಾದವಾಗಿ ಭೋಗಿಸಬೇಕು. ಜಗತ್ತಿನ ಪಡಿ-ಪದಾರ್ಥಗಳೆಲ್ಲ ಶಿವಾರ್ಪಿತವಾಗಿ ಪ್ರಸಾದವಾಗುವವು. ಹೀಗೆ ಅರ್ಪಣೆಗೊಳಿಸುವದು ಜ್ಞಾನಮುತಾರ್ಪಣೆಯೆನಿಸುವದು. ಉಪಾಸನೆಯಲ್ಲಿ ಗುರು-ಲಿಂಗ ಜಂಗಮಗಳಿಗೆ ಕ್ರಮವಾಗಿ ತನು-ಮನ-ಧನಗಳನ್ನು ಅರ್ಪಿಸಿ, ಪ್ರಸಾದವಾಗಿ ಪಡೆಯುವದು ಕ್ರಿಯಾಮುತಾರ್ಪಣೆಯೆನಿಸುವದು. ಉಪಾಸನೆಯಲ್ಲಿ ಸಾಧಕನು ಅರ್ಚನೆ-ಧ್ಯಾನ-ಅರ್ಪಣೆಗಳ ನಂತರ ದೇಹ-ಇಂದ್ರಿಯ ಕರಣಗಳು ಸಹಿತ ಪ್ರಸಾದ ರೂಪ ಪಡೆದು, ಪ್ರಸಾದಕಾಯನಾಗುವನು. ಪೂಜಾಂತದಿಂದ ಪೂಜಾರಂಭದವರೆಗೆ ಪ್ರಸಾದಕಾಯನಾಗಿಯೂ, ಪೂಜಾಕಾಲದಲ್ಲಿ ಪದಾರ್ಥ ಕಾಯುವಾಗಿಯೂ ಇರುವನು.

ತಾನು ಸೇವಿಸುವ ಪದಾರ್ಥಗಳ ರೂಪವನ್ನು ಇಷ್ಟಲಿಂಗಕ್ಕೆ, ರುಚಿಯನ್ನು ಪ್ರಾಣ ಲಿಂಗಕ್ಕೆ, ತೃಪ್ತಿಯನ್ನು ಭಾವ ಲಿಂಗಕ್ಕೆ ಅರ್ಪಿಸಿ, ಸಂತೃಪ್ತಿಯಲ್ಲಿ ತನ್ಮಯನಾಗಬೇಕು.

ಪ್ರಸಾದದಲ್ಲಿಯ ಹನ್ನೊಂದು ಭೇದಗಳನ್ನು ನೀವು ಆಚರಿಸಿ ತಿಳಿಯುತ್ತಿರುವಿರಿ. ತನು-ಮನ-ಭಾವಗಳಲ್ಲಿ ತೃಪ್ತಿ ನೆಲೆಗೊಳ್ಳುವದೇ ಅಂತರಂಗದ ಪ್ರಸಾದಾವರಣವು.

ವಿಭೂತಿ

ಭಸ್ಮ, ಭಸಿತ ಎಂತಲೂ ವಿಭೂತಿಗೆ ಹೆಸರು. ಭಸ್ಮ, ರುದ್ರಾಕ್ಷಿ ಮಂತ್ರ ಇವು ಉಪಾಸನೆಯ ಉಪಕರಣ ಸಾಧನಗಳು. ಭಸ್ಮ-ರುದ್ರಾಕ್ಷಿಗಳನ್ನು ಲಿಂಗವಂತರ ಹೊರತು ಶೈವರು ಮಾತ್ರ ಧರಿಸುತ್ತಾರೆ. ಇವು ಶೈವ-ವೀರಶೈವರಿಗೆ ಪ್ರಮುಖ ಶಿವಲಾಂಛನಗಳಾಗಿವೆ. ಭಸಿತವು ಶಿವನ ಮೈಬೆಳಗು ಎನಿಸಿದೆ. ಮುಖ ತೊಳೆದುಕೊಂಡು ಮೂಬೆರಳು ಭಸ್ಮ ಧರಿಸಿದರೆ, ಮುಖಕ್ಕೆ ಕಳೆ, ಮನಸ್ಸಿಗೆ ಉಲ್ಹಾಸ ಉಂಟಾಗುವವು.

ಬಹಿರಷ್ಟಾವರಣದ ಭಸಿತವು ಸೋಪಾಧಿಕವೆನಿಸುವದು. ಅಂತರಷ್ಟಾವರಣದ ಭಸಿತವು ನಿರುಪಾಧಿಕವೆನಿಸುವದು. ನಿರುಪಾಧಿಕ ಭಸ್ಮವು ಶಿವನ ತೇಜಸ್ಸು, ಚಿದ್ಭಸ್ಮ ಅಂದರೆ ಜ್ಞಾನ ತೇಜೋ ವಿಶೇಷವಾಗಿದೆ. ಇದನ್ನು ಅರಿತು ಉಪಾಸನೆಯಲ್ಲಿ ಭಸ್ಮವನ್ನು ಪೂಜಿಸಿ ಧರಿಸಿದರೆ ಬಹಿರಂತರಂಗಗಳೆರಡೂ ಪರಿಶುದ್ಧವಾಗುವವು.

"ಹಲವು ಕಾಲ ಕೊಂದ ಕತ್ತಿಯಾದೊಡೇನು ? ಪರುಷ ಮುಟ್ಟಲದೆ ಹೊನ್ನಾಗದೆ ಅಯ್ಯಾ ?

ಲಲಾಟಕ್ಕೆ ವಿಭೂತಿ ಬರೆಯಲ್ಕೆ ಪಾಪ ಪಲ್ಲಟವಾಗದೆ ಕೂಡಲ ಸಂಗಮದೇವಾ ?

ನೀರಿಗೆ ನೈದಿಲೆ, ಸಮುದ್ರಕ್ಕೆ ತೆರೆ, ನಾರಿಗೆ ಗುಣ ಶೃಂಗಾರವಾದಂತೆ, ನಮ್ಮ ಕೂಡಲ ಸಂಗನ ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ" ಮುಂತಾಗಿ ಬಸವಣ್ಣನವರು ವಿಭೂತಿಯ ಮಹತ್ವವನ್ನು ಎತ್ತಿ ಹೇಳಿದ್ದಾರೆ.

ಸೋಪಾಧಿಕ ಭಸ್ಮವು ಐದು ಪ್ರಕಾರವಾಗಿದೆ. ಅವುಗಳನ್ನು ತಯಾರಿಸುವ ವಿಧಾನ, ಪೂಜಾ ಕಾಲದಲ್ಲಿ ಧರಿಸುವ ಸ್ಥಾನಗಳು. ಮುಂತಾದವುಗಳನ್ನು ಬೇರೆ ಹೇಳಬಹುದು.

ರುದ್ರಾಕ್ಷಿ

ಶಿವನು ತ್ರಿಪುರ ದಹನ ಮಾಡಿದಾಗ ಹೊಗೆ ಮುಸುಗಿ, ಅವನ ನೇತ್ರಗಳಿಂದ ಉದುರಿದ ಕಂಬನಿಗಳು ಬೀಜವಾಗಿ ಭೂಮಿಗೆ ಬಿದ್ದು ರುದ್ರಾಕ್ಷ ವೃಕ್ಷಗಳಾದವೆಂದು ಪುರಾಣೋಕ್ತಿ ! ಈ ಅರ್ಥದಲ್ಲಿ ಶೈವರಿಗೆ ಮಹತ್ವದವಾದರೂ, ವೀರಶೈವರಿಗೆ ಪರಶಿವನ ಜ್ಞಾನ ನೇತ್ರದ ಪ್ರತೀಕಗಳೆಂದು ಮಹತ್ವದವಾಗಿವೆ. ಇಷ್ಟ ಲಿಂಗೋ-ಪಾಸನೆಯ ಕಾಲದಲ್ಲಿ ತಾನೂ ಧರಿಸಬೇಕು. ಲಿಂಗಕ್ಕೂ ಧರಿಸಬೇಕು. ರುದ್ರಾಕ್ಷಿ ಮಣಿಗಳ ಜಪಮಾಲೆಯೂ ಇರಬೇಕು. ಆ ಮೂಲಕ ಅಂತರಂಗದಲ್ಲಿ ಜ್ಞಾನದ ಕಣ್ಣು ತೆರೆಯಬೇಕು.

ಶಿವಯೋಗದ ವಿಶೇಷ ಸಾಧಕರು ತಲೆ, ಕಿವಿ, ಕೊರಳು, ಮುಂಗೈಗಳಲ್ಲಿ ಸದಾ ರುದ್ರಾಕ್ಷಿಗಳನು ಧರಿಸುವರು. ರುದ್ರಾಕ್ಷಿಗಳ ಪ್ರಕಾರಗಳು ಅವುಗಳನ್ನು ಧರಿಸುವದರ ಫಲಗಳು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ. ಅದು ಸಾಮಾನ್ಯವಾಗಿ ಎಲ್ಲರಿಗೂ ಅವಶ್ಯವಾಗಿಲ್ಲ.

ಮಂತ್ರ

'ಓಂ ನಮಃ ಶಿವಾಯ' ಇದು ಮಂತ್ರವು. ಲಿಂಗಸ್ವರೂಪವೇ ಮಂತ್ರ-ಸ್ವರೂಪವು ! 'ಓಂ ನಮಃ ಶಿವಾಯ' ಎಂಬ ಶಬ್ದ ಸಮುಚ್ಚಯಕ್ಕೆ ಲಿಂಗವೇ ಅರ್ಥ ! ಶಬ್ದಾರ್ಥಗಳಿಗೆ ನಿತ್ಯ ಸಂಬಂಧವಿರುವಂತೆ ಲಿಂಗ ಮಂತ್ರಗಳಿಗೂ ನಿತ್ಯ ಸಂಬಂಧವಿದೆ.

'ಓಂ' ಇದು 'ನಿಷ್ಕಲ' ಭಾವಲಿಂಗ ಪರವಾಗಿದೆ.
'ನಮಃ ಶಿವಾಯ' ಇದು 'ಸಕಲ' ಇಷ್ಟಲಿಂಗ ಪರವಾಗಿದೆ.
'ಓಂ ನಮಃ ಶಿವಾಯಃ' ಇದು ಸಕಲ ನಿಷ್ಕಲ ಪ್ರಾಣಲಿಂಗ ಪರವಾಗಿದೆ.
ಹೀಗೆ ಲಿಂಗಸ್ವರೂಪಾರ್ಥವೇ ಇದರಲ್ಲಿದೆ.

ಗುರು ದೀಕ್ಷಾಕಾಲದಲ್ಲಿ ಕರಸ್ಥಲಕ್ಕೆ ಲಿಂಗವನ್ನು ಕೊಟ್ಟು, ಮನಸ್ಥಲಕ್ಕೆ ಮಂತ್ರವನ್ನು ಉಪದೇಶಿಸುವನು. ದೇಹದಲ್ಲಿ ಯಾವಾಗಲೂ ಲಿಂಗಧರಿಸಿರುವಂತೆ, ಮನಸ್ಸಿನಲ್ಲಿ ಸದಾ ಶಿವಮಂತ್ರವಿರಬೇಕು.

ಈ ಶಿವಮಂತ್ರದ ಸಾಮಾನ್ಯವಾದ ವಾಚ್ಯಾರ್ಥವು ಶಿವನಿಗೆ ನಮಸ್ಕಾರ ಎಂದಾಗುವದು. ಇದು ಸ್ಥೂಲವಾದ ಅರ್ಥವು. ಆದರೆ ಇದರ ವ್ಯಾಪಕವಾದ ಸೂಕ್ಷ್ಮಾರ್ಥಗಳು ಸಮಗ್ರ ತತ್ವಜ್ಞಾನವನ್ನೇ ಒಳಗೊಂಡಿವೆ. 'ತತ್ವಮಸಿ' 'ಅಹಂಬ್ರಹ್ಮಾಸ್ಮಿ' 'ಶಿವೋಹಂ' ಮುಂತಾದ ಮಹಾವಾಕ್ಯಗಳು ಇದರ ಒಡಲೊಳಗಿನವೇ ಆಗಿವೆ. ಏಕಾಗ್ರ ಚಿತ್ತದಿಂದ ಮಾಡುವ ಈ ಮಂತ್ರದ ನಿತ್ಯಪಠಣವು, ಜೀವನ ಶಿವತ್ವಕ್ಕೆ ತಡೆಯಾಗಿರುವ ಮಲಾವರಣವನ್ನು ಕರಗಿಸುವದು. ಜೀವ ಶಿವರೈಕ್ಯವನ್ನು ಒದಗಿಸುವದು.

'ಪಂಚಮಹಾಪಾತಕಗಳನ್ನು ಮಾಡಿದವನೇ ಒಮ್ಮೆ ಓಂ ನಮಃ ಶಿವಾಯ ಎಂದು ನುಡಿಯೋ, ನಿನ್ನ ದುರಿತಂಗಳು ದೂರಾಗುವವು' ಎಂದು ಅಣ್ಣನವರು ಅನುಕಂಪೆಯಿಂದ ಸಾರಿದ್ದಾರೆ.

ಈ ಮಹಾಮಂತ್ರದ ಅಂಗೋಪಾಂಗಗಳ ಅರ್ಥವನ್ನು ಜಪಿಸುವ ಶಾಸ್ತ್ರೀಯ ವಿಧಾನವನ್ನು ಸಂದರ್ಭಾನುಸಾರವಾಗಿ ತಿಳಿಯಬೇಕು.

× × × × × × × ×

ಹೀಗೆ ಅಷ್ಟಾವರಣ ವಿಷಯಗಳನ್ನು ವಿವರವಾಗಿ ಹೇಳಿ, ಗುರುಗಳು ಲಿಂಗಕ್ಕೆ ತಲೆಬಾಗಿ ಆಯಾಸಗೊಂಡಿದ್ದರಿಂದ ಹಿಂದೆ ದಿಮ್ಮಿಗೆ ಆತು ಕುಳಿತರು.

ಮಂಗಲದ ಜಯಘೋಷ ಮಾಡಿ, ಭಕ್ತರು ನಮಸ್ಕರಿಸಿ ತೆರಳಿದರು.

೧೦. ಬಯಲು ಬಯಲನೆ ಬಯಸಿ ಮಹಾ ಬಯಲಾಯಿತು

ಗುರುನಂಜೇಶ್ವರರ ಶರೀರವು ತೀರ ಹಣ್ಣಾಯಿತು. ವಯಸ್ಸು ಎಪ್ಪತ್ತು; ಬಹಳವೇನೂ ಅಲ್ಲ. ಪ್ರಾಯದಲ್ಲಿ ಆ ದೇಹ ಗಿರಿ ಅರಣ್ಯಗಳ ಸಂಚಾರದಲ್ಲಿ ಸಣ್ಣಾಗಿತ್ತು. ಬಳಿಕ ಭಕ್ತರ ಬುದ್ಧಿಗೆ ಅಂತರ್ಯಕ್ಕೆ ಬೆಳಕು ನೀಡುವದಕ್ಕಾಗಿ ಸಂಸ್ಕರಣ, ಹಿತವಚನ, ಪ್ರವಚನ, ಗಮನಾಗಮನ ಮುಂತಾದ ಅವಿರತ ಶ್ರಮದಲ್ಲಿ ದೇಹಾರೋಗ್ಯವು ಅಲಕ್ಷಿಸಲ್ಪಟ್ಟಿತ್ತು. ಇದಲ್ಲದೆ ಯಾವ ಅಡೆತಡೆಗಳನ್ನೂ ಲೆಕ್ಕಿಸದೆ ಲಿಂಗಕ್ಕಾಗಿ ಮಾಡುವ ನಿಯಮಗಳ ತಪಸ್ಸು ವಾರ್ಧಿಕ್ಯದಲ್ಲಿಯೂ ಕುಂದದೆ ಕಡಿಮೆಯಾಗದೆ ನಡೆದಿತ್ತು. ಅವರ ಆಹಾರವೂ ಕಡಿಮೆಯಾಗಿ ಲಿಂಗಪ್ರಸಾದದ ಮಟ್ಟಿಗೆ ಉಳಿದಿತ್ತು. ಆದರೆ ಅದರೊಡನೆ ಅವರ ಸಮಾಧಿ ಸುಖವು ಅಭಿವೃದ್ಧಿಗೊಂಡಿತ್ತು. ಧ್ಯಾನದಲ್ಲಿ ಮನವು ಲೀನವಾಗುವದರ ಮುಂದೆ ಭಾವವೂ ಬಯಲಾಗುತ್ತಲಿತ್ತು. ವಾಯು ಬಂಧನದಿಂದ ಮಹಾ ಬೆಳಗ ಕಂಡು ಕಣ್ಣು ತೆರೆಯುತ್ತಿದ್ದರು. ಒಟ್ಟಿನಲ್ಲಿ ಶ್ರೀ ಗುರುನಂಜೇಶ್ವರ ಶಿವಯೋಗಿಗಳ ಅಧ್ಯಾತ್ಮಿಕ ಜೀವನವು ಹಂಪಾಗಿ ಸೊಂಪಾಗಿ ಮಾಗಿತ್ತು. ಫಲ ಪರಿಪಕ್ವವಾಗಿತ್ತು. ಅದನ್ನು ಪರಶಿವನು ಎತ್ತಿಕೊಳ್ಳುವ ಸಮಯ ಸನ್ನಿಹಿತವಾಗಿತ್ತು.

ಶಿವಯೋಗಿಗಳು ಭಕ್ತರ ದರ್ಶನಕ್ಕೆ ಹೊರಗೆ ಕೂಡ್ರುವ ವೇಳೆ ಕಡಿಮೆಯಾಗಿದೆ. ಆದರೂ ಬಂದವರ ಯೋಗಕ್ಷೇಮವನ್ನೆಲ್ಲ ವಿಚಾರಿಸದೆ ಇರುತ್ತಿರಲಿಲ್ಲ. ಪ್ರವಚನ ಪುಣ್ಯ ಕಥೆಗಳನ್ನು ಶ್ರವಣ ಮಾಡಿಸುವವನ್ನು ಮಾತ್ರ, ಇತ್ತೀಚೆಗೆ ಸ್ವತಃ ಮಾಡದೆ ಬೇರೆ ಪಂಡಿತರಿಂದ ಮಾಡಿಸುತ್ತಿದ್ದರು. ಅನುಭಾವಿಗಳು ಬಂದಾಗ ತಮ್ಮ ಸಮ್ಮುಖದಲ್ಲಿ ಅನುಭಾವ ಗೋಷ್ಠಿಗಳನ್ನು ಏರ್ಪಡಿಸುತ್ತಿದ್ದರು. ಅವು ನಡೆ ನಡೆಯುತ್ತಿರುವಾಗಲೇ ತಾವು ಬಾಹ್ಯವನ್ನು ಮರೆತು ಅಂತರ್ಮುಖರಾಗಿರುತ್ತಿದ್ದರು. ಹೀಗೊಂದು ವರ್ಷ ಸಂದಿತ್ತು.

ಒಂದು ದಿನ ಶಿವಯೋಗಿಗಳು ರಾತ್ರಿಯ ಪೂಜಾನುಷ್ಠಾನವನ್ನು ಮುಗಿಸಿಕೊಂಡು ಗುರುಮಂದಿರ ಕೋಣೆಯಿಂದ ದಿನದ ಹೊತ್ತಿಗೆ ಹೊರಗೆ ಬರಲಿಲ್ಲ.

ಧ್ಯಾನ ಯೋಗವು ದೀರ್ಘವಾಗಿ ಮುಂದುವರಿದಿತ್ತು. ಪರಮ ಭಕ್ತಿಯ ಸ್ವರೂಪದಲ್ಲಿ ಗುರುನಂಜೇಶ್ವರರ ಪಾರಮಾರ್ಥಿಕ ಜೀವನದಲ್ಲಿ ಸಂಚಾಲಿಕೆಯಾಗಿ ಅವಿತುಕೊಂಡಿದ್ದ ಶಿವ ಶಕ್ತಿಯು, ಕ್ಷಣ ಹೊತ್ತು ಸಾತ್ವಿಕ ಮಾಯೆಯಾಗಿ, ತಾನೇ ವಿರಚಿಸಿದ ಆ ಜೀವನದ ಎಪ್ಪತ್ತು ವರ್ಷಗಳ ಚಿತ್ರಪಟವನ್ನು ಮುಂದಿಟ್ಟುಕೊಂಡಿದ್ದಾಳೆ. ಆ ಸ್ಮರಣೆಯನ್ನು ಗುರುನಂಜೇಶ್ವರರ ಚಿತ್ತ ಭಿತ್ತಿಯ ಮೇಲೆ ಸೂಕ್ಷ್ಮವಾಗಿ ಬರೆಯುತ್ತಿದ್ದಾಳೆ. ಗುರುನಂಜೇಶ್ವರರು ಒಳಗಣ್ಣಿನಲ್ಲಿ ನೋಡುತ್ತಿದ್ದಾರೆ. ಅಲ್ಲಿ ಏನು ಕಾಣುತ್ತಿದೆ ?

'ಬಾಲಕ, ತಂದೆ-ತಾಯಿಗಳ ಲಾಲನೆ ಪಾಲನೆಗಳಿಗೆ, ಸಲುಗೆಯ ಲಲ್ಲೆಗೆ ಎಳಸಲೊಲ್ಲ. ಅವರಿಗೆ ಮುದ್ದು ಮಗುವಾಗಿ ಮೋಹದಲ್ಲಿ ಮುಳುಗಲು ಅಪ್ಪದ ವೀಯಲೊಲ್ಲ. ಲೌಕಿಕದ ಗೌರವಾದರಗಳು ಸೇರವು. ದುರ್ಬಲ ಜೀವಿಗಳಲ್ಲಿ ದಯಾಪರನಾಗಿ ಅವುಗಳ ಸಂಕಟ ಪರಿಹಾರಕ್ಕೆ ಶ್ರಮಿಸುತ್ತಿದ್ದಾನೆ. ಹುಚ್ಚನಂತೆ ಅಲೆಯುತ್ತಿದ್ದಾನೆ. ಜನರು ತನಗೆ ಹುಚ್ಚನೆಂಬುದು ಕಿವಿಗೆ ಬಿದ್ದರೆ ಹಿಗ್ಗುತ್ತಿದ್ದಾನೆ. ಲೋಕದ ಕಣ್ಣಲ್ಲಿ ಹುಚ್ಚರಂತಿರುವ ಸಂತ-ಶರಣರ ಸಂಗ ಮಾಡುತ್ತಾನೆ. ಗುರುಗಳ ಅಡಿಯ ಅಂಗಳದಲ್ಲಿ ಆಡುತ್ತಾನೆ. ಅವರ ಸೂಕ್ತ ಹಿತೋಕ್ತಿಗಳನ್ನು ಆಲಿಸುತ್ತಾನೆ. ತನ್ನ ಎದೆಯ ಬಾಗಿಲು ತೆರೆದು, ಅಲ್ಲಿ ಗುರು ಹೊತ್ತಿಸಿಟ್ಟ ಬೆಳಕಿನಲ್ಲಿ ಓದುತ್ತಾನೆ. ಹೊರಗನ್ನು ನೋಡುತ್ತಾನೆ. ಸಕಲ ಶಾಸ್ತ್ರಗಳ ಸಾರವಾಗಿ ಹರನನ್ನು ಗುರುವನ್ನು ಅರಿಯುತ್ತಾನೆ. ಅವರಲ್ಲಿ ತನ್ನನ್ನು ಕಾಣುತ್ತಾನೆ. ಆ ಬೆಳಕಿನಲ್ಲಿ ನಿಂತು, ಕತ್ತಲೆಯಲ್ಲಿ ಕಷ್ಟಕೋಟಲೆಯಲ್ಲಿ ಬಳಲುತ್ತಿರುವ ಜೀವರನ್ನು ಕಂಡು ಕಳವಳ ಪಡುತ್ತಾನೆ. ಅವರನ್ನು ಎತ್ತಲು ಬಂದ ಪ್ರಬುದ್ಧ ಶಿವಯೋಗಿಯ ಕೈಗೆ ಕೈಗೂಡಿಸಿ ತಾನೂ ಆ ಕ್ಷೇತ್ರದಲ್ಲಿ ಧುಮುಕುತ್ತಾನೆ. ಅವರ ಮಾರ್ಗದರ್ಶನ, ತನ್ನ ಬುದ್ಧಿ-ಜ್ಞಾನಬಲ ಮುನ್ನಡೆಗೆ ಆಧಾರ ! ಇನ್ನೊಬ್ಬ ಜತೆಗಾರ. ಮೂವರೂ ಕಷ್ಟಜೀವಿಗಳ ಹತ್ತಿರ ಸಾರುತ್ತಾರೆ, ಮೈದಡವುತ್ತಾರೆ. ಒಳ್ಳೆಯ ಮಾತು ಆಡುತ್ತಾರೆ. ತತ್ವ ತಿಳಿಸುತ್ತಾರೆ. ನಡೆದು ತೋರಿಸುತ್ತಾರೆ. ತಿಳಿತಿಳಿಸಿ ಹೇಳುತ್ತಾರೆ. ಇದೇ ಅವರ ಕಾಯಕ, ಕರ್ತವ್ಯ ! ಬಹು ಜನರು ಅಸಂಖ್ಯಾಕರು ಬಳ್ಳಿವಿಡಿದು ಬಾಗಿ ಬರುತ್ತಾರೆ. ಬೆಳಕು ಕಾಣುತ್ತಾರೆ. ಈ ತ್ರಿವರ್ಗದ ಘಟನೆ ಒಡೆಯುತ್ತದೆ. ಒಬ್ಬರು ಒಂದೆಡೆ ನಿಲ್ಲುತ್ತಾರೆ. ಇನ್ನೊಬ್ಬರು ಬಯಲಾಗುತ್ತಾರೆ........ ಯಾರು ?........ ಅವರೇ ಸ್ವತಂತ್ರ ಸಿದ್ಧಲಿಂಗೇಶ್ವರರು. ಹೌದು ಕಾಣುತ್ತಾರೆ, ಗುರುತಾಗುತ್ತದೆ. ಅವರು ಬೈಂದ್ವಾತ್ಮಕ ಶರೀರದಿಂದ ಈ ಶಿವಯೋಗಿಯ ಕಾರ್ಯಕಲಾಪಗಳನ್ನು ನಿರೀಕ್ಷಿಸುತ್ತಿದ್ದಾರೆ. ಅವನ ನೆನಹಿನಲ್ಲಿ ಉಳಿದು, ಆತ್ಮಬಲವಾಗಿ ಬೆಂಬಲವೀಯುತ್ತಿದ್ದಾರೆ. ಅಜ್ಞಾನದ ಉಚ್ಚಾಟನೆ, ಸಾತ್ವಿಕ ಜ್ಞಾನದ ಸಂಸ್ಥಾಪನೆ ಇವುಗಳಿಗೆ ಸದಾಯತ್ನ ! ಅದೇ ಕಾಯಕ ! ಆತ್ಮೋನ್ನತಿಯೊಡನೆ ಸಮನಿಸುವ ಸಹಜ

ಕರ್ತವ್ಯ! ಮುಂದಿನ ಚಿತ್ರಗಳು ಒಂದೊಂದಾಗಿ ಮೂಡುತ್ತಿವೆ. ಸಾತ್ವಿಕ ಮಾಯೆ ಮತ್ತಿಷ್ಟು ಪರಿಶುದ್ಧಳಾದಳು. ಅತಿಶುಭ್ರವಾದಳು. ಪರಮ ಭಕ್ತೆಯಾಗಿ ಮಾರ್ಪಟ್ಟಳು. ಅಲ್ಲಿ ತಾನಿದ್ದಾನೆ, ಸ್ವತಂತ್ರ ಸಿದ್ಧಲಿಂಗೇಶ್ವರರಿದ್ದಾರೆ. ಅವರು ಸ್ಪಷ್ಟವಾಗಿ ಕಾಣುತ್ತಾರೆ. ಉಳಿದೆಲ್ಲವೂ ಮರೆಯಾದವು. ಅವರು ಮಾತ್ರ ದೃಢವಾಗಿ ನಿಂತಿದ್ದಾರೆ. ದಿಟ್ಟಿಸಿ ನೋಡುತ್ತಾರೆ. ತುಟಿಗಳು ಅಲುಗಾಡುತ್ತಿವೆ. ಏನೋ ಹೇಳುತ್ತಾರೆ. ಏನು ಅದು ?

"ಗುರುನಂಜೇಶ್ವರ, ಏಳು. ನಿನಗೆ ಈ ಭಕ್ತ ಜನರು ಮಾಡುವ ಪೂಜೆ; ಪ್ರತಿಷ್ಠೆಯ ವೈಭವಗಳು ಎಷ್ಟು ದಿನವಾದರೂ ಸರಿಯವು. ಅದರಲ್ಲಿಯೇ ಮುಳುಗಿರ ಬೇಡ. ಜನಜಂಗುಳಿಯ ಓಕುಳಿಯ ಕಾಟ ಹಿತಕರವೇ ? ತೋಂಟದಾರ್ಯರ ಅವತಾರದ ಮಣಿಹದಲ್ಲಿ ನೀನು ಮಾಡಿದ ಸೇವೆ ಪ್ರಶಂಸನೀಯ, ಅಪ್ರತಿಮ ! ಆದರೆ ಪರಿಣಾಮ ಜನತೆಯ ಮನದ ಮೇಲೆ, ಸ್ಥಿರವಾಗಿ ಉಳಿದೀತೆಂದು ಹೇಳ ಲಾಗುವದಿಲ್ಲ. ಮಾನವರ ಮನಸ್ಸು ಹಾವಸೆ ಹಬ್ಬಿದ ನೀರಿನಂತೆ, ಕೈಯ ಹೊಯ್ಲಿಗೆ ಹಾವಸೆ ಸರಿದು, ತಿಳಿ ನೀರು ಮಿರುಗಿದರೂ, ಹೊಯ್ಲು ತಪ್ಪಿದಾಗ ಮತ್ತೆ ಅದು ಮುಸುಕುವದೇ ! ಕಾಲಕಾಲಕ್ಕೆ ಈ ಪ್ರಯತ್ನ ನಡೆಯಬೇಕು. ಶಿವನು ಅದನ್ನು ನಡೆಸಲು ಸಿದ್ಧನೇ ಇದ್ದಾನೆ. ನಿನಗಿದು ಸಾಕು ! ಲೋಕದಾಟವನ್ನು ಎಷ್ಟು ದಿನ ನೋಡುವೆ ? ಇನ್ನು ಸೊನ್ನಲಿಗೆಯ ಸಿದ್ಧರಾಮ ಶಿವಯೋಗಿಯ ತೆರದಿ ನಿಜ ಸಮಾಧಿಗೆ ಸಲ್ಲಬೇಕು, ತನು-ಮನ-ಭಾವಗಳನ್ನು ಮೀರಿ, ಲಿಂಗದ ನೆನಹಿನಲ್ಲಿ ಲೀನವಾಗಿ, ಉರಿಯುಂಡ ಕರ್ಪುರದಂತೆ ಬಯಲಾಗುವ ಬಯಕೆ ಉತ್ಕಟವಾಗಲಿ!..."

"ಆಗಲಿ, ಯೋಗೀಶ್ವರಾ, ಸಿದ್ಧಲಿಂಗೇಶ್ವರಾ, ನನಗೆ ಬೇಕಾದುದನ್ನೇ ಆದೇಶಿಸಿದೆ, ಇನ್ನು ಮೈಮರೆಯಲಾರೆ" ಎಂದು ಬಯಲು ಮೂರ್ತಿಗೆ ವಂದಿಸುತ್ತಿದ್ದಂತೆ ಆ ಎಲ್ಲವೂ ಅಡಗಿ ಹೋಯಿತು, ಕರಸ್ಥಲದಲ್ಲಿ ಇಷ್ಟ ಲಿಂಗವಾಗಿ ಕಾಣಿಸಿತು, ವಸ್ತ್ರದಲ್ಲಿ ಮಡಗಿ ಕಟ್ಟಿಕೊಂಡು ಹೋದರು. ಅದು ಮೊದಲಾಗಿ ಶಿವಯೋಗಿಯ ಬಾಹ್ಯ ವ್ಯವಹಾರಗಳು ಕಟ್ಟಾಗುತ್ತ ಬಂದವು. ದಿನದಲ್ಲಿ ಯಾವಾಗಲೋ ಒಮ್ಮೊಮ್ಮೆ ಬಾಹ್ಯ ಪ್ರಜ್ಞೆಯಿಂದ ಮಾತನಾಡುತ್ತಿದ್ದರು.

ಒಂದು ದಿನ ಗ್ರಾಮದ ಭಕ್ತರನ್ನೆಲ್ಲ ಕರೆಯ ಹೇಳಿದರು. ಕೂಡಲೇ ಅವರೆಲ್ಲ ಬಂದು ನೆರೆದರು. ಶಿವಯೋಗಿಗಳು ತಲೆಯೆತ್ತಿ ನೋಡಿ ಅವರನ್ನು ಕುರಿತು— "ಸದ್ಭಕ್ತರೇ, ನಮಗಿನ್ನು ಸಮೀಪದಲ್ಲಿ ಶಿವನ ಆಜ್ಞೆ ಬರಲಿದೆ. ಕಲ್ಲು ಗಚ್ಚುಗಳಿಂದ ಸಮಾಧಿಯನ್ನು ಮುಂಚಿತವಾಗಿ ಸಿದ್ಧಗೊಳಿಸಬೇಕು" ಎಂದು ನುಡಿದು ಸುಮ್ಮ- ನಾದರು. ಮರೆದು ನಿಂತವರ ಮೇಲೆ ಮರ ಮುರಿದು ಬಿದ್ದಂತಾಯಿತು. ಭಕ್ತಜನ

ಸಂದೋಹ ಗಾಬರಿಯಾಯಿತು. ಹೀಗೆ ನಮ್ಮ ಕೈ ಬಿಡುವ ಮಾತೇಕೆ ಗುರುದೇವಾ? ನಮ್ಮ ಗತಿಯೇನು ? ಎಂದು ಗೋಳಾಡಿದರು, ಮತ್ತೆ ಮುಖವೆತ್ತಿ ನುಡಿದರು ಶ್ರೀಗಳು :

"ಶಾಂತರಾಗಿ ಕೇಳಿರಿ, ಎಷ್ಟು ದಿನ ಇದ್ದರೂ, ಈ ದೇಹ ಒಂದು ದಿನ ವಂಚಿಸಿ ಬಿಟ್ಟು ಹೋಗುವದೇ ! ಹಿಂದಿನ ಸುಕೃತದ ಫಲದಿಂದ ಇಷ್ಟು ದಿನ ನಿಮ್ಮೊಡನಾಡಿ, ಜನ್ಮ ಸಾರ್ಥಕತೆಗೆ ಯತ್ನಿಸಿದ್ದಾಯಿತು. ದೇಹ ವಿಸರ್ಜನೆಯಾಗಲೇಬೇಕು, ಇದಕ್ಕಾಗಿ ನೀವು ದುಃಖಿಸಬಾರದು. ಇದುವರೆಗೆ ನೀವು ತಿಳಿದುಕೊಂಡುದನ್ನು ಸ್ಮರಿಸಿಕೊಳ್ಳಿರಿ. ಇದೂ ಶುಭವೆಂದು ಭಾವಿಸಿರಿ. ನಮ್ಮ ಇಚ್ಛೆಯನ್ನು ನಡೆಸಿರಿ" ಎಂದರು.

ಭಕ್ತರು ಇದ್ದುದರಲ್ಲಿ ಸಮಾಧಾನ ತಾಳಿ, ಕಲ್ಲು ಗಚ್ಚುಗಳಿಂದ ಶಿವಯೋಗಿ-ಗಳಿಗಾಗಿ ಸಮಾಧಿ ಕಟ್ಟಡವನ್ನು ರಚಿಸತೊಡಗಿದರು.

ಗುರುನಂಜೇಶ್ವರರು ಲಿಂಗೈಕ್ಯರಾಗುವರೆಂಬ ಸುದ್ದಿ ಸುತ್ತಲೂ ವೇಗವಾಗಿ ಹರಡಿತು. ಗ್ರಾಮಾಂತರ ಜನರು ಅವರ ಅಂತಿಮ ದರ್ಶನಕ್ಕಾಗಿ ಗುಳೇಕಟ್ಟಿ ಬಂದಂತೆ ಭರತನೂರಿಗೆ ತೆರಪಿಲ್ಲದೆ ಬಂದರು. ಬೆಳಕು ಅಡಗುವದೇ ಎಂದು ಕಳವಳ ಪಟ್ಟವರೆಷ್ಟೋ ಜನ! ಕಣ್ಣೀರು ಕರೆದವರೆಷ್ಟೋ ಜನ! ಗುರುನಂಜೇಶ್ವರರ ಆಶೀರ್ವಾದದಲ್ಲಿ ನಂಬಿಗೆ ಇಟ್ಟ ದೊರೆ ದೊರೆಗಳೆಲ್ಲರೂ ಬಂದರು. ಮಾತನಾಡದೆ ಮಿಡುಕುತ್ತ ವಂದಿಸಿ ಮೌನವಾಗಿ ಕುಳಿತರು. ಆಗಲೂ ಮುಂದೆ ಹೇಗೆ ಎಂಬ ಭಾವನೆ ಹಲವರ ಮನಸ್ಸಿನಲ್ಲಿ ಸುಳಿಯಿತು. ಸ್ವಾಮಿಗಳು ತಮ್ಮತ್ತ ಗಮನವಿತ್ತಾಗ ಕೆಲವು ಪ್ರಮುಖರು ಮುಂದೆ ಬಂದು ನಮಸ್ಕರಿಸಿ, 'ಗುರುದೇವಾ ಮುಂದೆ ನಮಗೆ ಧರ್ಮಾಚಾರದ ಮಾರ್ಗದರ್ಶನ ಯಾರು ಮಾಡುವರು ?' ಎಂದು ಕೇಳಿದರು.

'ನಿಜ ನಿಜ! ಅದರ ವ್ಯವಸ್ಥೆಯಾಗಬೇಕು. ಬೇಗನೆ ಒಬ್ಬ ಯೋಗ್ಯ ವಟುವನ್ನು ಶೋಧಿಸಿ ತನ್ನಿರಿ. ಅವನಿಗೆ ಮಹೇಶ್ವರ ದೀಕ್ಷೆ ಕೊಟ್ಟು, ಪಟ್ಟಾಧಿಕಾರ ಮಾಡಿಬಿಡೋಣ, ನಮಗೂ ಮಠದ ಬಂಧ ಬಿಟ್ಟಂತಾಗುವದು; ಇಹದ ತಂತು ಹರಿದಂತಾಗುವದು, ನಿಮಗೆಲ್ಲ ಮಂಗಲವಾಗಲಿ" ಎಂದು ಸುಮ್ಮನಾದರು.

ಕೂಡಲೇ ನಿರ್ಮಲ ಮನಸ್ಸಿನ ಸದಭಿಮಾನದ ಭಕ್ತರು ನಾಲ್ಕು ಕಡೆಗೆ ನೋಡಿ, ಸದ್ವಂಶದಲ್ಲಿ ಹುಟ್ಟಿದ ಸುಗುಣಿ ಸುಂದರನಾದ ವಟುವನ್ನು ಆಯ್ಕೆಮಾಡಿ, ತಾಯಿ-ತಂದೆಗಳ ಒಪ್ಪಿಗೆ ಪಡೆದು ಕರೆದು ತಂದರು. ಲಿಂಗಗೌಡ, ರಾಮರೆಡ್ಡಿ-ಯವರು ಮೊದಲಾಗಿ ಎಲ್ಲ ಭಕ್ತರು ಆ ಮಗುವಿನ ಗುಣಶೀಲವನ್ನು ಅರಿತುಕೊಂಡು,

ಒಪ್ಪಿಗೆ ನೀಡಿದರು. ಯಥಾ ರೀತಿಯಂತೆ ಮಹೇಶ್ವರ ದೀಕ್ಷಾ ಸಂಸ್ಕಾರಗಳು ನಡೆದವು. ಗುರುನಂಜೇಶ್ವರರು ಆ ವಟುವಿಗೆ 'ಗುರುಶಾಂತ'ನೆಂದು ಹೊಸ ಹೆಸರಿಟ್ಟು ಉತ್ಸವ ನಡಿಸಿ, ಪಟ್ಟಾಧಿಕಾರವನ್ನು ಕೊಟ್ಟರು. ಇದೆಲ್ಲವನ್ನು ಜರುಗಿಸಿದ ಬಳಿಕ, ಭಕ್ತಾದಿಗಳನ್ನು ಕುರಿತು, ಪರಮ ಶಿವಯೋಗಿಗಳು : 'ಮಹಾ ಜನರೆ, ನಿಮ್ಮೆಲ್ಲರ ಇಚ್ಛೆಯಂತೆಯೇ ಈ ಮರಿ ಗುರುಶಾಂತದೇವರನ್ನು ನಿಮ್ಮ ಕೈಗೆ ಕೊಟ್ಟಿದ್ದೇನೆ. ನೀವೆಲ್ಲರೂ ಸದ್ಭಕ್ತರು. ನಿಮ್ಮಲ್ಲಿಯೇ ಶಿವನು ವಾಸವಾಗಿದ್ದಾನೆ. ಭಕ್ತರಿಂದಲೇ ಗುರು-ಲಿಂಗ-ಜಂಗಮ, ಭಕ್ತರಿಲ್ಲದಿದ್ದರೆ ಅವೇನೂ ಅಲ್ಲ. ನೀವೇ ಈ ಮರಿಗೆ ಶಿಕ್ಷಣ ಕೊಡಿಸಿರಿ. ಅವನ ಜ್ಞಾನಾಭಿವೃದ್ಧಿಗೊಳಿಸಿರಿ. ಶರಣೆ ಶಿವಬಸಮ್ಮ ಸ್ಥಾಪಿಸಿ ನಡಿಸುತ್ತ ಬಂದ ದಾಸೋಹವು ನಿರಂತರ ಮುಂದುವರಿಯುವಂತೆ ನೋಡಿ ಕೊಳ್ಳಿರಿ. ಪ್ರಸಾದ ಮಹತ್ವವನ್ನು ಮನಗಾಣಿಸಿಕೊಂಡು, ಮಠದ ಘನತೆ-ಗೌರವಗಳನ್ನು ಕಾಪಾಡಿಕೊಂಡು, ಶಿವನ ಕೃಪೆಗೆ ಪಾತ್ರರಾಗಿರಿ, ಶಿವಮಸ್ತು" ಎಂದು ಆಶೀರ್ವಚನ ನೀಡಿದರು.

ಜನರು ಜಯಘೋಷ ಮಾಡಿ, ಈ ನುಡಿಗಳನ್ನು ಸ್ವಾಗತಿಸಿದರು.

ಕರಣ ವೃತ್ತಿಗಳಡಗಿದ ಮೇಲೆ ದೇಹ ಎಷ್ಟುದಿನ ಉಳಿದೀತು ? ಒಮ್ಮೆ ಕಿಂಚಿತ್ ಮಿಂಚಿದ ಬಾಹ್ಯಪ್ರಜ್ಞೆಯಿಂದ ಹತ್ತಿರಿದ್ದವರನ್ನು ಗುರ್ತಿಸಿ, ಇನ್ನು ಮೂರು ದಿನಗಳಲ್ಲಿ ನಾವು ಲಿಂಗೈಕ್ಯರಾಗುವೆವೆಂದು ಅಪ್ಪಣೆ ಕೊಡಿಸಿದರು. ಬಳಿಕ ಸ್ನಾನಮಾಡಿ, ಸಮಾಧಿಯಲ್ಲಿ ಲಿಂಗಾನುಷ್ಠಾನದಲ್ಲಿ ಕುಳಿತು, ಬಾಗಿಲು ಮುಚ್ಚಿಸಿಕೊಂಡು ಸಮಾಧಿಸ್ಥರಾದರು. ಅವರ ಸೂಚನೆಯಂತೆ ಮೂರನೆಯ ದಿನ ಬಾಗಿಲು ತೆರೆದು ನೋಡಿದಾಗ, ಅವರ ಪಾರ್ಥಿವ ಶರೀರವು ಭಸ್ಮದ ಬೃಹತ್ತಾದ ಘಟ್ಟಿಯಂತೆ ಕಂಡಿತಂತೆ ! ಶಿವಯೋಗಿಗೆ ತಕ್ಕ ವಿಧಾನದಂತೆ ಅಂತ್ಯಕ್ರಿಯೆ ನಡಿಸಿ, ಶಾಶ್ವತವಾಗಿ ಸಮಾಧಿಯನ್ನು ಮುಚ್ಚಿದರು. ಬೆಳಕು ಅಡಗಿತು. ಆಗೊಮ್ಮೆ ನಾಡಿನಲ್ಲಿ ಶೋಕದ ಹೊನಲು ಹರಿಯಿತು. ಅವರ ಅಂತಸ್ತೇಜದ ಪ್ರಭಾವ ಭರತನೂರಲ್ಲಿ ಇಂದಿಗೂ ಇದೆ. ನಂಬಿದ ಭಾವುಕರ ಅನುಭವಕ್ಕೆ ಬರುತ್ತಲಿದೆ.

೧೧. ಮುನ್ನಡೆದ ಮಠದ ಹಿರಿಮೆ

ಶ್ರೀಗುರು ನಂಜೇಶ್ವರರು ಆಶ್ವಿಜ ಶುದ್ಧ ಪಂಚಮಿ ಸೋಮವಾರ ಲಿಂಗೈಕ್ಯರಾದರು. (ಕ್ರಿ. ಶ. ೧೫೫೦ ?). ಅವರ ತಪೋಭೂಮಿ ಭರತನೂರು. ಅವರ ಗದ್ದುಗೆಯ ಪ್ರಭಾವದಲ್ಲಿ ಭೂತ ಚೇಷ್ಟೆಗಳಿಲ್ಲ. ಅದು ನಂಬಿದ ಭಕ್ತರಿಗೆ ಶಾಂತಿ ಸುಧೆಯನ್ನು ಎರೆಯುತ್ತಿದೆ, ಸದಾ ಮಂಗಲಕರವಾಗಿದೆ. ಶ್ರೀ ಗುರು ನಂಜೇಶ್ವರರು ತಮ್ಮ ಉತ್ತರಾಧಿಕಾರಿ ವಟುವಿಗೆ 'ಗುರುಶಾಂತ' ಎಂದು ನಾಮಕರಣ ಮಾಡಿ ಲಿಂಗೈಕ್ಯರಾದರೆಂಬಲ್ಲಿಗೆ ಅವರ ಚಾರಿತ್ರಿಕ ಪುರಾಣ ಮುಕ್ತಾಯಗೊಳ್ಳುತ್ತಿದೆ. ಈ ಪುರಾಣವನ್ನು ಪರಿಶೀಲಿಸಿ, ಸಂಪಾದಿಸಿದ ಡಾ. ವ್ಹಿ. ಶಿವಾನಂದರು ಈ ಪುರಾಣದ ಸಾರಾಂಶವನ್ನು ಒಂದು ಚಿಕ್ಕ ಪುಸ್ತಿಕೆಯಾಗಿ ಬರೆದಿದ್ದಾರೆ. ಪುರಾಣದೊಡನೆ ಅದೂ ಪ್ರಕಟವಾಗಿದೆ. ಅದರ ಕೊನೆಯಲ್ಲಿ ಗುರುನಂಜೇಶ್ವರ ಪೀಠ ಪರಂಪರೆಯ ಸ್ವಾಮಿಗಳ ಹೆಸರಿನ ಒಂದು ಪಟ್ಟಿಯನ್ನು ಸೇರಿಸಿದ್ದಾರೆ. ಅದು ಹೀಗಿದೆ :

೧) ಶ್ರೀ ಗುರುನಂಜೇಶ್ವರ ಶಿವಯೋಗಿ, ಮೂಲಕರ್ತೃ
(ಕ್ರಿ. ಶ. ೧೪೮೦–೧೫೫೦)
೨) ಶ್ರೀ ಮರಿ ಗುರುನಂಜೇಶ್ವರರು.
೩) ಶ್ರೀ ಸಿದ್ಧಲಿಂಗೇಶ್ವರರು.
೪) ಶ್ರೀ ಚೆನ್ನಬಸವ ಸ್ವಾಮಿಗಳು (ಇವರ ಸಮಾಧಿ ನಲ್ಗೊಂಡ (ಆಂಧ್ರ ಪ್ರದೇಶ) ಜಿಲ್ಲೆಯ ನಾಗರಗಡ್ಡೆಯಲ್ಲಿದೆ.)
೫) ಶಿವಬಸವ ಸ್ವಾಮಿಗಳು.
೬) ಶ್ರೀ ಸಿದ್ಧರಾಮ ಸ್ವಾಮಿಗಳು.
೭) ಶ್ರೀ ಸಂಗನಬಸವ ಸ್ವಾಮಿಗಳು.
೮) ಶ್ರೀ ಮುರುಘೇಂದ್ರ ಸ್ವಾಮಿಗಳು.
೯) ಶ್ರೀ ಮ. ನಿ. ಪ್ರ ಸ್ವ. ಗುರುನಂಜೇಶ್ವರ ಸ್ವಾಮಿಗಳು.

ಈಗಿನವರು. ಇದರಲ್ಲಿ ಎರಡನೆಯವರ ಹೆಸರು ಮರಿ ಗುರುನಂಜೇಶ್ವರರು ಎಂಬುದಾಗಿ ಇದೆ. ಆದರೆ ಕರ್ತೃ ಶಿವಯೋಗಿಗಳು ತಮ್ಮ ಉತ್ತರಾಧಿಕಾರಿ ವಟುವಿಗೆ 'ಗುರುಶಾಂತ' ಎಂಬ ಹೆಸರಿಟ್ಟುದನ್ನು ಪುರಾಣದಲ್ಲಿ ಹೇಳಲಾಗಿದೆ. ಹಾಗಾದರೆ, 'ಗುರುಶಾಂತಸ್ವಾಮಿ' ಈ ಹೆಸರಿಗೆ ಬದಲಾಗಿ, 'ಮರಿ ಗುರುನಂಜೇಶ್ವರ ಸ್ವಾಮಿ' ಎಂದು ಹೆಸರು ಧರಿಸಲಾಗಿರಬಹುದು. ಇದು ಯಾರಿಂದ ಯಾವಾಗ, ಏಕೆ ಬದಲಿಸಲ್ಪಟ್ಟಿತೆಂಬುದು ತಿಳಿಯುವದಿಲ್ಲ. ಅಥವಾ ಗುರುಶಾಂತ ಸ್ವಾಮಿಗಳು ಕೂಡಲೆ ಅಧಿಕಾರ ಬಿಟ್ಟುಕೊಟ್ಟಿದ್ದರೆ, ಇಲ್ಲವೆ ಲಿಂಗೈಕ್ಯರಾಗಿದ್ದರೆ, ಬೇಗನೆ ಬೇರೆ ನಿಯೋಜಿಸಲ್ಪಟ್ಟವರು ಮರಿ ಗುರುನಂಜೇಶ್ವರರಾಗಿರಬಹುದು ಎಂದು ಊಹಿಸಲೂ ಅವಕಾಶವಿದೆ.

ಮೇಲಿನ ಸ್ವಾಮಿಗಳ ಹೆಸರಿನ ಪಟ್ಟಿಯನ್ನು ಮಠದಲ್ಲಿಯ ಅಧಿಕೃತ ಸ್ಮಾರಕ-ಗಳು ಮತ್ತು ಹೇಳಿಕೆಗಳ ಆಧಾರದಿಂದ ಸಿದ್ಧಗೊಳಿಸಲ್ಪಟ್ಟಿದೆ. ಆದ್ದರಿಂದ ಯಾರೇ ಆಗಲಿ, ಹೇಗೆ ಆಗಲಿ, ಶ್ರೀ ಗುರುನಂಜೇಶ್ವರ ಶಿವಯೋಗಿಗಳ ತರುವಾಯದ-ಅಂದರೆ ಎರಡನೆಯ-ಪೀಠಾಧಿಪತಿಗಳು ಮರಿ ಗುರುನಂಜೇಶ್ವರ ಎಂಬುದನ್ನು ಖಚಿತವಾಗಿ ತಿಳಿಯಬೇಕು. ಇವರು ಮತ್ತು ಇವರ ಮುಂದಿನ ಸಿದ್ಧಲಿಂಗ ಸ್ವಾಮಿಗಳ ಸಂಬಂಧದಲ್ಲಿ ಹೆಚ್ಚಿನದೇನೂ ಗೊತ್ತಾಗುವದಿಲ್ಲ. ಕರ್ತೃ ಶಿವಯೋಗಿಗಳ ಕೀರ್ತಿಯಿಂದ ಪ್ರಭಾವಿತರಾದ ಇವರು ಧರ್ಮೋಪದೇಶ ಕಾರ್ಯವನ್ನು ಎಡೆಬಿಡದೆ ನಡೆಸಿ, ಮಠದ ಹಾಗು ಕರ್ತೃಗದ್ದುಗೆಯ ಗೌರವವನ್ನು ಹೆಚ್ಚಿಸಿದರು. ೪ನೇಯವರಾದ ಶ್ರೀ ಚೆನ್ನಬಸವ ಸ್ವಾಮಿಗಳು ಪ್ರಾಂತದಲ್ಲೆಲ್ಲ ಸಂಚರಿಸುತ್ತ ಪರಂಪರಾಗತ ಧರ್ಮಾಭಿವೃದ್ಧಿಯ ಕಾರ್ಯವನ್ನು ಇನ್ನೂ ಹೆಚ್ಚು ವ್ಯಾಪಕವಾಗಿ ನಡೆಸಿದ್ದಾರೆ. ಅವರು ಸಂಚಾರದಲ್ಲಿರುವಾಗಲೇ ಲಿಂಗೈಕ್ಯರಾದ್ದರಿಂದ ಅವರ ಸಮಾಧಿ ನಲಗೊಂಡ ಜಿಲ್ಲೆಯ (ಆಂಧ್ರ ಪ್ರದೇಶ) ನಾಗರಗಡ್ಡೆಯಲ್ಲಿದೆ. ಆರನೆ-ಯವರಾದ ಸಿದ್ಧರಾಮ ಸ್ವಾಮಿಗಳು ತಪೋ ಬಲಿಷ್ಠರಾದುದರಿಂದ ವಾಕ್ಸಿದ್ಧಿಯನ್ನು ಪಡೆದಿದ್ದರು. ಮಠದಲ್ಲಿ ಪರಂಪರಾಗತವಾಗಿ. ಕರ್ಣೋಪಕರ್ಣವಾಗಿ ಕೇಳುತ್ತ ತಿಳಿಯುತ್ತ ಬಂದಿದ್ದ, ಕರ್ತೃ ಗುರುನಂಜೇಶ್ವರರ ದಿವ್ಯ ಜೀವನದ ಸಂಗತಿಗಳನ್ನು ಕುರಿತು ಒಂದು ಪುರಾಣ ಕಾವ್ಯವನ್ನು ರಚಿಸಬೇಕೆಂಬುದು ಇವರ ಉತ್ಕಟ ಇಚ್ಛೆಯಾಗಿತ್ತು. ಪಂಡಿತರೂ ಕವಿಗಳೂ ಆದ ತಮ್ಮ ಮರಿದೇವರೂ ಆದ ಶ್ರೀ ಸಂಗನಬಸವ ಸ್ವಾಮಿಗಳಿಗೆ ಆ ಕಾರ್ಯವನ್ನು ವಹಿಸಿಕೊಟ್ಟರು. ಕೃತಿ ಕೈಗೆ ಬರುವದರೊಳಗಾಗಿ ಸಿದ್ಧರಾಮ ಸ್ವಾಮಿಗಳು ಲಿಂಗೈಕ್ಯರಾದರು. ಗುರುವಿನ ಆದೇಶವನ್ನು ಶಿರದಲ್ಲಿ ಧರಿಸಿ ಶ್ರೀ ಸಂಗನಬಸವ ಸ್ವಾಮಿಗಳು ರಚಿಸಿದ ಪುರಾಣವೇ ಪ್ರಸ್ತುತ ಗ್ರಂಥಕ್ಕೆ ಮುಖ್ಯಾಧಾರವಾಗಿದೆ. ಈ ಕವಿ ಸ್ವಾಮಿಗಳು ತಮ್ಮ ಪೂರ್ವದ ಪೀಠಾಧಿಪತಿಗಳಲ್ಲಿ ಅಪಾರ ನಿಷ್ಠೆಯುಳ್ಳವರು, ಜ್ಞಾನಿಗಳು, ಸುಹೃದಯರು,

ಆದುದರಿಂದಲೇ ಅವರಿಗೆ ತತ್ವ ಕಾವ್ಯದ ಕಲೆ ಕೈಗೂಡಿತ್ತು. ಹೀಗೆ ಒಂದಿಲ್ಲೊಂದು ರೀತಿಯಿಂದ ಭರತನೂರ ವಿರಕ್ತಮಠದ ಶಿವಯೋಗಿಗಳು ಕರ್ತೃ ಗುರುನಂಜೇಶರ ದಿವ್ಯ ಪ್ರಭೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಅಂತೆಯೇ ಆ ಮಹಾ ಮಹಿಮರ ಮಹಿಮೆಗಳು ಅವರ ಗದ್ದುಗೆಯ ಮೂಲಕ, ನಂಬಿ ನಡೆದುಕೊಳ್ಳುತ್ತಿರುವ ಭಕ್ತರಿಗೆ ವ್ಯಕ್ತವಾಗುತ್ತ ಬಂದಿವೆ.

— ಸದ್ಯದ ಶ್ರೀಗಳು —

ಇನ್ನು ಈಗ ನಮಗೆ ಪ್ರತ್ಯಕ್ಷವಾಗಿ ದರ್ಶನವಿತ್ತು ಮಹದಾನಂದವನ್ನು ನೀಡುತ್ತಿರುವ ಈಗಿನ ಶ್ರೀಗಳು ಒಂಭತ್ತನೆಯ ಅಧಿಪತಿಗಳು, ಕರ್ತೃ ಶಿವಯೋಗಿಗಳ 'ಗುರುನಂಜೇಶ್ವರ' ಎಂಬ ಹೆಸರೇ ಇವರಿಗಿದೆ. ಈ ಶ್ರೀ ಮ. ನಿ. ಪ್ರ. ಸ್ವ. ಗುರುನಂಜೇಶ್ವರ ಸ್ವಾಮಿಗಳ ಬಗೆಗೆ ನಾಲ್ಕು ಮಾತು ಹೆಚ್ಚಿಗೆ ಬರೆಯುವದು ಉಚಿತವೂ ಅಗತ್ಯವೂ ಆಗಿದೆ. ಇವರು ಉನ್ನತ ವ್ಯಕ್ತಿತ್ವವುಳ್ಳ ಮಹಾಸ್ವಾಮಿಗಳು, ತಮ್ಮ ಮೂಲ ಕರ್ತೃವಿನಂತೆ ಮಹದ ಬೆಳಗನ್ನೇ ಬೆಳಗುತ್ತಿದ್ದಾರೆ.

ಬೆಳಗಾವಿ ಜಿಲ್ಲೆಯ ಅಥಣಿಯ ಹತ್ತಿರದ ಕೊಕಟನೂರ ಮಹೇಶ್ವರ ಮನೆತನದ ವೀರಯ್ಯಸ್ವಾಮಿ ಮತ್ತು ಲಿಂಬೆಕ್ಕನವರು ಇವರ ತಂದೆ-ತಾಯಿಗಳು. ವೀರಯ್ಯ-ನವರು ಕ್ರಿಯಾಶೀಲರು, ಅನುಭಾವಿಗಳು, ಪ್ರಾಸಾದಿಕರೂ ಆಗಿದ್ದರು. ದಂಪತಿಗಳು ಸಾತ್ವಿಕತೆಯ ಬಾಳನ್ನು ಬಾಳುತ್ತಿದ್ದರು. ಇವರ ಪುಣ್ಯೋದರದಲ್ಲಿ ಶಾ. ಶ. ೧೮೩೪ (ಕ್ರಿ. ಶ. ೧೯೧೨), ಆಶ್ವಿನ ಶು. ಪ್ರತಿಪದೆಯಂದು ಜನಿಸಿ ಬಂದ ಗುರುನಂಜೇಶ್ವರ ಶಿವಯೋಗಿಗಳು ಬಾಲ್ಯದಲ್ಲಿಯೇ ಸತ್ಯಶುದ್ಧ ಆಚಾರ-ವಿಚಾರಗಳಲ್ಲಿ ಆಸಕ್ತರಾಗಿದ್ದರು. ಗುರುಲಿಂಗಜಂಗಮರಲ್ಲಿ ಭಕ್ತಿ, ಗುರುಹಿರಿಯರಲ್ಲಿ ವಿಧೇಯತೆ, ವಿದ್ಯಾ ವ್ಯಾಸಂಗದಲ್ಲಿ ಉತ್ಸುಕತೆ, ವಿನಯ, ಪರಹಿತ ಚಿಂತನೆ ಮುಂತಾದ ಸದ್ಗುಣಗಳು ಆಗಲೇ ಕಾಣಿಸಿಕೊಂಡವು. ತಂದೆಯವರ ಹತ್ತಿರದಲ್ಲಿಯೇ ಪ್ರಾಥಮಿಕ ಶಿಕ್ಷಣವಾದ ಬಳಿಕ, ಅಥಣಿಯ ಪರಮ ನಿರಂಜನ ಮುರಘೇಂದ್ರ ಮಹಾ ಶಿವಯೋಗಿಗಳ ಕೃಪೆಗೆ ಪಾತ್ರರಾಗಿದ್ದ, ಗಚ್ಚಿನ ಮಠದ ಸಿದ್ಧಲಿಂಗ ಸ್ವಾಮಿಗಳಲ್ಲಿ ಸಂಸ್ಕೃತವನ್ನು ಕಲಿತರು. ಮುಂದೆ ಬಳ್ಳಾರಿಯ ಪಂಡಿತ ಬಸವರಾಜ ಶಾಸ್ತ್ರಿಗಳವರಲ್ಲಿ ವೈದ್ಯಕೀಯವನ್ನೂ, ಹರಪನಹಳ್ಳಿ ಪಾಠಶಾಲೆಯಲ್ಲಿ ಜ್ಯೋತಿಷ್ಯವನ್ನೂ ಕಲಿತರು. ಶ್ರೀಗಳ ವಿನಯ-ವ್ಯವಧಾನಗಳು ವಿದ್ಯಾ ಸಂಪಾದನೆಗೆ ಸಹಾಯಕವಾಗಿದ್ದವು. ಎಲ್ಲ ಗುರುಗಳಿಗೆ ಅಚ್ಚುಮೆಚ್ಚಿನ ವಿದ್ಯಾರ್ಥಿಗಳಾಗಿರುತ್ತಿದ್ದರು.

ಕಲಬುರ್ಗಿ ಜಿಲ್ಲೆ, ಚಿಂಚೋಳಿ ತಾಲೂಕಿನ ರಟಗಲ್ಲಿನ ಶ್ರೀ ನಿ. ಪ್ರ. ಸ್ವ. ಮುರಘೇಂದ್ರ ಸ್ವಾಮಿಗಳು ಪೂರ್ವಾಶ್ರಯದಲ್ಲಿ ಅಥಣಿಯ ಪ್ರದೇಶದವರೇ ಆಗಿದ್ದರು. ಆ ಸುಳುವಿನಿಂದ ಗುರುನಂಜೇಶ್ವರರು ರಟಗಲ್ಲಿಗೆ ಬಂದು, ಶ್ರೀ ಮುರುಘೇಂದ್ರ ಸ್ವಾಮಿಗಳಿಗೆ ಶರಣಾಗತರಾದರು. ಅವರು ಕರುಣೆ ತೋರಿ, ಇವರ ಆಧ್ಯಾತ್ಮ ಗುರುಗಳಾದರು. ಅವರ ಸನ್ನಿಧಿಯಲ್ಲಿ ಗುರುನಂಜೇಶ್ವರರು ವೇದಾಗಮ ಶಾಸ್ತ್ರಗಳ ಜ್ಞಾನಮಾಡಿಕೊಂಡರು. ವಚನ ಸಾಹಿತ್ಯದ ವ್ಯಾಸಂಗ ಮಾಡಿದರು. ಜಪ-ತಪ-ಲಿಂಗಾರ್ಚನೆಗಳ ಅನುಷ್ಠಾನದಲ್ಲಿ ಅಖಂಡವಾಗಿ ಮುಂದುವರಿದರು. ಪ್ರೌಢವಯಸ್ಕರಾದರು; ತೇಜೋಮೂರ್ತಿಗಳಾದರು.

ಇದೇ ಕಾಲಕ್ಕೆ ಭರತನೂರ ಮಠದ ಎಂಟನೆಯ ಅಧಿಪತಿಗಳಾದ, ಶ್ರೀ ಮುರುಘೇಂದ್ರ ಸ್ವಾಮಿಗಳು ಲಿಂಗೈಕ್ಯರಾದರು. ಅವರು ತಮ್ಮ ಉತ್ತರಾಧಿಕಾರಿಯನ್ನು ನೇಮಕಮಾಡಿಕೊಂಡಿರಲಿಲ್ಲ. ಸಿಂಹ ಪೀಠವು ತೆರವಾಗಿದ್ದಿತು. ಭರತನೂರ ಮಹಾಜನರು, ಸಮೀಪದಲ್ಲಿಯೇ ರಟಗಲ್ಲಿನ ಮುರುಘೇಂದ್ರ ಶಿವಯೋಗಿಗಳ ಸನ್ನಿಧಿಯಲ್ಲಿರುವ ಈ ಪ್ರೌಢವಟುವಿನ ಶಾಸ್ತ್ರಪಾಂಡಿತ್ಯ, ತಪೋನಿಷ್ಠೆ ಹಾಗು ಸದ್ಗುಣಗಳಿಗೆ ಮೊದಲೇ ಮಾರು ಹೋಗಿದ್ದರು. ಆ ಸಜ್ಜನ-ಸದ್ಭಕ್ತರು ಹಾಗು ಕೋಡಲಿಯ ರಾಮಲಿಂಗರೆಡ್ಡಿ ದೇಶಮುಖರು, ಚಿತ್ತಾಪುರದ ರೇಶ್ಮಿ ಕಲ್ಲಪ್ಪನವರು, ಹೊಸಹಳ್ಳಿ ರಾಜಾಪುರಗಳ ಪ್ರಮುಖರು ಸೇರಿ, ಇವರನ್ನು ಭರತನೂರ ಗುರುನಂಜೇಶ್ವರ ಮಠಕ್ಕೆ ಒಡೆಯರನ್ನಾಗಿ ಮಾಡಿದರು. ರಟಗಲ್ಲಿನ ಮುರುಘೇಂದ್ರ ಸ್ವಾಮಿಗಳ ನೇತೃತ್ವದಲ್ಲಿ, ಕಲಬುರ್ಗಿಯ ತೆಗ್ಗಿನ ಮಠದ ಶ್ರೀ ವಿರೂಪಾಕ್ಷ ಸ್ವಾಮಿಗಳಿಂದ ಇವರಿಗೆ ಪೀಠಾಧಿಕಾರದ ಷಟ್‌ಸ್ಥಲೋಪದೇಶವಾಯಿತು. ಭರತನೂರ ಪ್ರದೇಶದ ಜನರು ಸಂತೃಪ್ತರಾದರು.

ಶ್ರದ್ಧೆ-ನಿಷ್ಠೆಗಳು ಮಾಯವಾಗಿ, ಚಿಕಿತ್ಸಕ ಬುದ್ಧಿ ಬೆಳೆಯುತ್ತಿರುವ ಈ ಆಧುನಿಕ ಯುಗದಲ್ಲಿಯೂ ತಮ್ಮ ದರ್ಶನ-ಸಂಭಾಷಣೆಗಳಿಂದ, ಸತ್ಕ್ರಿಯಾನಿಷ್ಠೆಯಿಂದ ಜನರಲ್ಲಿ ಭಕ್ತಿಯ ಭಾವನೆಯನ್ನು ಚಿಮ್ಮಿಸುತ್ತಿರುವ ಶ್ರೀಗುರು ನಂಜೇಶ್ವರರು ಭರತನೂರಿಗಷ್ಟೇ ಅಲ್ಲದೆ ಕಲ್ಯಾಣವಲಯದಲ್ಲಿ ಇಂದಿನ ಚೈತನ್ಯಮೂರ್ತಿಯಾಗಿದ್ದಾರೆ. ಇವರು ಶಿವಯೋಗ ಮಾರ್ಗದಲ್ಲಿ ಬಲ್ಲಿದರೆಂಬದಕ್ಕೆ ಅವರು ಮಾಡಿದ ಅನುಷ್ಠಾನಗಳೇ ಸಾಕ್ಷಿ! 'ಕಾಯಬಲಿದೊಡೆ ಮಾಯೆ ಬಲಿವುದು' ಎಂಬ ಅಲ್ಲಮಪ್ರಭುಗಳ ವಾಣಿಯಂತೆ ಶ್ರೀಗಳವರು ಅನೇಕ ಸಲ ಕಠೋರ ತಪಸ್ಸನ್ನಾಚರಿಸಿ, ಸಕಲ ಕರಣೇಂದ್ರಿಯಗಳನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿದ್ದಾರೆ. ಇಂತಹ ತಪೋನುಷ್ಠಾನಗೈಯಲು ಯಾವಾಗ ಅಂತಃಪ್ರೇರಣೆಯಾಗುವದೋ ಆವಾಗ ಸಿದ್ಧರಾಗುತ್ತಾರು. ಶಿವಯೋಗ ಸಾಧನೆಯನ್ನು ಕಟಿಬದ್ಧವಾಗಿ ಯಾವ ಸ್ಥಳದಲ್ಲಿ

ನಡೆಸಬೇಕೆಂದು ಮನಸ್ಸಿನಲ್ಲಿ ಮೂಡಿ ಬರುವದೋ ಅಲ್ಲಿಗೆ ತೆರಳುವರು. ಗುಹೆ-ಗಂಹರಗಳು, ಪೂರ್ವದ ಮಹಾಪುರುಷರಿಂದ ಪುನೀತವಾದ ಕ್ಷೇತ್ರಸ್ಥಳಗಳು, ಪ್ರಶಾಂತ ದೇವಸ್ಥಾನಗಳಲ್ಲಿಯ ನಿರಾತಂಕ ಮಂದಿರಗಳು, ನಿಸರ್ಗ ವೈಭವದ ಎಡೆಗಳು ಇಂತಹವು ಇವರ ತಪಸ್ಸಾಧನೆಯ ಸ್ಥಾನಗಳು. ಇದುವರೆಗೆ ಶ್ರೀ ಗುರುನಂಜೇಶ್ವರ ಶಿವಯೋಗಿಗಳು ಇಂತಹ ಹದಿನೆಂಟು ಸ್ಥಳಗಳಲ್ಲಿ ಅನುಷ್ಠಾನ ಗೈದಿದ್ದಾರೆ. ಪ್ರತಿಯೊಂದು ಅನುಷ್ಠಾನವು ೪೧ ದಿವಸ ನಡೆಯುತ್ತದೆ.

ಪೆಂಚಿನಪಳ್ಳಿಯ ನಿರ್ಜನ ಗುಹೆ (ತಾ-ಚಿಂಚೋಳಿ), ಸಹ್ಯಾದ್ರಿಯ ಅಂಚಿನ ಭೋಗಲಿಂಗೇಶ್ವರ ಬೆಟ್ಟ, ಮುಗ್ಗಿ (ಮನಿ) ಯ ರಾಮಲಿಂಗೇಶ್ವರ ಬೆಟ್ಟ, ಹೈದರಾಬಾದ ಬಳಿಯ ಶಮನಾಬಾದದ ವೈರಾಗ್ಯ ಚೆನ್ನಬಸವಮಠ, ಕೊಕಟನೂರು, ಕೊಲ್ಲಾಪುರ, ಕೊಳ್ಳಿ (ತಾ-ಸೇಡಂ), ಶ್ರೀಶೈಲದ ಘಂಟಾಮಠ, ಬೀರನಳ್ಳಿ (ತಾ-ಚಿಂಚೋಳಿ), ಬಿಜನಹಳ್ಳಿ (ತಾ-ಸೇಡಂ) ಗುಹೇಶ್ವರ ಗಡ್ಡೆ (ತಾ-ಜಮಖಂಡಿ), ಮುಂತಾದವು ಶ್ರೀಗಳು ಅನುಷ್ಠಾನ ಗೈದ ಕೆಲವು ಸ್ಥಳಗಳು. ಇದಲ್ಲದೆ ಸಾವಳಗಿಯ ತೋಟದಲ್ಲಿ ಮೂರು ನಿರಾಹಾರ ವ್ರತವನ್ನು ಕೈಕೊಂಡಿದ್ದರು. ಶಿವಯೋಗಿಗಳು ಈಗಾಗಲೇ ಉತ್ತರ ವಯಸ್ಸಿನಲ್ಲಿದ್ದರೂ, ತರುಣರ ಚಟುವಟಿಕೆ ಅವರ ಮೈಯಲ್ಲಿದೆ, ತರುಣರಿಗೆ ಮೀರಿದ ಉತ್ಸಾಹ ಅವರ ಮನದಲ್ಲಿದೆ. ತೆಳ್ಳಗಿನ ಎತ್ತರವಾದ ದೇಹ, ನಿಡಿದಾದ ಮೂಗು, ತೇಜಃಪುಂಜವಾದ ನೇತ್ರಗಳು ಧಾರಾಳವಾಗಿ ಮಾತನಾಡುವ ಶಾಂತಮೂರ್ತಿ, ನೋಡುವವರಲ್ಲಿ ಭಕ್ತ್ಯಾದರಗಳು ಮೂಡಿ ಬರುತ್ತಿವೆ. ವಾರದಲ್ಲಿ ಒಂದು ದಿನ (ಶುಕ್ರವಾರ) ಮೌನವಾಗಿರುತ್ತಾರೆ. ಆದರೂ ಭಕ್ತರ ಹಿತಚಿಂತನೆಯ ಕಾರ್ಯಗಳಿಗೆ ಅದರಿಂದ ಆತಂಕವಾಗುವದಿಲ್ಲ; ಭಕ್ತ ಪ್ರೇಮಿಗಳಿವರು. ಲಿಂಗದ ಸಂಗ, ಲಿಂಗದ ನೆನಹು ಇವರ ಬಾಳಿನ ಉಸಿರು, ಅಂತರಂಗ ಬಹಿರಂಗ ಒಂದಾಗಿ ಶಿವಸಾಮರಸ್ಯ ಸುಖದಲ್ಲಿ ಲೋಲಾಡುತ್ತಿದ್ದಾರೆ. ಇವರ ತಪಸ್ಸಾಧನೆಯ ಸಫಲತೆಗೆ ನಿದರ್ಶನವಾಗಿ ಕೆಲವು ಮಹಿಮೆಗಳೂ ಇವರ ಅನುಷ್ಠಾನ ಸಮಯದಲ್ಲಿ ಜರುಗಿವೆ. ಇವುಗಳನ್ನು ಇವರು ಬಯಸಿದವರಲ್ಲ; ಅವಶ್ಯಕತೆಯೂ ಇರಲಿಲ್ಲ. ಶ್ರೀಗಳು ಸಾಧಿಸಿದ ಶಿವಸಾಕ್ಷಾತ್ಕಾರದ ಪ್ರಭಾ ವಲಯದಲ್ಲಿ ಸಹಜವಾಗಿ ನಡೆಯಬಹುದಾದ ಶಿವ ಲೀಲೆಗಳವು. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಿ, ಶ್ರೀಗಳವರ ಪರಿಚಯದ ಈ ಲೇಖನ ವಿಭಾಗವನ್ನು ಮುಗಿಸುತ್ತೇನೆ.

ಕೊಳ್ಳಿಯಲ್ಲಿ :— ಕೊಳ್ಳಿಯು ಸೇಡಂ ತಾಲೂಕಿನ ಕ್ಷೇತ್ರಸ್ಥಳ ಪ್ರಶಸ್ತ-ವಾಗಿದೆ. ಶಂಭುಲಿಂಗ ದೇವಸ್ಥಾನವಿದೆ. ಚಂಡೇಶ್ವರೀ ದೇವಿಯ ಗುಡಿಯೂ ಇದೆ. ಗುರುನಂಜೇಶ್ವರ ಸ್ವಾಮಿಗಳು ಅಲ್ಲಿಗೆ ಅನುಷ್ಠಾನಕ್ಕೆ ಆಗಮಿಸಿದರು. ೧೯೭೨ ರಲ್ಲಿ ಮಳೆಯಾಗದ ಬರಗಾಲ, ಊರಲ್ಲಿ ನೀರಿನ ಅಭಾವ! ಜನರ ಬವಣೆ ಹೇಳತೀರದು.

ಸ್ವಾಮಿಗಳ ಉದ್ದೇಶವನ್ನು ಅರಿತುಕೊಂಡ ಊರಿನ ಪ್ರಮುಖರು ಸ್ವಾಮಿಗಳನ್ನು ಕಂಡು ನಮಿಸಿ : "ಸ್ವಾಮಿಗಳೆ, ನೀವು ತಪೋನುಷ್ಠಾನಕ್ಕಾಗಿ ನೀರಿಲ್ಲದ ಊರಿಗೆ ಬಂದಿರಲ್ಲಾ" ಎಂದು ಆಕ್ಷೇಪಿಸಿದರು. "ಶಿವನು ಇಲ್ಲಿಗೆ ಕಳಿಸಿದ; ಬಂದೆನ್ರಪಾ ! ಮುಂದೆ ಏನು ಮಾಡುವನೋ ಹಾಗೆ ಆಗಲಿ" ಎಂದು ಶ್ರೀಗಳು ಶಾಂತ ಮುದ್ರೆಯಿಂದ ಉತ್ತರ ಕೊಟ್ಟರು. ಮುಗ್ಧ ಹಿರಿಯರು 'ಆಗಲ್ರಪಾ !' ಎಂದು ವಂದಿಸಿ ನಡೆದರು. ಅದುವರೆಗೆ ಮಳೆಯ ಯಾವ ಲಕ್ಷಣವೂ ಇಲ್ಲದಿರುವಾಗ, ಅಂದಿನ ರಾತ್ರಿ ಎಲ್ಲಿಲ್ಲದ ಮೋಡಗಳೆಲ್ಲ ಬಂದು ಕೂಡಿ ಮಳೆ ಸುರಿಯಿತು. ನಾಲ್ಕು ದಿನ ಹೊಡೆದ ಮಳೆಯಿಂದ ದಾರಿಗಳೆಲ್ಲ ಕೆಟ್ಟು, ಊರಿಗೆ ಹೊರಗಿನ ಸಂಪರ್ಕವೂ ದುರ್ಲಭವಾಯಿತು. ಆದರೂ ಜನರಿಗೆ ಸಂತೋಷವೇ ಸಂತೋಷ ! ಸ್ವಾಮಿಗಳ ವಾಕ್ಸಿದ್ಧಿಗಾಗಿ ಅವರಲ್ಲಿ ಶ್ರದ್ಧೆಯುಂಟಾಯಿತು. ಸ್ವಾಮಿಗಳ ಅನುಷ್ಠಾನದ ಕಾಲವು ಪರ್ವಕಾಲವೆಂದು ಭಾವಿಸಿ ಭಕ್ತಿಯಿಂದ ನಡೆದುಕೊಂಡರು. ಊರಿಗೆ ನೀರಿನ ಬರ ಹಿಂಗಿತು. ಶ್ರೀಗಳ ನಿತ್ಯ ಕ್ರಿಯೆಗಳು ಸುಗಮವಾಗಿ ನಡೆದವು.

ಶ್ರೀಗಳ ಕೋಣೆಯ ಹೊಸ್ತಿಲ ಹೊರಮುಗ್ಗಲು, ಅದರ ಒಂದು ತುದಿಯ ಹತ್ತಿರ ಒಂದು ಹೋರು ಇತ್ತು. ಸ್ವಾಮಿಗಳು ಅಲ್ಲಿಗೆ ಬಂದ ಮೇಲೆ ಒಂದು ನಾಗರಹಾವು ಅದರಲ್ಲಿ ಸೇರಿ, ಹೊರಗೆ ಮುಖವಿಟ್ಟು ಕುಳಿತಿರುತ್ತಿತ್ತು. ಅವರ ಪೂಜಾಕಾಲಕ್ಕೆ ಸ್ವಲ್ಪಭಾಗ ಹೊರಗೆ ಬಂದು, ಹೊಸ್ತಿಲ ಮೇಲೆ ತಲೆಯಿಟ್ಟು, ಲಿಂಗ ಪೂಜೆಯನ್ನು ನಿರೀಕ್ಷಿಸುತ್ತಿತ್ತು. ಇದನ್ನು ಕಂಡು ಆರಂಭದಲ್ಲಿ ಸೇವಕನು ಮತ್ತು ಜನರು ಭಯಭೀತರಾದರು. ಸ್ವಾಮಿಗಳು ಅಭಯವಿತ್ತು ನಂಬಿಸಿದ ನಂತರ ಎಲ್ಲರ ಅಂಜಿಕೆ ತೊಲಗಿತು. ಯಾರೂ ಇಲ್ಲದ ಪೂಜಾಕಾಲದಲ್ಲಿ ಅದು ಒಳಗೆ ಹೋಗಿ ಸ್ವಾಮಿಗಳ ಹಿಂದೆ ಹೆಡೆಯೆತ್ತಿ ನಿಲ್ಲುತ್ತಿತ್ತಂತೆ. ಜನರ ಸುಳಿವು ತಿಳಿದೊಡನೆ, ತನ್ನ ಸ್ಥಳಕ್ಕೆ ಬಂದು ಸೇರುವದಂತೆ. ಈ ಘಟನೆಯಿಂದಾಗಿ ಸ್ವಾಮಿಗಳ ಬಗೆಗಿನ ಜನರಲ್ಲಿಯ ಭಕ್ತಿ ಇಮ್ಮಡಿ-ಮುಮ್ಮಡಿಯಾಯಿತು.

ಬಿಜನಳ್ಳಿ (ಬಜ್ಜನ ಹಳ್ಳಿ) ಯಲ್ಲಿ :— ಬಿಜನಳ್ಳಿ ಸೇಡಂ ತಾಲೂಕಿನಲ್ಲಿ ಇನ್ನೊಂದು ಮಹತ್ವದ ಕ್ಷೇತ್ರವಾಗಿದೆ. ಇಲ್ಲಿ ಮಡಿಬಸವೇಶ್ವರ ಎಂಬ ದೇವಸ್ಥಾನವಿದೆ. ಶರಣಹರಳಯ್ಯ ಬಸವಣ್ಣನವರಿಗಾಗಿ ತನ್ನ ಮೈದೊಗಲಿನಿಂದ ಮಾಡಿದ ಚೆಮ್ಮಾವುಗೆಗಳನ್ನು ಬಸವಣ್ಣನವರು ಮೆಟ್ಟಲು ನಿರಾಕರಿಸಿದರು. ಹರಳಯ್ಯ ಅವುಗಳನ್ನು ಮನೆಗೆ ತಂದಿಟ್ಟು ಪೂಜಿಸಹತ್ತಿದನು. ವರ್ಣಭೇದನೀತಿಗೆ ಅವನು ಬಲಿಯಾದ ಬಳಿಕ, ಮುಂದೆ ನಡೆದ ಕಲ್ಯಾಣ ವಿಪ್ಲವದಲ್ಲಿ ಆ ಪವಿತ್ರ ಚೆಮ್ಮಾವುಗೆಗಳನ್ನು ತಂದು, ಈ ಸ್ಥಳದಲ್ಲಿ ಇಟ್ಟರೆಂದು ಹೇಳುತ್ತಾರೆ. ಅವುಗಳ ಪ್ರತೀಕವಾಗಿ ಶಿಲೆಯ ಪಾದುಕೆಗಳನ್ನು ಅಲ್ಲಿ ಸ್ಥಾಪಿಸಿ ಪೂಜಿಸಲಾಗುತ್ತಿದೆ. ಅಂದು ಹರಳಯ್ಯ

ಚಿಮ್ಮಾವುಗೆಗಳನ್ನು ಮಡಿಯಿಂದ ನಿರ್ಮಿಸಿದುದಕ್ಕೂ ಇಲ್ಲಿಯ ದೇವಸ್ಥಾನಕ್ಕೆ 'ಮಡಿ ಬಸವೇಶ್ವರ ದೇವಾಲಯ' ಎಂದು ಹೆಸರಿರುವದಕ್ಕೂ ಸಂಬಂಧವಿರ-ಬಹುದೇನೋ ?

ಶ್ರೀಗುರುನಂಜೇಶ್ವರ ಶಿವಯೋಗಿಗಳು ಒಮ್ಮೆ ಇಲ್ಲಿ ಅನುಷ್ಠಾನ ಕೈಕೊಂಡರು. ಒಂದು ದಿನ ಸೇವೆಯ ಬಾಲಕ ಊರೊಳಗಿಂದ ಹಾಲು ತಕ್ಕೊಂಡು ಬರುತ್ತಿದ್ದನು. ಆಗ ಸಂಪೂರ್ಣ ಶಿವಲಾಂಛನಧಾರಿಯಾಗಿದ್ದ ಜಂಗಮಮೂರ್ತಿಯೊಬ್ಬ ಆತನ ಮುಂದೆ ಬಂದು ಹಾಲನ್ನು ನೆಟ್ಟ ದಿಟ್ಟಿಯಿಂದ ನೋಡಿದನು. ರಕ್ತದ ನಾಲ್ಕು ಹನಿಗಳನ್ನು ತನ್ನ ಕಣ್ಣಿನಿಂದ ಅದರಲ್ಲಿ ಉದುರಿಸಿದನು. "ನಿನ್ನ ಗುರುವಿಗೆ ಕಣ್ಣು ಕೊಟ್ಟಿದ್ದೇನೆಂದು ಹೇಳು" ಎಂದು ಅಲ್ಲಿಯೇ ಮಾಯವಾದನು. ಈ ಚಮತ್ಕಾರ-ದಿಂದ ಆ ಮುಗ್ಧ ತರಳ ಗಾಬರಿಯಾದನು. ಗುಡಿಗೆ ಬರುವಷ್ಟರಲ್ಲಿ ಜ್ವರ ಬಂದವು. ಹಾಲನ್ನು ಒಂದು ಕಡೆ ಇಟ್ಟು, ಮರೆಯಲ್ಲಿ ಮಲಗಿಕೊಂಡನು. ವೇಳೆಯಾಯಿತು, ಬಾಲಕ ಬರಲಿಲ್ಲನೆಂದು ಬೇರೆಯವರು ತಂದುಕೊಟ್ಟ ಹಾಲಿನಿಂದ ಸ್ವಾಮಿಗಳ ಲಿಂಗಪ್ರಸಾದವಾಯಿತು. ಕೆಲಹೊತ್ತಿನ ಮೇಲೆ ಎಚ್ಚರಗೊಂಡ ಆ ಹುಡುಗ ತಾನು ಮೈಮರೆತುದಕ್ಕೆ ದುಃಖಿಸುತ್ತ, ಹಾಲನ್ನು ತಂದು ಅಪ್ಪಗಳ ಮುಂದಿಟ್ಟು, ನಡೆದುದನ್ನು ಹೇಳಿ ಅಳಹತ್ತಿದನು. ಸ್ವಾಮಿಗಳು ಅವನನ್ನು ಸಮಾಧಾನಪಡಿಸಿ, ಹಾಲಿನ ಪಾತ್ರೆಯನ್ನು ನೋಡಿದರು. ಹಾಲಲ್ಲಿ ಒಂದು ನೇತ್ರದ ಬಿಂಬ ತೋರುತ್ತಿತ್ತು. ಹಾಲು ಅಲ್ಲಾಡಿದರೆ ಅದು ಅಲ್ಲಾಡುತ್ತಿತ್ತು. ಹತ್ತಿರದಲ್ಲಿಯೇ ನಾಲ್ಕು ರಕ್ತ ಬಿಂದುಗಳು ತೇಲುತ್ತಿದ್ದವು. ಶ್ರೀಗಳಿಗೆ ಆಶ್ಚರ್ಯ, ಕುತೂಹಲದಿಂದ ಯೋಚಿಸ-ಹತ್ತಿದರು. ಹತ್ತಿರಿದ್ದ ಸದ್ಭಕ್ತರು "ಶಿವನೇ ಬಂದು ತಮಗೆ ಜ್ಞಾನನೇತ್ರ ನೀಡಿದುದರ ಕುರುಹು ಇದು" ಎಂದು ಕೈಮುಗಿದು ನುಡಿದರು. ಶ್ರೀಗಳು ಲಿಂಗದ ಸಜ್ಜೆಯನ್ನು ಕೈಯಲ್ಲಿ ಹಿಡಿದು, ಅಂತರಂಗದ ಜ್ಯೋತಿರ್ಮಯ ದೇವನನ್ನು ಧ್ಯಾನಿಸಿ, "ಇದು ನಿಜವಾಗಿಯೂ ನಿನ್ನ ಕರುಣೆಯ ಸಂಕೇತವೇ ?" ಎಂದು ಆನಂದ ತುಂದಿಲರಾಗಿ- ಅಂತರ್ಮುಖರಾಗಿ ಮೈಮರೆತರು. ಬಳಿಕ ಆ ಹಾಲನ್ನು ಕಾಯ್ದಿಡ-ಬೇಕೆಂದು ಸೀಸೆಯಲ್ಲಿ ಹಾಕಿದರೂ ಆ ನೇತ್ರಬಿಂಬ ಅಲ್ಲಿಯೂ ಕಂಡುಬಂದಿತು. ಅದು ಕ್ರಮವಾಗಿ ಕೆಳಕ್ಕೆ ಇಳಿಯುತ್ತ, ಕೆಳಗೆ ಬೆಳ್ಳಿಯ 'ಕಣ್ಣುಬೊಟ್ಟು' ಆಯಿತು. ಅದು ಶ್ರೀಗಳ ಹತ್ತಿರ ಮಠದಲ್ಲಿ ಇದೆಯಂತೆ !

ಶ್ರೀಶೈಲದಲ್ಲಿ :— ಶ್ರೀಶೈಲದ ಘಂಟಾಮಠದಲ್ಲಿ ಅನುಷ್ಠಾನಮಾಡಿದರು. ಆ ಮಠದ ಕಟ್ಟಡ ಶಿಥಿಲವಾಗಿ, ಅರ್ಧಮರ್ಧ ಬಿದ್ದದ್ದು ಸುತ್ತಲೂ ಗಿಡಗಂಟೆಗಳ ಪೊದೆಗಳ ಮರಗಳ ಕಾಡು. ಹಲವಾರು ವಿಷಜಂತುಗಳು ಸ್ವಾಮಿಗಳ ಸುತ್ತಲೂ ಸುಳಿದಾಡುತ್ತಿದ್ದವು. ಆದರೆ ಲಿಂಗಪೂಜಾ ವೈಭವದ ಪವಿತ್ರ ವಾತಾವರಣದಲ್ಲಿ

ಅವು ಕೂಡ ಸಾತ್ವಿಕವಾಗಿರಬೇಕು; ಶ್ರೀಗಳಿಗೆ ಯಾವ ಬಾಧೆಯನ್ನೂ ಉಂಟು ಮಾಡಲಿಲ್ಲ.

ಕೊಲ್ಲಾಪುರದಲ್ಲಿ :– ಪ್ರಸಿದ್ಧವಾದ ಲಕ್ಷ್ಮೀದೇವಾಲಯ; ಮಗ್ಗುಲಲ್ಲಿ ಈಶ್ವರನ ಚಿಕ್ಕಗುಡಿ. ಅಲ್ಲಿಯ ಭಾಡಿಗೆಯ ವಸತಿಗೃಹ (ಲಾಜಿಂಗ) ದ ಒಡೆಯನು ಆ ಗೃಹದ ಮಹಡಿಯನ್ನು ಈಶ್ವರನ ಗುಡಿಯ ಮೇಲೆಯೂ ಚಾಚಿ ಬೆಳೆಸಿ ಅದರ ಮೇಲೂ ಒಂದು ಕೋಣೆ ಮಾಡಿದ್ದನು. ಲೋಕದ ಗದ್ದಲದಲ್ಲಿ ಮನಸ್ಸನ್ನು ಏಕಾಗ್ರಗೊಳಿಸುವ ಸಾಧನೆಗಾಗಿಯೋ ಏನೋ, ಆ ಕೋಣೆಯಲ್ಲಿ ಅನುಷ್ಠಾನ ಮಾಡಲು ಶ್ರೀಗಳು ಸಂಕಲ್ಪ ಮಾಡಿದರು. ಅಲ್ಲಿಗೆ ಬಂದರು. ಅದರ ಒಡೆಯನು ೪೦ ದಿವಸಗಳಿಗೆ ೧೦೦ ರೂಪಾಯಿ ಮುಂಗಡ ಭಾಡಿಗೆ ತಕ್ಕೊಂಡು ಅದನ್ನು ಒಪ್ಪಿಸಿದನು. ಒಂದು ದಿನ ಆ ಮಾಲಕನು ಮೇಲೆ ಅಡ್ಡಾಡುತ್ತಿರುವಾಗ ಬಹಳ ಉದ್ದವಾದ ದೊಡ್ಡ ಹಾವು ಬಂದು ಸ್ವಾಮಿಗಳ ಹತ್ತಿರವೇ ಸುಳಿದಾಡಿ ಹೊರಗೆ ಬರುವದನ್ನು ಕಂಡನು. ಗಾಬರಿಯಾಗಿ ಹಿಂದಕ್ಕೆ ಓಡಿದನು, ಸ್ವಾಮಿಗಳು ಅಚಲರಾಗಿರುವದನ್ನು ದೂರದಿಂದ ನೋಡಿ ಬೆರಗುಬಟ್ಟನು. 'ಇವನು ಸಾಮಾನ್ಯ ಅಯ್ಯ ಎಂದು ತಿಳಿದಿದ್ದೆ; ಮಹಾತ್ಮರಿವರು' ಎಂದು ಬಗೆದು ತನ್ನ ಧನಲೋಭಕ್ಕಾಗಿ ನಾಚಿಕೊಂಡನು. ಅದೇ ದಿನ ಸಮಯ ನೋಡಿ ೧೫೧ ರೂ. ಗಳನ್ನು ತಂದು ಸ್ವಾಮಿಗಳ ಪಾದಕಿಟ್ಟು, ಸಾಷ್ಟಾಂಗವೆರಗಿ, ತನ್ನ ತಪ್ಪನ್ನು ಮನ್ನಿಸಬೇಕೆಂದು ಪ್ರಾರ್ಥಿಸಿದನು. ತಾವು ಬೇಕಾದಷ್ಟು ದಿನ ಇಲ್ಲಿ ಇರಬೇಕೆಂದು ಬೇಡಿಕೊಂಡನು.

ಗುಹೇಶ್ವರ ಗಡ್ಡೆಯಲ್ಲಿ :— ಜಮಖಂಡಿ ತಾಲೂಕಿನ ಕೃಷ್ಣಾ ನದಿಯ ಒಡಲಲ್ಲಿಯ ಈ ನಡುಗಡ್ಡೆಯಲ್ಲಿ–ಭವ್ಯ ಸೌಂದರ್ಯದ ಪರಿಸರದಲ್ಲಿ ಅನುಷ್ಠಾನ ಮಾಡಿದರು. ಸುತ್ತಲಿನ ಗ್ರಾಮಗಳ ಭಕ್ತರು ನಿತ್ಯವೂ ಬಂದು ದರ್ಶನ ಪಡೆದು ಧನ್ಯರಾಗುತ್ತಿದ್ದರು. ಅನುಷ್ಠಾನದ ಕೊನೆಯ ಮಂಗಲ ಮಹೋತ್ಸವವನ್ನು ಸ್ವಪ್ರೇರಣೆಯಿಂದ ದೊಡ್ಡ ಪ್ರಮಾಣದಲ್ಲಿ ನೆರವೇರಿಸಿದರು. ಅನೇಕ ಸಹಸ್ರ ಜನರಿಗೆ ಅನ್ನ ಸಂತರ್ಪಣೆ ಗೈದರು.

ಈ ಬಗೆಯಾದ ಇನ್ನೂ ಹಲವು ಸಂದರ್ಭಗಳು, ಶ್ರೀ ಗುರುನಂಜೇಶ್ವರರ ತಪಶ್ಶಕ್ತಿಯು ಪ್ರಕಟವಾದುದಕ್ಕೆ ಉದಾಹರಣೆಗಳಾಗಿವೆ.

ರಾಜಾಪುರ, ಸೂಳೆಪೇಟೆ, ಹುಳಗೇರಿ, ಜಂಬಗಿ, ತೆಂಗಳಿಗಳಲ್ಲಿ ಗುರುನಂಜೇಶ್ವರರ ಶಾಖಾ ಮಠಗಳಿವೆ. ಶ್ರೀ ಗುರುನಂಜೇಶ್ವರ ಶಿವಯೋಗಿಗಳು ಅಲ್ಲಲ್ಲಿನ ಭಕ್ತರ ಪಾರಮಾರ್ಥಿಕ ಜೀವನಕ್ಕೆ ದಾರಿದೀಪವಾಗಿದ್ದಾರೆ; ಮುನ್ನಡೆಸುತ್ತಿದ್ದಾರೆ. ತಮ್ಮ

ವಾಕ್ಸಿದ್ಧಿ-ತಪಸ್ಸಿದ್ಧಿಗಳಿಂದ ಪ್ರಾಂತದಲ್ಲೆಲ್ಲ ಹೆಸರುವಾಸಿಯಾಗಿದ್ದಾರೆ. ಭರತನೂರನ್ನು ಸುಕ್ಷೇತ್ರವಾಗಿಸಿದ್ದಾರೆ. ಕರ್ತೃ ಶಿವಯೋಗಿಗಳ ಗದ್ದುಗೆಯ ಉತ್ಸವವನ್ನು ಪ್ರತಿವರ್ಷ ಶ್ರಾವಣದಲ್ಲಿ ವೈಭವದಿಂದ ನೆರವೇರಿಸುತ್ತಾರೆ. ಅನ್ನದಾನ-ಜ್ಞಾನದಾನ-ಗಳೆರಡೂ ಜರುಗುತ್ತಿವೆ. ಕರ್ತೃ ಗುರುನಂಜೇಶ್ವರರಂತೆ ಈ ನಮ್ಮ ಗುರುನಂಜೇಶ್ವರ ಸ್ವಾಮಿಗಳೂ ಮಹಾ ಬಾಳನ್ನು ಬಾಳಲಿ; ಅವರ ಬೋಧಾಮೃತದಿಂದ ಲೋಕವು ಅಮರವಾಗಲಿ; ಬಹು ಕಾಲ ಬಾಳಿ ಸ್ವಾತ್ಮ ಪ್ರಕಾಶದಿಂದ ಸಾಧಕರ, ಭಕ್ತರ ಹೃನ್ಮಂದಿರಗಳನ್ನು ಬೆಳಗಲಿ ಎಂದು ಹಾರೈಸೋಣ.

ಶಿವಂ ಮಂಗಲಂ

ಶ್ರೀ ಅಖಂಡೇಶ್ವರ ಗ್ರಂಥ ಮಾಲೆಯಿಂದ
ಮುಂಬರುವ ಕೃತಿಗಳು

೧. ಶ್ರೀ ಗುರುನಂಜೇಶ್ವರ ನಾಮಾವಳಿ.

೨. ಅಖಂಡೇಶ್ವರ ವಚನಗಳು (ಸಂಪೂರ್ಣ)

೩. ಶ್ರೀ ಷಣ್ಮುಖೇಶ್ವರರ ಬೃಹತ್ ಕಾದಂಬರಿ. ಡಾ|| ಎಚ್. ಶಿವ್ಪೇರುದ್ರಸ್ವಾಮಿ.

೪. ಮುರುಘೇಂದ್ರ ಶಿವಯೋಗಿಗಳ ಪುರಾಣ.

೫. ಮಾಟ್ನಳ್ಳಿ ಹಸನ್‌ಸಾಹೇಬರ ತತ್ವಪದಗಳು.

೬. ವಿರೂಪಾಕ್ಷೇಶ್ವರ ಕೈವಲ್ಯ ಚಿಂತಾಮಣಿ. (ಮುಗುಳಿ)